||ಶ್ರೀ ಹರಿಃ ಓಂ||

ಶ್ರೀಗರುಡವಾಹನ ಶ್ರೀಲಕ್ಷ್ಮೀನಾರಸಿಂಹಾಭಿನ್ನ ಶ್ರೀಜಗನ್ನಾಥವಿಠ್ಠಲೋಪಾಸಕ
ಅಪರೋಕ್ಷೀಕೃತಶ್ರೀಶ ದಾಸವರೇಣ್ಯ ಶ್ರೀಜಗನ್ನಾಥದಾಸಾರ್ಯ ವಿರಚಿತ

# ಶ್ರೀಮದ್ಧರಿಕಥಾಮೃತಸಾರದಲ್ಲಿ ಧ್ಯಾನಪ್ರಕ್ರಿಯಾಸಂಧಿ (ಸಂಧಿ 11)ಯ ಸಾರ

ಶ್ರೀಜಗನ್ನಾಥದಾಸವರೇಣ್ಯರ ಮೇರುಕೃತಿಯಾದ ಶ್ರೀಮದ್ಧರಿಕಥಾಮೃತಸಾರದಲ್ಲಿ ಹನ್ನೊಂದನೆಯ ಈ ಸಂಧಿಗೆ ಧ್ಯಾನಪ್ರಕ್ರಿಯಾಸಂಧಿ ಎಂದು ಹೆಸರು. ಈ ಸಂಧಿಯನ್ನು ಸ್ಥಾವರಜಂಗಮಸಂಧಿ ( ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನದ ಸಂಧಿ ಸೂಚನಾ ಪ್ರಕಾರ) ಎಂತಲೂ ಕರೆಯುವರು.

ಸರ್ವೇಶನಾದ, ಸರ್ವಜೇಷ್ಟಪ್ರದನಾದ ಶ್ರೀಹರಿಯ ಮಂಗಳರೂಪಗಳನ್ನು ನಿರಂತರವೂ ಧ್ಯಾನಮಾಡುವ ಅರವಿಂದನಾಭನ ಅಂತರಂಗಭಕ್ತರಿಗೆ ಪಾಪರಾಶಿಗಳು ಪ್ರತಿಬಂಧಕವಾಗದೆ ಪರಮನ ಅನುಗ್ರಹದಿಂದ ನಾಶವಾಗಿ, ಧ್ಯಾನಪ್ರಕ್ರಿಯಾರೂಪವಾದ ಕರ್ಮವು ನಿತ್ಯಾನಂದರೂಪವಾದ ಮೋಕ್ಷಪ್ರಾಪ್ತಿಗೆ ಸಹಕಾರಿಯಾಗುವುದೆಂದು ತಿಳಿಸುತ್ತಾರೆ.

ನಿಗಮವೇದ್ಯನಾದ ಆ ನಿರಂಜನ ಸ್ವರೂಪಿಯನ್ನು ಸದಾ ಕೊಂಡಾಡುತ್ತಾ, ಕನಸಿಲ್ಲಾದರೂ ಪುರುಷಾರ್ಥಚತುಷ್ಟಯಗಳಲ್ಲಿ ಒಂದನ್ನೂ ಬೇಡದೆ, ಆ ಸತ್ಯ ಸಂಕಲ್ಪನು ಏನಿತ್ತುದೇ ಪರಮಪುರುಷಾರ್ಥವೆಂದರಿತು, ತನು, ಮನೆ, ಮಡದಿ, ಪುತ್ರಾದಿ ಸಕಲ ಪರಿವಾರವರ್ಗವೂ ಅವನ ಅಧೀನವೆಂದು ನಿರಂತರ ನೆನೆಸುತ್ತಿರುವುದೇ ಪರಮಭಾಗ್ಯವೆಂದು ತಿಳಿಸುತ್ತಾರೆ.

ಬ್ರಹ್ಮಾದಿವಂದ್ಯನಾದ ಆ ಪರಬ್ರಹ್ಮನು ಸರ್ವತಂತ್ರಸ್ವತಂತ್ರನು. ರಮಾದಿ ಸಮಸ್ತರೂ ಭಗವದಧೀನರು. ಜೀವನು ಅತ್ಯಲ್ಪ ಸಮರ್ಥನು. ಪರಾಧೀನ

ಕರ್ತೃತ್ವವುಳ್ಳನೆಂದು ತಿಳಿದು, ಆತನ ಚರಣಜಲಜಗಳಿಗೆ ಪೂರ್ಣವಾಗಿ ಶರಣಾಗತನಾಗಬೇಕೆಂದು ತಿಳಿಸುತ್ತಾರೆ. ಈ ಸ್ಥೂಲಶರೀರಾದ್ಯಂತ ಹಬ್ಬಿ ಹರಡಿರುವ 72,000 ಸಂಖ್ಯಾವಾದ ನಾಡೀವ್ಯೂಹದಲ್ಲಿ ಶ್ರೀಮನ್ನಾರಾಯಣನು ಓತಪ್ರೋತನಾಗಿ ವ್ಯಾಪಿಸಿದ್ದು, ನಾಡ್ಯಾಭಿಮಾನೀದೇವತೆಗಳ ದ್ವಾರಾ ಸಕಲ ನಾಡೀವ್ಯಾಪಾರಗಳನ್ನು ನಡೆಸಿ, ನಡೆಯಿಸುತ್ತಾನೆ. ಪಂಚಭೂತಗಳು. ಅವ್ಯಕ್ತತತ್ತ್ವ, ಮಹತತ್ತ್ವ ಮತ್ತು ಅಹಂಕಾರತತ್ತ್ವ ಎಂಬ ಈ ಎಂಟು ವಿಧವಾದ ಪ್ರಕೃತಿಗಳೊಳಗೆ ವಿಶ್ವಾದಿಅಷ್ಟರೂಪಗಳಿಂದ ವಿದ್ಯಮಾನನಾಗಿದ್ದು, ಆ ವೈಕುಂಠಪತಿಯು ತನ್ನ ಭಕ್ತರಿಗೆ ನಿಷ್ಕಂಟಕನಾಗಿ ಸುಮಾರ್ಗದಲ್ಲಿ ನಡೆಸುವನು. ಸತ್ಸಾಧನೆಗೆ ಪ್ರತಿಬಂಧಕರಾದ ದುರ್ಜನರನ್ನು ಬಡಿವನು. ಆಪ್ತಕಾಮನಾದ ಆಪದ್ಬಾಂಧವನು ಶಕ್ರ್ಯಾದಿ ದ್ವಾದಶರೂಪಗಳಿಂದ ಇಂದ್ರಿಯಾಭಿಮಾನಿಗಳಲ್ಲಿದ್ದು, ಶರೀರಗತ ಸರ್ವಕ್ರಿಯೆಗಳನ್ನು ಬಿಂಬಕ್ರಿಯಾದ್ವಾರಾ ತಾನೇ ಮಾಡಿ, ಕರಣಾಭಿಮಾನಿಗಳ ದ್ವಾರ ಮಾಡಿಸುತ್ತಾ ಇದ್ದಾನೆ. ಹೀಗೆಂದು ಸರ್ವೇಶನ ಸರ್ವಸ್ವತಂತ್ರಕರ್ತೃತ್ವವನ್ನು ತಿಳಿಯದೆ, ನಾನು ನನ್ನದು — ಎಂಬ ಹೀನಮಾನವನು ನರಕಭಾಜನನಾಗುವನು ಎಂದು ಎಚ್ಚರಿಸುತ್ತಾರೆ. ಮಧುರಾದಿ ಷಡ್ರಸಗಳಲ್ಲಿ ಮಧುವೈರಿಯಾದ ಮಾರಮಣನು ಸುಚಿರಾದಿನಾಮಕನಾಗಿ ರಸಪದವಾಚ್ಯನಾಗಿದ್ದು, ಶಕ್ರ್ಯಾದಿದ್ವಾದಶರೂಪಗಳಿಂದ ವಿದ್ಯಮಾನನಾಗಿ, ಶ್ರೀಭೂ ದುರ್ಗಾ ಸಹಿತ 72,000 ನಾಡ್ಯಂತರ್ಗತ ಸಮೀರಾಂತರ್ಗತನಾಗಿದ್ದು, ಆ ಉರುಪರಾಕ್ರಮನು ನಾಡೀಕ್ರಿಯಾರೂಪವಾದ ವ್ಯಾಪಾರಗಳನ್ನು ನಡೆಸುತ್ತಾ, ಸ್ಥೂಲದೇಹಕ್ಕೆ ರಸವಿಭಾಗದ್ವಾರಾ ಉಪಚಯವನ್ನು ಕೊಡುವನು. ಭಗವಂತನ ಸ್ಮೃತಿರಹಿತನಾಗಿ ಯಾವ ಸತ್ಕರ್ಮಗಳನ್ನು ಮಾಡಿದರೂ, ಅವು ನಿಷ್ಪ್ರಯೋಜಕವೆಂದು ತಿಳಿಸುತ್ತಾರೆ. ಅವನನ್ನು ಸರ್ವತ್ರದಲಿ ನೆನೆವರು ಅನ್ಯಕರ್ಮಗಳನ್ನು ಕಾರಣಾಂತರಗಳಿಂದ ಮಾಡಿದ್ದಾಗ್ಯೂ ಪುಣ್ಯಕರ್ಮಗಳೆಂದೆನಿಸುವುವು—ಎಂದು ಕರ್ಮದ ಧರ್ಮಸೂಕ್ಷ್ಮವನ್ನು ತಿಳಿಸುತ್ತಾರೆ.

ಸಕಲ ಭೋಜ್ಯವಸ್ತುಗಳಲ್ಲಿ ಶಿಪಿವಿಷ್ಟನಾಮಕನು ವ್ಯಾಪಿಸಿದ್ದು, ಸ್ಥೂಲದೇಹಗತ ಅನ್ನಮಯಾದಿ ಪಂಚಕೋಶಗಳಲ್ಲಿ ಕೋಶನಾಮಕನಾಗಿದ್ದು, ಆಯಾಯಾ ಸ್ಥೂಲ ವಿಷಯಾಂತರ್ಗತ ಸ್ವಾಧ್ಯರಸಗಳನ್ನು ಸ್ವೀಕರಿಸಿ, ಜೀವರಿಗೆ ಸದಾ ತೃಪ್ತಿಪ್ರದನಾಗಿದ್ದಾನೆ. ಕರ್ಮವಾಚ್ಯನಾಗಿದ್ದು , ಜ್ಞಾನಕರ್ಮೇಂದ್ರಿಯಗಳಲ್ಲಿ, ವ್ಯಾಪಿಸಿಕೊಂಡು, ಆ ತದಭಿ ಮಾನಿದೇವತೆಗಳಲ್ಲಿ ನೆಲೆಸಿದ್ದು, ಸತ್ವಾದಿ ಪ್ರಾಕೃತ ತ್ರಿಗುಣಗಳಿಂದ ನಿರ್ಮಿತವಾದ ಈ ದೇಹದಲ್ಲಿ ಆಪಾದಮೌಳಿ ಪುರುಷಾಕಾರದಿಂದ ವ್ಯಾಪಿಸಿಕೊಂಡು, ಸರ್ವಕರ್ಮ ಪ್ರೇರಕವಾಗಿ, ತಾನು ಮಾತ್ರ ಪ್ರಕಟನಾಗದೇ ಸಕಲವ್ಯಾಪಾರಗಳನ್ನೂ ತಾನೇ ನಿರ್ವಹಿಸುತ್ತಿದ್ದಾನೆ ಎಂದು ಆ ಕರ್ಮರೂಪಿಯ ಕಾರುಣ್ಯವನ್ನು ಕೊಂಡಾಡುತ್ತಾರೆ. ಪೃಥಿವ್ಯಾದಿ ಭೂತಪಂಚಕಗಳಲ್ಲಿ, ಗಂಧಾದಿ ಪಂಚತನ್ಮಾತ್ರಾವಿಶೇಷಗಳಲ್ಲಿ ಹಸ್ತಾದಿ ಪಂಚಕರ್ಮೇಂದ್ರಿಯಗಳಲ್ಲಿ. ಶ್ರೋತ್ರಾದಿ ಪಂಚಜ್ಞಾನೇಂದ್ರಿಯಗಳಲ್ಲಿ ಸ್ತವ್ಯ ಮತ್ತು ಕಾರಕನಾಮಕನಾಗಿ, ಸತ್ಕ್ರಿಯಾಖ್ಯನಾಗಿ ಆ ಅವ್ಯಯನು ಇದ್ದಾನೆ. ಕಾಷ್ಠಗತ ಅಗ್ನಿಯಂತೆ ತೋರಿ ತೋರದಲೆ ವಿದ್ಯಮಾನನಾಗಿದ್ದಾನೆ. ಮನಸ್ಸು ಆದಿಯಾಗಿ ಏಕಾದಶೇಂದ್ರಿಯಗಳಲ್ಲಿ ವಾಯುದೇವರು **ಶುಚಿ** ಎಂಬ ಹೆಸರಿನಿಂದ ಇದ್ದಾರೆ. ಆ ವಾಯ್ವಂತರ್ಗತನಾಗಿ **ಶುಚಿಷತ್** ನಾಮಕನಾಗಿ ಋಕ್‌ಪ್ರತಿಪಾದ್ಯ ಹಂಸಾದಿ 18 ರೂಪಗಳಿಂದ ಇಂದ್ರಿಯನಿಯಾಮಕನಾದ ಹೃಷಿಕೇಶನು ಜೀವರ ಅನುಭವಕ್ಕೆ ವಿಷಯಸುಖಗಳನ್ನು ತಂದೀವನು. ಪ್ರೇರಕ ಪ್ರೇರ್ಯರೂಪಗಳಿಂದ, ತತ್ತನ್ನಾಮಕನಾಗಿ ಗಂಗಾಜನಕನು ಪ್ರಕಟನಾಗದೆಲೆ, ಸಕಲವ್ಯಾಪಾರಗಳಿಗೆ ಮುಖ್ಯ ಪ್ರವರ್ತಕನಾಗಿದ್ದಾನೆ. ಸರ್ವಕ್ಕೂ ಶ್ರೀಹರಿಯೇ ಪರಮಮುಖ್ಯವ್ಯಕ್ತಿಯಿಂದ ನಿಯಾಮಕನೆಂದು ತಿಳಿದು, ಪುಣ್ಯಾಪುಣ್ಯ, ಶುಭಾಶುಭ, ಲಾಭಾಲಾಭ, ಹಾನಿವೃದ್ಧಿ, ಸುಖದುಃಖ ಇತ್ಯಾದಿ ಸಮಸ್ತದ್ವಂದ್ವಕರ್ಮಗಳನ್ನು ಆ ಇಂದಿರೇಶನ ಚರಣಾರವಿಂದಗಳಿಗೆ ಅರ್ಪಿಸುತ್ತಾ, ನರಕ, ಭೂಮಿ, ಸ್ವರ್ಗ ಸಮಸ್ತ ದೇಶಗಳಲ್ಲಿ ಆ ಇಂದ್ರಿಯ ನಿಯಾಮಕನನ್ನು ಸರ್ವದಾಧ್ಯಾನಿಸುತ್ತಿರಬೇಕೆಂದು ತಿಳಿಸುತ್ತಾರೆ. ಆವ ಕರ್ಮಗಳನ್ನು

ಮಾಡುತ್ತಿದ್ದರೂ, ಆ ಪರಮಾತ್ಮನಲ್ಲಿ ದೃಢವಾದ ಭಕ್ತಿ ಇರಬೇಕು. ಜ್ಞಾನಪೂರ್ವಕ ಮಾಡದ ವಿಧಿ ನಿಷೇಧಗಳು ಬಂಧಕಗಳು. ಆ ಪುರುಷನಾಮಕ ಪುರುಹೂತವಂದ್ಯನಲ್ಲಿ ಭಕ್ತಿಯ ನ್ನಲ್ಲದೆ ಅನ್ಯ ಬೇಡಬಾರದೆಂದೂ ಉಪದೇಶಾಮೃತ ನೀಡುತ್ತಾರೆ. ದ್ವಂದ್ವಗಳೇನೇ ಬರಲಿ – ಅವೆಲ್ಲವೂ ಜಗದ್ವಂದ್ಯನಿಂದ ಪ್ರೇರಿತವಾಗಿ ಬಂದವು. ಸಂತೋಷಭಾವದಿಂದ ಸ್ವೀಕರಿಸುತ್ತೇನೆ–ಎಂಬ ಅನುಸಂಧಾನದಿಂದ ದ್ವಂದ್ವಾತೀತನಾಗಿ ಸಾಧನೆಮಾಡುವವರನ್ನು ಒಳಹೊರಗಿದ್ದು, ಆ ಕರುಣಾಳು ಆಪದ್ಬಂಧುವಿನಂತೆ ಸಂರಕ್ಷಿಸುವನು. ಶರೀರಗತ ಸಕಲ ಇಂದ್ರಿಯಗಳಲ್ಲಿ ಆ ಇಂದಿರೇಶನು ತಾನೇ ವ್ಯಾಪಿಸಿದ್ದು, ವಿಷಯಗತ ಸ್ವಾಖ್ಯ ಗಳನ್ನು ತಾನು ಪರಿಗ್ರಹಿಸಿ, ಆ ಪಾಪರಹಿತ ಪುರಾಣಪುರುಷನು ಜೀವಾಂತರ್ಯಾಮಿಯಾಗಿ ಸಮೀಪವರ್ತಿಯಾಗಿದ್ದರೂ ತನ್ನ, ಮಹಿಮಾ ಪ್ರಕಟಿಸದೆ, ಸರ್ವಕರ್ಮ ಪ್ರೇರಕನಾಗಿದ್ದಾನೆ. ಆಕಾಶಸಂಚಾರಿಗಳು, ಭೂಸಂಚಾರಿಗಳು, ಜಲಚರರೂ ಆದ ಸರ್ವಜೀವರಾಶಿಗಳಲ್ಲಿ ಆ ಘನಮಹಿಮನು, ಅಲ್ಪನಂತೆ ತಾನು ಇದ್ದು, ತನ್ನ ಅಘಟನಾಘಟನಸಾಮರ್ಥ್ಯದಿಂದ, ಪ್ರಕಟನಾಗದೆ, ಸರ್ವಕಾರ್ಯನಿರ್ವಾಹಕನಾಗಿರುವ, ಆ ಕೀಚಕಾರಿಪ್ರಿಯ, ಕವಿಜನಗೇಯ, ಮಹರಾಯ ಅದೆಂತಹ ಮಹಾಮಹಿಮ ಸಂಪನ್ನನು! ಬಹುವಿಧವಾಗಿ ಆಲೋಚಿಸಿದರೂ, ಸಾಕಲ್ಯೇನ ಅರಿಯಲಸಾಧ್ಯನಾದ ಅಪ್ರಮೇಯಚರಿತನು ! ತಂದೆ ಮತ್ತು ಮಗ ಇಬ್ಬರೂ ಸಗೋತ್ರೋದ್ಭವರು. ಆಹ್ನಿಕ ಸಮಯದಲ್ಲಿ ಗೋತ್ರ ಪ್ರವರ ಉಚ್ಚಾರಣೆ ಮಾಡುವಾಗ ಒಂದೇ ಗೋತ್ರ ಪ್ರವರ ಉಚ್ಚರಿಸುತ್ತಾರೆ. ಆದರೆ ತಮ್ಮ ತಮ್ಮ ಹೆಸರುಗಳಿಂದಲೇ ಅಭಿವಾದನ ಮಾಡುತ್ತಾರೆ. ಅಂತೆಯೇ ಏಕದೇಹಗತನಾಗಿದ್ದು, ಆ ಏಕಮೇವಾದ್ವಿತೀಯನು ನಿಂದ್ಯಾನಿಂದ್ಯ ಕರ್ಮಗಳನ್ನು ತಾನೇ ಮಾಡಿ, ದೇವ ದೈತ್ಯರ ದ್ವಾರಾ ಮಾಡಿಸುತ್ತಿರುವನು. ಇಷ್ಟಾದರೂ ಕರ್ಮಲೇಪರಹಿತ ಜೀವೇಶನೆನಿಸುವನು. ಬೇರೆ ಬೇರೆ ವಸ್ತುಗಳಿಂದ ಯುಕ್ತವಾದ ಲೋಹವು ಅಗ್ನಿಸಂಪರ್ಕದಿಂದ ಶುದ್ಧವಾಗುವುದು. ಬೀಸುವಕಲ್ಲು ಭತ್ತದಲ್ಲಿರುವ ಹೊಟ್ಟನ್ನು ಪ್ರತ್ಯೇಕಿಸಿ, ಅಕ್ಕಿಯನ್ನು

ಬೇರ್ಪಡಿಸುವುದು. ಅಂತೆಯೇ ವಿರಲಾಖ್ಯ ಅಗ್ನಿಯಲ್ಲಿ ದುರಿತಗಳೆಂಬ ದೋಷಪರಿಹಾರವಾಗಿ, ಜೀವರ ಪಾಪಕ್ಷಾಲನೆ ಗೈದು, ತನ್ನಲ್ಲಿ ಆಶ್ರಯನೀಡಿ ಸಂರಕ್ಷಿಸುವ ಆ ಕಮಲದಳಾಯತಾಕ್ಷ ಅದೆಂತಹ ಕರುಣಾಮಯನು! ನೀರಿನಲ್ಲಿ ಜಲಚರ ಪ್ರಾಣಿಗಳಾದ ಮೀನು, ಮೊಸಳೆ ಇತ್ಯಾದಿ ಸ್ವೇಚ್ಛೆಯಿಂದ ಸಂಚರಿಸುವಂತೆ, ಜಲಜನಾಭನು ಬ್ರಹ್ಮ, ರುದ್ರ, ಇಂದ್ರಾದಿ ದೇವತಾಗಣ, ಇತರ ಸಮಸ್ತ ಜೀವರಾಶಿಗಳಲ್ಲಿ ಸರ್ವತಂತ್ರಸ್ವತಂತ್ರನಾಗಿ ವಿಹಾರ ಮಾಡುವನು. ಸಮಗ್ರ ಬ್ರಹ್ಮಾಂಡವೇ ಆ ಜಗನ್ನಾಟಕಸೂತ್ರಧಾರನ ಕ್ರೀಡಾರಂಗ ಹಾಗು ವಿಹಾರಧಾಮ. ಪುರುಷನಾಮಕ ಮಾಯಾಪತಿ ಶ್ರೀವಾಸುದೇವನು ಸರ್ವಸ್ಥಳಗಳಲ್ಲಿ ತದ್ರೂಪ, ತದಾಕಾರನಾಗಿ, ತನ್ನಾಮಕನಾಗಿ ಬಿಂಬರೂಪದಿಂದ ಒಳಹೊರಗೆ ತುಂಬಿಕೊಂಡು ವ್ಯಾಪಿಸಿಕೊಂಡು ಪ್ರಕಾಶಿಸುತ್ತಿರುವನು. ಅಂತಹ ಪ್ರಕಾಶರೂಪೀ ಪರಾತ್ಪರನನ್ನು ಸರ್ವತ್ರ ಚಿಂತಿಸುತ್ತಿರುವ ವ್ಯಾಪ್ತೋಪಾಸಕರಿಗೆ ಮೋಕ್ಷಾನಂದವನ್ನು ಮುಕ್ತಿದಾಯಕನಾದ ವಾಸುದೇವನು ಅನುಗ್ರಹಿಸುತ್ತಾನೆ. ಅಂತಹ ಉತ್ತಮಾಧಿಕಾರಿಗಳೇ ಜೀವನ್ಮುಕ್ತರೆಂದೆನಿಸುವರು. ಭೋಗ್ಯಕ್ಕೆ ಯೋಗ್ಯವಾದ ಸಕಲಪದಾರ್ಥಗಳಲ್ಲಿ, ನಿಷಿದ್ಧಾನಿಷಿದ್ಧ ವಸ್ತುಗಳು, ಆ ದ್ರವ್ಯಾಂತರ್ಗತ ರಸವಿಶೇಷಗಳಲ್ಲಿ ಸ್ವೀಕಾರಾರ್ಹ ಮತ್ತು ತ್ಯಾಜ್ಯಾರ್ಹ ವಸ್ತುಗಳಲ್ಲಿ ಹಬ್ಬಿ ಹರಡಿಕೊಂಡಿರುವ ಆ ಸರ್ವತ್ರವ್ಯಾಪಕನಿಗೆ ನಿತ್ಯದಲ್ಲೂ ದ್ವಂದ್ವಗಳನ್ನು ಅರ್ಪಿಸುತ್ತಿರಬೇಕು. ಒಳ್ಳೆಯದನ್ನು ಮಾಡುವುದಕ್ಕಾಗಲೀ. ದುಷ್ಕರ್ಮಗಳನ್ನು ಆಚರಿಸುವುದರಲ್ಲಿಯೂ ಜೀವನಿಗೆ ಸ್ವಾತಂತ್ರ್ಯವಿಲ್ಲ. ಶುಭಾಶುಭಸಕಲಕರ್ಮಗಳೆಲ್ಲವೂ ಆ ಕರ್ಮಪತಿಯ ಆಣತಿಯಿಂದಲೇ ನಡೆಯುತ್ತಿರುವುವು. ಸಂಪತ್ತು ಬಂದಾಗ ಹಿಗ್ಗದೆ, ಬಡತನ ಒದಗಿದಾಗ ಕುಗ್ಗದೇ, ನಿರ್ಭಾಗ್ಯನಾಗದೆ, ಸದ್ಭಕ್ತಿ ಮತ್ತು ವೈರಾಗ್ಯ ಸಂಪನ್ನನಾಗಿ ಭಗವಂತನನ್ನು ಎಡ ಬಿಡದೆ ಸೇವಿಸುತ್ತಿರು—ಎಂಬುದೇ ದಾಸರಾಯರ ಅಮೃತೋಪದೇಶ. ಭೂಮಿ, ನೀರು, ಪರ್ವತ ಇತ್ಯಾದಿ ಸ್ಥಳಗಳಲ್ಲಿ ಉತ್ಪನ್ನವಾದ ರಸಭರಿತ ಫಲಗಳು, ಸುಗಂಧ ಯುಕ್ತ ಪುಷ್ಪಗಳು, ಪುಷ್ಪಗತ ಸುಗಂಧ, ಫಲಗತ ಸುರಸ, ಶ್ರೀತುಲಸೀ, ಇತ್ಯಾದಿ

ಪೂಜಾಯೋಗ್ಯವಾದ ಸಾಧನ ಪದಾರ್ಥಗಳನ್ನು ನಾನಾಪ್ರಕಾರವಾಗಿ ಗಂಗಾಜನಕನಾದ ಆ ತುಂಗಮಹಿಮನಿಗೆ ಅರ್ಪಿಸುತ್ತಾ, ತದ್ಗತಭಗವದ್ರೂಪಗಳನ್ನು ಚಿಂತಿಸುತ್ತಾ ಇರುವ ಮಹಾನುಭಾವರೇ ಜ್ಞಾನಿಗಳು. ಅವರಿಗೆ ಅವೆಲ್ಲವೂ **ವ್ಯತಿರೇಕ ಪೂಜೆಗಳೆಂದೆನಿ**ಸುವುವು. ಶ್ರೀವರನಾದ ಆ ಪರಮಮಂಗಳ ವಿಗ್ರಹನನ್ನು ಸರ್ವ ಸ್ಥಳ, ಕಾಲ, ದೇಶ, ವಸ್ತುಗಳಲ್ಲಿ ಚಿಂತಿಸುತ್ತಾ, ಆತನ ವಿಭೂತಿ ರೂಪಗಳನ್ನು ಉಪಾಸಿಸುತ್ತಾ, ಸರ್ವತ್ರ ವ್ಯಾಪ್ತನಾದ ಆ ಸರ್ವೇಶನನ್ನು ಸ್ವಬಿಂಬನಲ್ಲಿ ಐಕ್ಯಚಿಂತನೆ ಮಾಡುತ್ತಿರುವ ಅಂತರಂಗಭಕ್ತರನ್ನು ಕೃಪಾಳುವಾದ ಆ ಜಗತ್ಪ್ರಭುವು ಸ್ವೀಕರಿಸಿ, ಅವರ ಸಮಸ್ತ ದುರಿತ ಕ್ಲೇಶಾದಿಗಳನ್ನು ಪರಿಹರಿಸಿ , ಇಹದಲ್ಲಿ ಸುಖ, ಪರದಲ್ಲಿ ನಿತ್ಯಾನಂದರೂಪವಾದ ಮೋಕ್ಷಸುಖವನ್ನು ಇತ್ತು ಸಂರಕ್ಷಿಸುವನು. ಮಾನಸಿಕ ಪೂಜಾರೂಪವಾದ ವ್ಯತಿರೇಕ ಪೂಜಾವಿಧಿಗಳನ್ನು ಜ್ಞಾನಾನುಸಂಧಾನ ಕ್ರಮದಿಂದ ತಿಳಿದು, ಆ ದೇವೋತ್ತಮನಾದ ಶ್ರೀಹರಿಯ ಚರಣಾರವಿಂದಗಳಲ್ಲಿ ಅರ್ಪಿಸುತ್ತಾ, ಅವನ ಅನುಗ್ರಹವನ್ನು ಬೇಡುತ್ತಿರು. ಆ ಘನಮಹಿಮನು ಅದನ್ನು ಪ್ರೀತಿಯಿಂದ ಸ್ವೀಕರಿಸಿ, ಜನನಮರಣಾಖ್ಯವಾದ ಈ ಘೋರ ಸಂಸಾರಸಾಗರವನ್ನು ಉತ್ತರಿಸಿ, ಮುಕ್ತರೊಡನೆ ಇಟ್ಟು , ಆನಂದ ಪಡಿಸುವನು.

ಪದ್ಮನಾಭರೂಪೀ ಆ ಪರಮಾತ್ಮನಿಗ **ಚೇತನಪ್ರತಿಮೆ ಮತ್ತು ಜಡಪ್ರತಿಮೆ** ಎಂದು ಎರಡು ವಿಧವಾದ ಪ್ರತೀಕಗಳು. ಸರ್ವಜೀವರೂ ಬಿಂಬರೂಪೀ ಶ್ರೀಹರಿಯ **ಚಲಪ್ರತೀಕರು**ಜಡವಸ್ತುಗಳು **ಅಚಲಪ್ರತೀಕಗಳು** ಎಂದೆನಿಸವುವು. ಚಲಪ್ರತೀಕಗಳಾದ ಸರ್ವಜೀವರಲ್ಲಿ **ಸ್ತ್ರೀಯರು, ಪುರುಷರು**ಎಂದು ಎರಡು ಬಗೆ. ಅಹಿತಪ್ರತಿಮೆ ಮತ್ತು ಸಹಜಾಚಲಗಳೆಂದು ಎರಡುವಿಧ. ಚಲ ಹಾಗೂ ಅಚಲ ಪ್ರತೀಕಗಳಲ್ಲಿ ಪಂಚಗೋಳಕಗಳ ದ್ವಾರಾ ಭಗವದ್ರೂಪಗಳನ್ನು ಚಿಂತಿಸುತ್ತಾ, ಭಜಿಸುತ್ತಿರು—ಎಂದು ತತ್ತ್ವಮಾರ್ಗದರ್ಶನ ಮಾಡಿಸುತ್ತಾರೆ. ಬ್ರಹ್ಮ, ಸಮೀರ, ಗರುಡ, ರುದ್ರ, ಇಂದ್ರ, ಮನ್ಮಥ, ತ್ವಗಿಂದ್ರಿಯಾಭಿಮಾನಿ ಅಹಕಾಂರಿಕಪ್ರಾಣ

ಇತ್ಯಾದಿ ದೇವತಾವರ್ಗ ಪುರುಷದೇವತೆಗಳೆನಿಸುವರು. ಆ ತತ್ವಾಭಿಮಾನಿಗಳ ಅಂತರ್ಯಾಮಿಯಾಗಿ ಅರವಿದೂರನಾದ ಅನಿರುದ್ಧನಿದ್ದು, ದೇಹದಲ್ಲಿ ಪ್ರಕಾಶ ತೋವ್ಯಾಪ್ತನಾದ ಜೀವನಿಗೆ ಸುಖಪ್ರದನಾಗಿದ್ದಾನೆ. ಆ ಪುರುಷದೇಹಾಭಿಮಾನಿ ದೇವತೆಗಳ ದ್ವಾರಾ ಜೀವನಿಗೆ ಸುಖಾನುಭವ ಪ್ರಾಪ್ತಿ. ಶ್ರೀಲಕ್ಷ್ಮೀದೇವಿ, ಸರಸ್ವತೀ, ಭಾರತೀ, ಸೌಪರ್ಣಿ, ವಾರುಣಿ, ಉಮಾ, ಶಚಿ, ರತಿ ಇತ್ಯಾದಿ ಸ್ತ್ರೀದೇವತಾವರ್ಗ ಸ್ತ್ರೀಯರ ದೇಹಾಭಿಮಾನಿಗಳಾಗಿದ್ದಾರೆ. ಆ ಸ್ತ್ರೀ ದೇವತೆಗಳು ಸ್ತ್ರೀಯರಾದ ಜೀವರ ದೇಹದಲ್ಲಿದ್ದು, ತತ್ತ್ವಕಾರ್ಯ ನಡೆಯಿಸುತ್ತಾ, ಅರುಣವರ್ಣವಿಶಿಷ್ಟನಾದ ಪ್ರದ್ಯುಮ್ನ, ಪೀತವರ್ಣದಿಂದ ಶೋಭಾಯಮಾನನಾದ ಸಂಕರ್ಷಣ, ಈ ಭಗವದ್ರೂಪಗಳ ಉಪಾಸನೆ ಮಾಡುತ್ತಾ, ಸ್ತ್ರೀಯರಿಗೆ ಸುಖಪ್ರದರಾಗಿದ್ದಾರೆ. ಜಡಾಧಿಷ್ಠಾನಗಳಾದ ಪ್ರತೀಕಗಳು, **ಕೃತ ಮತ್ತು ಹುತವಹ**ವೆಂದು ಮತ್ತೆ ಎರಡು ಪ್ರಕಾರ. ಕರಚರಣಾದಿ ಅವಯವಗಳಿಂದ ಕೂಡಿದ ಶಿಲ್ಪಿಯಿಂದ ನಿರ್ಮಿತ ವಿಷ್ಣುಪ್ರತೀಕ ಕೃತಪ್ರತೀಕವು. ದಾರುಮಥನದಿಂದ ನಿರ್ಮಿತವಾದ ಯಜ್ಞಸಂಬಂಧ ಅಗ್ನಿಯು ಹುತವಹ ಪ್ರತೀಕವು. ಟಂಕೀ ಎಂಬ ನಾಮದಿಂದ ಪರಮಾತ್ಮನು (ಟ—ವರ್ಣವಾಚ್ಯ ಭಗವದ್ರೂಪ) ಕೃತಪ್ರತೀಕಗಳಲ್ಲಿಯೂ, ಭಾರ್ಗವನಾಮಕ ಭಗವಂತನು ಅಗ್ನ್ಯಂತರ್ಗತನಾಗಿ ಹುತವಹ ಪ್ರತೀಕಗಳಲ್ಲಿಯೂ ಇರುವರು. ವಾಯ್ವಾದಿ ೨೪ ತತ್ವಾಭಿಮಾನಿ ದೇವತೆಗಳು ಪತ್ನೀಸಹಿತರಾಗಿ ನೆಲೆಸಿದ್ದಾರೆ. ಪ್ರತಿಮಾಂತರ್ಯಾಮಿ ಪ್ರತೀಕಾಭಿಮಾನಿ ದೇವತಾಂತರ್ಯಾಮಿಯಾಗಿ ಆ ಸರ್ವಾಂತರಾತ್ಮನು ನಿತ್ಯದಲ್ಲೂ ಶ್ರೀ ತುಲಸಿ, ಸುಗಂಧ, ಅಕ್ಷತೆ, ಪರಿಮಳಭರಿತ ಪುಷ್ಪಗಳು, ಸುರಸೋಪೇತ ಫಲಗಳು, ದೀಪ, ಧೂಪ, ಪಂಚಾಮೃತಾಭಿಷೇಕ ಇತ್ಯಾದಿ ಸಾಧನಗಳಿಂದ ಪೂಜಿಸುವ ಭಕ್ತರಿಗೆ ಇಷ್ಟಾರ್ಥಪ್ರದಾಯಕನಾಗಿದ್ದು, ಪರದಲ್ಲಿ ಮೋಕ್ಷಾನಂದವೆಂಬ ಪರಮಪುರುಷಾರ್ಥ ರೂಪವಾದ ನಿತ್ಯಸುಖವನ್ನೀಯುವನು.

ಮೇರು, ಮಂದರ, ಹಿಮಾಚಲ ಇತ್ಯಾದಿ ಪ್ರಕೃತಿಯಲ್ಲಿ ನೈಜಸ್ಥಿತಿಯಲ್ಲಿರುವ

***ಸಹಜಾಚಲಗಳೆನಿಪ*** ಪರ್ವತಗಳಿಗೆ ಅಭಿಮಾನಿಗಳಾದ ದೇವತೆಗಳಿದ್ದಾರೆ. ಈ ಪರ್ವತಾಭಿಮಾನಿಸುರರು, ಸಹಜಾಚಲಾಂತರ್ಗತನಾದ ***ಶ್ರೀವಾಸುದೇವರೂಪೀ*** ಪರಮಾತ್ಮನನ್ನು ಪೂಜಿಸುವರು. ಇಂತು ಸ್ತ್ರೀಪುರುಷಭೇದದಿಂದ ಚಲಪ್ರತೀಕಗಳಲ್ಲಿ ಎರಡು ವಿಧ. ಜಡಪ್ರತೀಕಗಳಲ್ಲಿ ***ಆಹಿತ ಮತ್ತು ಸಹಜ***ವೆಂಬ ಎರಡು ವರ್ಗ. ಅಂತೂ ಈ ನಾಲ್ಕುವಿಧಗಳಾದ ಪ್ರತೀಕಗಳಲ್ಲಿ ಸ್ವಗತಭೇದವಿವರ್ಜಿತನಾದ, ಆ ಸ್ವರಮಣನನ್ನು ಧ್ಯಾನೋಪಾಸನೆಯ ದ್ವಾರಾ ಅರಿತು, ಪೂಜಿಸಲು, ಅಂತಹ ಸಾಧಕರನ್ನು ಅಹಂಕಾರ ಮಮಕಾರಗಳಿಂದ ದೂರರನ್ನಾಗಿ ಮಾಡಿ, ಸಂಸಾರವೆಂಬ ಘೋರ ವಾರಿಧಿಯನ್ನು ದಾಟಿಸಿ, ಸ್ವರೂಪಾನಂದಾವಿರ್ಭಾವರೂಪವಾದ ಮುಕ್ತಿಯನ್ನು ಕರುಣಿಸಿ ಕಾಪಾಡುವನು ಆ ಕರುಣಾಮಯನು!

ಜ್ಞಾನಶೂನ್ಯನಾಗಿ, ಯಾವ ಕ್ಷೇತ್ರಯಾತ್ರೆ ಮಾಡಿದರೇನು? ಯಾವ ಸತ್ತೀರ್ಥದಲ್ಲಿ ಸ್ನಾನಗೈದರೇನು? ಇನ್ನ್ಯಾವ ಜಪ ತಪ ಹೋಮ, ದಾನಗಳನ್ನು ಮಾಡಿದರೇನು? ಅವೆಲ್ಲವೂ ನಿಷ್ಫಲವೆಂದು ಬೋಧಿಸುತ್ತಾ, ***ಸರ್ವ ಜಂಗಮ ಸ್ಥಾವರ ವಸ್ತುಗಳಲ್ಲಿ*** ತದ್ರೂಪ, ತದಾಕಾರ, ತದ್ವಾಚ್ಯ, ತನ್ನಾಮಕ, ತದ್ಭಿನ್ನನಾದ ಶ್ರೀ ಹರಿಯು ಸರ್ವಾಂತರ್ಯಾಮಿಯಾಗಿ ಇದ್ದಾನೆಂದು ತಿಳಿಯದೇ, ಆ ಪರಿಪೂರ್ಣನಾದ ***ಜಗನ್ನಾಥವಿಠಲನ***ಮಹಾಮಹಿಮೆಗಳನ್ನು ಅರಿಯದವನು ಏನು ಸತ್ಕರ್ಮಗಳನ್ನು ಆಚರಿಸಿದರೂ ನಿಷ್ಪ್ರಯೋಜಕವೆಂದು, ಕರ್ಮದ ಮರ್ಮವನ್ನು ತಿಳಿಸುತ್ತಾ, ಪ್ರಸಕ್ತ ಸಂಧಿಯನ್ನು ಉಪಸಂಹರಿಸುತ್ತಾರೆ ೩೨ನೆಯ ಅಂತ್ಯಪದ್ಯದಿಂದ ಅಪರೋಕ್ಷೀಕೃತಶ್ರೀಶರಾದ ವ್ಯಾಪ್ತೋಪಾಸಕರಾದ ***ಶ್ರೀಜಗನ್ನಾಥದಾಸವರೇಣ್ಯರು.***

|| ***ಇಂತು ಧ್ಯಾನಪ್ರಕ್ರಿಯಸಂಧಿಯ ಸಾರವು ಸಮಾಪ್ತಿಯಾಯಿತು*** ||

|| ಶ್ರೀ ಮಧ್ವೇಶಾರ್ಪಣಮಸ್ತು ||

|| ಗರುಡವಾಹನ ಶ್ರೀಲಕ್ಷ್ಮೀನರಸಿಂಹಾಯ ನಮಃ ||

|| ಶ್ರೀಜಗನ್ನಾಥವಿಠ್ಠಲ ಪ್ರಸನ್ನ ||

## ಧ್ಯಾನಪ್ರಕ್ರಿಯಾಸಂಧಿ (ಸ್ಥಾವರ ಜಂಗಮ ಸಂಧಿ)

(ಸಂಧಿ ೧೧)

ಹರಿಕಥಾಮೃತಸಾರ ಗುರುಗಳ
ಕರುಣದಿಂದಾಪನಿತು ಪೇಳುವೆ
ಪರಮಭಗವದ್ಭಕ್ತರಿದನಾದರದಿ ಕೇಳುವುದು ||ಪ ||

ಪದ್ಯ ೧

ಮೂಲ :—

ಪಾದುಕೆಯ ಕಂಟಕ ಸಿಕತ ಮೊದ
ಲಾದುವನುದಿನ ಬಾಧಿಸುವವೇ
ಕಾದಶೇಂದ್ರಿಯಗಳಲಿ ಬಿಡದೆ ಹೃಷೀಕಪನಮೂರ್ತಿ
ಸಾದರದಿ ನೆನೆವವನು ಏನಪ
ರಾಧಗಳು ಮಾಡಿದರು ಸುಡಿಯೆ ನಿ
ರೋಧಗೈಸವು ಮೋಕ್ಷಮಾರ್ಗಕೆ ದುರಿತರಾಶಿಗಳು || ೧ ||

ಅವತರಣಿಕೆ :—

ಕಾಲಿಗೆ ಚುಚ್ಚುವ ಮುಳ್ಳು, ಒತ್ತುವ ಮರಳಿನ ಕಣಗಳು ನಡೆಯುತ್ತಿರುವಾಗ ಪಾದಗಳಿಗೆ ನೋವನ್ನುಂಟುಮಾಡುವವು. ಆದರೆ ಪಾದರಕ್ಷೆಯನ್ನು ಧರಿಸಿರುವವನಿಗೆ ಅವುಗಳಿಂದ ಏನೂ ಬಾಧಕವಾಗುವುದಿಲ್ಲ. ಅಂತೆಯೇ ಮನವೆ ಮೊದಲಾದ

ಹನ್ನೊಂದು ಇಂದ್ರಿಯಗಳಲ್ಲಿ , ಆ ಇಂದ್ರಿಯಗಳಿಗೆ ನಿಯಾಮಕನಾದ **ಹೃಷೀಕೇಶನಾಮಕ** ಶ್ರೀಪರಮಾತ್ಮನನ್ನು ನಿರಂತರ ನೆನೆಯುತ್ತಿರುವ ಭಕ್ತನನ್ನು ಪಾಪರೂಪವಾದ ಅಪರಾಧಗಳು ಮೋಕ್ಷಮಾರ್ಗಕ್ಕೆ ಪ್ರತಿಬಂಧಕಗಳಾಗುವುದಿಲ್ಲ ಎಂದು—ತಿಳಿಸುತ್ತಾರೆ— ಪಾದುಕೆಯ ಎಂಬ ಪ್ರಸಕ್ತಸಂಧಿಗತ ಈ ಆರಂಭಪದ್ಯದಿಂದ || ೧ ||

ಪ್ರತಿಪದಾರ್ಥ:—

ಪಾದುಕೆಯ=ಪಾದರಕ್ಷೆಗಳನ್ನು ಧರಿಸಿರುವವನ ಕಾಲಿಗೆ, ಕಂಟಕ = ಚುಚ್ಚುವ ಮುಳ್ಳು, ಸಿಕತ=ಒತ್ತುವ ಮರಳಿನ ದಪ್ಪಕಣಗಳು, ಅನುದಿನ=ನಿತ್ಯದಲ್ಲಿ, ಬಾಧಿಸುವವೇ=ಎಂದಿಗಾದರೂ ನೋವನ್ನುಂಟುಮಾಡುತ್ತವೆಯೇ? ಅಂತೆಯೇ, ಏಕಾದಶೇಂದ್ರಿಯಗಳಲಿ=ಮನಸ್ಸು, ಪಂಚಜ್ಞಾನೇಂದ್ರಿಗಳು, ಪಂಚ ಕರ್ಮೇಂದ್ರಿಯಗಳು ಎಲ್ಲಾ ಸೇರಿ ಹನ್ನೊಂದು ಇಂದ್ರಿಯಗಳಲ್ಲಿ, ಬಿಡದೆ=ಅರಕ್ಷಣವಾದರೂ, ಹೃಷೀಕಪನ =ಇಂದ್ರಿಯನಿಯಾಮಕನಾದ ಶ್ರೀಪರಮಾತ್ಮನ ( ಹೃಷೀಕ=ಇಂದ್ರಿಯಗಳು, ಪ=ನಿಯಾಮಕನಾಗಿದ್ದು ಪಾಲನೆ ಮಾಡುವ), ಮೂರ್ತಿ=ಭಗವದ್ರೂಪಗಳನ್ನು, ಸಾದರದಿ=ಅತ್ಯಂತ ಭಕ್ತಿಭಾವದಿಂದ, ನೆನೆವನು=ಸ್ಮರಣೆ ಮಾಡುವವನು, ಏನಪರಾಧಗಳ=ಅಪರಾಧರೂಪವಾದ ಎಂತಹ ಪಾಪಗಳನ್ನು, ಮಾಡಿದರೂ ಸರಿಯೆ=ಎಸಗಿದರೂ ಸರಿಯೆ, ದುರಿತರಾಶಿಗಳು=ಆ ಪಾಪಸಮೂಹಗಳು, ಮೋಕ್ಷಮಾರ್ಗಕೆ=ಭಗವದಪರೋಕ್ಷದ್ವಾರಾ, ಲಿಂಗಭಂಗದ ಮೂಲಕ, ಕರ್ಮ ವಿಮೋಚನೆಯಾಗಿ ಸ್ವಸ್ವರೂಪಾನಂದಾವಿರ್ಭಾವರೂಪವಾದ ಮುಕ್ತಿಪಥಕ್ಕೆ, ನಿರೋಧಗೈಸವು=ಪ್ರತಿಬಂಧಕವಾಗುವುದಿಲ್ಲ. || ೧ ||

## ವ್ಯಾಖ್ಯಾನಗಳು :—

ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ:—

ಈ ಸಂಧಿಯಲ್ಲಿ ಅಧಿಕಾರಿಯಾದವ ನಿಷ್ಕಾಮಕರ್ಮ ಮಾಡುವ ವಿಧಿಯೂ,

ದೇಹದಲ್ಲಿ ನಾಡಿಗಳ ವಿಚಾರವೂ, ಇಂದ್ರಿಯನಿಯಾಮಕತ್ವಕ್ರಮವೂ, ವ್ಯತಿರೇಕ ಪೂಜಾವಿಚಾರವೂ, ಪ್ರತಿಮಾಪೂಜಾ ಗೋಳಕಗಳ ವಿಚಾರವೂ ಹೇಳತಾರೆ.

ಅನುಸಂಧಾನಯುಕ್ತಗೆ ದುರಿತರಾಶಿಗಳು ಮೋಕ್ಷಕ್ಕೆ ಪ್ರತಿಬಂಧಕವಾಗೋದಿಲ್ಲ– ಎಂತ ಹೇಳತ್ತಾರೆ.

ಮುಳ್ಳು ಉಸುವು ಇವೇ ಮೊದಲಾದುವು ಮಾರ್ಗಾಂತರ ಹೋಗಲೀಸದೆ ನಿರೋಧ ಮಾಡಕತ್ಕ ಅಂದರೆ, ಪಾದಕ್ಕೆ ಬಾಧಿಸತಕ್ಕ ಅನೇಕ ವಿಧ ಪ್ರತಿಬಂಧಕಗಳು, ಯಾವಾಗ ಅಂದರೆ, ಬರೀಕಾಲಿನಿಂದ ಪ್ರಯಾಣಮಾಡತಕ್ಕವಗೆ. (ಅದೇ ಪುರುಷ), ಪಾದರಕ್ಷವನ್ನು ಪ್ರತಿದಿನವೂ ಧರಿಸಿ, ಮಾರ್ಗ ನಡೆಯಕತಕ್ಕ ಪುರುಷಗೆ ಪೂರ್ವೋಕ್ತ ಕಂಟಕಾದಿಗಳು ಬಾಧಿಸಲಾರವು. (ಇದುಹ್ಯಾಂಗೋ ತದ್ವತ್), ಅಧಿಕಾರಿಗಳು, ಇಹಲೋಕವನ್ನು ಬಿಟ್ಟು ಪರಲೋಕಕ್ಕೆ ಹೋಗಬೇಕಾದರೆ ಮಾರ್ಗವನ್ನು ನಡೆದು ಹೋಗಬೇಕು. (ಮೋಕ್ಷ ಎಂದರೆ ಭಗವದಪರೋಕ್ಷದಿಂದ ಲಿಂಗಭಂಗವಾಗಿ ವೈಕುಂಠಾದಿಲೋಕ ಸೇರಬೇಕೆಂಬ ತಾತ್ಪರ್ಯ) ಸತ್ಸಾಧನೆ ಎಂಬೋದೆ ಮಾರ್ಗ ( ಈ ಮಾರ್ಗಕ್ಕೆ ಮುಳ್ಳು ಉಸುವುದಾವದೆಂದರೆ), ಸಕಾಮಪಾಪಗಳು, ಸಕಾಮ ಪುಣ್ಯಗಳು, ಅಹಂಮಮತಾದಿಗಳು, ಇದರಿಂದ ವೈಕುಂಠಾದಿ ಪುರಗಳು ಸೇರೋದಕ್ಕೆ ಬಾಧಕ ಮಾಡಿ ಸೇರದಂತೆ ಮಾಡೋದಾಗತವೆ. ಇಂಥಾ ಮಾರ್ಗ ನಡಿಯಬೇಕಾದರೆ (ಪಾದಸದೃಶಗಳು ದಾವವೆಂದರೆ), ಮನ ಆದಿ ಏಕಾದಶೇಂದ್ರಿಯಗಳೇ ಪಾದಗಳು. ಈ ಪಾದಗಳದ್ವಾರ ಗಮನ ಮಾಡಬೇಕು. ಗಮನಮಾಡೋ ಯತ್ನ ಮಾಡಿದರೆ ಪಾಪಗಳೆಂಬೋ ಕಂಟಕ, ಸಿಕತಗಳು ಪಾದಕ್ಕೆ ಬಾಧಿಸಿ ಮಾರ್ಗವನ್ನು ನಡಿಯ ಗೊಡೋದಿಲ್ಲ. ಆದ್ದರಿಂದ ಇಂದ್ರಿಯಾಖ್ಯಪಾದಗಳಿಗೆ ಪಾದರಕ್ಷ ಧರಿಸೋವನಾಗಬೇಕು. ಎಂಥಾ ಪಾದರಕ್ಷೆ ಧರಿಸಬೇಕೆಂದರೆ, ಏಕಾದಶೇಂದ್ರಿಯಗಳಲ್ಲಿ ವಿದ್ಯಮಾನನಾದ, ಅರಕ್ಷಣಕಾಲವಾದರೂ ಬಿಡದೆ ಅಹಂಮಮತಾ ತ್ಯಾಗಪೂರ್ವಕ, ನಿಷ್ಕಾಮಪೂರ್ವಕ,

ಇಂದ್ರಿಯಗಳಲ್ಲಿ ಇದ್ದು ಆಯಾ ಇಂದ್ರಿಯಗಳ ಪಾಲನ ಮಾಡತಕ್ಕ ಇಂದ್ರಿಯ ನಿಯಾಮಕನಾದ ಭಗವನ್ಮೂರ್ತಿ ದಾವದದೆ ಆ ಮೂರ್ತಿಯ ತಿಳಿದು, ವಾಸನಾನು ಸಂಧಾನದಿಂದ ಆಯಾ ಇಂದ್ರಿಯಗಳಲ್ಲಿ ಚಿಂತಿಸಿ, ಷೋಡಶೋಪಚಾರಗಳು ಮಾಡಿ, ಅಹಂಮಮತಾರಹಿತನಾಗಿ, ನಿಷ್ಕಾಮನಾಗಿ, ಬಿಂಬಕ್ರಿಯಾದ್ವಾರಾ ಪ್ರತಿಬಿಂಬ ನಾದ ನಾನು ಮಾಡತೇನೆಂದೂ ಅನುಸಂಧಾನದಿಂದ ಯುಕ್ತವಾದ ಪಾದರಕ್ಷೆಗಳ ತೊಡಿಸಿ, ಆದರದಿಂದ ಸ್ಮರಿಸುವವನು ಏನಪರಾಧಗಳು ಮಾಡಿದರೂ, ಅಪರಾಧ ರೂಪವಾದ ಪಾಪಗಳೆಂಬೋ ಸಿಕತಗಳು ತುಳಿಯೋವನಾದರೂ ಸರಿಯೆ, ಇಂದ್ರಿಯಾಖ್ಯ ಪಾದಕ್ಕೆ ಹೀಗೆ ವೇಧಿ ಕೊಟ್ಟು ಸಾಧನವೆಂಬೋ ಮಾರ್ಗವನ್ನು ನಡಿಯೋ ವಿಷಯದಲ್ಲಿ ನಿರೋಧ ಮಾಡೋದಿಲ್ಲ. ಮೋಕ್ಷಸಾಧನೀಭೂತನಾದ ಮಾರ್ಗ ನಡಿಯೋದಕ್ಕೆ ದಾವ ನಿರ್ಬಂಧವೂ ಆಗೋದಿಲ್ಲ ಎಂತ ತಾತ್ಪರ್ಯ. ॥೧॥

## 2. ಭಾವಪ್ರಕಾಶಿಕೆ :—

ಪಾದರಕ್ಷೆಯನ್ನು ಕಾಲಿನಲ್ಲಿ ಧರಿಸಿಕೊಂಡು, ಕಲ್ಲು ಮುಳ್ಳುಗಳುಳ್ಳ ಸ್ಥಳಗಳಲ್ಲಿ ನಡೆದರೂ ಹೇಗೆ ಅವನನ್ನು ಬಾಧಿಸಲಾರವೋ, ಹಾಗೆಯೇ ೧೧ ಇಂದ್ರಿಯಗಳಲ್ಲಿ ಇಂದ್ರಿಯಾಧಿಪತಿಯಾದ ಹೃಷೀಕೇಶನಿರುವನೆಂದು ಆದರದಿಂದ ಧ್ಯಾನಿಸುವವರು, ಏನು ಅಪರಾಧಗಳನ್ನು ಮಾಡಿದರೂ, ಆ ಪಾಪರಾಶಿಗಳು ಮೋಕ್ಷಮಾರ್ಗಕ್ಕೆ ಎಂದಿಗೂ ಪ್ರತಿಬಂಧಕವಾಗಲಾರವು. ಭಗವದ್ಭಕ್ತರು ಆಚರಿಸುವ ಪಾಪಗಳು, ಅವರ ಯೋಗ್ಯತೆ ಮೀರಿ ಮಾಡುವ ಹೆಚ್ಚು ಪುಣ್ಯಗಳನ್ನು ಮಾತ್ರ ನಾಶಗೊಳಿಸುವುವೇ ಹೊರತು, ಕ್ಲುಪ್ತಾನಂದಕ್ಕೆ ಬೇಕಾದಷ್ಟು ಕ್ಲುಪ್ತ ಪುಣ್ಯವನ್ನು ನಾಶಮಾಡಿ ಮುಕ್ತಿಗೆ ಪ್ರತಿಬಂಧಕವಾಗಲೀ, ಮುಕ್ತಿಯಲ್ಲಿ ಕ್ಲುಪ್ತಾನಂದಕ್ಕೆ ಕಮ್ಮಿಯಾಗಲೀ ಎಂದಿಗೂ ಆಗುವುದಿಲ್ಲ. ಅಹಲ್ಯಾಜಾರತ್ವದಿಂದ ದೇವೇಂದ್ರನಿಗೂ, ಗುರುಸ್ತ್ರೀಗಮನದಿಂದ ಚಂದ್ರನಿಗೂ ಮುಕ್ತಿಯಲ್ಲಿ ಸುಖಕ್ಕೆ ಏನೇನೂ ಕಮ್ಮಿಯಾಗಲಿಲ್ಲ. ಇದರಂತೆ ಧ್ಯಾನಾಸಕ್ತರು ಏನಾದರೂ ಪಾಪವನ್ನು ಮಾಡಿದ್ದರೂ, ಆ ಪಾಪರಾಶಿಗಳೆಲ್ಲ

ಭಸ್ಮವಾಗುವುವೇ ಹೊರತು ಮುಕ್ತಿಗೆ ಪ್ರತಿಬಂಧಕವಾಗುವುದಿಲ್ಲವೆಂದು ತಾತ್ಪರ್ಯ. ಈ ಪದ್ಯದಿಂದ ಈ ಸಂಧಿಯಲ್ಲಿ ಹೇಳುವ ಧ್ಯಾನವಿಷಯದ ಅಭಿಪ್ರಾಯವನ್ನು ಸೂಚಿಸುವಂತಾಯಿತು. ॥೧॥

## 2. ಭಾವದರ್ಪಣಟೀಕಾ :–

ಶ್ರೀಗುರುಭ್ಯೋ ನಮಃ ॥ಶ್ರೀಮನ್ಮಧ್ವಾಂತಃಕರಣರೂಢಾಯನಮಃ॥

ಈಗ ದಾರಾಪತ್ಯಾದಿಗಳೇ ಗತಿಪ್ರದರು ಎಂತ ತಿಳಿಯಕೂಡದು. ಸರ್ವತ್ರಗತ ಪರಮಾತ್ಮನೇ ಇಷ್ಟದಾಯಕನೆರಿತ ಅನುಸಂಧಾನ ಮಾಡಬೇಕೆಂದು ತಿಳಿಸಿ ಕೊಡೋದ ಕ್ಕೋಸ್ಕರ ಧ್ಯಾನಪ್ರಕ್ರಿಯಾಸಂಧಿ ಉಪಕ್ರಮ ಮಾಡುತ್ತಾರೆ.

ಖಂಡಾವಿಗಿ ಧರಿಸಿದವನಿಗೆ ಕಂಟಕಾದಿಗಳ ಭಯ ಹ್ಯಾಂಗೆ ತೋರೋದಿಲ್ಲವೋ, ತದ್ವತ್ ಪರಮಾತ್ಮನಲ್ಲೇ ಮನಸ್ಸು ಇಟ್ಟು ಕರ್ಮ ಮಾಡತಕ್ಕ ಪುರುಷಗೆ ಪಾಪಗಳ ಸಂಬಂಧವಿಲ್ಲವೆಂದು ಸದೃಷ್ಟಾಂತ ಹೇಳುತ್ತಾರೆ – **ಪಾದುಕೇತಿ** ಸಿಕತ – ಉಸುಬು. ಏಕಾದಶೇಂದ್ರಿಯ – ಮನಸ್ಸು. ॥೧॥

## ೪. ಶ್ರೀವ್ಯಾಸದಾಸಸಿದ್ಧಾಂತ ಕೌಮುದೀ (ಸಂಸ್ಕೃತಮೂಲ) :–

ಓಂ "ಆಸೀನಃ ಸಂಭವಾತ್"– ಇತ್ಯುಕ್ತಾಸನಾಪೇಕ್ಷಂ – "ಓಂ ಧ್ಯಾನಾಚ್ಚ ಓಂ" – ಇತ್ಯುಕ್ತಂ ಶ್ರೀವರಧ್ಯಾನಂ ವಕ್ತುಂ ಆರಭತೇ – "ಪಾದುಕೇ" – ಇತೀ ಪಾದತ್ರಾಣವಾನ್ ಶರ್ಕರಾಕಂಟಕಾದಿಭ್ಯಃ ಯಥಾ ಉಪಾನತ್‌ಪದಂ ಶಿವಂ" – ಇತಿ **ಭಾಗವತೇ॥** ಹೃಷೀಕಪ" ಇತಿ. "ಓಂ ಇಂದ್ರಾಯ ದ್ಯಿವ ಓಷಾಧೀರುತಾಪಃ ಪತಿಂ ವೋ ಅಧ್ನ್ಯಾನಾಮ್॥ ರಯಿ ರಕ್ಷಂತಿ ಜೀರಯೋವನಾನಿಧೇನೂ ನಾ ಮಿಕ್ಷುದ್ಯಸೌ ಓಂ॥ ಇಂದ್ರಿಯಾದೀನಿ ರಕ್ಷತಿ ಇತ್ಯನೇನ ಇಂದ್ರಿಯಗಣ ನಿಷೇವ್ಯತ್ವಂ ತತ ಏವ ತತ್ಸ್ವಾಮಿತ್ವಂ ತತ್ಪದಾರ್ಥಃ॥ ಗೈಸವೂ =ಮಾಡವು. ॥೧॥

## ಕನ್ನಡಾರ್ಥ :—

ಭಗವನ್ಮೂರ್ತಿಗಳನ್ನು ಸಾದರದಿಂದ ಸ್ಮರಿಸುತ್ತಿರುವವರಿಗೆ ಪ್ರಮಾದದಿಂದ ಆಕಸ್ಮಿಕವಾಗಿ ಸಂಭವಿಸುವ ಪಾಪರಾಶಿಗಳು ಮೋಕ್ಷಮಾರ್ಗಕ್ಕೆ ತಡೆಮಾಡುವುದಿಲ್ಲ ಎಂದು ಹೇಳುತ್ತಾರೆ. ಧ್ಯಾನೋಪಾಸಕನಿಗೆ ಮುಖ್ಯ ಅಂಗವು – **"ಆಸನ"**ಎಂದು ಉಕ್ತವಾಗಿದೆ. ಭಗವಂತನಲ್ಲಿ ನಿರಂತರ ಅಖಂಡ ಸಂಸ್ಮರಣೆಯೇ ಧ್ಯಾನವೆನಿಸುವುದು. ಇಂಥ ಧ್ಯಾನಕ್ಕೆ ಅಂಗವಾಗಿ ಆಸನಾದಿ ನಿಯಮಗಳು ಅತ್ಯಗತ್ಯ – ಎಂದು ಬ್ರಹ್ಮಸೂತ್ರದ ಪ್ರಮಾಣ. ಇಂತು, ಸೂತ್ರೋಕ್ತ ಧ್ಯಾನೋಪಾಸನೆಯ ಕ್ರಮವನ್ನು ತಿಳಿಸುತ್ತಾರೆ – **"ಪಾದುಕೆಯು"**ಎಂಬ ಪದ್ಯದಿಂದ . ಪಾದರಕ್ಷೆಯು ಮುಳ್ಳು, ಹರಳು (ಕಲ್ಲು)ಗಳಿಂದ ಪಾದವನ್ನು ರಕ್ಷಿಸುವುದು. ಅಂತೆಯೇ ಪರಮಾತ್ಮನ ಪಾದಧ್ಯಾನವು ಭಕ್ತರನ್ನು ಪಾಪಗಳಿಂದ ರಕ್ಷಿಸುತ್ತದೆ ಎಂದು **ಭಾಗವತೋಕ್ತಿ**. **"ಹೃಷೀಕಪ"** ಎಂಬುದು ಸಹಸ್ರನಾಮಗಳಲ್ಲಿ ಒಂದು. **'ಹೃಷೀಕೇಶ'** ಎಂದು ಮೂಲನಾಮ. ಇದರ ಅರ್ಥ ಬೃಹತೀಮಂತ್ರದಲ್ಲಿ ವಿವರಿಸಲ್ಪಟ್ಟಿದೆ. ಇಂದ್ರಿಯಾದಿಗಳ ಸಂರಕ್ಷಕ ಹಾಗೂ ಇಂದ್ರಿಯಾಭಿಮಾನಿದೇವತೆಗಳು ಶ್ರೀಹರಿಯನ್ನು ಸೇವಿಸುವುದರಿಂದ. ಪರಮಾತ್ಮನು ಇಂದ್ರಿಯಗಳ ಸ್ವಾಮಿಯು. ಇದರಿಂದ ಅವನಿಗೆ "ಹೃಷೀಕಪ" – "ಹೃಷೀಕೇಶ" ಎಂತ ನಾಮ. ॥೧॥

## ೫. ಶ್ರೀಗುರುಹೃದಯ ಪ್ರಕಾಶಿಕಾವ್ಯಾಖ್ಯಾನ :—

**ಧ್ಯಾನಪ್ರಕ್ರಿಯಾ**ಎಂಬ ಹನ್ನೊಂದನೆಯ ಸಂಧಿಯಲ್ಲಿ, ಹಿಂದಿನ ಸಂಧಿಯಲ್ಲಿ ಹೇಳಿದ ಹನ್ನೊಂದು ಕರಣದಲ್ಲಿರುವ ದೇವರ ರೂಪದ ಚಿಂತನೆಗೆ ಫಲವನ್ನೂ, ಜೀವ–ಪರಮಾತ್ಮರ ಸ್ವರೂಪಲಕ್ಷಣವನ್ನೂ, ನಾಡೀಸ್ಥಿತಭಗವದ್ರೂಪವನ್ನು, ಶಕ್ತ್ಯಾಯಾದ್ಯೇಕಾದಶರೂಪಚಿಂತನೆಯನ್ನೂ, ಷಡ್ರಸಗತರೂಪ ಚಿಂತನೆ, ಸಾರಾಸಾರಗತರೂಪ ಚಿಂತನೆ, ಅನ್ವಯ–ವ್ಯತಿರೇಕಪೂಜಾಕ್ರಮ ಮೊದಲಾದ ಪ್ರಮೇಯಗಳನ್ನು ನಿರೂಪಿಸುತ್ತಾರೆ. ದೇವರ ಸ್ವಾತಂತ್ರ್ಯಾದಿ ಮಹಿಮೆಯನ್ನು

ವರ್ಣಿಸುವ ಹರಿಕಥೆಯೆಂಬ ಮೋಕ್ಷಪ್ರದವಿಷಯವನ್ನು ಗುರುಕರುಣದಿಂದ ಶಕ್ತ್ಯನುಸಾರವಾಗಿ ಹೇಳಿದ್ದನ್ನು ಅತ್ಯಂತ ಹರಿಭಕ್ತರು ಕೇಳಬೇಕು.

ಭಕ್ತಾಪರಾಧ ಎಣಿಸದ ದೇವರ ಮಹಿಮೆಯನ್ನು ತಿಳಿಸುತ್ತಾರೆ, ***ಪಾದುಕೆ*** ಎಂದು. ಕಂಟಕವೆಂಬ ಮುಳ್ಳು, ಸಿಕತವೆಂಬ ಉಸುಬು, ಕಲ್ಲು ಮೊದಲಾದ್ದು ಪಾದುಕೆ ಎಂಬ ಪಾದರಕ್ಷೆಯನ್ನು ಬಾಧಿಸದೆ ಇರುವಂತೆ, ಶ್ರೀಹರಿಯನ್ನು ಮನ ಆದಿ ಹನ್ನೊಂದು ಕರಣದಲ್ಲಿ, ನಾರಾಯಣಾದಿ ಹನ್ನೊಂದು ರೂಪಗಳನ್ನು ಭಕ್ತಿಪೂರ್ವಕ ಚಿಂತಿಸುವ, ಅಪರೋಕ್ಷಜ್ಞಾನಿಗಳ ಸ್ವೋತ್ತಮಾಪರಾಧ ಹೊರ್ತು ಎಲ್ಲಾ ಅಪರಾಧಗಳನ್ನು ಶ್ರೀಹರಿಯು ಕ್ಷಮಿಸುವುದರಿಂದ, ದೇವರ ಪಾದುಕೆಯಂತೆ ಅಧಿಷ್ಠಾನರಾದ ಸದ್ಭಕ್ತರನ್ನು ದುರಿತರಾಶಿಗಳೆಂಬ ಪಾಪ ಸಮೂಹವು ಬಾಧಿಸಲಾರದು. ಆ ನಿಮಿತ್ತ ಮೋಕ್ಷಮಾರ್ಗಕ್ಕೆ ವಿರೋಧಿಯೂ ಆಗಲಾರದು. ***'ಶ್ರೇಷ್ಠಾಪರಾಧಾನ್ನ್ಯನದ್ದೋಷಸ್ಯಲೇಶ***ಎಂಬುದೇ ಮೊದಲಾದ ***ನಿರ್ಣಯಾರ್ಥ*** ವಿವರಿಸಲ್ಪಟ್ಟಿತು . ॥೧॥

## ಸರ್ವವ್ಯಾಖ್ಯಾನಸಾರ ಸಂಗ್ರಹ

ಸರ್ವೇಂದ್ರಿಯಗಳ ನಿಯಾಮಕನಾದ ***ಹೃಷೀಕೇಶನಾಮಕ*** ಶ್ರೀಪರಮಾತ್ಮನ ದಿವ್ಯ ಮಂಗಳ ಭಗವದ್ರೂಪಗಳನ್ನು ಎಡಬಿಡದೆ ಸಂಸ್ಮರಿಸುತ್ತಾ, ನಿತ್ಯ ಧ್ಯಾನೋಪಾಸನೆ ಮಾಳ್ಪ ಭಕ್ತರಿಗೆ ಪ್ರಮಾದವಶದಿಂದ ಮಾಡುವ ಪಾಪರಾಶಿಗಳು ಅವರನ್ನು ಬಾಧಿಸಲಾರವು ಮತ್ತು ಮುಕ್ತಿಮಾರ್ಗಕ್ಕೆ ಪ್ರತಿಬಂಧಕವಾಗುವುದಿಲ್ಲ ಎಂದು ಸದೃಷ್ಟಾಂತಪೂರ್ವಕ ತಿಳಿಸುತ್ತಾರೆ– **ಪಾದುಕೆಯ–** ಎಂಬ ಪ್ರಸಕ್ತ ಪದ್ಯದಿಂದ.

೧. ಬರೀಗಾಲಿನಲ್ಲಿ ನೆಲದ ಮೇಲೆ ನಡೆಯುತ್ತಿರುವಾಗ, ಬಿದ್ದಿರುವ ಮುಳ್ಳು ಚುಚ್ಚಿದಾಗ ಕಾಲಿಗೆ ನೋವು ಉಂಟಾಗುವುದು. ಒರಟಾದ ನೆಲದ ಮೇಲಿರುವ ಕಲ್ಲಿನ ಹರಳುಗಳು (ಸಿಕತ) ಕಾಲಿಗೆ ಒತ್ತಿ, ಬಾಧಕವುಂಟುಮಾಡಬಹುದು.

ಆದರೆ ಪಾದರಕ್ಷೆಗಳನ್ನು ಧರಿಸಿ, ನಡೆದಾಗ ಮುಳ್ಳು, ಕಲ್ಲಿನ ಹರಳುಗಳಿಂದ ಏನೇನೂ ಬಾಧಕವಾಗುವುದಿಲ್ಲ.

೨. ನಮ್ಮ ಶರೀರಗತಶ್ರೋತ್ರಾದಿಪಂಚಜ್ಞಾನೇಂದ್ರಿಯಗಳ ದ್ವಾರಾ ಶಬ್ದಾದಿ ವಿಷಯಸನ್ನಿಕರ್ಷದಿಂದ. ಆಯಾಯಾ ವಿಷಯಗಳ ಜ್ಞಾನವುಂಟಾಗುವುದು. ಅಂತೆಯೇ ಹಸ್ತಾದಿ ಪಂಚಕರ್ಮೇಂದ್ರಿಯಗಳ ದ್ವಾರಾ ದಾನಾದಾನಾದಿ ಕ್ರಿಯಾ ರೂಪವಾದ ವ್ಯಾಪಾರಗಳು ನಡೆಯುವುವು. ವಿಷಯ ಸಂಬಂಧವಾದ ಜ್ಞಾನವನ್ನು ಗ್ರಹಿಸುವ ಇಂದ್ರಿಯವು ಮನಸ್ಸು. ವಿಷಯಗ್ರಹಣಶಕ್ತಿಯುಳ್ಳ ಮನಸ್ಸು ವಿಷಯಸಂಬಂಧವಾದ ಜ್ಞಾನವನ್ನು ಗ್ರಹಿಸಿ, ಕರ್ಮೇಂದ್ರಿಯಗಳ ದ್ವಾರಾ ಕ್ರಿಯಾದಿಗಳನ್ನು ಪ್ರವರ್ತನ ಮಾಡುವುದು. ಪಂಚಜ್ಞಾನೇಂದ್ರಿಗಳು, ಪಂಚಕರ್ಮೇಂದ್ರಿಯಗಳು ಮತ್ತು ಮನಸ್ಸು ಇವೆಲ್ಲಾ ಸೇರಿ ೧೧ ಇಂದ್ರಿಯ ಸಮೂಹಕ್ಕೆ ಏಕಾದಶೇಂದ್ರಿಯಗಳೆಂದು ಹೆಸರು.

೩. ಪೂರ್ವೋಕ್ತ ಏಕಾದಶೇಂದ್ರಿಯಗತ, ಆ ಇಂದ್ರಿಯಗೋಳಕಗತ, ಇಂದ್ರಿಯಾಭಿಮಾನಿದೇವತಾಂತರ್ಗತ, ಅವರಿಗೆ ನಿಯಾಮಕವಾದ ಭಾರತೀರಮಣಮುಖ್ಯಪ್ರಾಣಾಂತರ್ಗತ ಭಗವದ್ರೂಪಗಳನ್ನು ಸ್ವಬಿಂಬನಲ್ಲಿ ಐಕ್ಯಚಿಂತನೆ ಮಾಡುವ ಧ್ಯಾನೋಪಾಸಕರು ಶ್ರೀ ಹರಿಯ ಅಂತರಂಗಭಕ್ತರು. ಇಂದ್ರಿಯಗಳ ನಿಯಾಮಕನೂ, ಇಂದ್ರಿಯಾಭಿಮಾನಿದೇವತಾವರ್ಗದಿಂದ ಸಂಸೇವ್ಯಮಾನನೂ ಆದ ಶ್ರೀಪರಮಾತ್ಮನಿಗೆ ಹೃಷೀಕಪ ನೆಂದು ಹೆಸರು. ಹೃಷೀಕ – ಎಂದರೆ ಇಂದ್ರಿಯಗಳು. ಪ – ಎಂದರೆ ಪಾಲನೆ ಮಾಡುವ ನಿಯಾಮಕನು. ಹೃಷೀಕಪ ಅಥವಾ ಹೃಷೀಕೇಶ ಎಂಬ ನಾಮವು ***ವಿಷ್ಣು ಸಹಸ್ರನಾಮಗಳಲ್ಲಿ***ಒಂದು. ಈ ಶಬ್ದದ ಅರ್ಥವನ್ನು ಬೃಹತೀಋಜ್ಞಂತ್ರವು ವಿವರಿಸುವುದು.

೪. ಶರೀರಗತಏಕಾದಶೇಂದ್ರಿಯಗಳಲ್ಲಿ ನಿಯಾಮಕನಾಗಿರುವ ಆ ಹೃಷೀಕೇಶನಾಮಕ

ಶ್ರೀಹರಿಯ ಭವ್ಯ ಭಗವದ್ರೂಪಗಳನ್ನು ಧ್ಯಾನಕ್ಕೆ ವಿಷಯವನ್ನಾಗಿ ಮಾಡಿ, ಅತ್ಯಂತ ಭಕ್ತ್ಯುದ್ರೇಕದಿಂದ (ಸಾದರದಿ) ಎಡೆಬಿಡದೆ ಸ್ಮರಿಸುವ ಏಕಾತ್ಮನ ಏಕಾಂತಭಕ್ತರು ಪ್ರಮಾದವಶದಿಂದಲಾಗಲೀ, ಕಲ್ಯಾವೇಶದಿಂದಾಗಲೀ, ಅಜ್ಞಾನದಿಂದಲಾಗಲೀ, ಶಾಪನಿಮಿತ್ತದಿಂದಲಾಗಲೀ, ಅಪರಾಧಗಳನ್ನು ಮಾಡುವರು. ತಕ್ಷಣವೇ ಅವರಿಗೆ ಪಶ್ಚಾತ್ತಾಪ ಉಂಟಾಗಿ ಆ ದಯಾಮಯನಾದ ಧನ್ವಂತ್ರಿಯಲ್ಲಿ ಮೊರೆ ಇಡುವರು. ಆಗ ಆ ಲಕ್ಷ್ಮೀಪತಿಯು ತನ್ನ ಕೃಪಾಕಟಾಕ್ಷವೀಕ್ಷಣದಿಂದ ಅವರ ಪಾಪಕ್ಷಾಳನ ಮಾಡಿ ಉದ್ಧರಿಸುವನು. ಆಕಸ್ಮಿಕವಾಗಿ ಆದ ಅಂತಹ ಪಾಪರಾಶಿಗಳು ಅವರಿಗೆ ಬಾಧಕವಾಗುವುದಿಲ್ಲ. ಅವರ ನಿತ್ಯಾನಂದರೂಪವಾದ ಮುಕ್ತಿಸುಖಕ್ಕೆ ಪ್ರತಿಬಂಧಕವಾಗುವುದಿಲ್ಲ. ಆ ಹೃಷೀಕೇಶನ ನಿತ್ಯಸಂಸ್ಮರಣೆಯೇ ಅವರಿಗೆ ರಕ್ಷಾಕವಚ. ಪಾದರಕ್ಷೆಯು ಹೇಗೆ ಮಾರ್ಗದಲ್ಲಿರುವ ಕಲ್ಲು ಮುಳ್ಳುಗಳಿಂದ ಪಾದವನ್ನು ರಕ್ಷಿಸುವುದೋ , ಅಂತೆಯೇ ಮುಕ್ತಿಮಾರ್ಗದಲ್ಲಿ ನಡೆಯುತ್ತಿರುವ ಆ ಅನಂತಮಹಿಮನ ಅಂತರಂಗಭಕ್ತರಿಗೆ ಪ್ರತಿಬಂಧಕರೂಪದಲ್ಲಿರುವಂತೆ ತೋರುವ ದುರಿತರಾಶಿಗಳು ಯಾವ ಆತಂಕವನ್ನಾಗಲೀ, ಬಾಧೆಯನ್ನಾಗಲೀ ಉಂಟು ಮಾಡುವುದಿಲ್ಲವೆಂಬುದೇ ಪ್ರಸಕ್ತ ಪದ್ಯದ ತಾತ್ಪರ್ಯಾರ್ಥವು.॥೧॥

## ಪದ್ಯ ೨

ಮೂಲ :—

ಹಗಲ ನಂದಾದೀಪದಂದದಿ।
ನಿಗಮವೇದ್ಯನ ಪೂಜಿಸುತ ಕೈ।
ಮುಗಿದು ನಾಲ್ಕರೊಂದು ಪುರುಷಾರ್ಥವನು ಬೇಡದಲೆ ॥
ಜಗದುರ ಕೊಟ್ಟುದನು ಭುಂಜಿಸು ।
ಮಗ ಮಡದಿ ಪ್ರಾಣೇಂದ್ರಿಯಾತ್ಮಾ ।
ದಿಗಳು ಭಗವದಧೀನವೆಂದಡಿಗಡಿಗೆ ನೆನೆವುತಿರು ॥ ೨ ॥

## ಅವತರಣಿಕೆ :—

ವೇದಪ್ರತಿಪಾದ್ಯನಾದ ಆ ಜಗದೀಶನು ತನ್ನ ಸಂಕಲ್ಪದಂತೆ ಏನನ್ನು ಕೊಡುತ್ತಾನೋ, ಏನನ್ನು ಕೊಟ್ಟಿದ್ದಾನೋ, ಅದನ್ನು ಸಂತೋಷದಿಂದ ಸ್ವೀಕರಿಸಬೇಕು. ಹಗಲು ನಂದಾದೀಪದಂತೆ ಅಖಂಡವಾದ ಭಕ್ತಿಯಿಂದ, ಅವನನ್ನು ಪೂಜಿಸುತ್ತಾ, ಯಾವ ಪ್ರಯೋಜನವನ್ನೂ ಬಯಸದೇ, ನಿಷ್ಕಾಮನಾಭಾವದಿಂದ, ಪತ್ನೀ, ಪುತ್ರ, ಇಂದ್ರಿಯಗಳು ಕೊನೆಗೆ ಪ್ರಾಣ ಇತ್ಯಾದಿ ಸಮಸ್ತವಸ್ತುಗಳೂ ಭಗವದಧೀನವೆಂಬ ಜ್ಞಾನಾನುಸಂಧಾನದಿಂದ ನಿರಂತರವೂ ಆ ಸ್ಮರಪಿತನನ್ನು ಸ್ಮರಿಸುತ್ತಿರು ಎಂದು ತಿಳಿಸುತ್ತಾರೆ– ಹಗಲನಂದಾದೀಪದಂದದಿ – ಎಂಬ ಪ್ರಸಕ್ತ ಸಂಧಿಗತ ೨ನೆಯ ಈ ಪದ್ಯದಿಂದ.॥೨॥

## ಪ್ರತಿಪದಾರ್ಥ :—

ಹಗಲನಂದಾದೀಪದಂದದಿ = ಹಗಲು ಹೊತ್ತಿನಲ್ಲಿ ಆರದೇ ಅಖಂಡವಾಗಿ ಉರಿಯುತ್ತಿರುವ ನಂದಾದೀಪದಂತೆ, ನಿಗಮವೇದ್ಯನ=ವೇದಪ್ರತಿಪಾದ್ಯನಾದ ಶ್ರೀ ಹರಿಯನ್ನು, ಪೂಜಿಸುತ= ಬಾಹ್ಯಪೂಜಾಸಾಧನಗಳಿಂದಲೂ, ಅತಿಶಯವಾಗಿ ಮಾನಸಿಕವಾಗಿ ಪೂಜಿಸುತ್ತಾ, ಕೈಮುಗಿದು= ಅಂಜಲೀಬದ್ಧನಾಗಿ (ಎರಡು ಕರಗಳನ್ನೂ ಜೋಡಿಸಿ, ಪೂರ್ಣ ಶರಣಾಗತನಾಗಿ), ನಾಲ್ಕೊರೊಳೊಂದು ಪುರುಷಾರ್ಥವನು = ಧರ್ಮ, ಅರ್ಥ, ಕಾಮ ಮತ್ತು ಮೋಕ್ಷಗಳೆಂಬ ಚತುರ್ವಿಧ ಪುರುಷಾರ್ಥಗಳಲ್ಲಿ ಯಾವುದನ್ನೂ, ಬೇಡದಲೆ = ಇಷ್ಟಸಿದ್ಧಿಗಾಗಿ, ಕೊಡೆಂದು ಪ್ರಾರ್ಥಿಸದೆ, ಜಗದುದರ= ಪ್ರಳಯಕಾಲದಲ್ಲಿ ಜಗತ್ತನ್ನು ತನ್ನ ಉದರದಲ್ಲಿ ಆಶ್ರಯಕೊಟ್ಟು ಸಂರಕ್ಷಿಸುವ ಶ್ರೀ ಪರಮಾತ್ಮನು, ಕೊಟ್ಟುದನು = ಆ ಸತ್ಯಸಂಕಲ್ಪನು ಏನಿತ್ತುದೇ ಪರಮಪುರುಷಾರ್ಥವೆಂದರಿತು, ಭುಂಜಿಸು= ಸ್ವೀಕರಿಸು, ಮಗ= ತನ್ನಿಂದ ಜನಿತರಾದ ಪುತ್ರರು, ಮಡದಿ = ಅಗ್ನಿಸಾಕ್ಷಿಯಾಗಿ ಕೈ ಹಿಡಿದ ಪತ್ನಿ, ಪ್ರಾಣ= ದೇಹಗತಜೀವ, ಇಂದ್ರಿಯ = ಮನಾದಿ ಏಕಾದಶೇಂದ್ರಿಯಗಳು,

ಆತ್ಮಾದಿಗಳು= ಆತ್ಮಪ್ರತ್ಯಯರೂಪವಾದ ಈ ಶರೀರ ಇತ್ಯಾದಿ. ಭಗವದಧೀನವೆಂದು= ಸಕಲ ಸರ್ವಸ್ವವೂ ಆ ಪರಮಾತ್ಮನ ಅಧೀನವೆಂದರಿತು, ಅಡಿಗಡಿಗೆ= ಪ್ರತಿಕ್ಷಣಕ್ಷಣದಲ್ಲೂ, ನೆನೆವುತಿರು = ಸ್ಮರಿಸುತ್ತಿರು.|| ೨ ||

## ವ್ಯಾಖ್ಯಾನಗಳು

### (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ :–

ಮೋಕ್ಷಮಾರ್ಗಗತ ಕಂಟಕಬಾಧಿ ನಿವೃತ್ತಿಗೆ ಪಾದರಕ್ಷೆ ದಾವದೆಂದರೆ ಮತ್ತು ಅದನ್ನು ಹೇಳತಾರೆ.

ಹಗಲಿನಲ್ಲಿ ವಿದ್ಯಮಾನವಾದ ನಂದಾದೀಪದೋಪಾದಿಯಲ್ಲಿ, ಅಂದರೆ, ಹಗಲಿನಲ್ಲಿ ಕೂಡಾ ಆರಿಸದೇ ದೇವರಲ್ಲಿ ಇಡಲ್ಪಟ್ಟ ಅಖಂಡಸಾಂಕೇತವಾದ ದೀಪ ಎಂತ ತಾತ್ಪರ್ಯ. ಈ ದೀಪದ ಪ್ರಕಾಶ ಹಗಲಿನಲ್ಲಿ ದಾರಿಗೂ ಸ್ವಪ್ರಯೋಜನವಿಲ್ಲದೇನೇ ಈಶ್ವರ ಪ್ರೀತಿಗೋಸುಗ ಇಡಲ್ಪಟ್ಟದ್ದು ಹ್ಯಾಂಗೋ, ಇದರೋಪಾದಿಯಲ್ಲಿ, ವೇದದಿಂದ ವೇದ್ಯನಾದ ಪರಮಾತ್ಮನ ವಾಸನಾದಿಂದ ಪ್ರತಿಮಾನ್ನ ಹೃದಯದಲ್ಲಿ ನಿಲ್ಲಿಸಿ, ಆ ರೂಪವನ್ನು ಅಚಂಚಲದಿಂದ ಧ್ಯಾನಮಾಡುತ್ತ ಅಂತರ್ಗತದಲ್ಲಿ ವೇದವೇದ್ಯನ ತಿಳಿಯುತ್ತಾ, ಇದರಂತೆಯೇ, ಇಂದ್ರಿಯಗಳಲ್ಲಿ ಇಂದ್ರಿಯಜನಿತ ಕರ್ಮಗಳಲ್ಲಿ ಅನುಸಂಧಾನದಿಂದ ತಿಳಿಯುತ್ತಾ, ಮಾನಸ ನಿರ್ಮಿತಪೂಜಾದ್ರವ್ಯಗಳಿಂದ ಅಂತರ್ಗತನ ತಿಳಿದು ಪೂಜಿಸುತ್ತಾ, ಕೈಸಾಂಕೇತದಿಂದ ಏಕಾದಶೇಂದ್ರಿಯಗಳೆಂತ ತಾತ್ಪರ್ಯ, ಹತ್ತು ಬೆರಳುಗಳು, ಹತ್ತು ಇಂದ್ರಿಯಗಳು, ಕೈ ಮುಗಿದದ್ದು, ಮನೋಇಂದ್ರಿಯ ಅಂತೂ ಹನ್ನೊಂದು ಇಂದ್ರಿಯಗಳು ಏಕತ್ರ ಮೇಳನ ಮಾಡಿ ಹರಿಪಾದಕ್ಕೆ ಅರ್ಪಿಸಿ, ಅಂದರೆ ವಿಷಯಾದಿಗಳಲ್ಲಿ ಓಡದೇ ಮುಕುಲಿತ ಭಾವವನ್ನಾಗಿ ಮಾಡಿ, ಅವನ ಪಾದದಲ್ಲಿ ಇಟ್ಟು ಧರ್ಮ, ಅರ್ಥ, ಕಾಮ ಮೋಕ್ಷ ಎಂತ

ನಾಲ್ಕರೊಳಗೊಂದಾದರೂ ಪುರುಷಗೆ ಆಗತಕ್ಕ ಪ್ರಯೋಜನವಾದ್ದರನ್ನು ಬೇಡದೇನೇ, ಪ್ರಳಯಕಾಲದಲ್ಲಿ ಜಗತ್ತು ಉದರದಲ್ಲಿ ಧರಿಸಿ ಮತ್ತು ಸೃಷ್ಟಿಪಾಲನೆ ಮಾಡತಕ್ಕ ಪರಮಾತ್ಮ, ಸುಖವೋ ದುಃಖವೋ ಪೂರ್ವಕರ್ಮವನನುಸರಿಸಿ ಕೊಟ್ಟುದನು ಭುಂಜಿಸು, ಅದಕ್ಕೆ ಅಧಿಕ ಬೇಡ ಬ್ಯಾಡ ಮತ್ತು ಪುತ್ರರೇನು, ಹೆಂಡತಿ ಏನು, ಪ್ರಾಣ ದೇಹಗತ ಜೀವವೇನು, ಏಕಾದಶೇಂದ್ರಿಯಗಳೇನು, ಸ್ಥೂಲಶರೀರವೇನು ಇವೇ ಮೊದಲಾದ ಧನ ಧಾನ್ಯಾಧಿಗಳು ಯಾವತ್ತೂ ಪರಮಾತ್ಮನದು ಎಂದೇ, ನನ್ನದಲ್ಲ ಸರ್ವವೂ ಆ ಪರಮಾತ್ಮನ ಆಧೀನ ಎಂತ ತಿಳಿದು, ಅಹಂಮಮತಾದಿಗಳನ್ನು ತ್ಯಜಿಸಿ, ಅತಿ ಧಾರಢ್ಯಭಕುತಿಯಿಂದ ಪ್ರತಿಪ್ರತಿಕ್ಷಣಕ್ಕೂ ಅಹಂಮಮತಾದಿಗಳು, ಸ್ಮರಣೆಗೆ ತಾರದೇ, ಸ್ಮರಣೇ ಮಾಡುತ್ತಾ ಇರು. ಇದೇವೇ ಮೋಕ್ಷಕ್ಕೆ ಸಾಧನೀಭೂತವಾದ ಮಾರ್ಗ. ನಡಿಯೋದಕ್ಕೆ ಪಾದರಕ್ಷೆಗಳು ಉಳ್ಳವಗೆ ಪಾಪಗಳೆಂಬೋ ಕಂಟಕ ಸಿಕತಗಳು ಬಾಧಿಸೋದಿಲ್ಲ. ಅನ್ಯರಿಗೆ ಬಾಧಿಸುತವೆ ಎಂತ ತಾತ್ಪರ್ಯ. || ೨ ||

(೨) ಭಾವಪ್ರಕಾಶಿಕೆ:—

ಹಗಲು ಕಾಲದಲ್ಲಿ ನಂದಾದೀಪವನ್ನಿಡುವುದು ಹೇಗೆ ಕತ್ತಲು ಪರಿಹಾರಕ್ಕಲ್ಲದೆ, ಕೇವಲ ದೇವರ ಪ್ರೀತಿಗೋಸ್ಕರವೋ, ಹಾಗೆಯೇ ನಿತ್ಯದಲ್ಲಿ ದೇವರನ್ನು ಪೂಜಿಸುತ್ತಿರಬೇಕು. ಯಾವುದನ್ನೂ ಬೇಡಬಾರದು. ದೇವರಸಂಕಲ್ಪದಿಂದ ಯಾವಕಾಲಕ್ಕೆ ಏನು ಪ್ರಾಪ್ತವಾಗುವುದೋ ಅದನ್ನು ಅನುಭವಿಸುತ್ತಾ, ಇವೆಲ್ಲವೂ ಈಶ್ವರ ಸಂಕಲ್ಪವೆಂದು ಭಾವಿಸುತ್ತಾ, ತನ್ನ ಹೆಂಡಿರು, ಮಕ್ಕಳು, ಪ್ರಾಣ, ಇಂದ್ರಿಯಗಳು ಈ ದೇಹ ಮೊದಲಾದ ಸಕಲವೂ ಪರಮಾತ್ಮನ ಅಧೀನವೆಂದು ನಂಬಬೇಕು. ಈ ವಿಷಯದಲ್ಲಿ **ಕನಕದಾಸರು – "ತನು ನಿನ್ನದು ಜೀವನ ನಿನ್ನದು ಅನುದಿನದಲ್ಲಿ ಬಾಹೋ ಸುಖದುಃಖ ನಿನ್ನದಯ್ಯ"**– ಎಂದು ಮಾಡಿರುವ ಪದದಂತೆ ಭಾವಿಸುತ್ತಾ, ಸರ್ವದಾ ಪರಮಾತ್ಮನನ್ನು ಸ್ಮರಿಸುತ್ತಿಬೇಕು. || ೨ ||

೨. ಭಾವದರ್ಪಣಟೀಕಾ:–

ತಮ್ಮ ಸದನಸ್ಥ ದೇವರ ಮುಂದೆ ಇಟ್ಟಂಥ ನಂದಾದೀಪದ ಬೆಳಕು ಸದನದಲ್ಲಿದ್ದ ಜನರು ಅಪೇಕ್ಷಿಸದೆ ಗೃಹಕರ್ಮ ಹ್ಯಾಗೆ ನಡೆಸುತಾ್ತರೋ, ಹಾಗೆ ನಂದಾದೀಪವತ್ ನಮ್ಮಿಂದ ಮಾಡಲ್ಪಟ್ಟ ಕರ್ಮಗಳೆಲ್ಲ ಶ್ರೀ ದೇವರಿಗೆ ಅರ್ಪಿಸಿ, ತಜ್ಜನ್ಯ ಫಲಾಪೇಕ್ಷಿಸದೆ, ನಿಷ್ಕಾಮೋಪಾಸನೆ ಮಾಡಿರಿ ಎಂದು ರಹಸ್ಯ ತಿಳಿಸಿಕೊಡುತ್ತಾರೆ.– ***ಹಗಲು ನಂದಾದೀಪೇತಿ***||

ಉಕ್ತಂಚ ಪಂಚರಾತ್ರಗಮೇ:–

"ಧರ್ಮಾರ್ಥಕಾಮಮೋಕ್ಷೇಷು ನೇಚ್ಛಾಮಮ ಕದಾಚನೇತಿ" ಬೇಡದಲೆ – ನಿಷ್ಕಾಮೋಪಾಸನೆ ಮಾಡು ಎಂದರ್ಥ.

"ನಿಷ್ಕಾಮಂ ಯದ್ಭವೇತ್ ಕರ್ಮ ತದೇವಾನಂತಮುಚ್ಯತೇ" ಇತಿ ವಿಷ್ಣು ರಹಸ್ಯೋಕ್ತಿ. || ೨ ||

(೪) ಶ್ರೀ ವ್ಯಾಸದಾಸಸಿದ್ಧಾಂತಕೌಮುದೀ:–

ನಿವೃತ್ತ ಧರ್ಮಾಚರಣೆಯ ವಿಷಯ ತಿಳಿಸುತ್ತಾರೆ – "ಹಗಲು" ಎಂಬ ಪದ್ಯದಿಂದ. ಪರಮಾತ್ಮನನ್ನು ಪ್ರೀತಿಪಡಿಸುವುದೊಂದೇ ಸಕಲಕರ್ಮಗಳ ಗುರಿಯಾಗಿರಬೇಕು. ಉಳಿದ ಯಾವ ಫಲವನ್ನೂ ಅಪೇಕ್ಷಿಸಬಾರದು. ಭಗವತ್ಪೂಜಾರೂಪನಾದ ಕರ್ಮಗಳನ್ನು ಆಚರಿಸಬೇಕು. ಇದಕ್ಕೆ ಹಗಲು ನಂದಾದೀಪದ ದೃಷ್ಟಾಂತ ಕೊಡುತ್ತಾರೆ. ನಂದಾದೀಪವನ್ನು ಬೆಳಕನ್ನು ಕೊಡುವುದಕ್ಕಾಗಲೀ, ಅಥವಾ ಮತ್ತೆ ಇನ್ಯಾವ ಪ್ರಯೋಜನಕ್ಕಾಗಲೀ ಉಪಯೋಗಿಸುವುದಿಲ್ಲ. ಕೇವಲ ಭಗವತ್ಪೂಜೆಗಾಗಿ ಮಾತ್ರ ಹಚ್ಚುವುದು. ಹಾಗೆಯೇ ನಾವು ಆಚರಿಸುವ ಸಕಲ ಕರ್ಮಗಳೂ ಪ್ರಯೋಜನಾಪೇಕ್ಷಾರಹಿತವಾಗಿರಬೇಕು. ಕೇವಲ **"ಶ್ರೀ ವಿಷ್ಣು ಪ್ರೇರಣಯಾ ಶ್ರೀವಿಷ್ಣು ಪ್ರೀತ್ಯರ್ಥಂ"**ಎಂಬುದೇ ಸಕಲಕರ್ಮಗಳ ಉದ್ದೇಶವಾಗಿರಬೇಕು. ದಾರಾಪುತ್ರಾದಿಗಳೆಲ್ಲರೂ ಭಗವದಧೀನರೆಂದು ತಿಳಿದು, ಭಗವಚ್ಚಿಂತನೆಯಲ್ಲಿಯೇ ಸದಾ ಇರಬೇಕು. || ೨ ||

### (೫) ಶ್ರೀ ಗುರುಹೃದಯಪ್ರಕಾಶಿಕೆ ವ್ಯಾಖ್ಯಾನಃ–

ಅನಿಮಿತ್ತ ನಿಷ್ಕಾಮೋಪಾಸನೆ ಮಾಡಬೇಕೆಂದು ತಿಳಿಸುತ್ತಾರೆ–**ಹಗಲು** ಎಂದು. ಹಗಲಲ್ಲಿ ಕತ್ತಲೆ ಇಲ್ಲದಿದ್ದರೂ, ಕೇವಲ ದೇವರ ಪ್ರೀತ್ಯರ್ಥವಾಗಿ ನಂದಾದೀಪವನ್ನು ಇಡುವಂತೆ, ನಿಗಮವೇದ್ಯನ ಅಂದರೆ, ವೇದಪ್ರತಿಪಾದ್ಯನಾದ ಶ್ರೀಹರಿಯನ್ನು ಪೂಜಿಸುತ್ತಾ ಕೈಮುಗಿದು ಎಂದರೆ, ಸಕಲಕ್ರಿಯೆಗಳನ್ನೂ ಶ್ರೀಹರಿಯ ಆರಾಧನೆ ಎಂದು ತದಧೀನತ್ವೇನ ಒಪ್ಪಿಸಿ, ನಮಸ್ಕರಿಸಿ, ಧರ್ಮಾರ್ಥಾದಿ ನಾಲ್ಕು ಪುರುಷಾರ್ಥಗಳಲ್ಲಿ ಒಂದನ್ನೂ ಕೂಡಾ ಅಪೇಕ್ಷಿಸದೆ, ಜಗದುದರನು ಅಂದರೆ, ಜಗತ್ತನ್ನೆಲ್ಲಾ ತನ್ನ ಹೊಟ್ಟೆಯಲ್ಲಿಟ್ಟು ರಕ್ಷಿಸುವ ಸ್ವಾಮಿಯು ಪ್ರಾಣಗಳು ಕಣ್ಣು ಮೊದಲಾದ ಇಂದ್ರಿಯಗಳು, ಆತ್ಮಾ ಎಂಬ ಮನಸ್ಸು ಜೀವ ಸಹ ಶ್ರೀ ಹರಿಯ ಅಧೀನವೆಂದು ಅಡಿಗಡಿಗೆ ಎಂದರೆ, ಪದೇ ಪದೇ ಒಪ್ಪಿಸುವ ಸ್ಮರಣೆ ಇರಬೇಕೆಂದರ್ಥ.

'ದಾರಾನ್ ಸುತಾನ್ ಪ್ರೀಯಾನ್ ಪ್ರಾಣಾನ್ ಪರಸ್ಮೈ ಸನ್ನಿವೇದಯೇತ್ ।
ಅಥೈತದಪ್ಯಶಕ್ತೋಽಸಿ ಕರ್ತುಂ ಮದ್ಯೋಗಮಾಶ್ರಿತಃ ।
ಸರ್ವಕರ್ಮಫಲತ್ಯಾಗಂ ತತಃ ಕುರು ಯತಾತ್ಮವಾನ್' ॥

ಎಂಬ **ಗೀತಾರ್ಥ** ವಿವರಿಸಲ್ಪಟ್ಟಿತು. ॥೨ ॥

### ಸರ್ವವ್ಯಾಖ್ಯಾನಸಾರಸಂಗ್ರಹ

ಹಗಲು ನಂದಾದೀಪದ ದೃಷ್ಟಾಂತದಿಂದ, ನಿಷ್ಕಾಮನಾ ಬುದ್ಧಿಯಿಂದ ಕರ್ಮಗಳನ್ನು ಆಚರಿಸುತ್ತಾ, ವಿಠ್ಠಲನು ಕೊಟ್ಟದ್ದನ್ನೇ ಸಂತುಷ್ಟ ಮನಸ್ಸಿನಿಂದ ಸ್ವೀಕರಿಸುತ್ತಾ, ತನ್ನ ಸರ್ವಸ್ವವೂ ಭಗವದಧೀನವೆಂದು ಅರಿತು, ಆ ಭಾರ್ಗವೀಪತಿಯನ್ನು ನಿರಂತರ ಸ್ಮರಿಸುತ್ತಿರಬೇಕೆಂದು ತಿಳಿಸುತ್ತಾರೆ. –***ಹಗಲನಂದಾದೀಪದಂದದಿ***– ಎಂಬ ಪ್ರಸಕ್ತಪದ್ಯದಿಂದ.

೧. ಪೂಜಾಮಂದಿರದಲ್ಲಿ ದೇವರಮುಂದೆ ಯಾವಾಗಲೂ ಉರಿಯುತ್ತಿರುವ ದೀಪವನ್ನು ಇಟ್ಟಿರುತ್ತಾರೆ. ಆ ದೀಪದ ಜ್ವಾಲೆಯು ನಂದದೇ ಇರುವುದರಿಂದ, ಅದಕ್ಕೆ **ನಂದಾದೀಪ** ಎಂದು ಹೆಸರು. ಹಗಲು ಹೊತ್ತಿನಲ್ಲಿ ದೀಪದ ಅವಶ್ಯಕತೆ ಇಲ್ಲ. ಆದರೆ ಹಗಲಿನಲ್ಲಿಯೂ ಸಹ ನಂದಾದೀಪ ಉರಿಯುತ್ತಿರುವುದು. ಆದರೆ ಉದ್ದೇಶ್ಯ ಬೆಳಕಿಗಾಗಿ ಅಲ್ಲ. ಕೇವಲ ಭಗವತ್ಪ್ರೀತಿಗಾಗಿ. ಅಂತೆಯೇ ನಾವು ಆಚರಿಸುವ ಕರ್ಮಗಳ ಪರಮಗುರಿ ಭಗವದನುಗ್ರಹಪ್ರಾಪ್ತಿಗಾಗಿ. ಅವನ ಪ್ರೀತಿಗೋಸ್ಕರ ಸಕಲಕರ್ಮಗಳ ಆಚರಣೆ. ಆಚರಿಸುವ ಕರ್ಮ ಸಕಾಮವಾಗಿ ಇರದೆ, ನಿಷ್ಕಾಮವಾಗಿರಬೇಕು. ಅದರ ಫಲ ಭಗವದ್ಕೃಪಾಲಾಭ.

೨. ಶ್ರೀಪರಮಾತ್ಮನು ಅನಂತವೇದಗಳಿಂದ ಪ್ರತಿಪಾದ್ಯನು. ಸಮಸ್ತ ಸಚ್ಛಾಸ್ತ್ರಗಳೂ ಮುಖ್ಯವೃತ್ತಿಯಿಂದ ಆ ಮುಕುಂದನನ್ನೇ ತಿಳಿಸಲು ಉದ್ಯುಕ್ತವಾಗಿವೆ. ಅಂತಹ ಸದಾಗಮವೇದ್ಯನಾದ ಸರ್ವೋತ್ತಮನಲ್ಲಿ ನಮ್ಮ ಭಕ್ತಿ ದೃಢವಾಗಿರಬೇಕು. ನಿರಂತರವಾದ ಭಕ್ತಿಭಾವದಿಂದ, ನಿಗಮವೇದ್ಯನನ್ನು ನಾನಾ ಪರಿ ಕೊಂಡಾಡುತ್ತಾ, ಅವನಲ್ಲಿ ಧರ್ಮ, ಅರ್ಥ, ಕಾಮ ಮತ್ತು ಮೋಕ್ಷಗಳೆಂಬ ಚತುರ್ವಿಧ ಪರಮಪುರುಷಾರ್ಥಗಳಿಲ್ಲಿ ಒಂದನ್ನೂ ಬೇಡದೆ, ನಿಷ್ಕಾಮನಾಗಿರಬೇಕೆಂದು ತಿಳಿಸುತ್ತಾರೆ. ಹಗಲುನಂದಾದೀಪದ ಪ್ರಕಾಶ ಭಗವತ್ಪ್ರೀತಿಗಾಗಿರುವಂತೆ, ಭಗವಧ್ಯಾನ, ಭಗವತ್ಪೂಜಾ ಇತ್ಯಾದಿ ಸತ್ಕರ್ಮಗಳೆಲ್ಲವೂ ಫಲಾಪೇಕ್ಷಾರಹಿತವಾಗಿರಬೇಕು. ದೇವರಿಗೆ ನಮಸ್ಕಾರ ಹಾಕಿ, ಭಕ್ತಿಭಾವದಿಂದ ಕೈಮುಗಿಯುತ್ತೇವೆ. ಇದರ ರಹಸ್ಯವೇನೆಂದರೆ – ಎರಡು ಕೈಗಳನ್ನೂ ಜೋಡಿಸಿದಾಗ, ಹತ್ತು ಬೆರಳುಗಳು ಒಟ್ಟುಗೂಡುತ್ತವೆ. ಈ ಹತ್ತು ಬೆರಳುಗಳು ಪಂಚಜ್ಞಾನೇಂದ್ರಿಯಗಳು ಮತ್ತು ಪಂಚಕರ್ಮೇಂದ್ರಿಯಗಳು. ಒಟ್ಟು ದಶಕರಣಗಳ ಸಾಂಕೇತವು. ಅವುಗಳಿಂದಾಗುವ ಜ್ಞಾನ ಮತ್ತು ಕರ್ಮರೂಪನಾದ ವ್ಯಾಪಾರಗಳೆಲ್ಲವೂ ಭಗವದರ್ಪಿತವಾಗಲಿ ಎಂದು ಭಾವವು. ಈ ಭಾವಾರ್ಥವನ್ನು ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನದಲ್ಲಿ ಕೊಟ್ಟಿದೆ.

೨. ಮಹಾಪ್ರಳಯಕಾಲದಲ್ಲಿ ಸಮಸ್ತಜಗತ್ತನ್ನೂ ವಿಶ್ವಭುಕ್‌ನಾಮಕನಾದ ಆ ಪರಮಾತ್ಮನು ನುಂಗಿ, ತನ್ನ ಉದರದಲ್ಲಿ ಆಶ್ರಯಕೊಟ್ಟು ಧರಿಸಿರುವನು. ಇದರಿಂದ ಆ ಜಗದೇಕಕಾರಣನಿಗೆ ಜಗದುದರ ನೆಂದು ಹೆಸರು. ಆ ವಿಶ್ವಂಭರನ ಉದರದಲ್ಲಿ ಇನ್ನೂ ಸೃಷ್ಟಿಗೆ ಬಾರದ ಅನಂತಸಂಖ್ಯೆಯಲ್ಲಿ ಅಸೃಜ್ಯರಾಶಿಗತ ಜೀವರಿದ್ದಾರೆ. ಸೃಷ್ಟಿಗೆ ಬಂದವರಲ್ಲಿ ಈ ಬ್ರಹ್ಮಕಲ್ಪದಲ್ಲಿಯೇ ಮುಕ್ತಿಯನ್ನು ಹೊಂದುವವರು, ಮುಂದಿನ ಬ್ರಹ್ಮಕಲ್ಪದಲ್ಲಿ ಅಥವಾ ಕಲ್ಪಗಳಲ್ಲಿ ಮುಕ್ತರಾಗುವವರು ಎಂದು ಮುಕ್ತಾಮುಕ್ತಜೀವಗಣವಿದೆ. ಅಂತಹ ಸಮಸ್ತಜೀವರಾಶಿಗಳಿಗೂ ಆ ಶ್ರೀಹರಿಯೇ ಆಶ್ರಯದಾತನು.

೪. ಜಗದುದರನಾದ ಆ ಜಗನ್ನಾಥನು ಸತ್ಯಸಂಕಲ್ಪನು. ಜೀವರ ಯೋಗ್ಯತೆ, ಕರ್ಮಪ್ರವಾಹಗಳಿಗನುಗುಣವಾಗಿ ಸಾಧನಸಾಮಗ್ರಿಗಳನ್ನು ಜೀವರಿಗೆ ಕೊಡುವನು. ಆ ಸತ್ಯಸಂಕಲ್ಪನು ಏನಿತ್ತುದೇ ಪರಮಪುರುಷಾರ್ಥವೆಂದರಿತು, ಸಂತೋಷದಿಂದ ಸ್ವೀಕರಿಸುವವನು ನಿಜವಾದ ಭಕ್ತನು. "ತೇನತ್ಯಕ್ತೇನ ಭುಂಜೀಥಾ – ಎಂಬ ಈಶವಾಸ್ಯೋಪನಿಷತ್ತಿನ ಸಂದೇಶದಂತೆ. ತೇನ = ಆ ಸತ್ಯಸಂಕಲ್ಪನಾದ ಪರಮಾತ್ಮನಿಂದ, ತ್ಯಕ್ತೇನ – ಕೊಡಲ್ಪಟ್ಟದ್ದನ್ನು (ದತ್ತೇನ ಎಂದರ್ಥ) ಭುಂಜೀಥಾ= ಅನುಭೋಗಿಸಿತಕ್ಕದ್ದು.

೫. ಇಂತು ಜಗದುದರ ಕೊಟ್ಟುದನು ಭುಂಜಿಸುತ್ತಾ, ತನ್ನಿಂದ ಜನಿತರಾದ ಮಕ್ಕಳು, ವಿಧ್ಯುಕ್ತವಾಗಿ ವಿವಾಹವಾದ ಪತ್ನೀ, ತನ್ನ ಅತ್ಯಂತ ಪ್ರೀತಿಯವಸ್ತುವಾದ ಪ್ರಾಣ, ಶರೀರಗತಸಕಲೇಂದ್ರಿಯಗಳು, ಸಾಧನೆಗೆ ಅನುಕೂಲವಾದ ಈ ಶರೀರ ಇತ್ಯಾದಿ ಸಮಸ್ತವೂ ಅವನಿಗೇ ಸೇರಿದುದು. ಮಗ, ಮಡದಿ, ಪ್ರಾಣ, ಇಂದ್ರಿಯ, ಆತ್ಮಾದಿ ವಸ್ತುಗಳೆಲ್ಲವೂ ಭಗವದಧೀನವೆಂದು ತಿಳಿದು, ಕೊಂಡಾಡುತ್ತಿರಬೇಕು. ನಮಗೆ ಪ್ರಿಯವಾದ ಶರೀರ, ಶರೀರಗತಕರಣಗಳು, ಪ್ರಾಣ ಇವೆಲ್ಲವೂ

ಭಗವದ್ದತ್ತವಾದುವು. ಪರಿವಾರಭೂತರಾದ ಪುತ್ರ ಕಳತ್ರ ಬಂಧು ಬಾಂಧವರು ನನ್ನವರಲ್ಲ, ಶ್ರೀಶನ ಸೇವೆಗಾಗಿ ಇರುವವರು. ಶ್ರೀ ಹರಿಯ ತೊಂಡರು. ನಮ್ಮಿಂದ ಆರ್ಜಿತವಾದ ಮನೆ, ಪಶ್ವಾದಿಸಂಪತ್ತು, ಧನ, ಧಾನ್ಯ ಭೋಗವಸ್ತುಗಳೆಲ್ಲವೂ ಕರುಣಾಳುವಾದ ಕಮಲದಳಾಯತಾಕ್ಷನಿಂದ ಬಂದದ್ದು. ಸಮಸ್ತವೂ ಅವನಿಗೇ ಅರ್ಪಿತ ಎಂಬ ಕೃಷ್ಣಾರ್ಪಣಬುದ್ಧಿಯಿಂದ ಆ ಅಪಾರಮಹಿಮಾಸಂಪನ್ನನಲ್ಲಿ ಅನನ್ಯ ಶರಣಾಗತಿ ಹೊಂದಬೇಕು. ಅವನ ಪಾದಾರವಿಂದಗಳ ಧ್ಯಾನವನ್ನು ಅಡಿಗಡಿಗೆ ಬಿಡದೇ ಮಾಡುತ್ತಿರಬೇಕೆಂಬುದೇ ಪ್ರಸಕ್ತ ಪದ್ಯದ ತಾತ್ಪರ್ಯಾರ್ಥವು. ॥ ೨ ॥

## ಪದ್ಯ ೩

ಮೂಲ:—

ಅಸ್ವತಂತ್ರನು ಜೀವ ಹರಿ ಸ
ರ್ವಸ್ವತಂತ್ರನು ನಿತ್ಯ ಸುಖಮಯ
ನಿಃಸ್ವಬದ್ಧಾಲ್ಪಜ್ಞಶಕ್ತ ಸದುಃಖಿ ನಿರ್ವಿಣ್ಣ
ಹ್ರಸ್ವದೇಹಿ ಸನಾಥಜೀವನು
ವಿಶ್ವವ್ಯಾಪಕ ಕರ್ತೃಬ್ರಹ್ಮ ಸ
ರಸ್ವತೀಶಾದ್ಯಮರನುತ ಹರಿಯೆಂದು ಕೊಂಡಾಡು ||೩||

ಅವತರಣಿಕೆ

ಸರ್ವಶಕ್ತನಾದ ಈಶನಿಗೂ, ಅಲ್ಪಸಾಮರ್ಥ್ಯವುಳ್ಳ ಜೀವನಿಗೂ ಇರುವ ಪರಮವೈಲಕ್ಷಣ್ಯವನ್ನು ತಿಳಿಸುತ್ತಾ, ಅನಾದಿಲಿಂಗದೇಹದಿಂದ ಬದ್ಧನೂ, ಅಲ್ಪಜ್ಞನೂ, ಅಲ್ಪಶಕ್ತನೂ, ಸದುಃಖಿಯೂ, ಶ್ರಮಾದಿಗಳಿಂದ ಆಯಾಸಪಡುವವನೂ, ನಾಶವಾಗತಕ್ಕ ಸ್ಥೂಲ, ಅನಿರುದ್ಧ, ಲಿಂಗಶರೀರಯುಕ್ತನೂ, ಭಗವದಧೀನನೂ, ಅಸ್ವತಂತ್ರನೂ, ಪರಾಧೀನಕರ್ತೃತ್ವವುಳ್ಳವನೂ ಆದ ಜೀವ, ಸರ್ವತಂತ್ರ ಸ್ವತಂತ್ರನೂ, ನಿತ್ಯಾನಂದ ಉದ್ರಿಕ್ತನೂ, ವಿಶ್ವವ್ಯಾಪಕನೂ, ಸರ್ವವ್ಯಾಪಾರಗಳಿಗೂ ಕರ್ತೃವೂ, ಬ್ರಹ್ಮಾದಿ ಸಮಸ್ತದೇವತೆಗಳಿಂದ ಸಂಸ್ತುತ್ಯನೂ ಆದ ಹರಿಯನ್ನು ಸದಾ-ಕೊಂಡಾಡುತ್ತಿರಬೇಕೆಂದು ತಿಳಿಸುತ್ತಾರೆ. **ಅಸ್ವತಂತ್ರನು** – ಎಂಬ ಪ್ರಸಕ್ತ ಸಂಧಿಗತ 3ನೆಯ ಈ ಪದ್ಯದಿಂದ. ||೩||

ಪ್ರತಿಪದಾರ್ಥ:—

ಜೀವ= ಜೀವನಾದವನು, ಅಸ್ವತಂತ್ರನು= ತಾನೇ ತಾನಾಗಿ ಸ್ವಸಾಮರ್ಥ್ಯದಿಂದ ಕೆಲಸಮಾಡಲು ಶಕ್ತನಲ್ಲ. ಅಂದರೆ ಅವನ ಸ್ವಾತಂತ್ರ್ಯ ಈಶಾಧೀನವೇ ಹೊರತು

ಸ್ವಾಧೀನವಾದದ್ದಲ್ಲ. ಅತಏವ ಪರಾಧೀನಕರ್ತೃತ್ವವುಳ್ಳವನು. **ಹರಿ=** ಆದರೆ ಬಿಂಬರೂಪಿಯಾದ ಶ್ರೀ ಹರಿಯು, **ಸರ್ವಸ್ವತಂತ್ರನು=** ಸರ್ವ ವಿಷಯಗಳಲ್ಲಿಯೂ, ಪರಾಪೇಕ್ಷಾರಹಿತನಾಗಿ, ಪರಾಧೀನವಲ್ಲದ ಸರ್ವಸ್ವಾಂತತ್ರ್ಯಶಕ್ತಿ ಉಳ್ಳವನು. **ನಿತ್ಯಸುಖಮಯ=** ಶಾಶ್ವತವಾದ ಆನಂದಸ್ವರೂಪಿಯು. ನಿತ್ಯಾನಂದಾದ್ಯ್ರ್ಯಕ್ತನು. **ನೀಸ್ವಬದ್ಧ=** ಆದರೆ ಜೀವನಾದರೋ ಅನಾದಿನಿತ್ಯವಾದ ಲಿಂಗದೇಹದಿಂದ, ತಜ್ಜನ್ಯಕರ್ಮದಿಂದ ಬದ್ಧನಾದವನು. **ಅಲ್ಪಜ್ಞ=** ಜೀವನ ಜ್ಞಾನ ಪರಿಮಿತವಾದದ್ದು. ಆದರೆ ಶ್ರೀಪರಮಾತ್ಮನು ಸರ್ವಜ್ಞನು. **ಅಲ್ಪಶಕ್ತ=** ಅತ್ಯಲ್ಪವಾದ ಕ್ರಿಯಾಸಾಮರ್ಥ್ಯವುಳ್ಳವನು (ಅವರವರ ಯೋಗ್ಯತಾನುಸಾರ). ಆದರೆ ಶ್ರೀ ಹರಿಯು ಅಪಾರಶಕ್ತಿಸಂಪನ್ನನು. **ಸದುಃಖಿ=** ತ್ರಿಗುಣಗಳ ಸಂಬಂಧದಿಂದ ಉಂಟಾಗುವ ಕ್ಲೇಶಾದಿಗಳುಳ್ಳವನು. ಆದರೆ ಶ್ರೀಪರಮಾತ್ಮನು ಸದಾನಂದಸ್ವರೂಪಿಯು. **ನಿರ್ವಿಣ್ಣ=** ಶ್ರಮ, ಆಯಾಸಾದಿಗಳಿಂದ ಕುಗ್ಗುವನು. ಶ್ರೀಹರಿಯು ನಿರಾಯಾಸನಾಗಿ, ಲೀಲಾಜಾಲವಾಗಿ ಜಗದ್ವ್ಯಾಪಾರಗಳನ್ನು ಪ್ರವರ್ತಿಸುವನು. **ಹ್ರಸ್ವದೇಹಿ** = ಜೀವನು ನಾಶಹೊಂದತಕ್ಕ ಪ್ರಾಕೃತ ದೇಹಗಳನ್ನು ಹೊಂದಿ, ನಾನಾ ಜನ್ಮಗಳಲ್ಲಿ ಸಂಚರಿಸುವನು. ಆದರೆ ಭಗವಂತನು ಶಶ್ವದೇಕಪ್ರಕಾರನು. ಜನನಮರಣವಿದೂರನು. ತ್ರಿಗುಣಾತೀತನು. **ಜೀವನು ಸನಾಥ=** ಜೀವನು ಜಗದೊಡೆಯನಾದ ಜಗದೀಶನ ಅಧೀನನು. ಶ್ರೀನಾಥನೇ ಸರ್ವಜೀವರಿಗೂ ನಾಥನು. ಭಗವಂತನೇ ಅನಾಥನು. **ವಿಶ್ವವ್ಯಾಪಕ=** ಸರ್ವಚರಾಚರವಸ್ತುಗಳಲ್ಲಿ ಸಂಪೂರ್ಣವಾಗಿ ವ್ಯಾಪ್ತನಾದವನು. **ಕರ್ತೃ=** ಸರ್ವಕ್ರಿಯೆಗಳಿಗೂ ಪ್ರೇರಕನೂ ಮತ್ತು ಕಾರ್ಯಪ್ರವರ್ತಕನು. ಬ್ರಹ್ಮ= ಚತುರ್ಮುಖಬ್ರಹ್ಮದೇವರು, ಸರಸ್ವತೀ= ಬ್ರಹ್ಮಪತ್ನಿ ಸರಸ್ವತೀದೇವಿಯರು, **ಈಶ** = ರುದ್ರದೇವರು, **ಆದಿ=** ಇವರೇ ಮೊದಲಾದ, **ಅಮರ=** ದೇವತಾವರ್ಗದಿಂದ, **ನುತ** = ಸಂಸ್ತುತ್ಯನಾದವ, **ಹರಿಯೆಂದು=** ಪೂರ್ವೋಕ್ತಕಲ್ಯಾಣಗುಣಭರಿತನಾದ ಶ್ರೀಹರಿ ಎಂದು, **ಕೊಂಡಾಡು=** ಭಕ್ತಿಯಿಂದ ಸ್ತೋತ್ರಮಾಡುತ್ತಿರು. ||೩||

## ವ್ಯಾಖ್ಯಾನಗಳು:—

### (೧) ಶ್ರೀಸಂಕರ್ಷಣಒಡೆಯರ ವ್ಯಾಖ್ಯಾನ :—

ನಿಷ್ಕಾಮನಾಗಿ ಈ ಪ್ರಕಾರ ಪರಮಾತ್ಮನ ಪ್ರಾರ್ಥಿಸಬೇಕೆಂದು ಹೇಳತಾರೆ. ಜೀವನಾದವ ಈಶಾಧೀನನಾದ ಸ್ವತಂತ್ರನೇ ಹೊರತು ಸ್ವಾಧೀನಸ್ವತಂತ್ರನಲ್ಲ. ಎಂದರೆ ಜೀವರಿಗೆ ಕರಚರಣಾದ್ಯವಯವಗಳೋಪಾದಿಯಲ್ಲಿ ಅನಾದಿ ಸ್ವರೂಪಭೂತ ಸ್ವಾತಂತ್ರ್ಯವಿರೋದಾಗಿ ಅದೆ. ಅದಕ್ಕೆ ಸ್ವತಂತ್ರಪ್ರವೃತ್ತಿ ಇಲ್ಲ. ಇಂದ್ರಿಯಗಳಿಗೆ ಸ್ವತಃ ಪ್ರವೃತ್ತಿ ಹ್ಯಾಂಗಿಲ್ಲವೋ ತದ್ವತು ಜೀವ ಅಂಥಾವ. ಬಿಂಬರೂಪಿ ಪರಮಾತ್ಮ ಪರಾಧೀನನಲ್ಲದ ಸ್ವತಂತ್ರನು, ಸರ್ವವಿಷಯದಲ್ಲೂ ಎಂತ ತಾತ್ಪರ್ಯ. ಜೀವಾಂತರ್ಗತನಾಗಿ ತನ್ನ ಅವಿಯೋಗದಿಂದ ಜೀವರಿಗೆ ನಿತ್ಯತ್ವ ಸ್ಥಾಪಿಸಿಕೊಟ್ಟವ. ತನ್ನ ನಿತ್ಯತ್ವ ಅನ್ಯರಿಂದ ಸ್ಥಾಪಿತವಲ್ಲದ ನಿತ್ಯತ್ವ ಉಳ್ಳವ. ಜೀವ, ಮಿತವಾದ ಸುಖಪ್ರಚುರನಾದವ. ಪರಮಾತ್ಮ ಅಮಿತಸುಖಪ್ರಚುರನಾದವ. ಅನಾದಿನಿತ್ಯವಾದ ಲಿಂಗದೇಹದಿಂದ ಕಟ್ಟಿಸಿಕೊಳ್ಳಲ್ಪಟ್ಟವ ಜೀವ. ಪರಮಾತ್ಮ ಅನಾದಿಕಾಲದಿಂದಲೂ ಇಂಥಾ ಬದ್ಧನಲ್ಲ. ಜೀವ ಅಲ್ಪಜ್ಞ, ಅಲ್ಪಶಕ್ತಿಉಳ್ಳವ, ಪರಮಾತ್ಮ ಸರ್ವಜ್ಞ. ಸರ್ವಶಕ್ತಿ ಉಳ್ಳವ. ಜೀವ, ತ್ರಿಗುಣಸಂಬಂಧದಿಂದ ಆಗುವ ಸುಖ—ದುಃಖಾದಿಗಳು ನನ್ನದು ಎಂದು ಅಹಂಮಮತಾದಿಗಳಿಂದ ಆರೋಪಿತ ಪ್ರಾಕೃತ ಸುಖ ದುಃಖಾದಿಗಳ ಭೋಗಿಸತಕ್ಕ ಸ್ವರೂಪಸ್ವಭಾವ ಉಳ್ಳವ. ಪರಮಾತ್ಮ ತ್ರಿಗುಣಾಂತರ್ಗತನಾಗಿದ್ದಕಾಲಕ್ಕೂ ತಜ್ಜನಿತ ಸುಖ ದುಃಖಾದಿಗಳ ಲೇಪ ಇಲ್ಲದವ. ಜೀವ ಶ್ರಮಾದಿಗಳಿಂದ ದಣಿದು ನಿರ್ವಿಣ್ಣನಾಗತಕ್ಕವ. ಪರಮಾತ್ಮ ಜಗತ್ಸೃಷ್ಟಿ ಸ್ಥಿತಿ ಸಂಹಾರಾದಿಗಳ ಮಾಡಿದಕಾಲಕ್ಕೂ ದಣುವಿಕೆಯಿಂದ ನಿರ್ವಿಣ್ಣನಾಗದವ. ಜೀವನು ನಾಶಹೊಂದತಕ್ಕ ಪ್ರಾಕೃತದೇಹಗಳ ಧರಿಸಿ ಅನೇಕ ಜನ್ಮಗಳಿಂದ ಸಂಚಾರ ಮಾಡತಕ್ಕವನು. ಪರಮಾತ್ಮ ಇಂಥಾದ್ದರಿಂದ ದೂರನಾದವನು. ಜೀವನು ಪರಮಾತ್ಮನೆಂಬೋ ನಾಥನಿಂದ ಸಹಿತನಾದವನು. ಪರಮಾತ್ಮ ತನಗೆ ಅನ್ಯನಾಥರು ಇಲ್ಲದವನು.

ಪರಮಾತ್ಮ ಸರ್ವ ಚರಾಚರಜೀವರುಗಳಲ್ಲಿ ಬಿಂಬನಾಗಿ ವ್ಯಾಪಕನಾದವ. ತನಗೆ ಬ್ಯಾರೆ ಬಿಂಬ ಇಲ್ಲದವ. ಸರ್ವ ಜೀವರಿಗೆ ಯಜಮಾನನಾದವ. ಸೃಸ್ತ್ಯಾದಿಗಳಿಗೆ ಕರ್ತನಾದವ. ಜೀವರೋಪಾದಿಯಲ್ಲಿ ತನಗೆ ಬ್ಯಾರೆ ಯಜಮಾನ ಇಲ್ಲದವ. ಬ್ರಹ್ಮದೇವರೂ ಸರಸ್ವತೀದೇವೇರೂ ರುದ್ರದೇವರೂ ಮೊದಲಾದ ದೇವತೆಗಳಿಂದ ಸುತ್ತ್ಯನಾದವ. ವಂದಿತನಾದವ. ತಾನು ಸ್ತುತಿ ಮಾಡೋದಕ್ಕೂ ವಂದನ ಮಾಡೋದಕ್ಕೂ ಅನ್ಯವಸ್ತು ಇಲ್ಲದವ. ಜೀವ ಇಂಥಾವ–ಪರಮಾತ್ಮ ಇಂಥಾವನೆಂದು ತಿಳಿದು ಪರಮಾತ್ಮನನ್ನು ಸ್ತೋತ್ರದಿಂದ ಕೊಂಡಾಂಡು–ಎಂತ ಹೇಳತಾರೆ. ರಮಾದೇವೇರು ಈಶ್ವರನೋಪಾದಿಯಲ್ಲಿ ಕೆಲವು ಲಕ್ಷಣಗಳು ಉಳ್ಳವರಾದ ಕಾಲಕ್ಕೂ, ಪರಾಧೀನರಾದ ಕಡಿಯಿಂದ ಪರಮಾತ್ಮಗೆ ಜೀವ ಸದೃಶರು. ಪರಮಾತ್ಮದಾರಸದೃಶನೂ ಅಲ್ಲ.||೩||

(೨) ಭಾವಪ್ರಕಾಶಿಕೆ :–

ಜೀವನು ಅಸ್ವತಂತ್ರನು, ಪರಮಾತ್ಮನು ಸರ್ವಸ್ವತಂತ್ರನು. ನಿತ್ಯಸುಖಸ್ವರೂಪನು, ವಿಶ್ವವ್ಯಾಪಕನು. ಬ್ರಹ್ಮರುದ್ರಾದಿಗಳಿಂದ ಸ್ತುತ್ಯನು. ಸೃಷ್ಟಾದಿಕರ್ತನು. ಜೀವನು ದರಿದ್ರನು. ಅಲ್ಪಜ್ಞನು. ಅಲ್ಪಶಕ್ತಿಯುಳ್ಳವನು. ದುಃಖಪೂರ್ಣನು, ದೀನನು. ಅತಿಸೂಕ್ಷ್ಮರೂಪನು, ಪರಮಾತ್ಮನಿಂದ ಸನಾಥನಾಗಿರುವವನು. ಭಗವದನುಗ್ರಹದಿದಲೇ ಜ್ಞಾನ, ಶಕ್ತಿ, ಸುಖಾದಿಗಳು ಜೀವನಿಗೆ ಆಗುವುವು – ಎಂದು ತಿಳಿದು ಪರಮಾತ್ಮನನ್ನು ಸ್ತುತಿಸಬೇಕು. ||೩||

(೩) ಭಾವದರ್ಪಟೀಕಾ:–

"ಅಲ್ಪಶಕ್ತಿ ಅಸಾರ್ವಜ್ಞಂ ಪಾರತಂತ್ರ್ಯಮಪೂರ್ಣತಾ । ಉಪಜೀವಕತ್ವಜೀವತ್ವಮ್ ಎಂತ ಜೀವನ ಲಕ್ಷಣ ಹೇಳಿದ್ದಾರೆ.

"ಪರಾತ್ಪರೋಽಸೌ ಪರಮಃ ಸ್ವತಂತ್ರ" ಃ – ಎಂಬ **ಭಾರತನಿರ್ಣಯಾನುಸಾರ**, ಪರಮ ಸ್ವತಂತ್ರ ಶ್ರೀಹರಿ ಎಂದು ಹೇಳಿದ್ದಾರೆ. ನಿಸ್ವ= ಎಂದರೆ, ಜ್ಞಾನಧನಶೂನ್ಯ

ಎಂಬರ್ಥ. ಹ್ರಸ್ವ – ಎಂದರೆ, ಅತ್ಯಂತ ಸೂಕ್ಷ್ಮಸ್ವರೂಪವುಳ್ಳವ ಎಂಬರ್ಥ. **ಸದುಃಖೀ** – ಅತ್ಯಂತ ದುಃಖೀ ಎಂಬರ್ಥ. ||೩||

(೪) ಶ್ರೀವ್ಯಾಸದಾಸ ಸಿದ್ಧಾಂತ ಕೌಮುದೀ:–

ಧ್ಯಾನಾರ್ಥಂ ಧ್ಯೇಯಂ ಬಿಂಬಂ ಪ್ರತಿಬಿಂಬಂ ಚಾಹ. "ಅಸ್ವತಂತ್ರ" ಇತಿ|| "ಅಸ್ವಂತ್ರಃ ಅವರಃ ದುಃಖೀ" || "ಅಲ್ಪಶಕ್ತಿಃ ಅಸಾರ್ವಜ್ಞ್ಯವತ" ||ಇತಿ ಚ ||"ನಿಸ್ವಃ ನಿರ್ದ್ರವ್ಯಃ || ಅಲ್ಪಪದಂ ಶಕ್ತ್ಯಾವಪಿ ಅನ್ವಯೀ ||೩||

ಕನ್ನಡಾರ್ಥ :–

ಧ್ಯಾನೋಪಾಸನೆಗೆ ಧ್ಯೇಯನು ಬಿಂಬಮೂರ್ತಿಯಾದ ಪರಮಾತ್ಮನು. ಉಪಾಸಕನು ಪ್ರತಿಬಿಂಬನಾದ ಜೀವನು. ಇವರ ವೈಲಕ್ಷಣ್ಯವನ್ನು ತಿಳಿಸುತ್ತಾರೆ. **"ಅಸ್ವತಂತ್ರೇತಿ"** ಜೀವನು ಅಸ್ವಂತಂತ್ರನು. ಕೇವಲ ಪರಾಧೀನನೆಂದೇ ಅರ್ಥವಲ್ಲ, ಪರಮಪರತಂತ್ರನು. ಅನಂತಾನಂತಕೋಟಿಗುಣಗಳಿಂದ ಅವರನು. ದುಃಖಾದಿ–ದೋಷಭರಿತನು. ಜೀವನ ಜ್ಞಾನ, ಶಕ್ತಿ ಅತ್ಯಲ್ಪ. ಅಪೂರ್ಣಜ್ಞಾನಿಯು. **"ಅಲ್ಪ"** ಶಬ್ದಾರ್ಥವು ಜೀವನ ಶಕ್ತಿಯು ಅತ್ಯಲ್ಪವೆಂದು, ಜ್ಞಾನಯೋಗ್ಯತೆಗಳೂ ಅಲ್ಪವೆಂದೂ, ಸ್ವತಃ ಜೀವನೇ ಅತ್ಯಲ್ಪನೆಂದೂ ಸೂಚಿಸುತ್ತದೆ. "ನಿಃಸ್ವ" ಎಂದರೆ, "ದ್ರವ್ಯವಿಲ್ಲದವನು" ಅಥವಾ "ದರಿದ್ರ" – ನೆಂದರ್ಥ. ||೩||

(೫) ಶ್ರೀ ಗುರುಹೃದಯಪ್ರಕಾಶಿಕೆ ವ್ಯಾಖ್ಯಾನ :–

**ಅಲ್ಪಶಕ್ತಿ ಅಸಾರ್ವಜ್ಞಂ ಪಾರತಂತ್ರ್ಯಮಪೂರ್ಣತಾ ಉಪಜೀವಕತ್ವಂ ಜೀವತ್ವಂ ಎಂತಲೂ, ಪರತ್ಪರೋಸೌ ಪರಮಸ್ವತಂತ್ರಃ** – ಎಂತಲೂ ಹೇಳಿರುವ ಮೇರೆ ಜೀವ–ಪರಮಾತ್ಮರ ವಿರುದ್ಧ ಧರ್ಮಗಳನ್ನು ನಿರೂಪಿಸುತ್ತಾರೆ–**ಅಸ್ವತಂತ್ರ** ಎಂದು. ಜೀವನೆಂಬ ಜ್ಞಾನಸ್ವರೂಪವಸ್ತು ಎಲ್ಲವೂ ಅಸ್ವತಂತ್ರ ಎಂದರ್ರೆ, ದೇವರ ಪ್ರೇರಣೆ ಎಂಬ ಸಹಾಯವಿಲ್ಲದೆ, ತನ್ನ ಜ್ಞಾನೇಚ್ಛಾಕ್ರಿಯೆ ಎಂಬುದೊಂದನ್ನೂ

ನಡೆಸಲಾರದೆಂದರ್ಥ. ಆದ್ದರಿಂದಲೇ **ನೀಸ್ವ** ಅಂದರೆ, ಯಾವುದನ್ನು ತನ್ನ ಅಧೀನದಲ್ಲಿಟ್ಟುಕೊಳ್ಳಲಾರದವ ಅಥವಾ ಜ್ಞಾನಧನಶೂನ್ಯನೆಂದರ್ಥ. **ಬದ್ಧ** ಅಂದರೆ, ಅನಾದಿಲಿಂಗಶರೀರಾದ್ಯಭಿಮಾನಬದ್ಧ. **ಅಲ್ಪಜ್ಞ** ಎಂದರೆ, ದೇವರ ಅಧೀನವಾದ ಏಕದೇಶ ತಿಳುವಳಿಕೆಯುಳ್ಳವನು ಮತ್ತು ಅಲ್ಪಬಲ ಉಳ್ಳವನು. **ಸದುಃಖಿ** ಅಂದರೆ ಮುಕ್ತಿಯಾಗುವವರೆಗೂ ದುಃಖಸ್ಪರ್ಶಅಭಿಮಾನಿಯು. **ನಿರ್ವಿಣ್ಣ**= ಸ್ವತಂತ್ರಶಕ್ತಿಯಿಲ್ಲದವನು. **ಹ್ರಸ್ವದೇಹಿ** ಎಂದರೆ, ಅಣುಸ್ವರೂಪನು. **ಸನಾಥ** ಎಂದರೆ ದೇವರೇ ದಿಕ್ಕಾಗಿಉಳ್ಳವನು. (ದುಃಖಸ್ವರೂಪ, ಮಿಶ್ರರೂಪ, ಆನಂದಸ್ವರೂಪವೆಂಬ ತ್ರಿವಿಧಸರ್ವಜೀವಸ್ವರೂಪವೂ ಮೇಲೆ ಹೇಳಿದ ಪ್ರಕಾರವೇ ಇರುವುದು). ಶ್ರೀ ಹರಿಯು ಸ್ವತಂತ್ರ ಎಂದರೆ, ತನ್ನ ಜ್ಞಾನೇಚ್ಛಾದಿ ಸರ್ವದರಲ್ಲಿಯೂ ಪರಾಪೇಕ್ಷೆಇಲ್ಲದವನು., ಅನಾದ್ಯಾನಂದಸ್ವರೂಪನೂ, ಜಡಚೇತನಾತ್ಮಕ ಸರ್ವಜಗದ್ವ್ಯಾಪ್ತನೂ ಸರ್ವಶಕ್ತನೂ, ರಮಾ ಬ್ರಹ್ಮಾ ಸರಸ್ವತೀ ರುದ್ರಾದ್ಯನಂತ ಮುಕ್ತಾಮುಕ್ತಸರ್ವಸ್ತುತನೆಂದು ವರ್ಣಿಸುತ್ತಿರಬೇಕೆಂದು ಅರ್ಥ. **ಅಣುರ್ಹ್ಯೇಷ ಆತ್ಮಾ ಎಂಬ ಶ್ರುತಿ, ಓಂ ಅಣುಶ್ಚ ಓಂ ಎಂಬ ಬ್ರಹ್ಮಸೂತ್ರ ಜೀವೋ ಅಲ್ಪಶಕ್ತಿರಸಾರ್ವಜ್ಞ** ಎಂಬ **ಶ್ರುತಿ**, ಸಾಕಾಷ್ಠಾಸಾ ಪರಾಗತಿಃ ಎಂಬ **ಶ್ರುತಿ**.

ಮತ್ತಃ ಪರತರಂ ನಾನ್ಯತ್ ಕಿಂಚಿದಸ್ತಿ ಧನಂಜಯ ।
ಮಯಿ ಸರ್ವಮಿದಂ ಪ್ರೋತಂ ಸೂತ್ರೇ ಮಣಿಗಣಾ ಇವ ॥
ಮಮಯೋನಿರ್ಮಹದ್ಬ್ರಹ್ಮ ತಸ್ಮಿನ್ ಗರ್ಭಂ ದಧಾಮ್ಯಹಂ ।
ಸಂಭವಸ್ಸರ್ವಭೂತಾನಾಂ ತತೋ ಭವತಿ ಭಾರತ॥ ಇತ್ಯಾದಿ ***ಗೀತಾ***, 'ಪೂರ್ಣಾನಂದಜ್ಞಾನದಯಾಮೂರ್ತಿಃ ಪರಮಮಂಗಳಃ' ಎಂಬ **ಆದಿತ್ಯಪುರಾಣ** ಮೊದಲಾದ್ದರ ಅರ್ಥ ವಿವರಿಸಲ್ಪಟ್ಟಿತು ॥೩॥

## ಸರ್ವವ್ಯಾಖ್ಯಾನಸಾರಸಂಗ್ರಹ

ಅಸ್ವತಂತ್ರನೂ, ಅಲ್ಪಜ್ಞಾನಿಯೂ ಮತ್ತು ಅಲ್ಪಶಕ್ತನೂ ಆದ ಜೀವನು ಸರ್ವತಂತ್ರಸ್ವತಂತ್ರನಾದ ಆ ನಿತ್ಯಾನಂದಸ್ವರೂಪಿಯಾದ ಪರಮಾತ್ಮನನ್ನು ರಮಾಬ್ರಹ್ಮಾದಿವಂದ್ಯನೆಂದು ಅರಿತು, ಸದಾ ಸುತ್ತಿಮಾಡುತ್ತಿರಬೇಕೆಂದು ತಿಳಿಸುತ್ತಾರೆ– ಅಸ್ವಂತ್ರನು – ಎಂಬ ಪ್ರಸಕ್ತಪದ್ಯದಿಂದ.

• ೧. ರಮಾದೇವಿಯರಿಂದ ಆರಂಭಿಸಿ, ಜೀವಕೋಟಿಪ್ರವಿಷ್ಟರಾದ ಸಮಸ್ತ ಜೀವರೂ ಅಸ್ವಂತ್ರರು. ಅಸ್ವಾತಂತ್ರ್ಯವು ಸರ್ವ ಜೀವರ ಸ್ವರೂಪಲಕ್ಷಣವಾಗಿದೆ. ಇದು ನಿತ್ಯ. ಕರ್ಮವಿಮೋಚನೆಯನ್ನು ಹೊಂದಿದ ನಂತರವೂ, ಮುಕ್ತಾವಸ್ಥೆಯಲ್ಲಿ ಸ್ವಸ್ವರೂಪನಂದವನ್ನೂ ಹೊಂದುವ ಮುಕ್ತರೂ ಸಹ ಬಿಂಬಾಧೀನರು. ಜೀವನ ಸ್ವರೂಪಗತವಾದ ಸಹಜ ಧರ್ಮಗಳು, ಜ್ಞಾನಶಕ್ತಿ, ಇಚ್ಛಾಶಕ್ತಿ ಮತ್ತು ಕ್ರಿಯಾಶಕ್ತಿ. ಈ ಶಕ್ತಿತ್ರಯಗಳೂ ಬಿಂಬನಾದ ಭಗವದಧೀನವಾಗಿವೆ. ಜೀವನು ಶ್ರೀಹರಿಯ ಪ್ರೇರಣೆಯ ಸಹಾಯವಿಲ್ಲದೆ. ತಾನೇ ತಾನಾಗಿ ಈ ಧರ್ಮಗಳನ್ನು ಅಭಿವ್ಯಕ್ತಿ ಪಡಿಸಲಾರ. ಜೀವನಲ್ಲಿ ಶಕ್ತ್ಯಾತ್ಮಕವಾದ ಈ ಧರ್ಮಗಳು ಕ್ರಿಯಾತ್ಮಕವಾಗಿ ಪ್ರಕಟವಾಗಬೇಕಾದರೆ ಬಿಂಬಕ್ರಿಯಾರೂಪವಾದ ಪ್ರವರ್ತನಕಾರ್ಯದಿಂದಲೇ ಸಾಧ್ಯ. ಜೀವರಿಗೆ ಕರ್ತೃತ್ವ ಗುಣವಿದೆ. ಇದು ಪರಾಧೀನವಾಗಿದೆ. ಅಂದರೆ ಜೀವನ ಕರ್ತೃತ್ವ ಶಕ್ತಿ ಬಿಂಬಾಧೀನವಾದದ್ದು. ಈ ಅಧೀನತ್ವ ಅನಾದಿ ಹಾಗೂ ನಿತ್ಯ.

ಇದಕ್ಕೆ ಪ್ರಮಾಣ :–

"ಅಲ್ಪಶಕ್ತಿರಸಾರ್ವಜ್ಞಂ ಪಾರತಂತ್ರ್ಯಂ ಅಪೂರ್ಣತಾ ।
ಉಪಜೀವಕತ್ವ ಜೀವತ್ವಮ್॥"

ನೀಸ್ವ – ಎಂದರೆ ಜ್ಞಾನಧನಶೂನ್ಯ ಜೀವನೆಂದರ್ಥ. ಅಂದರೆ, ಯಾವುದನ್ನೂ

ತನ್ನ ಅಧೀನದಲ್ಲಿ ಇಟ್ಟುಕೊಳ್ಳಲು ಅಸಮರ್ಥನು. ಈ ಕಾರಣದಿಂದ ಜೀವನು **ಅಸ್ವತಂತ್ರನು.**

೨. ಸರ್ವಕ್ರಿಯಾಪ್ರೇರಕನಾದ, ಸರ್ವಚೇಷ್ಟಾಪ್ರವರ್ತಕನಾದ ಸರ್ವೇಶನಾದ ಬಿಂಬರೂಪಿಯೇ ಶ್ರೀ ಹರಿಯು. ಶ್ರೀಹರಿ ಸರ್ವತಂತ್ರಸ್ವತಂತ್ರನು. ಅಸ್ವಾತಂತ್ರ್ಯ ಹೇಗೆ ಜೀವನ ಲಕ್ಷಣವೋ, ಹಾಗೆಯೇ ಸರ್ವತಂತ್ರಸ್ವಾತಂತ್ರ್ಯವೆಂಬುದು ಬಿಂಬನಾದ ಹರಿಯ ಲಕ್ಷಣ. ಈ ಬಿಂಬನಿಗೆ ಇತರರ ಹಂಬಲವಿಲ್ಲ. ಪರಾಪೇಕ್ಷಾರಹಿತನು. ಸ್ವೇಚ್ಛೆಯಿಂದ ಸಕಲವ್ಯಾಪಾರಗಳನ್ನು ನಡೆಯಿಸುವ ಸ್ವಾತಂತ್ರ್ಯಗುಣವು ಶ್ರೀ ಹರಿಯ ಸ್ವರೂಪಗತಲಕ್ಷಣವು. ಇದರಿಂದ ಹರಿಯು ಸರ್ವತಂತ್ರಸ್ವತಂತ್ರನು. ಸ್ವಾತಂತ್ರ್ಯವೆಂದರೆ, ಇತರ್ಯಾರ ಸಹಾಯವಿಲ್ಲದೇ ಸ್ವಇಚ್ಛೆಯಿಂದ ಮಾಡುವ ಕ್ರಿಯಾಸಾಮರ್ಥ್ಯಗುಣವೆಂದರ್ಥ. ಇಂತಹ ಗುಣ ಪ್ರತಿಬಿಂಬರಾದ ಜೀವರಿಗೆ ಯಾವಕಾಲಕ್ಕೂ ಇಲ್ಲವೇ ಇಲ್ಲ.

ಪ್ರಮಾಣ :– "ಪಾತ್ಪರೋಽಸೌ ಪರಮಃ ಸ್ವತಂತ್ರಃ" ಭಾರತನಿರ್ಣಯವಾಕ್ಯ.–

೩. ಶ್ರೀ ಪರಮಾತ್ಮನ ಆನಂದ ಅಪರಿಮಿತ ಹಾಗೂ ಅಪಾರ. ಆ ನಿರ್ಜರೇಶನು ನಿತ್ಯಾನಂದಭರಿತನು. ಅವನ ಸ್ವರೂಪವೇ ನಿತ್ಯಸುಖಮಯವು. ಸದಾನಂದ ಉದ್ರಿಕ್ತನಾದ ಆ ಪರಿಪೂರ್ಣನು ನಿತ್ಯಸುಖಮಯನು.

೪. ತದ್ವಿರುದ್ಧನಾಗಿ ಜೀವನು ಜ್ಞಾನಧನಶೂನ್ಯನು. ಅವನ ಜ್ಞಾನ ಮತ್ತು ಆನಂದ ಪರಿಮಿತಿವಾದದ್ದು. ಇದರಿಂದ ಜೀವನನ್ನು ನಿಃಸ್ವ– ಎಂದಿದ್ದಾರೆ ಜ್ಞಾನಿವರೇಣ್ಯರಾದ ದಾಸವರ್ಯರು.

೫. ಜೀವನು ಅನಾದಿಕಾಲದಿಂದ ಬದ್ಧನು. ತ್ರಿಗುಣಾತ್ಮಕವಾದ ಷೋಡಶ ಕಲೋಪೇತವಾದ ಲಿಂಗದೇಹದಿಂದ ಬದ್ಧನಾಗಿದ್ದಾನೆ. ತ್ರಿಗುಣಗಳ ವ್ಯಾಪಾರದಿಂದ

ಕರ್ಮಗಳ ಅಭಿವ್ಯಕ್ತಿ. ಹೀಗೆ ಕರ್ಮದಿಂದ ಬಂಧಿತನಾಗಿದ್ದಾನೆ ಜೀವ. ಭಗವತ್ಪ್ರಸಾದದಿಂದ ಮಾತ್ರ ಕರ್ಮವಿಮೋಚನೆ ಸಾಧ್ಯ. ಕರ್ಮಕೋಟಲೆಗಳಿಂದ ಬಂಧಿತನಾಗಿದ್ದಾನೆ ಜೀವನು. ಇದರಿಂದ ಜೀವನು **ಬದ್ಧನು.**

೬. ಜೀವನ ಜ್ಞಾನಶಕ್ತಿ ಅಲ್ಪವಾದದ್ದು. ಜೀವನ ಯೋಗ್ಯತೆಗೆ ತಕ್ಕಂತೆ ಸೀಮಿತವಾದದ್ದು. ಇದರಿಂದ **ಅಲ್ಪಜ್ಞನು.** ಆದರೆ ಸರ್ವೋತ್ತಮನಾದ ಬಿಂಬನು ಸರ್ವಜ್ಞಶಿಖಾಮಣಿಯು. ಆವನ ಅಪಾರಗುಣ, ರೂಪಕ್ರಿಯಾದಿಗಳನ್ನು ಉತ್ತಮಾಧಿಕಾರಿಗಳಾದ ರಮಾಬ್ರಹ್ಮಾದಿಗಳೇ ಸಾಕಲ್ಯೇನ ಅರಿಯರು ಎಂದ ಮೇಲೆ ಅಲ್ಪಜ್ಞನಾದ ಜೀವನ ಪಾಡೇನು?

೭. ತನುಸಂಬಂಧವಾದ ರೋಗಾದ್ಯುಪದ್ರವಗಳಿಂದ ದುಃಖಹೊಂದುತ್ತಾನೆ ಜೀವನು. ಕಾರಣಶರೀರದ ದೆಸೆಯಿಂದಾಗಿ, ನಾನಾ ಯೋನಿಗಳಲ್ಲಿ ಜನ್ಮವೆತ್ತಿ, ಆಯಾಯಾ ಜನ್ಮಗಳಿಗೆ ಸಂಬಂಧಪಟ್ಟಂತೆ ಕ್ಲೇಶಗಳನ್ನು ಅನುಭವಿಸುತ್ತಾನೆ. ತ್ರಿಗುಣಗಳ ಭವಣೆ ಅವನಿಗೆ ಕರ್ಮವಿಮೋಚನೆ ಪರ್ಯಂತ ತಪ್ಪದು. ಜನನಮರಣಾಖ್ಯವಾದ ಭವವೆಂಬ ಈ ಮಹಾಸಾಗರದಲ್ಲಿ ಮೋಹ ಮಮತೆಗಳಿಂದ ಗ್ರಸ್ತನಾಗಿ ಸದುಃಖಿಯಾಗಿದ್ದಾನೆ. ಆದರೆ ಪರಮಾತ್ಮನಾದರೋ ನಿತ್ಯಾನಂದಸ್ವರೂಪಿಯು. ಅವನ ಸ್ಮರಣೆಯಿಂದ ಜೀವರ ದುಃಖನಾಶವಾಗುವುದೆಂದಮೇಲೆ ಆ ದಾನವ ವೈರಿಗೆ ದುಃಖವೆಲ್ಲಿ ಬಂತು?

೮. ಸ್ವಲ್ಪಶ್ರಮಪಟ್ಟರೂ ಜೀವನಿಗೆ ಆಯಾಸವಾಗುವುದು. ಕೆಲಸದ ಬಳಲಿಕೆಯಿಂದ ದೀನನಾಗುತ್ತಾನೆ. ಶೀಘ್ರಶ್ರಮಹೊಂದುವ, ಕೇವಲ ದೀನಾವಸ್ಥೆಯಲ್ಲಿರುವುದರಿಂದ ಜೀವನು **ನಿರ್ವಿಣ್ಣನು.** ಶ್ರೀಪರಮಾತ್ಮನಾದರೋ ಸರ್ವಶಕ್ತನು. ಸೃಷ್ಟ್ಯಾದಿಸಕಲವ್ಯಾಪಾರಗಳನ್ನು ಲೀಲಾಜಾಲವಾಗಿ ನಿರ್ವಹಿಸುತ್ತಿರುವನು. ನಿರಾಯಾಸವಾಗಿ ಆವನ ಲೀಲಾವಿಶೇಷಗಳು.

೯. ಜೀವನಸ್ವರೂಪದೇಹ ಅತ್ಯಂತಸೂಕ್ಷ್ಮವಾದದ್ದು. ಸಾಧನಶರೀರವಾದ

ಸ್ಥೂಲದೇಹ ವಯೋಧರ್ಮಕ್ಕಾನುಸಾರವಾಗಿ ಕುಗ್ಗುವುದು. ಮರಣದಿಂದ ಸ್ಥೂಲದೇಹನಾಶ. ಹೀಗೆ ನಾಶಹೊಂದುವ ಸ್ಥೂಲ, ಅನಿರುದ್ಧ ಮತ್ತು ಲಿಂಗಶರೀರ ಗಳಿಂದ ಯುಕ್ತನಾದ ಜೀವನ ಅನಾದಿನಿತ್ಯವಾದ ಸ್ವರೂಪವು ಅತ್ಯಂತ ಸೂಕ್ಷ್ಮ. ಇದರಿಂದ ಜೀವನು **ಹ್ರಸ್ವದೇಹಿಯು.**

೧೦. ಒಡೆಯನ ಆಶ್ರಯವಿಲ್ಲದೇ ಸೇವಕನು ಇರಲು ಹೇಗೆ ಸಾಧ್ಯವಿಲ್ಲವೋ, ಹಾಗೆಯೇ, ಜಗದೊಡೆಯನಾದ ಆ ಜನಾರ್ದನನೇ ಸರ್ವಜೀವರ ರಕ್ಷಕನು. ಆ ಆನಂದಮಯನ ಆಶ್ರಯದಲ್ಲಿ ಸರ್ವಜೀವಕೋಟಿ ಇದೆ. ಶ್ರೀಮನ್ನಾರಾಯಣನೇ ಜೀವರಿಗೆ ನಾಥನು. ಪರಾವಲಂಬಿಯಾದ ಜೀವನು **ಸನಾಥನು.**

೧೧. ಚರಾಚರಯುಕ್ತವಾದ ಈ ಜಗತ್ತಿನಲ್ಲಿ ಅಣುರೇಣುತೃಣಕಾಷ್ಠ ಪರಿಪೂರ್ಣನಾಗಿ ಸರ್ವತ್ರ ವ್ಯಾಪಕನಾಗಿದ್ದಾನೆ. ಆ ಸಕಲೈಶ್ವರ್ಯಸಂಪನ್ನನು. ಇದರಿಂದ ಸರ್ವತ್ರವ್ಯಾಪ್ತನಾದ ಶ್ರೀಪರಮಾತ್ಮನು **ವಿಶ್ವವ್ಯಾಪಕನು..**

೧೨. ಸೃಷ್ಟ್ಯಾದಿಸಕಲವ್ಯಾಪಾರಗಳನ್ನು ನಿರಾಯಾಸವಾಗಿ ಮಾಡುವ ಶ್ರೀಹರಿಗೆ **ಕರ್ತೃ** ಎಂದು ಹೆಸರು. ಸರ್ವಕರ್ತೃವಾದ ಆ ಸರ್ವೇಶನೇ ಬಿಂಬರೂಪನಾಗಿ ಚೇತನರಲ್ಲಿಯೂ, ವ್ಯಾಪ್ತರೂಪಗಳಿಂದ ಜಡವಸ್ತುಗಳಲ್ಲಿಯೂ ಸರ್ವಚೇಷ್ಟಾ ಪ್ರವರ್ತಕನಾಗಿದ್ದಾನೆ.

೧೩. ಚತುರ್ಮುಖಬ್ರಹ್ಮ ಸರಸ್ವತೀರಾದ್ಯಮಶೇಶ ನುತನು.

೧೪. ಸ್ವತಂತ್ರನೂ, ನಿತ್ಯಸುಖಮಯನೂ, ಸರ್ವಜ್ಞನೂ, ಅಪರಿಮಿತಶಕ್ತಿ ಸಂಪನ್ನನೂ, ನಿರ್ದೋಷನೂ, ಅನಂತಕಲ್ಯಾಣಗುಣಧಾಮನು, ವಿಶ್ವವ್ಯಾಪಕನೂ, ಸರ್ವಚೇಷ್ಟಾಪ್ರವರ್ತಕನೂ ಆದ ಆ ಬಿಂಬರೂಪೀ ಶ್ರೀಹರಿಯು ಬ್ರಹ್ಮಾದ್ಯಮರ ನುತನೆಂದು ತಿಳಿದು, ನಿರಂತರದಲ್ಲಿ ಅವನ ಗುಣಾತಿಶಯಗಳನ್ನು ಕೊಂಡಾಡುತ್ತಿರು ಎಂದು ಸನ್ಮಾರ್ಗಪ್ರದರ್ಶನ ಮಾಡಿದ್ದಾರೆ – ಜ್ಞಾನಿವರ್ಯ ಶ್ರೀ ಜಗನ್ನಾಥದಾಸವರ್ಯರು. ||೩||

## ಪದ್ಯ ೪

**ಮೂಲ :—**

ಮತ್ತೆ ವಿಶ್ವಾದ್ಯೆಂಟುರೂಪೊಂ
ಭತ್ತರಿಂದಲಿ ಪೆಚ್ಚಿಸಲು ಎ
ಪ್ಪತ್ತೆರಡು ರೂಪಗಳಹವು ಒಂದೊಂದೆ ಸಾಹಸ್ರಾ
ಪೃಥ್‌ಪೃಥಕು ನಾಡಿಗಳೊಳಗೆ ಸ
ರ್ವೋತ್ತಮನ ತಿಳಿಯೆಂದು ಭೀಷ್ಮನು
ಬಿತ್ತರಿಸಿದನು ಧರ್ಮತನಯನಿಗೆ ಭೀಷ್ಮ (ಶಾಂತಿ) ಪರ್ವದಲಿ ||೪||

**ಅವತರಣಿಕೆ :—**

ವಿಶ್ವಾದಿರೂಪಗಳು ಎಂಟು. ಮೂಲನಾರಾಯಣ ರೂಪ ಸೇರಿ ಒಟ್ಟು ಒಂಭತ್ತು. ಒಂದೊಂದು ರೂಪದಲ್ಲಿಯೂ ಒಂಭತ್ತುರೂಪಗಳಂತೆ, ೮X೯= ೭೨ ರೂಪಗಳಾಗುವುವು. ವಿಶ್ವಾದಿ ಸಹಸ್ರರೂಪಗಳಿಂದ ಗುಣಿಸಲು, ೭೨X೧೦೦೦= ೭೨,೦೦೦ ಆಗುವುದು. ಅಂದರೆ, ೭೨ ರೂಪಗಳು, ಪ್ರತಿರೂಪ ಒಂದೊಂದು ಸಾವಿರದಂತೆ, ೭೨,೦೦೦ನಾಡಿಗಳಲ್ಲಿ ವಿದ್ಯಮಾನವಾಗಿವೆ. ನಾಡೀಗತ ೭೨,೦೦೦ ರೂಪಗಳ ಉಪಾಸನಾಕ್ರಮವನ್ನು ಅರಿತು, ಶ್ರೀ ಹರಿಯೇ ಸರ್ವೋತ್ತಮನೆಂದು ತಿಳಿಯಬೇಕೆಂದು ಕುರುಕುಲಪಿತಾಮಹರಾದ ಭೀಷ್ಮಾಚಾರ್ಯರು ಧರ್ಮಸುತನಾದ ಧರ್ಮರಾಯನಿಗೆ ಭೀಷ್ಮಪರ್ವದಲ್ಲಿ ತಿಳಿಸಿರುವರೆಂದು ಹೇಳುತಾ್ತರೆ – ಮತ್ತೆ ವಿಶ್ವಾದಿ – ಎಂಬ ಪ್ರಸಕ್ತಸಂಧಿಗತ ೪ನೆಯ ಈ ಪದ್ಯದಿಂದ. ||೪||

**ಪ್ರತಿಪದಾರ್ಥ :—**

ಮತ್ತೆ= ಪುನಃ (ಮುಂದುವರಿದು), ವಿಶ್ವಾದಿ= ವಿಶ್ವನಿಂದ ಪ್ರಾರಂಭಿಸಿ,

ಜ್ಞಾನಾತ್ಮನಾಮಕ ಪರಮಾತ್ಮನ, ಎಂಟು ರೂಪ= ಅಷ್ಟರೂಪಗಳನ್ನು, ಒಂಭತ್ತರಿಂದಲಿ = ವಿಶ್ವಾದಿ ೮ ರೂಪಗಳು ಮತ್ತು ಮೂಲನಾರಾಯಣರೂಪ ಸೇರಿ, ಒಂಭತ್ತರಿಂದ, ಪೆಚ್ಚಿಸಲು = ಹೆಚ್ಚಿಸಿದರೆ (ಅಂದರೆ ೮X೯=೭೨) ಎಪ್ಪತ್ತೆರಡು ರೂಪಗಳಹುದು = ೮X೯=೭೨ ರೂಪಗಳಾಗುವುವು. ಒಂದೊಂದು ಸಾಹಸ್ರಾ= ಈ ೭೨ ರೂಪಗಳಲ್ಲಿ ಪ್ರತಿಯೊಂದು ರೂಪದಲ್ಲಿಯೂ ವಿಶ್ವಾದಿ ಸಹಸ್ರರೂಪಗಳನ್ನು, ಪೃಥ್ ಪೃಥಕು = ಸ್ಥೂಲದೇಹಗತ ಬೇರೆ ಬೇರೆಯಾಗಿರುವ, ನಾಡಿಗಳೊಳಗೆ = ನಾಡೀವ್ಯೂಹದಲ್ಲಿ ಅಂದರೆ ೭೨X೧೦೦೦= ೭೨,೦೦೦ ರೂಪಯುಕ್ತನಾದ, ಸರ್ವೋತ್ತಮನ= ಸರ್ವಶ್ರೇಷ್ಠನಾದ ಶ್ರೀ ಪರಮಾತ್ಮನನ್ನು , ತಿಳಿ ಎಂದು= ಧ್ಯಾನೋಪಾಸನಾದ್ವಾರಾ ಅರಿಯಬೇಕೆಂದು, ಭೀಷ್ಮನು= ಭೀಷ್ಮಾಚಾರ್ಯರು, ಧರ್ಮತನಯನಿಗೆ= ಯಮಾಂಶಸಂಭೂತನಾದ ಧರ್ಮರಾಯನಿಗೆ, ಭೀಷ್ಮಪರ್ವದಲಿ= ಭೀಷ್ಮಪರ್ವದಲ್ಲಿ, ಬಿತ್ತರಿಸಿದನು= ಪ್ರಕಟಿಸಿದರು ||೪||

## ವ್ಯಾಖ್ಯಾನಗಳು :–

### (೧) ಶ್ರೀ ಸಂಕರ್ಷಣಒಡೆಯರ ವ್ಯಾಖ್ಯಾನ :–

ಎಪ್ಪತ್ತೆರಡುಸಾವಿರ ನಾಡೀಗತ ಭಗವದ್ರೂಪಗಳ ಹೇಳತಾರೆ. ವಿಶ್ವಾದಿ ಎಂಟು ರೂಪ, ವಿಶ್ವಾದಿ ಎಂಟು ರೂಪಗಳಿಗ ಮೂಲರೂಪ ಒಂದು, ಅಂತೂ ಒಂಭತ್ತು ರೂಪಗಳು. ವಿಶ್ವಾದಿ ಎಂಟುರೂಪಗಳನ್ನು ಮೇಲೆ ಉದಹರಿಸಿದ ಒಂಭತ್ತು ರೂಪಗಳಿಂದ ಹೆಚ್ಚಿಸಲು, ಎಪ್ಪತ್ತೆರಡು ರೂಪಗಳು ಆಗೋದಾಗಿವೆ. ಈ ಎಪ್ಪತ್ತೆರಡು ಸಾವಿರ ಸಾಂಕೇತಗಳ ವಿವರ –

| | | |
|---|---|---|
| ೮ | ವಿಶ್ವಾದಿರೂಪಗಳಿಂದ ಹೊರಟ ವಿಶ್ವಾದಿ ರೂಪಗಳು | : ೮,೦೦೦ |
| ೮ | ತೈಜಸನಿಂದ ಹೊರಟ ವಿಶ್ವಾದಿ ರೂಪಗಳು | : ೮,೦೦೦ |

| | | | |
|---|---|---|---|
| ೮ | ಪ್ರಾಜ್ಞನಿಂದ ಹೊರಟ ವಿಶ್ವಾದಿ ರೂಪಗಳು | : | ೮,೦೦೦ |
| ೮ | ತುರ್ಯನಿಂದ ಹೊರಟ ವಿಶ್ವಾದಿ ರೂಪಗಳು | : | ೮,೦೦೦ |
| ೮ | ಆತ್ಮನಿಂದ ಹೊರಟ ವಿಶ್ವಾದಿ ರೂಪಗಳು | : | ೮,೦೦೦ |
| ೮ | ಅಂತರಾತ್ಮನಿಂದ ಹೊರಟ ವಿಶ್ವಾದಿ ರೂಪಗಳು | : | ೮,೦೦೦ |
| ೮ | ಪರಮಾತ್ಮನಿಂದ ಹೊರಟ ವಿಶ್ವಾದಿ ರೂಪಗಳು | : | ೮,೦೦೦ |
| ೮ | ಜ್ಞಾನಾತ್ಮನಿಂದ ಹೊರಟ ವಿಶ್ವಾದಿ ರೂಪಗಳು | : | ೮,೦೦೦ |
| ೬೪ | ಒಂದೊಂದಕ್ಕೆ ಸಾವಿರಪ್ರಕಾರ ಅಭಿವೃದ್ಧಿ ಆದದ್ದು | : | ೬೪,೦೦೦ |
| ೮ | ಅರವತ್ತು ನಾಲ್ಕಕ್ಕೆ ಮೂಲರೂಪಗಳು ಎಂಟಕ್ಕೆ | : | ೮,೦೦೦ |
| | ಅಂತೂ ೭೨ಕ್ಕೆ | : | ೭೨,೦೦೦ |

ಅಂತು, ವಿಶ್ವಾದಿರೂಪಗಳು ಮೂಲರೂಪಸಹಿತ ಒಂದೊಂದು ಒಂಭತ್ತು ರೂಪಗಳು ಆದವು. ಈ ಒಂಭತ್ತು ರೂಪಗಳನ್ನು ಅದೇ ವಿಶ್ವಾದಿ ಎಂಟು ರೂಪಗಳಿಂದ ಹೆಚ್ಚು ಗುಣಿಸಿದರೆ, ಎಪ್ಪತ್ತೆರಡು ಆಗತದೆ, ಎಂತ ಪೂರ್ವೋಕ್ತಕ್ಕೆ ಸಮನ್ವಯವು. ಎಪ್ಪತ್ತೆರಡು ರೂಪಗಳು ಪ್ರತಿಒಂದೊಂದು ರೂಪ ಒಂದೊಂದು ಸಾವಿರದ ಮ್ಯಾರಿಗೆ ಅಭಿವೃದ್ಧಿಯಾಗಿ ಎಪ್ಪತ್ತೆರಡುಸಾವಿರ ಅಗೋದಾಗಿ ಅದೆ. ಈ ರೂಪಗಳು ಸ್ಥೂಲದೇಹದಲ್ಲಿ ಬ್ಯಾರೆಯಾಗಿ ಇರತಕ್ಕ ಎಪ್ಪತ್ತೆರಡುಸಾವಿರ ನಾಡಿಗಳೊಳಗೆ ಪ್ರತಿಯೊಂದೊಂದು ನಾಡಿಯಲ್ಲಿ ಒಂದೊಂದು ರೂಪದ ಮ್ಯಾರಿಗೆ ಸರ್ವೋತ್ತಮನಾದ ಪರಮಾತ್ಮನ ಎಪ್ಪತ್ತೆರಡುಸಾವಿರರೂಪಗಳು ಇರೋವಾಗಿ ಅವೆ. ಈ ಪ್ರಕಾರ ಇರೋದದನ್ನ ತಿಳಿಯೋವನಾಗೆಂದು ಭೀಷ್ಮಾಚಾರ್ಯರು ಯಮಧರ್ಮರಾಯನ ಪುತ್ರನಾದ ಯಮಾಂಶನಾದ ಧರ್ಮರಾಯನಿಗೆ ಹೇಳೋವರಾದರು. ಶ್ರೀ ಮಹಾಭಾರತ ಭೀಷ್ಮ (ಶಾಂತಿ) ಪರ್ವದಲ್ಲಿ ಈ ಸಂಗತಿ ಅದೆ ಎಂತ ತಾತ್ಪರ್ಯ. ||೪||

(೨) ಭಾವಪ್ರಕಾಶಿಕೆ :—

ಶ್ರೀಪರಮಾತ್ಮನು ವಿಶ್ವಾದಿ ಎಂಟುರೂಪಗಳಿಂದ, ಮೂಲಪ್ರಕೃತಿ ಅಥವಾ ಅವ್ಯಕ್ತ ತತ್ತ್ವ, ಮಹತತ್ತ್ವ, ಅಹಂಕಾರತತ್ತ್ವ, ಮನಸ್ಸು, ಪಂಚಮಹಾಭೂತಗಳು. ಅಂತು, ಒಂಭತ್ತರಲ್ಲಿ ಒಂದೊಂದರಲ್ಲೂ ೮ ರೂಪಗಳಂತೆ, ೯X೮=೭೨ ರೂಪಗಳಾದವು. ಈ ೭೨ ರೂಪಗಳಲ್ಲಿ ಒಂದೊಂದರಲ್ಲಿ ಸಹಸ್ರರೂಪಗಳಂತೆ, ೭೨ ಸಹಸ್ರರೂಪಗಳಿಂದ ದೇಹದೊಳಗಿನ ೭೨ ಸಹಸ್ರನಾಡಿಗಳಲ್ಲಿ ಶ್ರೀಪರಮಾತ್ಮನು ಇರುವನೆಂದು ಚಿಂತಿಸು — ಎಂದು ಭೀಷ್ಮಾಚಾರ್ಯರು ಧರ್ಮರಾಯನಿಗೆ ಉಪದೇಶ ಮಾಡಿದರೆಂದು, **ಮಹಾಭಾರತ ಶಾಂತಿಪರ್ವದ ಮೋಕ್ಷಧರ್ಮದಲ್ಲಿ** ಹೇಳಿದೆ. ಕೆಲವು ಪ್ರತಿಗಳಲ್ಲಿ — "ಬಿತ್ತರಿಸಿದನು ಧರ್ಮತನಯನಿಗೆ ಭೀಷ್ಮಪರ್ವದಲಿ' — ಎಂಬ ಪಾಠವನ್ನು ಅವಲಂಬಿಸಿ, ಕೆಲವು ವ್ಯಾಖ್ಯಾನಕರ್ತೃಗಳು ಭೀಷ್ಮಪರ್ವದಲ್ಲಿ ಭೀಷ್ಮಾಚಾರ್ಯರು ಧರ್ಮತನಯನಿಗೆ ಹೇಳಿದರೆಂದು ಅರ್ಥಮಾಡಿರುವರು. ಭೀಷ್ಮಪರ್ವದಲ್ಲಿ ಭೀಷ್ಮಾಚಾರ್ಯರಿಗೂ ಧರ್ಮರಾಜನಿಗೂ ಸಂವಾದರೂಪನಾದ ಉಪದೇಶ ಕಥೆಯೇ ಇಲ್ಲ. ಧರ್ಮರಾಜನು ಯುದ್ಧಾರಂಭದಲ್ಲಿ ಭೀಷ್ಮಾಚಾರ್ಯರನ್ನು ಕಂಡು, ಯುದ್ಧಕ್ಕೆ ಅಪ್ಪಣೆಯನ್ನು ಪಡೆದನು. ಎರಡನೆಯ ಸಲ ಭೀಷ್ಮಾಚಾರ್ಯರ ಯುದ್ಧದಲ್ಲಿ ೯ನೆಯ ರಾತ್ರಿ ಧರ್ಮರಾಜನು ಬಂದು, ನಿಮ್ಮ ಸಂಹಾರಕ್ಕೆ ಉಪಾಯವೇನು ಎಂದು ಕೇಳಿ ತಿಳಿದುಕೊಂಡನು. ಇವೆರಡೇ ಸಂದರ್ಭವಿರುವುದರಿಂದ, "ಶಾಂತಿಪರ್ವದಲ್ಲಿ" — ಎಂಬ ಪಾಠವೇ ಸಾಧುಪಾಠವೆಂತ ಕಾಣುತ್ತದೆ ||೪||

(೩) ಭಾವದರ್ಪಣ ಟೀಕಾ :—

ಮತ್ತೇತಿ ವಿಶ್ವಾದ್ಯಂಟು — ವಿಶ್ವ, ತೈಜಸ, ಪ್ರಾಜ್ಞ, ತುರ್ಯ, ಆತ್ಮ ಅಂತರಾತ್ಮ, ಪರಮಾತ್ಮ ಮತ್ತು ಜ್ಞಾನಾತ್ಮ — ಎಂದು ಎಂಟುರೂಪಗಳು. ಭಗವದ್ರೂಪಕ್ಕೆ ಒಂದು — ಇಂದಲಿ, ಅಂದರೆ, ಅದರ ವಿವರ — ಪಂಚಭೂತ, ಮಹತತ್ತ್ವ, ಅವ್ಯಕ್ತತತ್ತ್ವ, ಅಹಂಕಾರತತ್ತ್ವ ಮತ್ತು ಮನಸ್ಸತ್ತತ್ವ — ಇವೇ

ಒಂಭತ್ತು ತತ್ತ್ವದಿಂದಲೇ ಗುಣಿಸಿದರೆ, ೭೨ ಸಂಖ್ಯಾ ಆಯಿತು. ಇದರಲ್ಲಿ ವಿಶ್ವಾದಿ ಒಂದೊಂದು ಸಹಸ್ರರೂಪಗಳು ತಿಳಿತಕ್ಕದ್ದು.

"ದ್ವಾಸಪ್ತತಿಸಹಸ್ರಾಣಿ ರೂಪ್ಯಾಣ್ಯೇವಂ ರಮಾಪತೇಃ ||

— ಇತಿ ಐತರೇಯಭಾಷ್ಯೋಕ್ತಿಃ ||೪||

### (೪) ಶ್ರೀವ್ಯಾಸದಾಸಸಿದ್ಧಾಂತ ಕೌಮುದೀ :—

'ಮತ್ತೆ' — ಇತಿ 'ಪೆಚ್ಚಿಸಲು — ಗುಣಿಸಲು ನಾಡೀವಿಚಾರಃ ಪ್ರಮಿತಃ — ಇತ್ಯಾಹ ಭೀಷ್ಮ ಇತಿ ||

ಪ್ರಸಕ್ತಸಂಧಿಗೆ ಧ್ಯಾನಪ್ರಕ್ರಿಯಾಸಂಧಿ ಎಂದು ಹೆಸರಿರುವುದರಿಂದ — "ದೇಹಗತ ೭೨ ನಾಡಿಗಳಲ್ಲಿ ಭಗವಂತನ ೭೨ ರೂಪಗಳನ್ನು ಉಪಾಸಿಸಬೇಕು" — ಎಂದು ದಾಸವರ್ಯರು ನಿರೂಪಿಸುತ್ತಾರೆ. "ಮತ್ತೆ" — ಎಂಬ ಪದ್ಯದಿಂದ. ವಿಶ್ವಾದಿ ಎಂಟು ರೂಪಗಳಾಗಿ ಒಂಭತ್ತರಿಂದ ಗುಣಿಸಲು, ೭೨ ರೂಪಗಳಾಗುವುವು. ಮೂಲಪ್ರಕೃತಿಯನ್ನು ಪರಿಗಣಿಸಿ — ಪಂಚಮಹಾಭೂತಗಳು, ಮನಸ್ಸು, ಅಹಂಕಾರ, ಮಹತ್ತತ್ತ್ವಗಳನ್ನು ಸೇರಿಸಿ, ೯ ಪ್ರಕೃತಿಗಳಾದವು. ಇವುಗಳಲ್ಲಿ ೮ ರೂಪಗಳಿಂದ ಇರಲು ೭೨ ರೂಪಗಳಾಗುವುವು. ಇದನ್ನು ಸಾವಿರದಿಂದ ಗುಣಿಸಿದರೆ, ೭೨, ೦೦೦ ಆಗುವುದು. ಇದು ನಾಡೀಗತ ಶ್ರೀಪರಮಾತ್ಮನ ರೂಪಗಳನ್ನು ಚಿಂತಿಸುವುದು ಪ್ರಮಾಣಸಮ್ಮತವು — ಎಂದು ಭೀಷ್ಮ ಧರ್ಮತನಯನಿಗೆ ಉಪದೇಶಿಸಿದನೆಂದು ಭೀಷ್ಮ — ಧರ್ಮರಾಜನ ಸಂವಾದರೂಪವಾದ ಶಾಂತಿಪರ್ವದಲ್ಲಿ ಉಕ್ತವಾಗಿದೆ. ||೪||

### (೫) ಶ್ರೀ ಗುರುಹೃದಯಪ್ರಕಾಶಿಕೆ :—

ನಾಡೀಗತ ಶ್ರೀಹರಿಚಿಂತನೆ ಭಾರತೋಕ್ತಸಂಕ್ಷೇಪವಾಗಿ ನಿರೂಪಿಸಿತ್ತಾರೆ. ಮತ್ತೆ

ಎಂದು. ವಿಶ್ವ, ತೈಜಸ ಪ್ರಾಜ್ಞ ತುರ್ಯ ಆತ್ಮಾ ಅಂತರಾತ್ಮಾ ಪರಮಾತ್ಮಾ ಜ್ಞಾನಾತ್ಮಾ ಸಹ ಎಂಟು ರೂಪವನ್ನು, ಮೂಲಪ್ರಕೃತಿ ಎಂಬ ಸೂಕ್ಷ್ಮಜಡತತ್ತ್ವ, ತಜ್ಜನ್ಯತತ್ತ್ವ, ತದುತ್ಪನ್ನ ಅಹಂಕಾರತತ್ತ್ವ, ತಜ್ಜನ್ಯಮನಸ್ತತ್ತ್ವ, ಪಂಚಭೂತಸಹ ಒಂಭತ್ತು ತತ್ತ್ವದಿಂದ ಹೆಚ್ಚು ಗುಣಿಸಿದರೆ, ಒಂಭತ್ತೆಂಟಲು ಎಪ್ಪತ್ತೆರಡುರೂಪ. ಆ ಒಂದೊಂದನ್ನು ಸಾವಿರದಿಂದ ಗುಣಿಸಿದರೆ ಎಪ್ಪತ್ತೆರಡು ಪೃಥಕ್ ಪೃಥಕ್ ಎಂದರೆ, ಒಂದೊಂದರಲ್ಲಿ ಒಂದೊಂದರ ಪ್ರಕಾರ ಎಪ್ಪತ್ತೆರಡುಸಾವಿರರೂಪ ತಿಳಿಯಬೇಕೆಂದು ಭೀಷ್ಮರು ಧರ್ಮರಾಯನಿಗೆ ಶಾಂತಿಪರ್ವದಲ್ಲಿ ಹೇಳಿದ ರೀತ್ಯಾ ಚಿಂತಿಸಬೇಕೆಂದರ್ಥ.

'ಉಪಚಿತ ನಮವಶಕ್ತಿಭಿಃ ಸ್ವ ಆತ್ಮನ್ಯುಪರಚಿತ ಸ್ಥಿರಜಂಗಮ ಪಾಲನಾಯ ' ಎಂಬ ಭಾಗವತಾರ್ಥ ವಿವರಿಸಲ್ಪಟ್ಟಿತು ||೪||

## ಸರ್ವವ್ಯಾಖ್ಯಾನಸಾರ ಸಂಗ್ರಹ

ನಮ್ಮ ಸ್ಥೂಲಶರೀರಗತ ೭೨,೦೦೦ ನಾಡ್ಯಂತರ್ಗತ ಭಗವದ್ರೂಪಗಳ ಉಪಾಸನೆಯನ್ನು ತಿಳಿಸುತ್ತಾರೆ – ಪ್ರಸಕ್ತ ೪ನೆಯ ಪದ್ಯದಿಂದ.

೧. ಪ್ರಸಕ್ತ ಸಂಧಿಯ ಹೆಸರು –ಧ್ಯಾನಪ್ರಕ್ರಿಯಾಸಂಧಿ. ಸಂಧಿಗತ ವಿಷಯಾನುಸಾರ **ಧ್ಯಾನ್ಯೋಪಾಸನಾಕ್ರಮವನ್ನು** ಮತ್ತೆ ಎಂಬ ಶಬ್ದಪ್ರಯೋಗದಿಂದ ತಿಳಿಸುತ್ತಾರೆ.

೨. ಮೂಲರೂಪಿ ಶ್ರೀಮನ್ನಾರಾಯಣನು ಮೂಲೇಶನಾಮಕನಾಗಿ ಜೀವರ ಹೃತ್ಕಮಲಾಖ್ಯಸಿಂಹಾಸನದಲ್ಲಿ ವಿದ್ಯಮಾನನಾಗಿದ್ದು, ಆ ಬಿಂಬರೂಪೀ ಹರಿಯು ವಿಶ್ವಾದಿಅಷ್ಟರೂಪಗಳಿಂದ ಹೃತ್ಪದ ಅಷ್ಟದಳಗಳಲ್ಲಿ ಸಂಚರಿಸುತ್ತಿರುವನು.

**ವಿಶ್ವಾದಿ ಅಷ್ಟರೂಪಗಳು** :– ೧ ವಿಶ್ವ, ೨. ತೈಜಸ, ೩. ಪ್ರಾಜ್ಞ, ೪.ತುರ್ಯ, ೫. ಆತ್ಮ ೬. ಅಂತರಾತ್ಮ ೭. ಪರಮಾತ್ಮ ಮತ್ತು ೮. ಜ್ಞಾನಾತ್ಮ – ಎಂಬುದಾಗಿ **ವಿಶ್ವಾದಿ ೮ ರೂಪಗಳು.**

೩. ಮೂಲಪ್ರಕೃತಿಯನ್ನು ಉಪಾದಾನಕಾರಣವನ್ನಾಗಿ ಮಾಡಿಕೊಂಡು, ಆದಿಮೂಲಸ್ವರೂಪಿಯು ಜಗತ್ತನ್ನು ಸೃಷ್ಟಿಮಾಡುವನು. ಮೂಲಪ್ರಕೃತಿಯು ಅತ್ಯಂತಸೂಕ್ಷ್ಮ. ಇದು ತ್ರಿಗುಣಾತ್ಮಕವಾದುದ್ದು. ಪ್ರಾಕೃತ ಸತ್ವಾದಿತ್ರಿಗುಣಗಳ ವೈಷಮ್ಯದಿಂದ ಜಗಸೃಷ್ಟಿಕರ್ತನಾದ ಶ್ರೀ ಹರಿಯು ಜಗತ್ತನ್ನು ಸೃಷ್ಟಿಸುವನು. ಈ ತ್ರಿಗುಣಗಳ ವೈಷಮ್ಯದಿಂದ ಕ್ರಮವಾಗಿ ೧. ಅವ್ಯಕ್ತ ತತ್ತ್ವ (ಮೂಲಪ್ರಕೃತಿಗಭಿಮಾನಿ ಲಕ್ಷ್ಮೀದೇವಿ), ೨. ಮಹತತ್ತ್ವ (ಬ್ರಹ್ಮವಾಯುಗಳು ಅಭಿಮಾನಿಗಳು) ೩. ಅಹಂಕಾರತತ್ತ್ವ (ಗರುಡಶೇಷರುದ್ರರು ಅಭಿಮಾನಿಗಳು) ೪. ಮನಸ್ಸತತ್ತ್ವ (ಇಂದ್ರ, ಕಾಮರು), ೫. ಅಹಂಕಾರತತ್ತ್ವದಿಂದ ಜನ್ಯವಾದ ತಾಮಸಾಹಂಕಾರದಿಂದ ಕ್ರಮವಾಗಿ ಆಕಾಶ, ವಾಯು, ತೇಜಸ್ಸು, ಉದಕ ಮತ್ತು ಪೃಥ್ವೀ ಎಂಬ ಪಂಚಭೂತಗಳ ಉತ್ಪತ್ತಿ ಇವೆಲ್ಲಾ ಸೇರಿ ಪ್ರಕೃತಿಸಂಬಂಧವಾದ ೯ ತತ್ತ್ವಗಳು.

೪. ವಿಶ್ವಾದಿ ಎಂಟರೂಪಗಳನ್ನು ಪ್ರಕೃತಿಸಂಬಂಧವಾದ ೯ ತತ್ತ್ವಾಂರ್ಗತ ಭಗವದ್ರೂಪಗಳಿಂದ ಗುಣಿಸಬೇಕು. (ಪೆಚ್ಚಿಸಲು) ಆಗ ವಿಶ್ವಾದಿ ೮Xಪ್ರಕೃತಿಜನ್ಯ ೯ ತತ್ತ್ವನಿಯಾಮಕರೂಪಗಳು =೭೨ ಆಯಿತು. ಮತ್ತು ವಿಶ್ವಾದಿ ಸಹಸ್ರರೂಪಗಳಿಂದ ಶ್ರೀಮನ್ನಾರಾಯಣನು ವಿರಾಜಮಾನನಾಗಿದ್ದಾನೆ. ಅಲ್ಲಿನ ಒಂದೊಂದು ರೂಪ ದಲ್ಲಿ ೧೦೦೦ ರೂಪಗಳಂತೆ. ೭೨ ರೂಪಗಳಲ್ಲಿ. ೭೨X೧೦೦೦= ೭೨,೦೦೦ ರೂಪಗಳಾಯಿತು.

೫, ನಮ್ಮ ಶರೀರದಲ್ಲಿ ೭೨,೦೦೦ ನಾಡಿಗಳು ವ್ಯಾಪಕವಾಗಿ ಹಬ್ಬಿ ಹರಡಿ ಕೊಂಡಿವೆ. ಪ್ರತಿನಾಡಿಯಲ್ಲಿಯೂ ೧೦೦೦ ರೂಪಗಳಂತೆ. ೭೨,೦೦೦೦ ನಾಡಿಗಳಲ್ಲಿ ೮X೯X೧೦೦೦=೭೨,೦೦೦ ರೂಪಗಳಿಂದ ಬೇರೆಬೇರೆಯಾಗಿ (ಪೃಥಕ್‌ಪೃಥಕ್) ನಾಡ್ಯಂತರ್ಗತಭಗವದ್ರೂಪಗಳಿವೆ.

## ಪ್ರಮಾಣ : –

" ದ್ವಾಸಪ್ತತಿಸಹಸ್ರಾಣಿ ರೂಪ್ಯಾಣೇವಂ ರಮಾಪತೇಃ"

–ಐತರೇಯಭಾಷ್ಯ ಪ್ರಮಾಣ.

ಅಂದರೆ. ಸಪ್ತತಿ ಎಂದರೆ ಎಪ್ಪತ್ತು. ದ್ವಿಸಪ್ತತಿ–ಎಂದರೆ ೨+೭೦=೭೨. ಸಹಸ್ರಾಣಿ–ಎಂದರೆ ೭೨X೧೦೦೦=೭೨,೦೦೦ ಸಂಖ್ಯಾಕವಾದ ರೂಪೇಣ – ಭಗವದ್ರೂಪಗಳು. ಏವಂ ರಮಾಪತೇಃ – ಲಕ್ಷ್ಮೀಪತಿಯಾದ ಶ್ರೀಮನ್ನರಾಯಣನ ಈ ರೀತಿಯಾದ ರೂಪಗಳೆಂದರ್ಥ.

೬. ಸರ್ವೋತ್ತಮನಾದ ಶ್ರೀಹರಿಯು ಬೃಹತೀನಾಮಕನಾಗಿ, ಪೂರ್ವೋಕ್ತ ೭೨,೦೦೦ ನಾಡಿಗಳಲ್ಲಿ ಭಾರತೀರಮಣಾಂತರ್ಗತನಾಗಿ. ಆ ನಾಡ್ಯಭಿಮಾನಿಗಳಲ್ಲಿ ಅಂತರ್ಯಾಮಿಯಾಗಿದ್ದುಕೊಂಡು, ಬಿಂಬಕ್ರಿಯಾದ್ವಾರಾ, ಶರೀರಗತ ಸಕಲ ವ್ಯಾಪಾರ ಗಳನ್ನು ನಾಡಿಗಳ ದ್ವಾರಾ ನಡೆಸಿ, ನಡೆಸುತ್ತಿರುವನು. ಈ ತತ್ತ್ವರಹಸ್ಯವನ್ನು ಕುರುಕುಲಪತಿಯಾದ ಭೀಷ್ಮಾಚಾರ್ಯರು ಧರ್ಮತನಯನಾದ ಯುಧಿಷ್ಠಿರನಿಗೆ ಸಂವಾದರೂಪದಲ್ಲಿ ಶಾಂತಿಪರ್ವದಲ್ಲಿ ಉಪದೇಶಿಸಿ, ಪ್ರಕಟಿಸಿದರೆಂದು ಪ್ರಸಕ್ತಪದ್ಯದ ತಾತ್ಪರ್ಯಾರ್ಥವು.

## ೭೨,೦೦೦ ರೂಪಗಳ ವಿವರ :–

| ಸಂಖ್ಯೆ | ಭಗವದ್ರೂಪಗಳ ವಿವರ | | ಭಗವದ್ರೂಪಗಳ ಸಂಖ್ಯೆ |
|---|---|---|---|
| ೧ | ಅವ್ಯಕ್ತ ತತ್ತ್ವ – | | |
| | ಮೂಲರೂಪೀನಾರಾಯಣನಿಂದ ಹೊರಟ ರೂಪಗಳು | = | ೮೦೦೦ |
| ೨ | ಮಹತತ್ತ್ವ – ವಿಶ್ವನಿಂದ ಹೊರಟ ರೂಪಗಳು | = | ೮೦೦೦ |
| ೩. | ಅಂಹಕಾರತತ್ತ್ವ – ತೈಜಸನಿಂದ ಹೊರಟ ರೂಪಗಳು | = | ೮೦೦೦ |

| | | | |
|---|---|---|---|
| ೪. | ಮನಸ್ತತ್ತ್ವ – ಪ್ರಾಜ್ಞನಿಂದ ಹೊರಟ ರೂಪಗಳು | = | ೮೦೦೦ |
| ೫. | ಆಕಾಶತತ್ತ್ವ – ತುರ್ಯನಿಂದ ಹೊರಟ ರೂಪಗಳು | = | ೮೦೦೦ |
| ೬, | ವಾಯುತತ್ತ್ವ – ಆತ್ಮನಿಂದ ಹೊರಟ ರೂಪಗಳು | = | ೮೦೦೦ |
| ೭. | ತೇಜಃತತ್ತ್ವ – ಅಂತರಾತ್ಮನಿಂದ ಹೊರಟ ರೂಪಗಳು | = | ೮೦೦೦ |
| ೮ | ಅಪ್‌ತತ್ತ್ವ – ಪರಮಾತ್ಮನಿಂದ ಹೊರಟ ರೂಪಗಳು | = | ೮೦೦೦ |
| ೯. | ಪೃಥ್ವೀತತ್ತ್ವ – ಜ್ಞಾನಾತ್ಮನಿಂದ ಹೊರಟ ರೂಪಗಳು | = | ೮೦೦೦ |
| | ತತ್ತ್ವಾಂತರ್ಗತ ೯×ವಿಶ್ವಾದಿ ೮ × ಸಹಸ್ರರೂಪ | = | ೭೨,೦೦೦ |

**ವಿಶೇಷ ವಿಚಾರ :–**

ಮೇಲಿನ ಪಟ್ಟಿಯಲ್ಲಿ ಒಂದೊಂದು ತತ್ತ್ವದಲ್ಲಿಯೂ ಖಂಡರೂಪನಾಗಿ, ೯ ತತ್ತ್ವಗಳಲ್ಲಿ ವಿಶ್ವಾದಿ ೮೮ ರೂಪಗಳಿಂದ ಸಮಗ್ರರೂಪದಿಂದ ಅಖಂಡರೂಪನಾಗಿದ್ದಾನೆಂದು ತಿಳಿಯಬೇಕು. ಒಂದೊಂದು ತತ್ತ್ವಗತ ರೂಪಗಳಲ್ಲಿ ವಿಶ್ವಾದಿ ೮ ರೂಪಗಳೂ ಸಮಾವೇಶವಾಗಿವೆ. ಇದರಿಂದ ೯×೮×ಸಹಸ್ರ ನಾಮಾಂಕಿತರೂಪಗಳು =೭೨,೦೦೦ ನಾರೀಗತರೂಪಗಳೆಂದು ಉಪಾಸನಾಕ್ರಮ ಅರಿಯಬೇಕು ||೪||

## ಪದ್ಯ ೫

ಮೂಲ :—

ಎಂಟು ಪ್ರಕೃತಿಗಳೊಳಗೆ ವಿಶ್ವಾ।
ದ್ಯೆಂಟು ರೂಪದಲ್ಲಿದ್ದು ಭಕುತರ।
ಕಂಟಕವ ಪರಿಹರಿಸುತಲಿ ಪಾಲಿಸುವ ಪ್ರತಿದಿನದಿ। ।
ನೆಂಟನಂದದಿ ಎಡಬಿಡದೆ ವೈ।
ಕುಂಠರಮಣನು ತನ್ನವರ ನಿ।
ಷ್ಕಂಟಕ ಸುಮಾರ್ಗದಲಿ ನಡೆಸುವ ದುರ್ಜನರ ಬಡಿವ ||೫||

ಅವತರಣಿಕೆ :—

ಪಂಚಭೂತಗಳು, ಅವ್ಯಕ್ತತತ್ತ್ವಾದಿ ಮೂಲತತ್ತ್ವಗಳು, ಎಲ್ಲಾ ಸೇರಿ ಎಂಟು ಪ್ರಕೃತಿ ತತ್ತ್ವಗಳಲ್ಲಿ. ವಿಶ್ವಾದಿ ಅಷ್ಟರೂಪಗಳಿಂದ ಇದ್ದು, ಭಕ್ತರ ಆಪತ್ತುಗಳನ್ನು ಪರಿಹರಿಸಿ, ಆಪದ್ಬಾಂಧವನಂತೆ ಆ ಬಿಂಬರೂಪೀ ಶ್ರೀ ಹರಿಯು ನಿರಂತರ ಕಾಯುತ್ತಾ, ಸಂರಕ್ಷಿಸುತ್ತಾನೆಂದು ತಿಳಿಸುತ್ತಾರೆ — ಎಂಟು ಪ್ರಕೃತಿಗಳೊಳಗೆ — ಎಂಬ ಪ್ರಸಕ್ತಸಂಧಿಗತ ಚಿನೆಯ ಈ ಪದ್ಯದಿಂದ ||೫||

ಪ್ರತಿಪದಾರ್ಥ :—

**ಎಂಟುಪ್ರಕೃತಿಗಳೊಳಗೆ** = ಪೃಥಿವ್ಯಾದಿ ಭೂತಪಂಚಕಗಳು, ಅವ್ಯಕ್ತತತ್ತ್ವ ಮಹತ್ತತ್ತ್ವ ಮತ್ತು ಅಹಂಕಾರ ತತ್ತ್ವ ಎಂಬ ತತ್ತ್ವಕ್ರಿಯೆಗಳು. ಎಲ್ಲಾ ಸೇರಿ ಎಂಟು ವಿಧವಾದ ಪ್ರಕೃತಿಯಲ್ಲಿ, **ವಿಶ್ವಾದಿ** = ವಿಶ್ವ, ತೈಜಸ, ಪ್ರಾಜ್ಞ, ತುರ್ಯ, ಆತ್ಮ, ಅಂತರಾತ್ಮ, ಜ್ಞಾನಾತ್ಮ ಮತ್ತು ಪರಮಾತ್ಮ ಎಂಬ, **ಎಂಟು ರೂಪದಲ್ಲಿದ್ದು** = ಎಂಟುರೂಪಗಳನ್ನು ಧರಿಸಿ, ಒಂದೊಂದು ರೂಪ, ಒಂದೊಂದು

ಪ್ರಕೃತಿತತ್ತ್ವದಲ್ಲಿದ್ದು, ಭಕುತರ = ತನ್ನಲ್ಲಿ ನಿರಂತರವಾಗಿ ಸುದೃಢಸ್ನೇಹರೂಪವಾದ ಭಕ್ತಿಯನ್ನು ಮಾಡುವವರ, ಕಂಟಕವ = ಸತ್ಸಾಧನೆಗೆ ಪ್ರತಿಬಂಧಕರೂಪವಾಗಿರುವ ಪಾಪಗಳನ್ನು, ಪರಿಹರಿಸುತಲಿ= ಕಳೆಯುತ್ತಾ, ನೆಂಟನಂದದಿ = ಪರಮಾಪ್ತ ಬಂಧುವಿನಂತೆ (ಬಿಂಬರೂಪಿ ಶ್ರೀಹರಿಯು ಪ್ರತಿಬಿಂಬಸದೃಶನಾದ ಜೀವರಿಗೆ ಆಪ್ತಬಾಂಧವನು) ಎಡಬಿಡದೆ= ಒಂದರಕ್ಷಣವೂ ಜೀವನನ್ನು ಬಿಡದೆ (ನಿತ್ಯಾವಿಯೋಗಿಯಾಗಿದ್ದು), ಪ್ರತಿದಿನದಿ= ಪ್ರತಿನಿತ್ಯದಲ್ಲಿಯೂ, ಪಾಲಿಸುವ = ಸಂರಕ್ಷಿಸುತ್ತಾನೆ. ವೈಕುಂಠರಮಣನು= ಮೋಕ್ಷಧಾಮವಾದ ವೈಕುಂಠದಪತಿಯು. ತನ್ನವರ= ತನ್ನ ಅಂತರಂಗ ಭಜಕರನ್ನು, ನಿಷ್ಕಂಟಕ = ಪ್ರತಿಬಂಧಕರಹಿತವಾದ (ಪಾಪಾಕ್ಷಾಳನದ್ವಾರಾ, ದುರಿತಗಳನ್ನು ಪರಿಹರಿಸಿ) ಸುಮಾರ್ಗದಲಿ= ಮೋಕ್ಷಪ್ರಾಪ್ತಿಗೆ ಸುಸಮೀಚೀನವಾದ ಜ್ಞಾನಮಾರ್ಗದಲ್ಲಿ, ನಡೆಸುವ= ಕರೆದೊಯ್ಯುವನು, ದುರ್ಜನರ = ದೇಹಗತ ದುರ್ಬುದ್ಧಿ ಹಾಗೂ ಪಾಪಪ್ರೇರಕರಾದ ಅಸುರರನ್ನು, ಬಡಿವ= ಶಿಕ್ಷಿಸುತ್ತಾನೆ. ||೩||

## ವ್ಯಾಖ್ಯಾನಗಳು

### (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ :–

ದೇಹದಲ್ಲಿ ಎಂಟು ಸ್ಥಾನಗಳಲ್ಲಿ ಎಂಟುರೂಪದಿಂದ ಇದ್ದು ಸಂರಕ್ಷಿಸುತ್ತಾನೆ– ಎಂತ ಹೇಳತಾರೆ.

ಐದು ಪೃಥಿವ್ಯಾದಿಪಂಚಭೂತಗಳು, ಮಹತ್ತತ್ವ ಒಂದು, ಅಂಹಕಾರತತ್ತ್ವ ಒಂದು, ಅವ್ಯಕ್ತತತ್ತ್ವ ಒಂದು – ಅಂತು ಎಂಟು. ಅವ್ಯಕ್ತತತ್ತ್ವಕ್ಕೆ ಪ್ರತ್ಯಾಮ್ನಾಯ ಬುದ್ಧಿತತ್ತ್ವಎಂತಲೂ ಉಕ್ತವಾಗಿದೆ. ಏತಾದೃಶವಾದ ಎಂಟುಪ್ರಕೃತಿಗಳೊಳಗೆ – ಪ್ರಮಾಣ : ಭೂಮಿರಾಪೋನಲೋ ವಾಯುಃ ಖಂ ಮನೋಬುದ್ಧಿರೇವಚ। ಅಹಂಕಾರ ಇತೀಯಂ ಮೇ ಭಿನ್ನಾಪ್ರಕೃತಿರಷ್ಟಧಾ ।। ಇತಿ ಗೀತಾ ಸಪ್ತಮೇ

ಅಧ್ಯಾಯೇ ಚತುರ್ಥ ಶ್ಲೋಕಃ || ವಿಶ್ವ ತೈಜಸ ಪ್ರಾಜ್ಞ ತುರೀಯ ಆತ್ಮ ಅಂತರಾತ್ಮ ಪರಮಾತ್ಮ ಜ್ಞಾನಾತ್ಮ ಎಂಬ ಎಂಟು ರೂಪಗಳು. ಒಂದೊಂದು ರೂಪ ಒಂದೊಂದು ಪ್ರಕೃತಿ ಒಳಗಿದ್ದು, ಭಕ್ತರಿಗೆ ಪರಲೋಕ ಮಾರ್ಗವೆಂಬ ಸಾಧನೀರೂಪವಾದ ಮಾರ್ಗ ನಡೆಯೋದಕ್ಕೆ ಮಾರ್ಗಸಾಗದಂತೆ ಮಾಡತಕ್ಕ ಕಂಟಕರೂಪವಾದ ಪಾಪವ, ಅಹಂಮಮತಾದಿಗಳು ತ್ಯಜಿಸಿ ನಿಷ್ಕಾಮರಾದ ಭಕ್ತರಿಗೆ ಪರಿಹರಿಸುತಲಿ ಎಂದರೆ, ಅಹಂಮಮತಾದಿಗಳು, ತ್ಯಾಗಮಾಡಿ ನಿಷ್ಕಾಮರಾದ ಭಕ್ತರಾದ ಕಾಲಕ್ಕೂ, ಲಿಂಗಭಂಗವಾಗೋವರೆವಿಗೂ ತ್ರಿಗುಣಕಾರ್ಯಗಳೂ ಬಿಡೋದಿಲ್ಲ. ಅವರ ಕಡಿಯಿಂದ ಕರ್ಮಾನುಸಾರ ಪಾಪಕಾರ್ಯಗಳು ಮಾಡಸುತಾನೆ. ಅದರನ್ನ ಈ ಭಕ್ತರು, ಬಿಂಬ ಕ್ರಿಯಾ ದ್ವಾರಾ ತಾವು ಮಾಡುತ್ತೇವೆಂದು ಅನುಸಂಧಾನಯುಕ್ತರಾಗತಾರೆ. ಇಂಥಾವರುಗಳ ಪಾಪ ಪರಿಹರಿಸುತ ಸಂರಕ್ಷಣೆ ಮಾಡುತಾನೆ. ಎಂದರೆ ಎಲ್ಲಾ ಪರಿಹರಿಸತಾನೆ, ಎಂದರೆ ಆಗಲೇ ಮೋಕ್ಷ ಅಗಬೇಕಾದೀತು. ದಾವದು ಪರಿಹರಿಸತಾನೆ ಎಂದರೆ, ಜ್ಞಾನಕ್ಕೆ ಪ್ರತಿಬಂಧಕ ಪಾಪಗಳ ಮಾತ್ರ ಪರಿಹರಿಸಿ, ಉಳಿದಿದ್ದು ಭೋಗಕ್ಕೆ ಕೊಡತಾನೆ. ಈ ಭೋಗ ಎಂಬುದು ನಿಸ್ಪೃಹರಾಗಿ ದುಃಖಿಸದೇ ಈಶ್ವರಸಂಕಲ್ಪವೆಂದು ತಿಳಿದು ಭೋಗಿಸುವಂತೆ ಮಾಡೋವನಾಗತಾನೆ. ಈ ಪ್ರಕಾರ ಪಾಲಿಸುತ್ತಾ ಮತ್ತು ನೆಂಟರು ಮನಿಗೆ ಬಂದರೆ ಅವರಿಗೆ ಮರ್ಯಾದಾ, ಆಚಾರ, ಉಪಚಾರ ಲೋಗರು ನಡಿಸಿದಂತೆ, ಭಕ್ತರಿಗೆ ಆಚಾರ–ಉಪಚಾರಗಳಿಂದ ಮರ್ಯಾದಾ ಮಾಡುತಾ ಇರುತಾನೆ. ಎಡಬಿಡದೇ ಇರತಕ್ಕ ದೇಹದ ನೆರಳಿನೋಪಾದಿಯಲ್ಲಿ ರೂಪಾಂತರದಿಂದ ಸಂಗಾತಲೇ ಇದ್ದು, ವೈಕುಂಠಲೋಕಕ್ಕೆ ಪತಿಯಾದ ಗುಣಪೂರ್ಣನಾದ ನಾರಾಯಣನು, ನಿಷ್ಕಾ ಮರಾದ ತನ್ನ ಭಕ್ತರ, ಕಂಟಕಸಾಂಕೇತ ದೋಷರಹಿತ ಸಮೀಚೆನವಾದ ಮಾರ್ಗ ದಲ್ಲಿ ಎಂದರೆ, ಸರ್ವದ್ವಂದ್ವಗಳಲ್ಲಿ ಬಿಂಬಕ್ರಿಯಾ ಪ್ರತಿಬಿಂಬಕ್ರಿಯಾ ಮರಿಯದೆ ಸ್ಮರಿಸುತ್ತಾ, ಈ ಅನುಸಂಧಾನದಿಂದ ಸರ್ವಕರ್ಮಗಳ ಅರ್ಪಿಸತಕ್ಕದ್ದೇ ನಿಷ್ಕಂಟಕವಾದ ಸುಮಾರ್ಗ ಎಂಬುದು. ಇಂಥಾ ಸುಮಾರ್ಗದಲ್ಲಿ, ಜ್ಞಾನಮಾರ್ಗದಲ್ಲಿ ಮನಸ್ಸನ್ನು

ನಡಿಸುವ, ದೇಹಗತ ದುರ್ಬುದ್ಧಿಪ್ರೇರಕರಾದ ಅಸುರರ ದುರ್ಬುದ್ಧಿ ಪ್ರೇರಿಸದಂತೆ ಶಿಕ್ಷಾ ಮಾಡುವ. ಈ ಪ್ರಕಾರ ಎಂಟು ಪ್ರಕೃತಿಗಳ ಒಳಗೆ ಇದ್ದು ರಕ್ಷಿಸತಾನೆ ||೩||

(೨) ಭಾವಪ್ರಕಾಶಿಕೆ :—

"ಭೂಮಿರಾಪೋನಲೋ ವಾಯುಃ ಖಂ ಮನೋಬುದ್ಧಿರೇವಚ ।
ಅಹಂಕಾರ ಇತೀಯಂ ಮೇ ಭೀನ್ನಾಪ್ರಕೃತಿರಷ್ಟಧಾ"

— ಎಂಬ ಗೀತಾ ೭ನೆಯ ಅಧ್ಯಾಯವಾಕ್ಯದಂತೆ, ಪ್ರಕೃತಿಯು ಭೂಮಿ, ಉದಕ, ಅಗ್ನಿ, ವಾಯು, ಆಕಾಶ, ಮನಸ್ಸು, ಬುದ್ಧಿ, ಅಹಂಕಾರವೆಂದು ೮ ಪ್ರಕಾರ ಭಿನ್ನವಾಗಿರುವುದು. ಈ ಎಂಟು ಪ್ರಕೃತಿಯೊಳಗೆ, ಶ್ರೀಹರಿಯು ಎಂಟುರೂಪಗಳಿಂದ ಇದ್ದು, ಭಕ್ತರಿಗೆ ಬರುವ ಆಪತ್ತುಗಳನ್ನು ಪರಿಹರಿಸುತ್ತ, ನಿತ್ಯದಲ್ಲಿ ಇವರನ್ನು ರಕ್ಷಿಸುತ್ತಿರುವನು. ಬಂಧುಜನರಂತೆ ಕ್ಷಣ ಬಿಡದೆ, ವೈಕುಂಠ ಪತಿಯು, ತನ್ನವರನ್ನು ಯಾವ ವಿಧವಾದ ಪ್ರತಿಬಂಧಕವಿಲ್ಲದ ಸನ್ಮಾರ್ಗದಲ್ಲಿ ಪ್ರೇರಿಸುತ್ತ ಉದ್ಧರಿಸುವನು. ಇಂತಹ ಮಾರ್ಗವು ದುರ್ಜನರಿಗೆ ದೊರಕುವುದಿಲ್ಲ. ||೩||

(೩) ಭಾವದರ್ಪಣಟೀಕಾ :

'ಏಂಟು ಪ್ರಕೃತೀತಿ' ಉಕ್ತಂಚ ಭಗವದ್ಗೀತಾಯಾಂ :—

"ಭೂಮಿರಾಪೋನಲೋ ವಾಯುಃ ಖಂ ಮನೋಬುದ್ಧಿರೇವಚ ।
ಅಹಂಕಾರ ಇತೀಯಂ ಮೇ ಭೀನ್ನಾಪ್ರಕೃತಿರಷ್ಟಧಾ" ||೩||

(೪) ಶ್ರೀವ್ಯಾಸದಾಸಸಿದ್ಧಾಂತ ಕೌಮುದೀ (ಸಂಸ್ಕೃತಮೂಲ) :—

"ಎಂಟು ಪ್ರಕೃತಿ" । — ಇತೀ || "ಭೂಮಿ ರಾಪೋನಲೋ ವಾಯುಃ ಖಂ ಮನೋಬುದ್ಧಿತೀ ವಚ। । ಅಹಂಕಾರ ಇತೀಯಂ ಮೇ ಭಿನ್ನಾ ಪ್ರಕೃತಿರಷ್ಟಧಾ

ಇತಿ *ಗೀತಾಯಾಮ್* || "ಪ್ರಕೃತಿಷ್ವಸಗಃ ಶ್ರೀಶಃ ವಿಶ್ವಾದ್ಯಾತ್ಮೇತೀ ವೈಭವೇ ''। ನೆಂಟ –ಸ್ನೇಹೀ. ಎಡಬಿಡದೆ – ಸಹೈವ ||೫||

**ಕನ್ನಡಾರ್ಥ :–**

ಪ್ರಕೃತಿಯು "ಭೂಮಿ – ಜಲ – ಅಗ್ನಿ – ವಾಯು – ಆಕಾಶ – ಮನಸ್ಸು – ಬುದ್ಧಿ – ಅಹಂಕಾರ'' ಎಂದು ಎಂಟುವಿಧ. ಇದು **ಗೀತಾವಚನವು**. ಈ ಭಗವದ್ವಚನದಂತೆ, ದಾಸಾವರ್ಯರು "ಎಂಟು ವಿಧ ಪ್ರಕೃತಿಗಳು '' – ಎಂದು ನಿರೂಪಿಸಿರುತ್ತಾರೆ. ವೈಭವ – ಎಂಬ ಗ್ರಂಥದಲ್ಲಿ – ಎಂಟು ವಿಧಗಳಾದ ಪ್ರಕೃತಿಗಳಲ್ಲಿ ಶ್ರೀಹರಿಯು ಅಷ್ಟರೂಪಗಳಿಂದ ಇರುತ್ತಾನೆ '' ಎಂದು ನಿರೂಪಿತವಾಗಿದೆ. ನೆಂಟ ಸ್ನೇಹಿತ. ಎಡಬಿಡದೆ – ಒಡನೆಯೇ – ಸಹಿತವಾಗಿಯೇ ||೫||

**(೫) ಶ್ರೀಗುರುಹೃದಯಪ್ರಕಾಶಿಕೆ ವ್ಯಾಖ್ಯಾನ :–**

ಅಷ್ಟಾಪ್ರಕೃತಯಃ ಪ್ರೋಕ್ತಾಃ ಎಂದು ಭಾಗವತದಲ್ಲಿ ಹೇಳಿರುವಂತೆ, ಎಂಟು ಪ್ರಕೃತಿಯಲ್ಲಿರುವ ರೂಪಚಿಂತನೆ ತಿಳಿಸುತ್ತಾರೆ– ***ಎಂಟು*** ಎಂದು. ಮೂಲಪ್ರಕೃತಿ, ಮಹತ್ತತ್ತ್ವ, ಅಹಂಕಾರತತ್ತ್ವ, ಪಂಚಭೂತ ಸಹ ಎಂಟು ತತ್ತ್ವಗಳಲ್ಲಿಯೂ ಮೇಲೆ ಹೇಳಿದ ವಿಶ್ವಾದಿಎಂಟು ರೂಪಗಳಿಂದ ಇದ್ದು, ವೈಕುಂಠಪ್ರಿಯದೇವರು ಪರಮಾಪ್ತಬಂಧುವಿನಂತೆ ತನ್ನ ಭಕ್ತರುಗಳನ್ನು ಎಡೆಬಿಡದೆ ಅಂದರೆ, ಸಮೀಪವನ್ನು ಬಿಡದೆ, ಕಂಟಕವೆಂಬ ದುರಿತಗಳನ್ನು ಪರಿಹರಿಸುತ್ತಾ ಸದಾ ರಕ್ಷಿಸುವನು. ದುರ್ಜನರ ಬಡಿವಾ ಎಂದರೆ ಜೀವರ ಯೋಗ್ಯತಾನುಸಾರ ದುಃಖಸ್ವರೂಪ ಮಿಶ್ರಸ್ವರೂಪವುಳ್ಳ ಜೀವರಿಗೆ ಸಾಧನ ಮಾಡಿಸಿ, ಅವರವರ ಗತಿಗೆ ಸೇರಿಸುವನೆಂದದರ್ಥ.

ಏಷ ನಿಷ್ಕಂಟಕಃ ಪಂಥಾಃ ಯತ್ರ ಸಂಪೂಜ್ಯತೇ ಹರಿಃ ಎಂಬುದರ ಅರ್ಥ ವಿವರಿಸಲ್ಪಟ್ಟಿತು ||೫||

## ಸರ್ವವ್ಯಾಖ್ಯಾನಸಾರ ಸಂಗ್ರಹ

ಪ್ರಕೃತಿಯ ಅಂಗಭಾಗಗಳಾದ ಎಂಟು ತತ್ತ್ವಗಳಲ್ಲಿ ಮೂಲರೂಪೀ ಶ್ರೀಮನ್ನಾರಾಯಣನು ವಿಶ್ವಾದಿ ಎಂಟುರೂಪಗಳಿಂದ ವಿದ್ಯಮಾನನಾಗಿದ್ದು, ತನ್ನ ಭಕುತರ ದುರಿತಪರಿಹಾರಕನಾಗಿ, ಅವರನ್ನು ಎಡಬಿಡದೆ ಆಪದ್ಬಾಂಧವನಾಗಿ ಸಂರಕ್ಷಿಸುತ್ತಿರುವನು ಎಂದು ತಿಳಿಸುತ್ತಾರೆ. – ಎಂಟು ಪ್ರಕೃತಿಗಳೊಳಗೆ – ಎಂಬ ಪ್ರಸಕ್ತಸಂಧಿಗತ ಜನೆಯ ಈ ಪದ್ಯದಿಂದ.

೧, ಮೂಲಪ್ರಕೃತಿಯು ಜಗತ್ಸೃಷ್ಟಿಗೆ ಉಪಾದಾನಕಾರಣವಾಗಿದೆ. ಪ್ರಕೃತಿಯ ಸಹಜಧರ್ಮಗಳಾದ ಸತ್ವ, ರಜ ಮತ್ತು ತಮೋಗುಣಗಳೆಂಬ ಗುಣತ್ರಯಗಳ ವೈಷಮ್ಯದಿಂದ (ಗುಣ ಸಮ್ಮೇಳನ) ಸೃಷ್ಟ್ಯಾದ್ಯಷ್ಟಕರ್ತನಾದ ಸರ್ವೇಶನು ಜಗತ್ತನ್ನು ಸೃಷ್ಟಿಸುವನು. ಇಂತಹ ಪ್ರಕೃತಿಯ ಅಂಗಭಾಗಗಳು ಪ್ರಮುಖವಾಗಿ ಎಂಟುವಿಧಗಳಾಗಿವೆ:–

| | | |
|---|---|---|
| ೧. | ಮೂಲಪ್ರಕೃತಿ (ಅವ್ಯಕ್ತತತ್ತ್ವ) | ೧ |
| ೨. | ಮಹತ್ತತ್ತ್ವ | ೧ |
| ೩. | ಅಹಂಕಾರತತ್ತ್ವ | ೧ |
| ೪. | ಪೃಥಿವ್ಯಾದಿ ಭೂತಪಂಚಕಗಳು | ೫ |
| | ಒಟ್ಟು | ೮ ಭಾಗಗಳು |

ಪ್ರಮಾಣ :–

(೧) "ಅಷ್ಟಾಪ್ರಕೃತಯಃ ಪ್ರೋಕ್ತಾಃ –ಭಾಗವತೋಕ್ತಿ

(೨) "ಭೂಮಿ ರಾಪೋನಲೋ ವಾಯುಃ ಖಂ ಮನೋ ಬುದ್ಧಿರೇವಚ
ಅಹಂಕಾರ ಇತೀಯಂ ಮೇ ಭಿನ್ನಾಪ್ರಕೃತಿರಷ್ಟಧಾ। ।

*– ಶ್ರೀ ಭಗವದ್ಗೀತಾ – ಅಧ್ಯಾಯ ೭. ಶ್ಲೋಕ ೪*

**ವಿಶೇಷವಿಚಾರ :—**

(೧) ಹಿಂದಿನ ೪ನೆಯ ಪದ್ಯದಲ್ಲಿ ವಿಶ್ವಾದಿಅಷ್ಟರೂಪಗಳನ್ನು ಒಂಭತ್ತರಿಂದ ಗುಣಿಸಲು ಎಂದು ಹೇಳಿರುತ್ತಾರೆ. ಅಲ್ಲಿ 9 ಅಧಿಷ್ಠಾನಗಳಲ್ಲಿ ಅವ್ಯಕ್ತ ತತ್ತ್ವ. ಮಹತ್ತತ್ತ್ವ. ಅಹಂಕಾರ ತತ್ತ್ವ, ಮನಸತ್ತ್ವ ಮತ್ತು ಪಂಚಭೂತಗಳು ಎಂದು ೯ ಭಾಗಗಳನ್ನು ವಿವರಿಸಲಾಗಿದೆ. ಪ್ರಸಕ್ತ ಪದ್ಯದಲ್ಲಿ ಪ್ರಕೃತಿಯ ೮ ಭಾಗಗಳನ್ನು ಮಾತ್ರ ಹೇಳಿರುತ್ತಾರೆ. ಅಹಂಕಾರತತ್ತ್ವವು ವೈಕಾರಿಕ, ತೈಜಸ ಮತ್ತು ತಾಮಸಾಹಂಕಾರಗಳೆಂದು ತ್ರಿವಿಧ. ಇವುಗಳಲ್ಲಿ ವೈಕಾರಿಕ ಅಹಂಕಾರದಿಂದ ಮನಸ್ಸಿನ ಉತ್ಪತ್ತಿ. ಈ ಕಾರಣದಿಂದ ಮನಸ್ಸತ್ತತ್ವವು ಅಂಹಕಾರ ತತ್ತ್ವದಲ್ಲಿ ಸಮಾವೇಶವಾಗಿರುವ ಪ್ರಯುಕ್ತ ಎರಡನ್ನು ಮಾತ್ರ ಪರಿಗಣಿಸಲಾಗಿದೆ.

(೨) ಶ್ರೀಮದ್ಭಗವದ್ಗೀತೆಯಲ್ಲಿ ಶ್ರೀ ಕೃಷ್ಣನು ಅರ್ಜುನನಿಗೆ ಪ್ರಕೃತಿಯ ವಿವರಗಳನ್ನು ನಿರೂಪಿಸುತ್ತಾ. ಭೂಮಿ, ಆಪ್, ಅನಲ, ವಾಯು, ಖಂ (ಆಕಾಶ), ಮನಸ್ಸು, ಬುದ್ಧಿ ಮತ್ತು ಅಹಂಕಾರ ಎಂದು ಎಂಟು ಭಾಗಗಳನ್ನು ಹೇಳಿರುತ್ತಾನೆ. ಬುದ್ಧಿ ತತ್ತ್ವವು, ಅವ್ಯಕ್ತತತ್ತ್ವದಿಂದ ಜನ್ಯವಾದ ಮಹತತ್ತ್ವದ ಪ್ರಧಾನಾಂಶವಾಗಿದೆ. ಅಹಂಕಾರ ತತ್ತ್ವದಲ್ಲಿ ಮಸ್ಸತ್ತ್ವವು ಪ್ರಧಾನಾಂಶ. ತೈಜಸಾಹಂಕಾರದಿಂದ ದಶೇಂದ್ರಿಯಗಳು ಮತ್ತು ತಾಮಸಾಹಂಕಾರದಿಂದ ಪಂಚಭೂತಗಳು ಮತ್ತು ತನ್ಮಾತ್ರಗಳು ಉತ್ಪತ್ತಿ. ಹೀಗೆ ಚತುರ್ವಿಂಶಂತಿತತ್ತ್ವಗಳ ಉತ್ಪತ್ತಿಕ್ರಮ ಇರುವುದರಿಂದ, ಭೂಮ್ಯಾದಿ ಭೂತಪಂಚಕಗಳ ಜೊತೆಗೆ, ಮನಸ್ಸು, ಬುದ್ಧಿ ಮತ್ತು ಅಹಂಕಾರತತ್ತ್ವಗಳನ್ನು ಶ್ರೀ ಕೃಷ್ಣನು ವಿವರಿಸುತ್ತಾನೆ.

೨. ಮೂಲನಾರಾಯಣನಿಂದ ಹೊರಟ, ವಿಶ್ವ, ತೈಜಸ, ಪ್ರಾಜ್ಞ, ತುರ್ಯ, ಆತ್ಮ, ಅಂತರಾತ್ಮ, ಪರಮಾತ್ಮ ಮತ್ತು ಜ್ಞಾನಾತ್ಮ ಎಂಬ ಎಂಟುರೂಪಗಳಿಂದ ಶ್ರೀಪರಮಾತ್ಮನು ಪೂರ್ವೋಕ್ತ ಪ್ರಕೃತಿಯ ಅಂಗಗಳಾದ ಅಷ್ಟಾಧಿಷ್ಠಾನಗಳಲ್ಲಿ

ವಿದ್ಯಾಮಾನನಾಗಿದ್ದಾನೆ. ನಮ್ಮ ದೇಹ ಪಾಂಚಭೌತಿಕಶರೀರವು. ಪ್ರಕೃತಿಸಂಬಂಧವಾದ ಈ ಸ್ಥೂಲಶರೀರದಲ್ಲಿ ಪೂರ್ವೋಕ್ತ ಮೂಲಪ್ರಕೃತಿಯ ಅಷ್ಟಅಂಗಭಾಗಗಳು ಹಾಸುಹೊಕ್ಕಾಗಿವೆ. ವಿಶ್ವಾದಿರೂಪಗಳಿಂದ ಶ್ರೀಮನ್ನಾರಾಯಣನು, ತನ್ನನ್ನು ಸದಾ ಭಜಿಸುತ್ತಿರುವ ಅಂತರಂಗಭಕ್ತರಿಗೆ ಕರ್ಮವಶದಂದಲಾಗಲೀ. ದೈತ್ಯರ ಆವೇಶದಿಂದುಂಟಾದ ಅಜ್ಞಾನದಿಂದಾಗಲೀ, ಆಗಿಂದಾಗ್ಯೆ ಒದಗುತ್ತಿರುವ ಪಾಪಗಳನ್ನು (ಕಳಂಕವ) ಪರಿಹರಿಸುತ್ತಿರುವನು. ಹೀಗೆ ಕಟಂಕಪರಿಹಾರದಿಂದ, ಅವರನ್ನು ಶುದ್ಧಗೊಳಿಸಿ, ಅವರ ಅಂತಃಕರಣದಲ್ಲಿ ಸನ್ನಿಹಿತನಾಗಿದ್ದು. ಅವರನ್ನು ಪ್ರತಿನಿತ್ಯದಲ್ಲೂ ಸಂರಕ್ಷಿಸುತ್ತಿರುವನು.

೩. **ಪ್ರತಿದಿನದಿ ಕಂಟಕವ ಪರಿಹರಿಸುತಲಿ ಪಾಲಿಸುವ ಆ ಪರಮ ಕರುಣಾಳು** ಭಕ್ತರಪಾಲಿಗೆ ಆಪ್ತಬಂಧುವಾಗಿದ್ದಾನೆ. ತಂದೆ, ತಾಯಿ ಇತ್ಯಾದಿ ನಮಗೆ ನಿಮಿತ್ತ ಬಾಂಧವರು. ಅವರಿಂದ ನಿತ್ಯರಕ್ಷಣೆ ದೊರೆಯುವುದಿಲ್ಲ. ದುರಿತಪರಿಹಾರವೂ ಆಗುವುದಿಲ್ಲ. ಆದರೆ ಶ್ರೀಪರಮಾತ್ಮನು ಅನಿಮಿತ್ತಬಂಧುವು. ಇದರಿಂದ **ನೆಂಟನೆಂದದಿ** ಎಂದಿದ್ದಾರೆ. ಸರ್ವಜೀವರೂ ಪರಮಾತ್ಮ ಪ್ರತಿಬಿಂಬಭೂತರು. ಸರ್ವರ ಬಿಂಬನಾದ ಶ್ರೀಹರಿಯು, ತನ್ನ ಪ್ರತಿಬಿಂಬಸದೃಶರಾದ ಜೀವರನ್ನು ಎಡಬಿಡದೆ ಬೆಂಬಲನಾಗಿ ಇರುವನು. ಈ ಜೀವೇಶ ಸಂಬಂಧ ಅನಾದಿನಿತ್ಯವಾದದ್ದು. ಇದರಿಂದ ಜೀವರನ್ನು **ಎಡಬಿಡದ ಐಕಾತ್ಮನು ಬಿಂಬರೂಪೀ ಶ್ರೀ ಹರಿಯು!**

೪. ವೈಕುಂಠ, ಅನಂತಾಸನ ಮತ್ತು ಶ್ವೇತದ್ವೀಪ ಎಂದು ಮುಕ್ತಿಸ್ಥಾನಗಳು ತ್ರಿವಿಧ. ಈ ಮೋಕ್ಷಧಾಮತ್ರಯಂಗಳಲ್ಲಿ ವೈಕುಂಠಾಧಿಪತಿಯಾದ ಶ್ರೀರಮಣನು ನಿಜಭಕ್ತರ ಸತ್ಸಾಧನೆಗೆ ಕಂಟಕಪ್ರಾಯವಾದ ಸಮಸ್ತದುರಿತರಾಶಿಗಳನ್ನು ತನ್ನ ಕರುಣಾಕಟಾಕ್ಷವೀಕ್ಷಣದಿಂದ ಪರಿಹರಿಸಿ. ಅವರ ಸಾಧನಾಪಥವನ್ನು ನಿಷ್ಕಂಟಕವನ್ನಾಗಿಸಿ, ಸುಮಾರ್ಗದಲ್ಲಿ ನಡೆಸುವನು. **ಹೀಗೆ ತನ್ನವರ ನಿಷ್ಕಂಟಕ ಸುಮಾರ್ಗದಲ್ಲಿ**

ನಡೆಸುವ ಆ ನಿಷ್ಕಂಟಕ ದಿವ್ಯಮಂಗಳವಿಗ್ರಹನು, ತನ್ನ ಭಕ್ತರಿಗೆ ಜ್ಞಾನಾದಿ ದೈವೀ ಸಂಪತ್ತನ್ನು ಅನುಗ್ರಹಿಸಿ, ವೈಕುಂಠಾದಿ ಮುಕ್ತಿಧಾಮಗಳಲ್ಲಿಟ್ಟು, ಮೋಕ್ಷಾನಂದ ವನ್ನು ಕೊಟ್ಟು ಸಂರಕ್ಷಿಸುವವನು. ಸತ್ಸಾಧನೆಗೆ ಪ್ರತಿಬಂಧಕರಾದ ದೈತ್ಯರ ದುಷ್ಟ ಶಕ್ತಿಗಳನ್ನು ಶಿಕ್ಷಿಸುವನು ||೫||

## ಪದ್ಯ ೬

ಮೂಲ:—

ಸ್ವರಮಣನು ಶಕ್ತ್ಯಾದಿರೂಪದಿ
ಕರಣಮಾನಿಗಳೊಳಗೆ ನೆಲೆಸಿ
ದ್ದರವಿದೂರನು ಸ್ಥೂಲವಿಷಯಗಳುಂಡುಣಿಪ ನಿತ್ಯ
ಅರಿಯದೆಲೆ ನಾನುಂಬೆನೆಂಬುವ ನಿಶ್ಚಯ
ಮರಳಿ ಮರಳಿ ಭವಾಟಿಯ ಸಂಚರಿಸುತ ಬಳಲುವನು ||೬||

ಅವತರಣಿಕೆ :—

ಶಕ್ತ್ಯಾದಿಪುರುಷಾಂತ ದ್ವಾದಶ ಶಕ್ತಿರೂಪನಾಗಿದ್ದು, ಸ್ವಾಖ್ಯರಸಭೋಕ್ತನಾದ ಸ್ವರಮಣನು ಮನವೇ ಮೊದಲಾದ ೧೨ ಇಂದ್ರಿಯ ಹಾಗೂ ಆಯಾಯಾ ಕರಣಾಭಿಮಾನಿಗಳಲ್ಲಿ ತಾನೇ ಇದ್ದು, ವಿಶ್ವನಾಮಕನಾಗಿ **ಸ್ಥೂಲಭುಕ್** ಎಂದೆನಿಸಿ. ಕರಣಗಳ ದ್ವಾರಾ, ತದಭಿಮಾನಿದೇವತೆಗಳ ದ್ವಾರಾ ವಿಷಯಾಂತರ್ಗತ ಸ್ವಾಖ್ಯರಸಗಳನ್ನು ಸ್ವೀಕರಿಸಿ, ತದ್ವಾರಾ ಬಿಂಬಕ್ರಿಯಾ ಮೂಲಕ ಜೀವರ ಅನುಭವಕ್ಕೆ ತಂದೀಯುವನು. ಈ ಮರ್ಮವನ್ನರಿಯದೆ, ನಾನೇ ಸರ್ವಕರ್ತ ಎಂಬ ಹೀನಮಾನವನು ನರಕಾದ್ಯನರ್ಥಗಳಿಂದ ಪೀಡಿತನಾಗಿ, ಘೋರಸಂಸಾರವೆಂಬ ಗೊಂಡಾರಣ್ಯದಲ್ಲಿ ಪುನಃ ಪುನಃ ಜನ್ಮಗಳನ್ನು ಎತ್ತುತ್ತಾ, ಬಳಲುವನು ಎಂದು ಸರ್ವೇಶನ ಸರ್ವಕರ್ತೃತ್ವ ಸಂಬಂಧವಾದ ಜ್ಞಾನಾನುಸಂಧಾನಕ್ರಮವನ್ನು ತಿಳಿಸುತ್ತಾರೆ — ಸ್ವರಮಣನು — ಎಂಬ ಪ್ರಸಕ್ತ ಸಂಧಿಗತ ೬ ನೆಯ ಈ ಪದ್ಯದಿಂದ ||೬||

ಪ್ರತಿಪದಾರ್ಥ :—

ಸ್ವರಮಣನು = ತನ್ನ ಸ್ವಾಖ್ಯಗಳಾದ, ತನ್ನಿಂದ ಅಭಿನ್ನಗಳಾದ, ಸ್ಥೂಲವಿಷಯಗತ ಭಗವದ್ರೂಪಗಳಲ್ಲಿ ಕ್ರೀಡಿಸುವ ಆಪ್ತಕಾಮನಾದ ಶ್ರೀ ಪರಮಾತ್ಮನು, **ಶಕ್ತ್ಯಾದಿ**

**ರೂಪದಿ**= ಶಕ್ತಿ, ಪ್ರತಿಷ್ಠಾ, ಸಂವಿತ್, ಸ್ಫೂರ್ತಿ, ಪ್ರಕೃತಿ, ಕಳಾ, ವಿದ್ಯಾ, ಮತಿ, ನೀತಿ, ಮಾಯಾ, ಕಾಲ ಮತ್ತು ಪುರುಷ–ಎಂಬ ಈ ೧೨ ಶಕ್ತ್ಯಾದ್ಯಧಿಷ್ಠತನಾಗಿ, **ಕರಣಮಾನಿಗಳೊಳಗೆ** = ಶಕ್ತ್ಯಾದಿ ೧೨ ಇಂದ್ರಿಯಾಭಿಮಾನಿದೇವತೆಗಳಲ್ಲಿ, **ನೆಲೆಸಿ** = ಬಿಂಬರೂಪದಿಂದ ಅಂತರ್ಯಾಮಿಯಾಗಿದ್ದು, **ಅವಿದೂರನು**= ದೋಷ=ದೂರನಾದ ಶ್ರೀಪರಮಾತ್ಮನು, ನಿತ್ಯ= ಪ್ರತಿಕ್ಷಣದಲ್ಲಿಯೂ, **ವಿಷಯಗಳನು**= ಸ್ಥೂಲವಿಷಯಗಳನ್ನು, **ಉಂಡು**=ಆ ವಿಷಯಗತ ತನ್ನಿಂದ ಅಭಿನ್ನವಾದ ಭಗವದ್ರೂಪಗಳಲ್ಲಿ ರಮಣಮಾಡುತ್ತಾ, **ಸ್ಥೂಲಭುಕ್** ಎಂಬ ಹೆಸರಿನಿಂದ ಬಿಂಬಕ್ರಿಯಾದ್ವಾರಾ ಸ್ವಾಖ್ಯರಸ ಸ್ವೀಕರಿಸಿ , **ಉಣಿಪ** =ಕರಣಾಭಿಮಾನಿದೇವತೆಗಳ ದ್ವಾರಾ ಸ್ಥೂಲದೇಹದಲ್ಲಿ ಪ್ರಕಾಶತೋವ್ಯಾಪ್ತನಾದ ಜೀವನ ಅನುಭವಕ್ಕೆ ತಂದೀಯುವನು. ಬಿಂಬ ಸ್ವೀಕರಿಸಿದರೆ, ಪ್ರತಿಬಿಂಬಭೂತನಾದ ಜೀವನಿಗೆ ಅದರಿಂದ ವಿಷಯಾನುಭವ ಪ್ರಾಪ್ತಿ. **ಅರಿಯದಲೆ** =ಸರ್ವೇಶನ ಸರ್ವಕರ್ತೃತ್ವ ವಿಚಾರವೆಂಬ ಈ ಮರ್ಮವನ್ನು ತಿಳಿಯದೇ, **ನಾನು ಉಂಬುವೆನೆಂಬುವ**= ಮಮ ಅಹಂಕಾರಗಳಿಂದ ಗ್ರಸ್ತನಾಗಿ, ಸರ್ವ ಕರ್ತೃತ್ವವನ್ನು ತನ್ನಲ್ಲಿಯೇ ಆರೋಪಿಸಿಕೊಂಡು, ಅಹಂಕರ್ತೃತ್ವಾಭಿ ಮಾನದಿಂದ. ನಾನೇ ಸುಖಿ ನಾನೇ ದುಃಖೀ ಎಂಬ ಆತ್ಮಪ್ರತ್ಯಯರೂಪವಾದ ಅಜ್ಞಾನದಿಂದ, ನಾನೇ ಸಮಸ್ತವಿಷಯಗಳನ್ನು ಸ್ವತಂತ್ರನಾಗಿ ಭೋಗಿಸುತ್ತಿದ್ದೇನೆ ಎಂಬ ಮಾನವನು, **ನಿರಯಗಳನು**= ನರಕಾದ್ಯನರ್ಥಗಳನ್ನು, **ಉಂಬುವನು**= ಅನುಭವಿಸುತ್ತಾನೆ . ಅಂದರೆ, ನರಕಭಾಜನನಾಗುವನು. **ನಿಶ್ಚಯ**=ಇದರಲ್ಲಿ ಸಂಶಯವೇ ಇಲ್ಲವೆಂದು ಉದ್ಘೋಷಿಸುತ್ತಾರೆ, ತತ್ತ್ವಮರ್ಮವರಿತ ದಾಸರಾಯರು. **ಮರಳಿ ಮರಳಿ**= ನರಕಾನುಭವನಂತರ, ಅಂತಹವನು ಪುನಃ ಪುನಃ ಜನ್ಮಗಳನ್ನು ಹೊಂದಿ, **ಭವಾಟವಿಯ** = ಸುಖದುಃಖಾತ್ಮಕವಾದ ಜನನಮರಣಾಖ್ಯವಾದ ಸಂಸಾರವೆಂಬ ಈ ಮಹಾ ಅರಣ್ಯದಲ್ಲಿ, **ಸಂಚರಿಸಿ**= ನಾನಾಕ್ಲೇಶಗಳಿಂದ ಪೀಡಿತನಾಗಿ ಅಲೆದಾಡುತ್ತಾ, **ಬಳಲುವನು**= ಆಯಾಸದಿಂದ ನಿರ್ವಿಣ್ಣನಾಗಿ ಶ್ರಾಂತನಾಗುವನು||೬||

## ವ್ಯಾಖ್ಯಾನಗಳು :—

### (೧) ಶ್ರೀ ಸಂಕರ್ಷಣಒಡೆಯರ ವ್ಯಾಖ್ಯಾನ

ಶಕ್ತ್ಯಾದಿರೂಪಗಳ ಕಾರ್ಯ, ಭವಾಟವಿಯ ಸಂಚರಿಸತಕ್ಕವ ಇಂಥಾವ ಎಂತ ಹೇಳುತಾರೆ.

ದೋಷದೂರನಾದ ಪರಮಾತ್ಮ ಶಕ್ತಿ—ಪ್ರತಿಷ್ಠಾದಿ ದ್ವಾದಶರೂಪಗಳೊಳಗೆ, ಹಿಂದೆ ಸಂಧ್ಯಂತರದಲ್ಲಿ ಹೇಳಿದ ಪ್ರಕಾರ ಈ ರೂಪಗಳಿಂದ, ಇಂದ್ರಿಯಾಭಿಮಾನಿಗಳಾದ ಸೂರ್ಯ—ಚಂದ್ರಾದಿ ಏಕಾದಶ ದೇವತೆಗಳೊಳಗೆ ಹನ್ನೊಂದು ರೂಪವೂ, ದೇಹಾಕಾರದಂತೆ ಪುರುಷರೂಪ ಒಂದು, ಅಂತೂ ಹನ್ನೆರಡುರೂಪದಿ ಆವಾಸವಾಗಿ ಇದ್ದು, ಜೀವರು ಸ್ಥೂಲದೇಹದಿಂದ ಭೋಗಮಾಡತಕ್ಕ ಪಾಕೃತ ಸ್ಥೂಲವಿಷಯಗಳಲ್ಲಿ ವಿದ್ಯಮಾನ ಗಳಾದ, ತನ್ನ ಸ್ವಾಖ್ಯಗಳಾದ, ತನಗೆ ಅಭಿನ್ನಗಳಾದ ಸ್ಥೂಲಶಬ್ದವಾಚ್ಯಗಳಾದ ವಿಷಯಗಳಲ್ಲಿ ಸಂಚಾರಮಾಡುತ್ತಾ, ಏತಾದೃಶವಾದ ತನ್ನ ಸ್ವಾಖ್ಯಗಳ ದೇಹೇಂದ್ರಿಯಾ ದಿಗತರೂಪಗಳಿಂದ ಬಿಂಬಕ್ರಿಯಾದ್ವಾರಾ ಉಂಡು, ದೇವತೆಗಳ ದ್ವಾರಾ, ದೇಹ ದ್ವಾರಾ ಜೀವಗೆ ಪ್ರಾಕೃತ ವಿಷಯಗಳ ಉಣಿಸತಾನೆ. ಜೀವ ಚಿದಾನಂದನಾದ್ದರಿಂದ ಅವಗೂ ಪ್ರಾಕೃತಭೋಗ ಅಂಗೀಕರಿಸಲಾಗದು. ಭೋಗ ಎಂಥಾದ್ದದೆಂದರೆ, ಜೀವ ಸ್ಥೂಲದಲ್ಲಿ ಅಂದರೆ ಸ್ಥೂಲದೇಹದಲ್ಲಿ ಸರ್ವೇಂದ್ರಿಯ ಸಹಿತನಾಗಿ, ಆಯಾ ಇಂದ್ರಿಯಗಳಲ್ಲಿ ಆಯಾ ತನ್ನ ಇಂದ್ರಿಯಗಳಿಂದ ಪ್ರಕಾಶತೋವ್ಯಾಪ್ತನಾಗಿ, ಸ್ಥೂಲದೇಹಕ್ಕೆ ಸಂಬಂಧಿಸಿದ ಭೋಗಗಳು ಯಾವತ್ತೂ ವ್ಯಾಪ್ತವಾದ ಇಂದ್ರಿಯಗಳಿಂದ ನೋಡುತಾ, ಅಹಂಮಮತಾದಿಂದ ವಿಶಿಷ್ಟವಾದ ಅಜ್ಞಾನದಿಂದ ಅಹಂ ಸುಖೀ, ಅಹಂ ದುಃಖೀ ಎಂಬ ಆರೋಪಿತಜ್ಞಾನದಿಂದ ಸುಖ—ದುಃಖಾದಿಗಳ ಸ್ಥೂಲವಿಷಯಗಳ ಭೋಗ ಮಾಡತಾ ಬರತಾನೆ. ಈ ಅಭಿಮಾನ ಸಾಧನಾನುಸಾರ ಬಿಡುತ್ತಾ ಲಿಂಗಭಂಗಾನಂತರ ಪೂರ್ಣವಾಗಿ ಬಿಡೋದಾಗತದೆ. ಈ ಪ್ರಕಾರ ಜೀವರಿಗೆ

ಉಣಸಥಾನೆ. ಪ್ರತಿದಿನದಲ್ಲೂ ಬಿಂಬ–ಪ್ರತಿಬಿಂಬಕ್ರಿಯಾದಿಗಳು ನಡೆಯುತ್ತಲೇ ಇರುತ್ತವೆ. ತಾನು ಉಣತಕ್ಕದ್ದು ಇಂಥಾದ್ದು, ಪರಮಾತ್ಮ ಉಣತಕ್ಕದ್ದು ಇಂಥಾದ್ದು ಎಂತ ಅರಿಯದಲೇ ಸರ್ವವೂ ನಾನೇ ಉಣತೇನೆ– ಎಂತ ಅಜ್ಞಾನದಿಂದ ಅನತಕ್ಕವ, ಅದರಿಂದ ಸರ್ವಸತ್ಕರ್ಮಗಳು ದುಷ್ಕರ್ಮಗಳು ಪಾಪಗಳಾಗಿ ಪಾಪಫಲಗಳೇ ಉಂಬೋವನಾಗತಾನೆ ಮತ್ತು ಪರಲೋಕದಲ್ಲಿ ನಾನಾವಿಧಗಳಿಂದ ನರಕಗಳು ಭೋಜನ ಮಾಡುವನು. ನರಕಾನುಭವಾನಂತರ ಮತ್ತೂ ಮತ್ತೂ ಜನ್ಮವ ತಾಳಿ, ಸುಖ–ದುಃಖಾತ್ಮಕ ಸಂಸಾರವೆಂಬ ಅಡವಿಯಲ್ಲಿ ಸಂಚಾರಮಾಡಿ, ನಾನಾ ವಿಧವಾದ ಕ್ಲೇಶಗಳಿಂದ ಸಹಿತನಾಗಿ ಭ್ರಾಂತನಾಗುವನು ಸಂಶಯವಿಲ್ಲ – ಎಂದು ತಾತ್ಪರ್ಯ.

**ಶಕ್ತ್ಯಾದಿದ್ವಾದಶರೂಪಗಳನ್ನು ಈ ಪ್ರಕಾರ ತಿಳಿಯಬೇಕು :–**

| | ದ್ವಾದಶರೂಪಗಳು | ಇಂದ್ರಿಯಗಳು | ಅಭಿಮಾನಿದೇವತೆಗಳು |
|---|---|---|---|
| 1 | ಶಕ್ತಿ | ಮನಸ್ಸು | ಗರುಡ ಇಂದ್ರಾದಿದೇವತೆಗಳು |
| 2 | ಪ್ರತಿಷ್ಠಾ | ಶ್ರವಣ | ಚಂದ್ರ |
| 3 | ಸಂವಿತ್ | ನೇತ್ರ | ಸೂರ್ಯ |
| 4 | ಸ್ಫೂರ್ತಿ | ತ್ವಕ್ | ಅಹಂಕಾರಿಕಪ್ರಾಣ |
| 5 | ಪ್ರಕೃತಿ | ಜಿಹ್ವೆ | ವರುಣ |
| 6 | ಕಳಾ | ನಾಸಿಕಾ | ಅಶ್ವಿನೀದೇವತೆಗಳು |
| 7 | ವಿದ್ಯಾ | ವದನ | ವಹ್ನಿ |
| 8 | ಮತಿ | ಪಾಣಿ | ದಕ್ಷ |
| 9 | ನೀತಿ | ಪಾದ | ಜಯಂತ |
| 10 | ಮಾಯಾ | ಪಾಯು | ಮಿತ್ರ |
| 11 | ಕಾಲ | ಉಪಸ್ಥ | ಸ್ವಾಯಂಭುವಮನು |
| 12 | ಪುರುಷ | ಸಾಕಾರದೇಹ | ವಾಯುದೇವರು ॥೬॥ |

(೨) ಭಾವಪ್ರಕಾಶಿಕೆ :—

ದೋಷದೂರನಾದ ಶ್ರೀಪರಮಾತ್ಮನು ಸ್ವರಮಣನೆಂದು – "ಮಹಾ ಸೌಂದರ್ಯ ಯುಕ್ತೇಷು ನಿರ್ದೋಷೇಷುಚ ಸರ್ವದಾ। ರಮತೇ ಸ್ತ್ರೀ ಸ್ವರೂಪಾಣಿ ಪುಂರೂಪಾಣಿ ವಿಧಾಯಚ । । " –ಎಂಬ ಸತ್ತತ್ವರತ್ನಮಾಲಾ ಗ್ರಂಥವಚನ ರೀತ್ಯಾ, ತಾನೇ ಸುಂದರವಾದ ಸ್ತ್ರೀರೂಪಗಳನ್ನೂ ಪುರುಷರೂಪಗಳನ್ನೂ ಸ್ವೀಕರಿಸಿ ಸುಖಪಡುತ್ತಿರುವುದರಿಂದ ಸ್ವರಮಣ – ಎಂದು ಪರಮಾತ್ಮನಿಗೆ ಹೆಸರು. ಚಕ್ಷು ಶೋತ್ರೇಂದ್ರಿಯಾದಿಗಳು, ಮತ್ತು ಮನಸ್ಸು. ಹೀಗೆ ೧೧ ಇಂದ್ರಿಯಗಳಲ್ಲಿ ಶಕ್ತಿ, ಪ್ರತಿಷ್ಠಾ, ಸಂವಿತ್, ಸ್ಫೂರ್ತಿ, ಪ್ರಕೃತಿ, ಕಲಾ, ವಿದ್ಯಾ, ಮತಿ, ನಿಯತಿ, ಮಾಯಾ ಮತ್ತು ಕಾಲ ಎಂಬ ೧೧ ರೂಪಗಳಿಂದಲೂ, ದೇಹದಲ್ಲಿ ದೇಹಾಕಾರ (ಪುರುಷರೂಪ) ದಿಂದಲೂ, ಹೀಗೆ ೧೨ ರೂಪಗಳಿಂದ ಇದ್ದು, ವಿಷಯಭೋಗಗಳನ್ನು ತಾನನುಭವಿಸಿ, ಜೀವರಿಗೆ ಉಣಿಸುವನು. ಇದನ್ನರಿಯದೇ ತಾನೇ ಸ್ವತಂತ್ರದಿಂದ ಅನುಭವಿಸುವನೆಂದು ತಿಳಿದುಕೊಳ್ಳುವವನು ನಿಶ್ಚಯವಾಗಿ ನರಕಕ್ಕೆ ಹೋಗುವನು. ಅಲ್ಲದೆ, ಸಂಸಾರಾಟವಿಯಲ್ಲಿ ಅಲೆಯುತ್ತಾ ಕಷ್ಟಪಡುತ್ತಿರುವನು. ||೬||

(೨) ಭಾವದರ್ಪಣಟೀಕಾ :—

ಸ್ವರಮಣೇತಿ "ಮಹಾಸೌಂದರ್ಯ.......ವಿಧಾಯಚೇತಿ. ( ಈ ಪ್ರಮಾಣದ ಪೂರ್ಣಪಾಠವನ್ನು ಭಾವಪ್ರಕಾಶಿಕೆಯಲ್ಲಿ ಕೊಟ್ಟಿದೆ)

ಶಕ್ತ್ಯಾದಿತಿ । । "ಶಕ್ತಿಪ್ರತಿಷ್ಠಾನ ಸಂವಿಚ್ಛೇಮ್ಯುಕ್ತೇಃ ||೬||

(೪) ಶ್ರೀವ್ಯಾಸದಾಸ ಸಿದ್ಧಾಂತ ಕೌಮುದೀ (ಸಂಸ್ಕೃತಮೂಲ) :—

"ಸ್ವರರಮಣ'' ಇತಿ "ಶಕ್ತಿಪ್ರತಿಷ್ಠಾ'' ಇತ್ಯುಕ್ತೈಕಾದಶರೂಪಾದಿ ಮನ ಆದಿಗತಾನಿ'' ಮರಳಿ–ಪುನಃ ||೬||

ಕನ್ನಡಾರ್ಥ:–

೧. ಶಕ್ತಿ, ೨. ಪ್ರತಿಷ್ಠಾ ೩. ಸಂವಿತ್ ೪. ಸ್ಫೂರ್ತಿ, ೫. ಪ್ರವೃತ್ತಿ ೬. ಕಲಾ, ೭. ವಿದ್ಯಾ, ೮. ಮತಿ (ನೀತಿ), ೯. ಮಾಯಾ, ೧೦. ಕಾಲ ಮತ್ತು ೧೨ ಪುರುಷ – ಹೀಗೇ ಪರಮಾತ್ಮನ ಈ ಹನ್ನೊಂದು ರೂಪಗಳು. ಮನ ಮೊದಲಾದ ೧೧ ಇಂದ್ರಿಯಾಭಿಮಾನಿ ದೇವತೆಗಳಲ್ಲಿ ನಿಯಾಮಕವಾಗಿರುತ್ತಾರೆ'' – ಎಂಬ ತಿಳಿಯಬೇಕು. ಮರಳಿ–ತಿರುಗಿ–ಮತ್ತೆ ಮತ್ತೆ ||೬||

## ಸರ್ವವ್ಯಾಖ್ಯಾನಸಾರಸಂಗ್ರಹ

ಶಕ್ತ್ಯಾದಿ ೧೨ ರೂಪಗಳಿಂದ ಸರ್ವಚೇಷ್ಟಾಪ್ರವರ್ತಕನಾದ ಶ್ರೀಪರಮಾತ್ಮನು ಈ ಶರೀರಾದ್ಯಂತ ವ್ಯಾಪಿಸಿಕೊಂಡು, ಇಂದ್ರಿಯ ಹಾಗೂ ಇಂದ್ರಿಯಾಭಿಮಾನಿ ದೇವತೆಗಳಲ್ಲಿದ್ದು, ಸ್ಥೂಲವಿಷಯಗತಸ್ವಾಖ್ಯರಸ ಸ್ವೀಕಾರದ್ವಾರಾ, ವಿಷಾಯಾನುಭವವನ್ನು ಜೀವರಿಗೆ ಕೊಡುವನು ಎಂಬ ಪ್ರಧಾನ ತತ್ತ್ವ ರಹಸ್ಯವನ್ನು ಪ್ರಸಕ್ತಪದ್ಯದಿಂದ ತಿಳಿಸುತ್ತಾರೆ.

೧. ಶ್ರೀಪರಮಾತ್ಮನು ತನ್ನ ರೂಪಗಳಲ್ಲಿ ತಾನೇ ರಮಿಸುವನು. ಸ್ವಗತಭೇದ ವಿವರ್ಜಿತನಾದ ಆ ಸರ್ವೇಶನು ಆಪ್ತಕಾಮನು. ತನ್ನ ಆನಂದರಸದಲ್ಲಿ ಸ್ವಯಂ ವಿಹರಿಸುವನು. ಪ್ರತಿವಸ್ತುಗಳಲ್ಲಿಯೂ ಅಂತರ್ಗತವಾಗಿರುವ ಭಗವದ್ರೂಪವು ಅಭಿವ್ಯಕ್ತವಾದಾಗಲೇ, ಬಿಂಬಕ್ರಿಯೆ ನಡೆಯುವುದು. ಆಗ ಬಿಂಬನ ಪ್ರತೀಕಸದೃಶರಾದ ಜೀವರದ್ವಾರಾ ಪ್ರತಿಬಿಂಬರೂಪವಾದ ಕ್ರಿಯಾಭಿವ್ಯಕ್ತಿ. ಸರ್ವವಸ್ತುಗಳ ಭಗವದ್ರೂಪಗಳಿಗೆ ಸ್ವಾಖ್ಯವೆಂದು ಹೆಸರು. ರಸಕ್ಕೆ ರಸರೂಪನಾದ ಶ್ರೀರಮಣನು ಸ್ವಾಖ್ಯರಸ ಸ್ವೀಕರಿಸುವನು. ಇದರಿಂದ ಸ್ವರಮಣನು.

೨. ಸ್ವರಮಣನಾದ ಶಬ್ದದೇಕಪ್ರಕಾರನು ಶಕ್ತ್ಯಾದಿದ್ವಾದಶರೂಪಗಳಿಂದ ಈ ಸ್ಥೂಲಶರೀರಗತಏಕಾದಶೇಂದ್ರಿಯಗಳಲ್ಲಿ, ಇಂದ್ರಿಯಾಭಿಮಾನಿಗಳಲ್ಲಿ ವ್ಯಾಪ್ತನಾಗಿದ್ದಾನೆ. ಮನಸ್ಸು –೧, ಜ್ಞಾನೇಂದ್ರಿಯಗಳು– ೫, ಮತ್ತು ಕರ್ಮೇಂದ್ರಿಯಗಳು– ೫. ಹೀಗೆ ಈ ೧೧ ಇಂದ್ರಿಯಗಳಲ್ಲಿ ೧೧ ರೂಪಗಳಿಂದ ವಿದ್ಯಮಾನನಾಗಿದ್ದಾನೆ. ಈ ಸ್ಥೂಲಶರೀರದಲ್ಲಿ ಅಪಾದಮೌಳಿಪರ್ಯಂತ ದೇಹಾಕಾರನಾಗಿ ಪುರುಷರೂಪರಿಂದ ಶ್ರೀ ವಾಯುದೇವರಲ್ಲಿ ಬಿಂಬನಾಗಿದ್ದಾನೆ. ಅಲ್ಲಿಗೆ ಏಕದಶೇಂದ್ರಿಯಗಳಲ್ಲಿ ೧೧ ರೂಪಗಳು ಮತ್ತು ಸ್ಥೂಲಶರೀರದಲ್ಲಿ ದೇಹಾಕಾರ ಪುರುಷರೂಪ – ಹೀಗೇ ೧೨ ರೂಪಗಳಿಂದ ಶಕ್ತ್ಯಾದಿ ೧೨ ರೂಪಗಳಿಂದ ಇದ್ದು, ಇಂದ್ರಿಯವ್ಯಾಪಾರಗಳನ್ನು ದೇವತೆಗಳ ದ್ವಾರಾ ಮಾಡಿಸುತ್ತಾ, ದೇಹದಲ್ಲಿ ಕರಣಸಹಿತನಾಗಿ ಪ್ರಕಾಶತೋವ್ಯಾಪ್ತನಾಗಿರುವ ಜೀವನ ಅನುಭವಕ್ಕೆ ವಿಷಯಭೋಗಾನುಭವವನ್ನು ಕೊಡುವನು.

ಶಕ್ತ್ಯಾದಿ ದ್ವಾದಶರೂಪಗಳು, ಇಂದ್ರಿಯಗಳು, ಇಂದ್ರಿಯಾಭಿಮಾನಿದೇವತೆಗಳ ವಿವರಗಳನ್ನು ಈ ಕೆಳಗಿನ ಪಟ್ಟಿಯಲ್ಲಿ ಕೊಟ್ಟಿದೆ :–

| ಶಕ್ತಿ | ಮನಸ್ಸು | ಗರುಡ, ಇಂದ್ರಾದಿ ದೇವತೆಗಳು | ವಿಷಯಗ್ರಹಣ ಕಾರ್ಯ |
|---|---|---|---|
| ಪ್ರತಿಷ್ಠಾ | ಶ್ರವಣ (ಕಿವಿ) | ಚಂದ್ರ | ಶಬ್ದಗ್ರಹಣ ಕಾರ್ಯ |
| ಸಂವಿತ್ | ನೇತ್ರ (ಕಣ್ಣು) | ಸೂರ್ಯ | ರೂಪದರ್ಶನ |
| ಸ್ಫೂರ್ತಿ | ತ್ವಕ್ (ಚರ್ಮ) | ಅಹಂಕಾರಿಕಪ್ರಾಣ | ಸ್ಪರ್ಶಜ್ಞಾನ |
| ಪ್ರಕೃತಿ | ಜಿಹ್ವೆ (ನಾಲಿಗೆ) | ವರುಣ | ರಸಾನುಭವ |
| ಕಳಾ | ನಾಸಿಕಾ (ಮೂಗು) | ಅಶ್ವಿನೀದೇವತೆಗಳು | ಗಂಧಗ್ರಹಣಕಾರ್ಯ |
| ವಿದ್ಯಾ | ವದನ (ವಾಕ್) | ಅಗ್ನಿ | ವಾಗ್ರೂಪಕ್ರಿಯೆ |
| ಮತಿ | ಪಾಣಿ (ಕೈಗಳು) | ದಕ್ಷ | ದಾನಾದಾನಾದಿಕ್ರಿಯೆ |

| ನೀತಿ | ಪಾದ (ಕಾಲಗಳು) | ಜಯಂತ | ಗಮನಾಗಮನಕ್ರಿಯೆ |
|---|---|---|---|
| ಮಾಯಾ | ಪಾಯು | ಮಿತ್ರ | ಮಲವಿಸರ್ಜನಾ ಕಾರ್ಯ |
| ಕಾಲ | ಉಪಸ್ಥ | ಸ್ವಾಯಂಭುವಮನು | ಮೂತ್ರ, ರೇತೋ ವಿಸಜರ್ನನಾಕ್ರಿಯೆ |
| ಪುರುಷ | ದೇಹಾದ್ಯಂತ | ಶ್ರೀವಾಯುದೇವರು | ಸಮಸ್ತಶರೀರಗತ ವ್ಯಾಪಾರ |

ಇಂತು, ಸ್ವರಮಣನಾದ ಬಿಂಬರೂಪೀ ಶ್ರೀ ಹರಿಯು ಶಕ್ತ್ಯಾದಿ ದ್ವಾದಶರೂಪಗಳಿಂದ ಮನಾದಿ ಏಕಾದಶೇಂದ್ರಿಯಗಳು ಮತ್ತು ಶರೀರದಲ್ಲಿ ದೇಹಾಕಾರನಾಗಿ, ಆಯಾಯಾ ಇಂದ್ರಿಯಾಭಿಮಾನಿ ದೇವತೆಗಳಲ್ಲಿ ನೆಲೆಸಿದ್ದು, ಶರೀರಗತ ಇಂದ್ರಿಯವ್ಯಾಪಾರಗಳನ್ನು ಮಾಡಿ ಮಾಡಿಸುತ್ತಿರುವನು.

೩. ಶರೀರಗತ ಇಂದ್ರಿಯಗಳಲ್ಲಿದ್ದರೂ, ಕರಣಾಭಿಮಾನಿಗಳಲ್ಲಿ ಅಂತರ್ಗತನಾಗಿದ್ದರೂ, ಆ ಇಂದ್ರಿಯವ್ಯಾಪಾರಗಳ ಸಂಬಂಧವಾದ ಕರ್ಮಲೇಪ, ಜಡಜೀವರುಗಳಿಂದ ಅತ್ಯಂತಭಿನ್ನನಾದ ಆ ಸ್ವಾಖ್ಯರಸರೂಪಿಗೆ ಎಂದೆಂದಿಗೂ ಇಲ್ಲ. ಇದರಿಂದ ಸಮಸ್ತ ದೋಷಗಳಿಂದ ದೂರವಾಗಿರುವನು. ಈ ಕಾರಣದಿಂದ ಅರವಿದೂರನು.

೪. ಇಂತಹ ಅರವಿದೂರನಾದ ಅರವಿಂದನಾಭನು, ದೇಹಗತ ೧೧ ಇಂದ್ರಿಯಗಳಲ್ಲಿಯೂ ಆಯಾಯಾ ಇಂದ್ರಿಯಗಳ ದ್ವಾರಾ ವಿಷಯಗಳನ್ನು ಇಂದ್ರಿಯಗಳಿಗೆ ಸನ್ನಿಕರ್ಷ ಮಾಡಿಸಿ, ಶಬ್ದಗ್ರಹಣ ಇತ್ಯಾದಿ ಇಂದ್ರಿಯವ್ಯಾಪಾರ ರೂಪವಾದ ಸ್ಥೂಲವಿಷಯಗಳಲ್ಲಿ ತಾನೇ ಇದ್ದು, ತದಂತರ್ಗತ ಸ್ವಾಖ್ಯಗಳನ್ನು ತಾನೇ ಸ್ವೀಕರಿಸುವನು. ಅಂದರೆ, ವಿಷಯಾಂತರ್ಗತ ತನ್ನದೇ ಆದ ಭಗವದ್ರೂಪಗಳಲ್ಲಿ

ತಾನು ಕ್ರೀಡಿಸುವನು. ಇದರಿಂದ ಸ್ವರಮಣನ ಬಿಂಬಕ್ರಿಯಾರೂಪನಾದ ಕಾರ್ಯ ನಡೆಯುವುದು – ಬಿಂಬಕ್ರಿಯಾದ್ವಾರಾ, ಕರಣಾಭಿಮಾನಿದೇವತೆಗಳ ಮೂಲಕ ಅವನಲ್ಲಿ ಬಿಂಬನಾಗಿದ್ದು, ಇಂದ್ರಿಯಕ್ರಿಯೆಗಳನ್ನು ಮಾಡುಸುತ್ತಾ, ಶರೀರದಲ್ಲಿ ಅಪಾದಮೌಳಿಪರ್ಯಂತ ಪುರುಷರೂಪದಿಂದ ವ್ಯಾಪಿಸಿಕೊಂಡಿದ್ದು, ದೇಹದಲ್ಲಿ ಪ್ರಕಾಶತೋವ್ಯಾಪ್ತನಾಗಿರುವ ಜೀವನಿಗೆ ಆಯಾಯಾ ಇಂದ್ರಿಯಗೋಳಕಗಳ ದ್ವಾರಾ ವಿಷಯಗಳ ಅನುಭವವನ್ನು ಪ್ರತಿಬಿಂಬಕ್ರಿಯಾದ್ವಾರಾ ತಂದೀಯುವನು. ಬಿಂಬಕ್ರಿಯಾಭಿವ್ಯಕ್ತಿಯಿಂದ ಪ್ರತಿಬಿಂಬಸದೃಶರಾದ ಜೀವರ ಕ್ರಿಯೆ. ಇದನ್ನೇ ದಾಸಾರಾಯರು ಸ್ಥೂಲವಿಷಯಗಳ ***ಉಂಡು ಉಣಿಪನಿತ್ಯ*** –ಎಂದಿದ್ದಾರೆ.

೫. ಈ ಜ್ಞಾನಾನುಸಂಧಾನವಿಲ್ಲದೇ, ಸರ್ವಕ್ಕೂ ನಾನೇ ಕರ್ತೃ, ಅಹಂ ಸುಖೀ, ಅಹಂ ಭೋಗೀ ನಾನು–ನನ್ನಿಂದ–ನನ್ನ ಎಂದು ಅಹಂಮಮಕಾರಗಳಿಂದ ಗ್ರಸ್ತನಾದ ಹೀನಮಾನವನು ಇಹದಲ್ಲಿ ಪಾಪಭಾಜನನಾಗುವನು. ಅಲ್ಲದೆ ಮರಣಾನಂತರ ನರಕಾದ್ಯನರ್ಥಗಳನ್ನು ಅನುಭವಿಸುವನು (***ನಿರಯಗಳುಂಬುವ***). ಇದರಲ್ಲಿ ಸಂಶಯವೇ ಇಲ್ಲ. ಇದು ನಿತ್ಯನಿಶ್ಚಯ ಎಂದು ಉದ್ಘೋಷಿಸುತ್ತಾರೆ, ಕರ್ಮದ ಮರ್ಮವರಿತ ಧರ್ಮಾವಲಂಬಿಗಳಾದ ದಾಸರಾಯರು.

೬. ಅಂತಹ ಹೀನಮಾನವನು ನರಕಯಾತನಾನುಭವಾನಂತರ, ಪುನಃ ಪುನಃ ಜನ್ಮಗಳನ್ನು ಹೊಂದಿ, ಜನನ ಮರಣಾಖ್ಯವಾದ ಸಂಸಾರವೆಂಬ ಸಾಂದ್ರಾರಣ್ಯದಲ್ಲಿ ಅಲೆದಾಡುತ್ತಾ ಬಳಲುವನು. ||೬||

## ಪದ್ಯ ೭

ಮೂಲ :—

ಸುರುಚಿ ರುಚಿರ ಸುಗಂಧ ಶುಚಿಯೆಂ।
ದಿರುತಿಹನು ಷಡ್ರಸಗಳೊಳು ಹ।
ನ್ನೆರಡು ರೂಪದಲಿಪ್ಪ ಶ್ರೀ ಭೂ ದುರ್ಗೆಯರ ಸಹಿತ
ಸ್ವರಮಣನು ಎಪ್ಪತ್ತೆರಡುಸಾ।
ವಿರ ಸಮೀರನ ರೂಪದೊಳಗಿ ॥
ದ್ದುರುಪರಾಕ್ರಮ ಕರ್ತೃ ಎನಿಸುವ ನಾಡಿಗಳೊಳಗಿದ್ದು ॥೭॥

ಅವತರಣಿಕೆ :—

ಮಧುರಾದಿ ಷಡ್ರಸಗಳಲ್ಲಿ ಸುರುಚಿ, ರುಚಿರ, ಸುಗಂಧ ಮತ್ತು ಶುಚಿ ಎಂಬ ಸಾರಗಳಲ್ಲಿ ರಸಾಂತರ್ಗತನಾಗಿ, ರಸಪದವಾಚ್ಯನಾಗಿ, ಶ್ರೀಭೂದುರ್ಗಾಸಹಿತ ದ್ವಾದಶರೂಪಗಳಲ್ಲಿದ್ದು, ಸ್ವರಮಣನು ದೇಹಗತ ಎಪ್ಪತ್ತೆರಡು ಸಾವಿರ ನಾಡೀಗತ ಶ್ರೀಮುಖ್ಯಪ್ರಾಣಾಂತರ್ಗತನಾಗಿ, ನಾಡೀವ್ಯೂಹಗಳ ದ್ವಾರಾ ವ್ಯಾಪಾರವನ್ನು ಮಾಡಿ ಮಾಡಿಸುತ್ತಿರುವನು ಎಂದು ತಿಳಿಸುತ್ತಾರೆ. **ಸುರುಚಿ** – ಎಂಬ ಪ್ರಸಕ್ತ ಸಂಧಿಗತ ೭ನೆಯ ಈ ಪದ್ಯದಿಂದ ॥೭॥

ಪ್ರತಿಪದಾರ್ಥ :—

ಷಡ್ರಸಗಳೊಳು – ಉಪ್ಪು, ಹುಳಿ, ಖಾರ, ಸಿಹಿ, ಕಹಿ ಮತ್ತು ಒಗರು ಎಂಬ ಆರು ವಿಧವಾದ ರಸಗಳಲ್ಲಿ, ಸುರುಚಿ = ಸಮೀಚೀನವಾದ ರುಚಿ, ರುಚಿರ= ರಸಪ್ರಾಚುರ್ಯ, ಸುಗಂಧ=ಪರಿಮಳ, ಶುಚಿ=ಪವಿತ್ರವಾಗಿರುವುದು, ಎಂದಿರುತಿಹನು = ಷಡ್ರಸಾಂತರ್ಗತವಾಗಿ ಪೂರ್ವೋಕ್ತನಾಮಗಳಿಂದ ವಿದ್ಯಮಾನನಾಗಿದ್ದಾನೆ. ಹನ್ನೆರಡುರೂಪದಲ್ಲಿಪ್ಪ = ಲವಣಾದಿ ಷಡ್ರಸಗಳಲ್ಲಿ, ಒಂದೊಂದು ರಸದಲ್ಲಿಯೂ

ಎರಡೆರಡು ರೂಪದಂತೆ, ೬X೨=೧೨ ಸಂಖ್ಯಾಕವಾದ ಶಕ್ತ್ಯಾದಿರೂಪಗಳಿಂದ ರಸಪದವಾಚ್ಯನಾಗಿ ರಸಕ್ಕೆ ರಸರೂಪನಾಗಿದ್ದಾನೆ. ಶ್ರೀ=ಸತ್ತ್ವಗುಣಾಭಿಮಾನಿ ಶ್ರೀ ಲಕ್ಷ್ಮೀದೇವಿಯರ ಶ್ರೀರೂಪದಿಂದ ಸಹಿತನಾಗಿ ವಿಷ್ಣುರೂಪೀ ಶ್ರೀ ಪರಮಾತ್ಮ, ಭೂ=ರಜೋಗುಣಾಭಿಮಾನಿ ಭೂರೂಪಾತ್ಮಕ ರಮಾದೇವಿಯರ ಸಹಿತ ಬ್ರಹ್ಮರೂಪೀ ಶ್ರೀ ಪರಮಾತ್ಮ, ದುರ್ಗೆಯರ ಸಹಿತ = ತಮೋಗುಣಭಿಮಾನಿಯಾದ ದುರ್ಗಾರೂಪಿ ಶ್ರೀಇಂದಿರೆಯ ಸಹಿತ, ರುದ್ರರೂಪೀ ಶ್ರೀ ಪರಮಾತ್ಮನು ಇದ್ದವನಾಗಿ, ಸ್ವರಮಣನು = ಸ್ವಾಭಿನ್ನಗಳಾದ ಸ್ವಾಖ್ಯರೂಪಗಳಲ್ಲಿ ರಮಣ ಮಾಡತಕ್ಕ ಆಪ್ತಕಾಮನು, ಎಪ್ಪತ್ತೆರಡುಸಾವಿರ = ಎಪ್ಪತ್ತೆರಡುಸಾವಿರ ಸಂಖ್ಯಾಕವಾದ, ಸಮೀರನ ರೂಪ ದೊಳಗಿದ್ದು= ನಾಡೀಗತ ಶ್ರೀಮುಖ್ಯಪ್ರಾಣರ ೭೨,೦೦೦ ರೂಪಗಳಿಂದ ವಿದ್ಯಮಾನನಾಗಿದ್ದು, ಉರುಪರಾಕ್ರಮ = ಅಸದೃಶಪರಾಕ್ರಮಶಾಲಿಯಾದ ಶ್ರೀಪರಮಾತ್ಮನು, ನಾಡಿಗಳೊಳಗಿದ್ದು = ದೇಹಾದ್ಯಂತ ಹಬ್ಬಿ ಹರಡಿರುವ ೭೨,೦೦೦ ನಾಡಿಗಳಲ್ಲಿದ್ದು, ಕರ್ತೃಎನಿಪ = ಶರೀರದ ರಕ್ಷಣಾಕಾರ್ಯವನ್ನು ಮಾಡಿ ಮಾಡಿಸುತ್ತಿರವನು ||೭||

## ವ್ಯಾಖ್ಯಾನಗಳು :–

### (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ :–

ಷಡ್ರಸಗತಭಗವದ್ರೂಪಗಳ, ನಾಡೀಗತ ಭಗವದ್ರೂಪಗಳ ಹೇಳತಾರೆ. ಹಿಂದೆ ಅನಿರುದ್ಧಾದಿ ರೂಪಗಳ ಹೇಳಿದ್ದಾರೆ. ಮತ್ತು ಬ್ಯಾರೆ ರೂಪಗಳ ಹೇಳತಾರೆ.

ಆರು ರಸಗಳೊಳಗೆ ಎಂದರೆ ವಿವರ – ೧ ಉಪ್ಪು, ೨. ಹುಳಿ, ೩. ಖಾರ, ೪. ಸಿಹಿ, ೫. ಕಹಿ, ೬. ಒಗರು ಇವುಗಳೊಳಗೆ ಒಂದೊಂದರಲ್ಲಿ ಸುರುಚಿ, ರುಚಿರ, ಸುಗಂಧ, ಶುಚಿ ಇವುಗಳು ಆಯಾ ಪದಾರ್ಥಗಳ ಅನುಸರಿಸಿ ಇರೋವಾಗಿ ಅವೆ. ಸುರುಚಿ–ಸಮೀಚೀನವಾದ ರುಚಿ, ರುಚಿರ–ರಸಪ್ರಚುರವಾಗಿ ಕಾಣೋಣ, ಸುಗಂಧ

— ಚೆಲೋ ವಾಸನೆ ಬರುತ್ತಾ ಇರೋಣ, ಶುಚಿ—ಪವಿತ್ರವಾಗಿ ಕಣ್ಣಿಗೆ ಕಾಣೋಣ, ಹೀಂಗೆ ಆರು ರಸಗಳೊಳು—ಆರು ರಸಗಳ ನಾಮದಿಂದಲೂ, ತದ್ಗತ ಸುರುಚ್ಯಾದಿ ನಾಲ್ಕರಲ್ಲಿ ತನ್ನಾಮದಿಂದಲೂ ಇದ್ದು, ತತ್ತನ್ನಾಮ ವಾಚ್ಯನೆಂದು ಕರಿಸಿ ಅದರದರಲ್ಲಿ ಇರೋವನಾಗಿ ಇದ್ದಾನೆ. ಲವಣಾದಿ ಆರು ರಸಗಳೊಳಗೆ ಒಂದೊಂದರಲ್ಲಿ ಎರಡೆರಡು ರೂಪದ ಮ್ಯಾರಿಗೆ ಶಕ್ತ್ಯಾದಿ ಹನ್ನೆರಡು ರೂಪಗಳಿಂದ ಇರೋವನಾಗಿದ್ದಾನೆ. ಶ್ರೀದೇವರ ಸಹಿತ ವಿಷ್ಣುರೂಪಿ ಪರಮಾತ್ಮ, ಭೂದೇವೇರ ಸಹಿತ ಬ್ರಹ್ಮರೂಪಿ ಪರಮಾತ್ಮ, ದುರ್ಗಾದೇವೇರ ಸಹಿತ ರುದ್ರರೂಪಿ ಪರಮಾತ್ಮ—ಈ ತ್ರಿವಿಧರಾದ ದೇವೇರ ಸಹಿತನಾಗಿ ಮೂರು ರೂಪಗಳಿಂದ ಪ್ರತಿರಸದಲ್ಲಿ ಸಾತ್ತ್ವಿಕಾದಿ ಭೇದದಿಂದ ಇರತಕ್ಕ ರಸಗಳಲ್ಲಿ ಇರೋವನಾಗಿದ್ದಾನೆ. ಅಸದೃಶ ಪರಾಕ್ರಮಶಾಲಿಯಾದ ವಿಷ್ಣು, ಬ್ರಹ್ಮ, ಶಿವ ನಾಮಗಳಿಂದ ಯುಕ್ತನಾದ ಪರಮಾತ್ಮ, ಸಾತ್ತ್ವಿಕಾದಿ ಗುಣಗಳಿಂದ ಸಹಿತವಾದ ಒಂದೊಂದು ನಾಡೀ ಕ್ರಮಕ್ಕೆ ಇರತಕ್ಕ ಎಪ್ಪತ್ತೆರಡು ಸಾವಿರ ನಾಡಿಗಳೊಳು ವಿದ್ಯಮಾನನಾಗಿದ್ದು, ನಾಡಿಗಳ ಸಂರಕ್ಷಿಸತಕ್ಕ ಎಪ್ಪತ್ತೆರಡುಸಾವಿರ ವಾಯುರೂಪಗಳ ಅಂತರ್ಗತನಾಗಿದ್ದು, ದೇಹವನ್ನು ರಕ್ಷಣಾ ಮಾಡತಕ್ಕ ಕರ್ತನು ತಾನಾಗಿ, ತನ್ನೊಳಗೆ ತಾನು ರಮಿಸ ತಕ್ಕವನಾದ್ದರಿಂದ, ಆರು ರಸಗಳು ಜೀವರು ಭೋಗ ಮಾಡತಕ್ಕದ್ದರಲ್ಲಿ ವಿದ್ಯಮಾನವಾದ, ಸಾತ್ತ್ವಿಕಾದಿ ಭೇದದಿಂದ ಸಹಿತವಾದ ರಸಗಳಲ್ಲಿ ಪೂರ್ವೋಕ್ತ ಪ್ರಕಾರ ವಿದ್ಯಮಾನಗಳಾದ ಸ್ವಾಖ್ಯರಸಗಳ ದೇಹಾಂತರ್ಗತ ನಾಗಿದ್ದು ಸ್ವೀಕರಿಸಿ, ಜಡರಸ ದೇಹಕ್ಕೆ ಉಪಚಯ ಮಾಡಿ, ತದ್ವಾರ ದೇಹಗತನಾದ ಜೀವನ ದೇಹದ್ವಾರಾ ಉತ್ಕೃಷ್ಟ ಪರಾಕ್ರಮಶಾಲಿ ಎಂತ ತಾರತಮ್ಯಾನುಸಾರ ಎನಿಸೋವನಾಗತಾನೆ. ಜೀವರಿಗೆ ಬಲ—ಪರಾಕ್ರಮಗಳು ನ್ಯೂನಾಧಿಕ್ಯ ಕಾಣೋಣ, ದೇಹವಿವಿಕ್ಷಾ ಎಂತ ತಾತ್ಪರ್ಯ.

– ಆರು ರಸಗಳಲ್ಲಿ ಎರಡೆರಡು ರೂಪಗಳಿಗೆ ಕಾರಣ, ಒಂದೊಂದು ರಸದಲ್ಲಿ ಎರಡು ವಿಧ ರಸಗಳಿವೆ. ಒಂದೇ ರಸ ಪ್ರಥಮತಃ ಸುರಸವಾಗಿ ಅದೇ ರಸ ಕಾಲವ್ಯವಧಾನದ ಮ್ಯಾಲೆ ಕೆಟ್ಟು, ಪ್ರಕಾರಾಂತರದಿಂದ ಒಂದೊಂದಕ್ಕೆ ಎರಡು ಭಗವದ್ರೂಪಗಳೆಂತ ತಾತ್ಪರ್ಯ || ೭ ||

(೨) ಭಾವಪ್ರಕಾಶಿಕೆ :–

ಷಡ್ರಸಗಳ ಪೈಕಿ ಒಂದೊಂದರಲ್ಲಿಯೂ, ಸುರುಚಿ, ರುಚಿರ, ಸುಗಂಧ, ಶುಚಿ ಎಂಬ ನಾಲ್ಕುರೂಪಗಳಿಂದ ಪರಮಾತ್ಮನಿರುವನು. ಸುರುಚಿ ಎಂದರೆ – ಒಳ್ಳೆಯ ರುಚಿಯಾಗಿರುವಿಕೆ. ರುಚಿರ – ಎಂದರೆ, ರುಚಿಕರವಾದ ಪದಾರ್ಥವನ್ನು ತಿನ್ನುತ್ತಿರುವಾಗ ಇನ್ನೂ ಬೇಕೆಂಬ ಆಸೆಹುಟ್ಟಿಸುವಷ್ಟು ರಸವತ್ತಾಗಿರುವಿಕೆ. ಸುಗಂಧ – ಎಂದರೆ, ಸುವಾಸನೆಯಾಗಿರುವಿಕೆ, ಶುಚಿ – ಎಂದರೆ, ರೂಪದುಷ್ಟ ಮೊದಲಾದ ದೋಷವಿಲ್ಲದೆ ಪವಿತ್ರವಾಗಿರುವಿಕೆ. ಹೀಗೆ ನಾಲ್ಕು ಗುಣಗಳು ಒಂದೊಂದು ರಸದಲ್ಲಿಯೂ ಇರುವುವು. ಈ ನಾಲ್ಕು ರೂಪಗಳಿಂದ ಭಗವಂತನೇ ರಸಗಳಲ್ಲಿರುವನು. ಶಕ್ತಿ, ಪ್ರತಿಷ್ಠಾ – ಇತ್ಯಾದಿ ೧೨ ರೂಪಗಳಿಂದ ಒಂದೊಂದು ರಸದಲ್ಲಿ ಎರಡೆರಡು ರೂಪಗಳಂತೆ ೬ ರಸಗಳಲ್ಲಿ ೧೨ ರೂಪಗಳಿಂದ ಇರುವನು. ಇದಲ್ಲದೆ, ೭೨ ಸಾವಿರನಾಡಿಗಳಲ್ಲಿ ವಾಯುದೇವರು, ೭೨ ಸಾವಿರರೂಪಗಳಿಂದ ವಾಸಮಾಡುತ್ತಿರುವರು. ಅವರಂತರ್ಯಾಮಿಯಾಗಿ ೭೨,೦೦೦ ರೂಪಗಳಿಂದ ನಾಡಿಗಳಲ್ಲಿದ್ದು, ಮಹಾಪರಾಕ್ರಮಶಾಲಿಯಾದ ಪರಮಾತ್ಮನು ಈ ಸ್ಥೂಲದೇಹದಿಂದ ಮಾಡಿಸಬೇಕಾದ ಕೃತ್ಯಗಳನ್ನು ಮಾಡಿಸುತ್ತಾ, ಕರ್ತಾ ಎಂಬ ಹೆಸರನ್ನು ಪಡೆದಿರುವನು. || ೭ ||

ಭಾವದರ್ಪಣಾಟೀಕಾ :–

ರುಚಿರ, ಸುರುಚಿ, ಸುಗಂಧ, ಶುಚಿ ಎಂಬ ಈ ನಾಲ್ಕು ರಸಗಳು ಮಧುರಾದಿ ಷಡ್ರಸಾಂತರ್ಗತನಾಗಿ ತತ್ತನ್ನಾಮಗಳಿಂದ ಶ್ರೀಭೂದುರ್ಗೇಯರ ಸಹಿತ

ದ್ವಾದಶರೂಪದಿಂದ ಇರತ್ತಾನೆಂತಲೂ, ಎಪ್ಪತ್ತೆರಡು ಸಾವಿರ ವಾಯುದೇವರ ರೂಪದೊಳಗಿದ್ದಾನೆಂತಲೂ, ಶ್ರೀಹರಿ ಮಹಾತ್ಮ್ಯೆಹೇಳುತ್ತಾರೆ – ಸುಚಿರೇತಿ ||೭||

(೪) ಶ್ರೀವ್ಯಾಸದಾಸಸಿದ್ಧಾಂತ ಕೌಮುದೀ :–

"ಸುರುಚಿ'' – ಇತಿ|| ಏಕತ್ರ ಚತುರಾತ್ಮಾ|| ಶ್ಯಾ ್ಯದಮೋಪಿ ಏಕೈಕತ್ವ ತ್ರಿರೂಪತಯಾ ದ್ವಾದಶ ||೭||

ಮಧುರ ಇತ್ಯಾದಿ ಆರುರಸಗಳು. ಒಂದೊಂದು ರಸದಲ್ಲಿಯೂ ಸುರುಚಿ–ರುಚಿರ–ಸುಗಂಧ–ಶುಚಿ–ಎಂಬ ನಾಲ್ಕು ರೂಪಗಳಿಂದ ಭಗವಂತನು ನಿಯಾಮಕನಾಗಿದ್ದಾನೆ. ಶಕ್ತ್ಯಾದಿ ೧೨ ರೂಪಗಳಿಂದ ಶ್ರೀ ಭೂ ದುರ್ಗಾ ಎಂಬ ರಮಾರೂಪಗಳಿಂದ ಸಹಿತನಾಗಿಯೇ ಆರು ರಸಗಳಲ್ಲಿ ಇರುತ್ತಾನೆ. ಶ್ರೀ ಹರಿಯು ಸ್ವರಮಣನು. ಶ್ರೀ ಹರಿಯು ೭೨,೦೦೦ ನಾಡೀಗತರಾದ ವಾಯುದೇವರ ರೂಪಗಳಲ್ಲಿ ೭೨,೦೦೦ ರೂಪಗಳಿಂದ ಇದ್ದು, ಉರುಪರಾಕ್ರಮ ಎಂದೆನಿಸಿದ್ದಾನೆ. ಒಂದೊಂದರಲ್ಲಿ – ಶ್ರೀ – ಭೂ–ದುರ್ಗಾರಮಣರೂಪಗಳು ೪X೩=೧೨ ರೂಪಗಳಾಗುವುವು.

(೫) ಶ್ರೀ ಗುರುಹೃದಯ ಪ್ರಕಾಶಿಕೆ ವ್ಯಾಖ್ಯಾನ :–

ಮೇಲೆ ಹೇಳಿದ ವಿಷಯವೆಂಬ ಷಡ್ರಸಗತರೂಪಚಿಂತನೆಯನ್ನು ತಿಳಿಸುತ್ತಾರೆ. ಸುರುಚಿ ಎಂದು. ಮನಸ್ಸಿಗೆ ಇಷ್ಟವಾದದ್ದು ಸವಿ, ಕಾಂತಿಯುಕ್ತವಾದದ್ದು ರುಚಿರ, ಮೂಗಿಗೆ ಇಷ್ಟ ಸುಗಂಧ. ಕಲ್ಮಶ ಇಲ್ಲದ್ದು ಶುಚಿ. ಹೀಗೆ ಇರುವ ನಾಲ್ಕು ರಸಗತ ಶಬ್ದವಾಚ್ಯರೂಪಗಳು, ಮಧುರಾದಿ ಆರು ರಸಗಳಲ್ಲಿರುವುವು. ಅದು ಹೆಚ್ಚು ಗುಣಿಸಿದರೆ ಆರನಾಲ್ಕಲು ಇಪ್ಪತ್ನಾಲ್ಕು ರೂಪಗಳು. ಸತ್ತ್ವರಜಸ್ತಮೋಗುಣಗಳಿಂದ ಹೆಚ್ಚಿಸಿದರೆ ಎಪ್ಪತ್ತೆರಡು, ಒಂದೊಂದಕ್ಕೆ ಸಾವಿರ ವಿಶ್ವಾದಿರೂಪಗಳಿಂದ ಹೆಚ್ಚಿಸಿದರೆ, ಎಪ್ಪತ್ತೆರಡುಸಾವಿರರೂಪಗಳಿಂದ ಶ್ರೀ ಭೂ ದುರ್ಗಾರೂಪಗಳಿಂದ ಕೂಡಿ ಸ್ವಾನಂದತೃಪ್ತನು ಎಪ್ಪತ್ತೆರಡುಸಾವಿರ ನಾಡೀಗತ ಪ್ರಾಣದೇವರ ರೂಪಗಳಲ್ಲಿದ್ದು,

ಸ್ವತಂತ್ರಕರ್ತೃ ಎನಿಸುವನು. ॥ ೬ ॥

## ಸರ್ವವ್ಯಾಖ್ಯಾನಸಾರಸಂಗ್ರಹ

ಷಡ್ರಸಗಳಲ್ಲಿ ರಸಾಂತರ್ಗತನಾಗಿದ್ದು, ಸ್ವರಮಣನಾದ ಶ್ರೀ ಪರಮಾತ್ಮನು ಶ್ರೀ ಭೂ ದುರ್ಗಾ ರೂಪಾತ್ಮಕರಾದ ಶ್ರೀ ಲಕ್ಷ್ಮೀಸಹಿತನಾಗಿ ೭೨,೦೦೦ ನಾಡಿಗಳಲ್ಲಿ ಇರುವ ಶ್ರೀ ವಾಯುದೇವರಲ್ಲಿ ಅಂತರ್ಗತನಾಗಿದ್ದು, ನಾಡೀಗತ ವ್ಯಾಪಾರಗಳನ್ನು ಮಾಡಿ ಮಾಡಿಸುತ್ತಿರುವನೆಂದು ತಿಳಿಸುತ್ತಾರೆ – ಪ್ರಸಕ್ತ ೭ನೆಯ ಪದ್ಯದಿಂದ.

೧. ಸಿಹಿ (ಮಧುರ), ೨. ಕಹಿ (ಕಟು ), ೩. ಖಾರ (ಕ್ಷಾರ), ೪. ಉಪ್ಪು (ಲವಣ), ೫. ಹುಳಿ (ಆಮ್ಲ) ಮತ್ತು ೬. ಒಗರು (ತಿಕ್ತ ) ಎಂದು ರಸಗಳು ಆರು ವಿಧವಾಗಿವೆ. ಇವುಗಳಿಗೆ ಷಡ್ರಸಗಳೆಂದು ಹೆಸರು.

೨ ಪ್ರತಿಯೊಂದು ರಸದಲ್ಲಿಯೂ ೧ ಸುರುಚಿ, ೨ ರುಚಿರ, ೩. ಸುಗಂಧ ಮತ್ತು ೪ ಶುಚಿ ಎಂಬ ನಾಲ್ಕು ಲಕ್ಷಣಗಳಿವೆ.

**(೧) ಸುರುಚಿ** – ಎಂದರೆ ಸಮೀಚೀನವಾದ ರುಚಿ ಎಂದರ್ಥ. ಪದಾರ್ಥಗತ ರಸದಲ್ಲಿ ಉತ್ತಮವಾದ ಸವಿಗೆ "ಸುರುಚಿ" ಎಂತ ನಾಮ. ರಸಪ್ರಾಚುರ್ಯವಾದ ಈ ಲಕ್ಷಣದಿಂದ ಆ ಪದಾರ್ಥವನ್ನು ಸ್ವೀಕರಿಸುತ್ತಿರುವಾಗ ರಸನೇಂದ್ರಿಯಕ್ಕೆ ಉತ್ತಮರುಚಿಯ ಅನುಭವವಾಗುವುದು.

**(೨) ರುಚಿರ** – ಸವಿಯಾದ ವಸ್ತುವನ್ನು ತಿನ್ನುತ್ತಿರುವಾಗ, ಇನ್ನೂ ಬೇಕೆಂಬ ಆಸೆ ಹುಟ್ಟಿಸುವಷ್ಟು ರಸವತ್ತಾಗಿರುವ ಆ ವಸ್ತುವಿನ ಲಕ್ಷಣಕ್ಕೆ 'ರುಚಿರ' ಎಂದು ಹೆಸರು.

**(೩) ಸುಗಂಧ** – ಪದಾರ್ಥಗತ ದಿವ್ಯಪರಿಮಳ. ಸುವಾಸನೆಯಿಂದ ಕೂಡಿದ ವಸ್ತುವು ನಾಸಿಕೇಂದ್ರಿಯಕ್ಕೆ ಆನಂದವನ್ನುಂಟು ಮಾಡುವುದು. ಪರಿಮಳಯುಕ್ತವಾದ

ರಸದ ಲಕ್ಷಣಕ್ಕೆ 'ಸುಗಂಧ' ಎಂದು ಕರೆಯುವರು.

(೪) ಶುಚಿ – ಯಾವ ಕಶ್ಮಲವೂ ಇಲ್ಲದೆ ಶುದ್ಧವಾಗಿರುವ ಲಕ್ಷಣ. ಇದರಿಂದ ವಸ್ತು ಪವಿತ್ರವೆನಿಸುವುದು. ಈ ಲಕ್ಷಣಕ್ಕೆ 'ಶುಚಿ' ಎಂತ ನಾಮ.

೩. ಪೂರ್ವೋಕ್ತ ಮಧುರಾದಿ ಷಡ್ರಸಗಳಿಲ್ಲಿ ಪ್ರತಿರಸದಲ್ಲಿಯೂ ಈ ಲಕ್ಷಣಗಳಿವೆ. ಷಡ್ರಸಗ್ಗಳಲ್ಲಿ ಸುರುಚಿ, ರುಚಿರ, ಸುಗಂಧ ಮತ್ತು ಶುಚಿನಾಮಕನಾಗಿ, ತತ್ತ್ವದ್ವಾಚ್ಯನಾಗಿ ಶ್ರೀ ಹರಿಯು ರಸಪದವಾಚ್ಯನಾಗಿದ್ದಾನೆ.

೪. ಪ್ರತಿರಸದಲ್ಲಿಯೂ ಎರಡೆರಡು ರೂಪಗಳಿಂದ ೬ ರಸಗಳುXರೂಪದ್ವಯಗಳು =೧೨ ರೂಪಗಳಿಂದ ರಸಾಂತರ್ಗತವಾಗಿ, ತತ್ತನ್ನಾಮಕನಾಗಿದ್ದಾನೆ. ಪೂರ್ವಪದ್ಯದಲ್ಲಿ ವಿವರಿಸಿರುವಂತೆ, ಶಕ್ತ್ಯಾದಿಪುರುಷಾಂತ ಇರುವ ೧೨ ರೂಪಗಳೇ ಇವು. ರಸಾಂತರ್ಗತರೂಪ ಒಂದು ಮತ್ತು ಸುಚಿರಾದಿ ರಸಲಕ್ಷಣಾಂತರ್ಗತ ರೂಪ ಇನ್ನೊಂದು. ಹೀಗೆ ಎರಡೆರಡು ರೂಪಗಳಾಯಿತು. ರಸಪದವಾಚ್ಯನಾಗಿ ಷಡ್ರಸ ಗಳಲ್ಲಿಯೂ, ಸುರುಚಿ ಇತ್ಯಾದಿ ಶಬ್ದಗಳಿಂದ ವಾಚ್ಯನಾಗಿ, ರಸಾಭಿವ್ಯಕ್ತಿ ರೂಪವಾದ ಧರ್ಮಗಳಲ್ಲಿಯೂ ಇದ್ದಾನೆಂದು ರಹಸ್ಯತತ್ತ್ವ.

೫. ಷಡ್ರಸಗಳು ಪ್ರಕೃತಿಜನ್ಯವಾದ್ದರಿಂದ, ಮೂಲಪ್ರಕೃತಿಯ ಅಭಿಮಾನಿ ಶ್ರೀ ಲಕ್ಷ್ಮೀದೇವಿಯರು, ಸತ್ವ, ರಜ ಮತ್ತು ತಮ ಎಂಬ ಗುಣತ್ರಯಗಳಿಗೆ ಅಭಿಮಾನಿ ಗಳಾಗಿ ಕ್ರಮವಾಗಿ ಶ್ರೀ, ಭೂ ಮತ್ತು ದುರ್ಗಾರೂಪಗಳಿಂದ ಇದ್ದಾರೆ. ಶ್ರೀ ಭೂ ದುರ್ಗಾ ರೂಪಾತ್ಮಕಳಾದ ಶ್ರೀ ರಮಾಸಹಿತನಾಗಿ ಶಕ್ತ್ಯಾದಿ ದ್ವಾದಶರೂಪಗಳಿಂದ ಶ್ರೀಪರಮಾತ್ಮನು ವಿರಾಜಮಾನನಾಗಿದ್ದಾನೆ. ಸತ್ತ್ವಗುಣಾಭಿಮಾನಿ ಶ್ರೀ ದೇವಿಸಹಿತನಾಗಿ **ವಿಷ್ಣುರೂಪೀ** ಪರಮಾತ್ಮ – ರಜೋಗುಣಾಭೀಮಾನಿ ಭೂದೇವಿ ಸಹಿತನಾಗಿ **ಬ್ರಹ್ಮರೂಪೀ** ಶ್ರೀಪರಮಾತ್ಮ ಮತ್ತು ತಮೋಗುಣಾಭಿ ಮಾನಿ ದುರ್ಗಾಸಮೇತವಾಗಿ **ರುದ್ರರೂಪೀ** ಪರಮಾತ್ಮ ಇದ್ದಾನೆಂದು ವಿವರ ತಿಳಿಯಬೇಕು.

ಷಡ್ರಸಗಳು =೬. ಸುರುಚಿ, ರುಚಿರ, ಸುಗಂಧ, ಶುಚಿ ವಾಚ್ಯರೂಪಗಳು =೪, ಸತ್ವ, ರಜ,ತಮ ಎಂಬ ಗುಣತ್ರಯಗಳು=೩. ಇವುಗಳನ್ನು ಪರಸ್ಪರ ಗುಣಿಸಲಾಗಿ, ೬X೪X೩=೭೨ ಆಗುವುದು. ಒಂದೊಂದು ರೂಪದಲ್ಲಿ ವಿಶ್ವಾದಿ ಸಹಸ್ರರೂಪಗಳಂತೆ ೭೨Xಸಹಸ್ರ=೭೨,೦೦೦ ರೂಪಗಳಾಯಿತು. ಇಷ್ಟು ಸಂಖ್ಯಾ ಕೂಡ ನಾಡಿಗಳು ನಮ್ಮ ಸ್ಥೂಲದೇಹಾದ್ಯಂತ ಹಬ್ಬಿ ಹರಡಿವೆ. ಈ ೭೨,೦೦೦ ನಾಡಿಗಳಲ್ಲಿ ಗಂಗಾದಿ ಸಮಸ್ತತೀರ್ಥಗಳು ಮತ್ತು ತದಭಿಮಾನಿತೀರ್ಥಾಭಿಮಾನಿ ದೇವತೆಗಳಿದ್ದಾರೆ. ಇವರಿಗೆ ನಿಯಾಮಕರಾಗಿ ಶ್ರೀಮುಖ್ಯಪ್ರಾಣದೇವರು ೭೨,೦೦೦ ರೂಪಗಳಿಂದ ವಿದ್ಯಮಾನರಾಗಿದ್ದಾರೆ. ಇಂತಹ ೭೨,೦೦೦ ವಾಯುದೇವರ ರೂಪಗಳಲ್ಲಿ ವಾಯ್ವಂತರ್ಗತನಾಗಿ, ಸ್ವರರಮಣನಾದ ಶ್ರೀ ಹರಿಯು ೭೨,೦೦೦ ರೂಪಗಳಿಂದ ಇದ್ದು, ನಾಡ್ಯಭಿಮಾನಿದೇವತೆಗಳ ದ್ವಾರಾ, ಮುಖ್ಯಪ್ರಾಣದೇವರ ಮೂಲಕ, ಈ ದೇಹಗತ ಸಕಲಇಂದ್ರಿಯಗತವ್ಯಾಪಾರಗಳನ್ನು ಮಾಡಿ ಮಾಡಿಸುತ್ತಿರುವನು.

೭. ಬಿಂಬರೂಪೀ ಪರಮಾತ್ಮನು ಸರ್ವಶಕ್ತನು. ಅಮಿತಬಲಸಂಪನ್ನನು. ಇದರಿಂದ **ಉರುಪರಾಕ್ರಮನು**. ಉರುಪರಾಕ್ರಮಿಯಾದ ಶ್ರೀಪರಮಾತ್ಮನು ನಾಡೀಗತ ಸಮಸ್ತ ಕಾರ್ಯಗಳನ್ನೂ ತಾನೇ ಬಿಂಬಕ್ರಿಯಾ ದ್ವಾರಾ ಮಾಡಿಸುತ್ತಿರುವುದರಿಂದ, ಅವನಿಗೆ ಕರ್ತೃ ಎಂದು ಹೆಸರು. ಸಕಲಚೇಷ್ಟಾಪ್ರವರ್ತಕನಾದ ಆ ಪ್ರಧಾನಕರ್ತೃವೆನಿಸಿದ ಶ್ರೀಹರಿಯು ತನ್ನ ಭಗವದ್ರೂಪಗಳಲ್ಲಿ ತಾನೇ ಕ್ರೀಡೆಯಾಡುತ್ತಾ, **ಸ್ವರಮಣ**ನೆಂದೆನಿಸಿ, ೭೨,೦೦೦ ರೂಪಗಳಿಂದ ಸಮೀರನ ಅಷ್ಟೇ ಸಂಖ್ಯಾಕವಾದ ರೂಪಗಳಲ್ಲಿ ಅಂತರ್ಗತನಾಗಿ, ನಾಡೀಗತವ್ಯಾಪಾರಗಳನ್ನು ಮಾಡಿ ಮಾಡಿಸುತ್ತಿರುವನು. ನಾಡಿಗಳ ದ್ವಾರಾ ಭೋಜನಪದಾರ್ಥಗಳ ರಸವಿಭಾಗ ಮಾಡಿ, ವೈಶ್ವಾನರನಾಮಕನು ದೇಹಕ್ಕೆ ಉಪಚಯ ಕೊಡವನು. ||೭||

## ಪದ್ಯ (೮)

**ಮೂಲ :—**

ನಿನ್ನ ಸರ್ವತ್ರದಲಿ ನೆನೆವವ ।
ರನ್ಯಕರ್ಮವ ಮಾಡಿದರು ಸರಿ॥
ಪುಣ್ಯಕರ್ಮಗಳೆನಿಸುವುವು ಸಂದೇಹವಿಲ್ಲ॥
ನಿನ್ನ ಸ್ಮರಿಸದೆ ಸ್ನಾನ ಜಪ ಹೋ।
ಮಾನ್ನ ವಸ್ತ್ರಗಜಾಶ್ವ ಭೂ ಧನ।
ಧಾನ್ಯ ಮೊದಲಾದಖಿಳಧರ್ಮವ ಮಾಡಿ ಫಲವೇನು ॥೮॥

**ಅವತರಣಿಕೆ :—**

ಶ್ರುತಿತತಿವೇದ್ಯನ ಸ್ಮೃತಿರಹಿತನಾದವನು ಮಾಡುವ ಸ್ನಾನ, ಜಪ, ಯಜ್ಞ, ಅನ್ನದಾನ, ವಸ್ತ್ರದಾನ, ಗಜಾಶ್ವಗಳ ದಾನ, ಭೂದಾನ, ಧನಧಾನ್ಯದಾನಾದಿ ಯಾವ ಸತ್ಕರ್ಮಗಳನ್ನು ಮಾಡಿದರೂ ಫಲವಿಲ್ಲ ಎಂದು ತಿಳಿಸುತ್ತಾರೆ – **ನಿನ್ನಸರ್ವತ್ರದಲಿ** – ಎಂಬ ಪ್ರಸಕ್ತ ಸಂಧಿಗತ ಆನೆಯ ಈ ಪದ್ಯದಿಂದ ॥೮॥

**ಪ್ರತಿಪದಾರ್ಥ :—**

ನಿನ್ನ=ಸರ್ವತ್ರವ್ಯಾಪ್ತನಾದ ನಿನ್ನನ್ನು, ಸರ್ವತ್ರದಲಿ=ಚರಾಚರಾತ್ಮವಾದ ಈ ಜಗತ್ತಿನ ಸರ್ವ ದೇಶಗಳಲ್ಲಿ, ಸರ್ವಾಧಿಷ್ಠಾನಗಳಲ್ಲಿ, ಸರ್ವಕಾಲಗಳಲ್ಲಿ, ಸರ್ವಾವಸ್ಥೆಗಳಲ್ಲಿ, ನೆನೆವವ = ಸರ್ವಾಧಿಷ್ಠಾನಾಂತರ್ಗತನಾಗಿ ಶ್ರೀ ಪರಮಾತ್ಮನು ಸಕಲ ಅಣುರೇಣು ತೃಣಕಾಷ್ಠಾದಿಗಳಲ್ಲಿ ಪರಿಪೂರ್ಣನಾಗಿ ವ್ಯಾಪ್ತನಾಗಿದ್ದಾನೆಂದ ತಿಳಿದು, ಸದಾ ನಿನ್ನ ಸಂಸ್ಮರಣೆ ಮಾಡುತ್ತಿರುವವನು, **ಅನ್ಯಕರ್ಮವ=** ಪುಣ್ಯಕ್ಕೆ ವ್ಯತಿರಿಕ್ತವಾದ ನಿಷೇಧರೂಪವಾದ ಕರ್ಮಗಳನ್ನು, **ಮಾಡಿದರು ಸರಿ=** ಆಚರಿಸಿದರೂ ಸರಿ, ಅವು ಅವನಿಗೆ ಬಾಧಕವಾಗಲಾರವು. **ಪುಣ್ಯಕರ್ಮಗಳೆನಿಸುವುವು=** ಭಗವದನುಗ್ರಹದಿಂದ

ಅಂತಹ ವ್ಯತಿರಿಕ್ತ ಕರ್ಮಗಳೂ ಸಹ ಪುಣ್ಯಕರ್ಮಗಳೇ ಆಗುವುವು. ಸಂದೇಹವಿನಿತಿಲ್ಲ= ಈ ವಿಷಯದಲ್ಲಿ ಶಂಕಾ ಲವಲೇಶವೂ ಇಲ್ಲ. ಇದು ನಿಸ್ಸಂಶಯವಾದ ರಹಸ್ಯಾರ್ಥವು. ನಿನ್ನ ಸ್ಮರಿಸಿದೆ = ಸರ್ವರಿಗೂ ಬಿಂಬನಾದ ನಿನ್ನ ಸರ್ವತಂತ್ರಸ್ವತಂತ್ರಕರ್ತೃತ್ವ ಗುಣವನ್ನು ತಿಳಿಯದೇ, ತಾನೇ ಮಾಡುತ್ತೇನೆಂಬ ಅಹಂ ಮಮಕಾರಗ್ರಸ್ತನಾದವನು. ಸ್ನಾನ = ಮಾಡುವ ಗಂಗಾದಿತೀರ್ಥಸ್ನಾನಗಳು, ಜಪ = ಗಾಯತ್ರೀ ಅಷ್ಟ ಮಹಾಮಂತ್ರ ಇತ್ಯಾದಿ ಜಪಾದಿಗಳು, ಹೋಮ = ಯಜ್ಞ ಯಾಗಾದಿಗಳು, ಅನ್ನ =ಉತ್ತಮದಾನವೆಂದೆನಿಸುವ ಅನ್ನದಾನ, ವಸ್ತ್ರ = ವಸ್ತ್ರದಾನ, ಗಜಾಶ್ವ=ಗಜದಾನ, ಅಶ್ವದಾನ ಇತ್ಯಾದಿ ವಾಹನ ದಾನಾದಿಗಳು. ಭೂ=ಭೂದಾನ. ಧನ=ದ್ರವ್ಯದಾನ, ಧಾನ್ಯ=ನವಧಾನ್ಯಾದಿದಾನಗಳು, ಮೊದಲಾದ = ಇವೇ ಮುಂತಾದ, ಅಖಿಳಧರ್ಮವ= ಸಮಸ್ತಧರ್ಮರೂಪವಾದ ಸತ್ಕರ್ಮಗಳನ್ನು, ಮಾಡಿ ಫಲವೇನು= ಮಾಡುವುದರಿಂದ ಏನೇನೂ ಫಲಪ್ರಾಪ್ತಿಯಾಗುವುದಿಲ್ಲ. ||೮||

## ವ್ಯಾಖ್ಯಾನಗಳು

### (೧) ಶ್ರೀಸಂಕರ್ಷಣಒಡೆಯರ ವ್ಯಾಖ್ಯಾನ :—

ಪರಮಾತ್ಮನ ಸ್ಮೃ ರಹಿತನಾಗಿ ಏನು ಧರ್ಮವು ಮಾಡಿದರೂ ಫಲವಿಲ್ಲ ಎಂತ ಹೇಳತಾರೆ.

ದೇಹಾಂತರ್ಗತನಾದ ಬಿಂಬರೂಪಿಯಾದ ನಿನ್ನ ದೇಹೇಂದ್ರಿಯಾದಿಗಳಲ್ಲಿ, ತಜ್ಜನಿತ ಕರ್ಮಗಳಲ್ಲಿ, ತದ್ವತ್ ಅನ್ಯಪ್ರಾಣಿಗಳಲ್ಲಿ, ಸರ್ವಚರಾಚರಗಳಲ್ಲಿ, ಈ ಸರ್ವ ಅಧಿಷ್ಠಾನಗಳಲ್ಲಿ ಅಂತರ್ಗತತ್ವೇನ ತಿಳಿದು, ಸರ್ವಲಕ್ಷ್ಯವೂ ಅಧಿಷ್ಠಾನಗಳಲ್ಲಿ ಇಡದೇ, ಪರಮಾತ್ಮನಾದ ನಿನ್ನಲ್ಲಿ ಇಟ್ಟು, ಸರ್ವವೂ ನಿನ್ನ ರೂಪಗಳೇ ಎಂತಲೂ, ಸರ್ವನಾಮಗಳೂ ನಿನ್ನ ನಾಮಗಳೇ ಎಂತಲೂ, ಈ ಪ್ರಕಾರ ಸ್ಮರಣೆ ಮಾಡತಕ್ಕವರು, ಪುಣ್ಯಕರ್ಮಕ್ಕೆ ಅನ್ಯವಾದ ಪಾಪಕರ್ಮ ಮಾಡಿದ ಕಾಲಕ್ಕೂ ಸರಿಯೇ ಅಂದರೆ,

ಜೀವರು ಅಸ್ವತಂತ್ರರಾದ ಮೇಲೆ ಪಾಪಕರ್ಮಗಳು ಇವರು ಮಾಡೋಣ ಎಂಬೋದು ಕೊಡೋದಿಲ್ಲ. ತ್ರಿಗುಣಬದ್ಧರಾಗಿ ಸ್ಥಿತಿ ಅವಸ್ಥಾನದಲ್ಲಿ ಸರ್ವಪ್ರಾಣಿಗಳು ಇರೋಣದರಿಂದ ಪರಮಾತ್ಮ ತನ್ನ ಕ್ರಿಯಾದ್ವಾರಾ ದೇವಾದಿತೃಣಾಂತಜೀವರ ಕಡಿಯಿಂದ ದೇಹದ್ವಾರಾ ಅನ್ಯಕರ್ಮವೇನು, ಪುಣ್ಯಕರ್ಮವೇನು, ಮಾಡಸತಾನೆ, ಜೀವರು ಮಾಡತಾರೆ. ಈ ಪ್ರಕಾರ ಮಾಡಿದರೂ ಸರಿ, ಪುಣ್ಯ–ಪಾಪಗಳು ಎರಡೂ ಸೇರಿ, ಪುಣ್ಯಕರ್ಮಗಳಾಗೇ ಸರಿಮಾಡತಾನಾದ್ದರಿಂದ, ಅನ್ಯಕರ್ಮಗಳೂ ಕೂಡ ಭಗವದನುಗ್ರಹದಿಂದ ಪುಣ್ಯಕರ್ಮಗಳಂತಲೇ ಕರಿಸೋದಾಗತವೆ. ಪರಮಾತ್ಮನ ಸ್ಮೃತಿ ಎಂಬ ದೀಪವನ್ನು ಮುಡಿಸಿ (ಹಚ್ಚಿಸಿ), ಕೈಯಲ್ಲಿ ಧರಿಸಿ ಪಾಪಸಾಂಕೇತವಾದ ಕತ್ತಲೆಯಲ್ಲಿ ಗಮನ ಮಾಡಿದರೆ, ಆ ಕತ್ತಲು ಹೋಗಿ ಬೆಳಕಾದಂತೆ ಪಾಪಕರ್ಮಗಳೂ ಪುಣ್ಯಕರ್ಮಗಳು ಆಗೋದಾಗತವೆ. ಈ ವಿಷಯದಲ್ಲಿ ಸಂದೇಹ ಎಂಬೋದು ದಾವ ಮಾತ್ರವೂ ಇಲ್ಲ. 'ದಾವಾಗ್ನಿ ದಗ್ಧ ಕರ್ಮಾಣಿ' ಎಂಬ ವಚನವೂ, ಅಧಿಕಾರಿಗಳು ಸ್ಥಿತಿಕಾಲದಲ್ಲಿ ಸರ್ವರೂ ಪಾಪ ಮಾಡೇ ಮಾಡತಾರೆ. ಆ ಪಾಪಗಳಿಗೆ ಮೋಚನೆ ಇಲ್ಲದಿದ್ದರೆ ಸ್ವರೂಪಗತಿ ಆಗೋಣವೇ ಇಲ್ಲ. ಆದ್ದರಿಂದ ಅದಕ್ಕೆ ಮೋಚನೆ ಈ ರೀತ್ಯಾ ಎಂತ ತಾತ್ಪರ್ಯ. ಬಿಂಬನಾದ ನಿನ್ನ ಪೂರ್ವೋಕ್ತಪ್ರಕಾರ ಸ್ಮರಿಸದೇ ಇರತಕ್ಕವರಿಗೆ ಅಹಂಮಮತಾ ಎಂಬ ಸ್ಮರಣೆ ಇರುತ್ತದೆ. ಇಂಥಾ ಸ್ಮರಣೆಯಿಂದ ದಾವ ಅಧಿಕಾರಿಯಾದರೂ ಸರಿಯೇ, ಗಂಗಾದಿ ತೀರ್ಥಸ್ನಾನ, ಅಷ್ಟಮಹಾಮಂತ್ರಜಪ, ಹೋಮಸಾಂಕೇತ ಯಜ್ಞ ಯಾಗಾದಿಗಳು, ಅನ್ನದಾನ, ವಸ್ತ್ರದಾನ, ಗಜ ಅಶ್ವ ಭೂಮಿ ದ್ರವ್ಯ ನವಧಾನ್ಯ ಇವೇ ಮೊದಲಾದ ಸಮಸ್ತವಾದ ಧರ್ಮವೇನು, ಸತ್ಕರ್ಮವೇನು ಮಾಡೋಣದರಿಂದ ಫಲವಿಲ್ಲ ಎಂತ ತಾತ್ಪರ್ಯ.

ತಾತ್ಪರ್ಯ – ಕಣ್ಣಗಳು ಎರಡು ಮುಚ್ಚಿಕೊಂಡವಗೆ ಸೂರ್ಯೋದಯವಾದರೂ, ಅಸ್ತಮಾನವಾದರೂ ಎರಡೂ ಕಾಲ ಕತ್ತಲೆಯೇವೇ. ಮತ್ತು ಕಣ್ಣುಗಳು ಎರಡು ಮುಚ್ಚಿಕೊಂಡು ಬೆಳಕು ಆಗಬೇಕು ಎಂತ ದೀಪ ಕಯ್ಯಾಗೆ ಧರಿಸಿ ಮಾರ್ಗ ನಡೆದರೆ

ಆ ಬೆಳಕು ಇವಗೆ ಪ್ರಕಾಶಕೊಟ್ಟು ಅಂಧಕಾರ ಪರಿಹಾರ ಮಾಡೀತೆ? ಹ್ಯಾಂಗೆ ಪರಿಹಾರ ಮಾಡೋದಿಲ್ಲವ್ರೋ, ತದ್ವತ್ ಜ್ಞಾನವೆಂಬೋ ನೇತ್ರಗಟ್ಯಾಗಿ ಮುಚ್ಚಿಕೊಂಡವಗೆ ಪುಣ್ಯಕರ್ಮಗಳೆಂಬೊ ಸೂರ್ಯನ ಪ್ರಕಾಶವು ಇವನ ಅಂಧಕಾರ ಪರಿಹಾರ ಮಾಡಿ ಪುಣ್ಯಫಲಗಳು ಕೊಟ್ಟೀತೆ? ಕೊಡಲಾರವು. ಅದರಂತೆ ಪರಮಾತ್ಮನ ಸ್ಮೃತಿ ಎಂಬ ನೇತ್ರಗಳು ಉಳ್ಳವಗೆ ಪುಣ್ಯಗಳು ಪುಣ್ಯಫಲಗಳು ಕೊಡತವೆ. ಪಾಪಗಳನೂ ಪೂರ್ವೋಕ್ತ ಪುಣ್ಯಫಲಗಳೇ ಕೊಡತವೆ. ಎಂದರೆ, ಅಂಧಕಾರಗತ ದೀಪ ಅಂಧಕಾರ ದೂರಮಾಡಿ, ಸ್ಮೃತಿ ಎಂಬ ಪುಣ್ಯಕ್ಕೆ ಸಫಲವಾಗತದೆ ಎಂತ ತಾತ್ಪರ್ಯ ||೮||

(೨) ಭಾವಪ್ರಕಾಶಿಕೆ :—

"ಧರ್ಮೋಽಭವತ್ಯಧರ್ಮೋಽಪಿ ಕೃತೋಽಭಕ್ತೈಸ್ತವಾಚ್ಯುತ।
ಪಾಪಂ ಭವತಿ ಧರ್ಮೋಽಪಿ ಯೇನಭಕ್ತೈಃ ಕ್ರತೋಽಹರೆ" ||

— ಎಂಬ ಸದಾಚಾರಸ್ಮೃತಿವಾಕ್ಯವನ್ನು ಮನಸ್ಸಿಲ್ಲಿಟ್ಟುಕೊಂಡು, ಅದೇ ಅರ್ಥವನ್ನೇ ಸೂಚಿಸುತ್ತಾ, ಮೇಲಿನ ಪ್ರಮಾಣದಲ್ಲಿದ್ದಂತೆ ಪರಮಾತ್ಮನನ್ನೇ ಸಂಬೋಧನೆ ಮಾಡಿ ಹೇಳುತ್ತಾರೆ — "ಎಲೈ ದೇವಾದಿದೇವ !ಭಕ್ತರು ಸರ್ವತ್ರ ನಿನ್ನನ್ನು ಸ್ಮರಿಸುತ್ತಾ, ಯಾವ ಕರ್ಮಗಳನ್ನು ಮಾಡಿದಾಗ್ಯೂ, ಯಾವನು "ನಾಹಂ ಕರ್ತಾ ಹರಿಃ ಕರ್ತಾ" —ಎಂಬ ಜ್ಞಾನದಿಂದ , ನಾನು ಅಸ್ವತಂತ್ರನು, ಪರಮಾತ್ಮನು ಮಾಡಿಸಿದಂತೆ ನಾನು ಮಾಡುವೆನು — ಎಂಬ ಜ್ಞಾನದಿಂದ ಕರ್ಮಗಳನ್ನು ಮಾಡುವನೋ, ಅವನು ಮಾಡಿದ ಪಾಪಕರ್ಮಗಳೂ ಕೂಡ ಪುಣ್ಯ ಫಲವನ್ನೇ ಕೊಡುವುವು. ಈ ವಿಷಯದಲ್ಲಿ ಸಂದೇಹ ಪಡಬೇಕಾದುದೇ ಇಲ್ಲ. ದೇವೇಂದ್ರನು ವೃತ್ರಾಸುರನನ್ನು ಕೊಂದುದರಿಂದ ಮಹಾತ್ಮನೆಂದು ಕೀರ್ತಿಯನ್ನೇ ಪಡೆದನು. ಭೀಷ್ಮದ್ರೋಣ ಪ್ರಭೃತಿಗಳು ಬ್ರಾಹ್ಮಣರು. ಪಾಂಡವರಿಗೂ, ಶ್ರೀಕೃಷ್ಣನಿಗೂ ವಿರೋಧಿಗಳಾದ ದುರ್ಯೋಧನಾದಿಗಳ ಪಕ್ಷವನ್ನು ವಹಿಸಿ, ಪಾಂಡವರ ಮೇಲೆ ಕೈ

ಮಾಡಿದರು. ಆದರೂ ಭೂಭಾರಹರಣ ಮಾಡಲು ಅವತರಿಸಿದ ಪರಮಾತ್ಮನಿಗೆ ಸೇವಾರೂಪವಾಗಿ ಭೂಭಾರಹರಣ ಮಾಡಿದ ಪುಣ್ಯಫಲವನ್ನೇ ಹೊಂದಿದರು. ದುರ್ಯೋಧನನೂ ಪಾಂಡವರೊಂದಿಗೆ ಯುದ್ಧಮಾಡಿದನು. ಅವನಿಗೆ ಅದು ಪಾಪಸಾಧನವೇ ಆಯಿತು. ಆದ್ದರಿಂದಲೇ ದಾಸರಾಯರು, ಎಲೈ ದೇವ! ನಿನ್ನನ್ನು ಸ್ಮರಿಸದೆ ಯಾವ ದಾನಧರ್ಮಗಳನ್ನು ಮಾಡಿದರೂ ನಿಷ್ಫಲವಾಗುವುದು – ಎಂದು ಹೇಳಿರುವರು ||೮||

(೩) ಭಾವದರ್ಪಣ ಟೀಕಾ :–

ನಿನ್ನ ಪಾದಸೇವಕರು ನಿನ್ನ ರೂಪಚಿಂತನಪೂರ್ವಕ ಯಾವಯಾವ ಕರ್ಮ ಮಾಡಿದಾಗ್ಯೂ ಪಾಪಲೇಪವಿಲ್ಲವೆಂದು ಹೇಳುತ್ತಾರೆ. – "ನಿನ್ನ – ಇತಿ" । ।

"ಧರ್ಮೋ . . . . . . . .ಕೃತೋಹರೇರಿತ್ಯುಕ್ತೇಃ"

(ಈ ಪ್ರಮಾಣದ ಪೂರ್ಣಪಾಠವನ್ನು ಭಾವಪ್ರಕಾಶಿಕೆ ವ್ಯಾಖ್ಯಾನದಲ್ಲಿ ಕೊಟ್ಟಿದೆ)

(೪) ಶ್ರೀ ವ್ಯಾಸದಾಸಸಿದ್ಧಾಂತಕೌಮುದೀ (ಸಂಸ್ಕೃತಮೂಲ):–

"ನಿನ್ನ ಸರ್ವತ್ರದಲಿ ಇತಿ" । । "ಸಮೇ ಅಹಿತಮ್, ಯದ್ವಾ ಸಮ್ಯಕ್ ತತ್ರ ಅಹಿತಂ ಮನಃ ಯಸ್ಯ ಇತ್ಯರ್ಥಕ ಸಮಾಹಿತಂ ಯಸ್ಯ ಮನಃ ಪ್ರಶಾಂತಂ ದಾನಾದಿಭಿಃ ಕಿಂ ವದ " – ಇತ್ಯದ್ರಪ್ರಮಾದಿಕ ರೀತ್ಯಾ ಅಥವಾ ಸಂಪ್ರಜ್ಞಾತಧಿಯಾಂ ಯದ್ವಾ ಭಗವತ್ಕಥಾ ದಿನಾ ಕಾಲ ಸಂಧ್ಯಾದಿ ಕೃತಾಮಪಿ ನ ದೋಷಃ" – ಇತ್ಯತ್ರ ತಾತ್ಪರ್ಯಾತ್ ||೮||

ಕನ್ನಡಾರ್ಥ :–

ಶ್ರೀ ಪರಮಾತ್ಮನು ಸರ್ವಶಬ್ದವಾಚ್ಯನು. ಯಾರು ಅಂತಹ ಭಗವಂತನಲ್ಲಿ ಮನಸ್ಸನ್ನು ಇಟ್ಟಿರುತ್ತಾರೋ, ಅವನು ಸಮಾಹಿತಮನಸ್ಕನು. ಅವನ ಮನಸ್ಸು

ಪರಮಾತ್ಮನಲ್ಲಿ ಸಮರ್ಪಿತವಾಗಿರುವುದು. ಅಂತಹವನ ಮನಸ್ಸು ಸದಾ ಪ್ರಸನ್ನವಾಗಿರುವುದು. ಪ್ರಶಾಂತ ಮನಸ್ಕನಾದ ಜ್ಞಾನಿಗೆ ದಾನಾದಿ ಧರ್ಮಗಳಿಂದ ಯಾವ ಪ್ರಯೋಜನವೂ ಆಗುವುದಿಲ್ಲ. ಪ್ರಮಾದವಶಾತ್, ಅಸಂಪ್ರಜ್ಞಾತ ಸಮಾಧಿ ಅವಸ್ಥೆಯಲ್ಲಿ ಇದ್ದು, ಭಗವದ್ಧ್ಯಾನದಲ್ಲಿಯೇ ನಿರಂತರ ಮಗ್ನರಾಗಿರುವುದರಿಂದ ಲಾಗಲೀ ಅಥವಾ **ಭಗವತ್ಕಥಾಶ್ರವಣ ಮನನ** ಇತ್ಯಾದಿಗಳಲ್ಲಿ ಮಗ್ನರಾಗಿರುವುದ ರಿಂಲಾಗಲೀ, ಅಕಾಲ ಸಂಧ್ಯಾವಂದನೆ ಮುಂತಾದ ದೋಷಗಳು ಆ ಸ್ಥಿತಪ್ರಜ್ಞರಿಗೆ ದೋಷವೆನಿಸುವುದಿಲ್ಲ. ಈ ದೃಷ್ಟಿಯಿಂದ – "ನಿನ್ನ ಸರ್ವತ್ರದಲ್ಲಿ ನೆನೆವವರನ್ಯ ಕರ್ಮವ ಮಾಡಿದರೂ ಸರಿ, ಪುಣ್ಯಕರ್ಮಗಳೆನಿಸುವುವು. ಇದರಲ್ಲಿ ಸಂದೇಹ ಲವಲೇಶವಿಲ್ಲ" – ಎಂದು ದಾಸರಾಯರು ನಿರೂಪಿಸಿರುವ ವಿಷಯವು ಶಾಸ್ತ್ರಸಮ್ಮತವಾಗಿದೆ. ||೮||

## (ಆ) ಶ್ರೀ ಗುರುಹೃದಯಪ್ರಕಾಶಿಕೆ ವ್ಯಾಖ್ಯಾನ :–

ಹೀಗೆ ಸ್ವದೇಹಗತ ರೂಪಗಳನ್ನು ನೋಡಿ ಸ್ತುತಿಸುತ್ತಾರೆ, ನಿನ್ನ –ಎಂದು. ಹೇ!ನಾಡೀಸಂಸ್ಥ ಶ್ರೀಹರಿಯೇ, ನಿನ್ನನ್ನು ಸರ್ವತ್ರದಲ್ಲಿಯೂ ಸ್ಮರಿಸುವವರು, ಅನ್ಯಕರ್ಮವೆಂಬ ಶಯನ ಸಂಚಾರಾದಿ ದೇಹಯಾತ್ರಾಕೃತ್ಯಗಳನ್ನು ಮಾಡಿದ್ದೆಲ್ಲಾ ಪುಣ್ಯಕರ್ಮಗಳಾಗುವುವು ನಿಶ್ಚಯ. ನಿನ್ನನ್ನು ಸರ್ವತ್ರ ಸ್ಮರಿಸದೆ, ಸ್ನಾನ ಜಪ ಹೋಮ ಅನ್ನ ವಸ್ತ್ರ ಗಜ ಅಶ್ವ ಭೂಮಿ ಧನ ನವಧಾನ್ಯ ಮೊದಲಾದ ಸಮಸ್ತ ದಾನ–ಧರ್ಮ ಸಹ ಮಾಡಿದಾಗ್ಯೂ ಫಲವೇನು? ಅಂದರೆ, ಪ್ರಯೋಜನವಿಲ್ಲ. ಅಂದರೆ, ಜ್ಞಾನದ್ವಾರಾ ಮೋಕ್ಷವೇ ಹೊರ್ತು, ಇಲ್ಲದಿದ್ದರೆ, ಇತರ ಸೌಖ್ಯ ಮಾತ್ರ ಉಂಟೆಂದು ಅರ್ಥ.

ಧರ್ಮೋಽಭವತ್ಯಧರ್ಮೋಽಪಿ ಕೃತೋ ಭಕ್ತೈಸ್ತವಾಚ್ಯುತ।
ಪಾಪಂ ಭವತಿ ಧರ್ಮೋಽಪಿ ಯೋ ನಭಕ್ತೈಃ ಕೃತೋ ಹರೇ ||

ಎಂಬುದರ ಅರ್ಥ ವಿವರಿಸಲ್ಪಟ್ಟಿತು. ||೮||

## ಸರ್ವವ್ಯಾಖ್ಯಾನಸಾರ ಸಂಗ್ರಹ

ಬಿಂಬರೂಪೀ ಶ್ರೀಹರಿಯ ಸರ್ವಕರ್ತೃತ್ವವನ್ನು ಸರ್ವದಾ ತಮ್ಮ ಮನಸ್ಸಿನಲ್ಲಿ ನೆನೆಯುತ್ತಾ, ಸಕಲ ಶುಭಾಶುಭ ಮಿಶ್ರ ಕರ್ಮಗಳೆಲ್ಲವೂ ಬಿಂಬಕ್ರಿಯಾದ್ವಾರಾ ಶ್ರೀಹರಿಯೇ ನಡೆಸಿ, ನಡೆಯಿಸುತ್ತಿರುವನು ಎಂಬ ಉತ್ತಮಜ್ಞಾನಾನುಸಂಧಾನವುಳ್ಳ ಬ್ರಹ್ಮಜ್ಞಾನಿಗಳು ಪ್ರಮಾದವಶದಿಂದ ಪಾಪಕರ್ಮಗಳನ್ನು ಮಾಡಿದ್ದಾಗ್ಯೂ, ಅವರ ಸಾಧನೆಗೆ ಪ್ರತಿಬಂಧಕವಾಗದೆ. ಪುಣ್ಯಕರ್ಮಗಳೆಂದೆನಿಸಿ ಅನುಕೂಲವಾಗುತ್ತವೆ– ಎಂಬ ರಹಸ್ಯಾರ್ಥವನ್ನು ತಿಳಿಸುತ್ತಾರೆ. – ನಿನ್ನ ಸರ್ವತ್ರದಲಿ – ಎಂಬ ಪ್ರಸಕ್ತಸಂಧಿಗತ ೮ನೆಯ ಈ ಪದ್ಯದಿಂದ.

೧. ಸರ್ವಚೇತನ ವಸ್ತುಗಳಲ್ಲಿ ಶ್ರೀಹರಿಯು ತದಾಕಾರನಾಗಿ, ತದ್ರೂಪನಾಗಿ ಬಿಂಬನೆಂದೆನಿಸಿ, ಚೇತನಾಂತರ್ಯಾಮಿಯಾಗಿದ್ದಾನೆ. ಸರ್ವಜೀವರೂ ಭಗವದಧೀನರು. ಬಿಂಬನಾದ ಶ್ರೀಹರಿಗೆ ಪ್ರತಿಬಿಂಬಭೂತರು. ಸರ್ವ ಜೀವರ ಸ್ವರೂಪಗತ ಧರ್ಮಗಳಾದ ಜ್ಞಾನಶಕ್ತಿ, ಇಚ್ಛಾಶಕ್ತಿ, ಮತ್ತು ಕ್ರಿಯಾ ಶಕ್ತಿಗಳು, ಜೀವರಲ್ಲೇ ಅನಾದ್ಯನಂತಕಾಲದಿಂದ ಇದ್ದರೂ ಸಹ, ಅವು ಬಿಂಬಾಧೀನವಾಗಿವೆ. ಹೀಗೆ ಜೀವರ ಕರ್ತೃತ್ವ ಪರಾಧೀನವಾದದ್ದು. ಪರಾಧೀನಕರ್ತೃತ್ವ ವುಳ್ಳ ಸಕಲ ಜೀವರ ದ್ವಾರ ನಡೆಯುವ ಶುಭ, ಅಶುಭ ಮತ್ತು ಮಿಶ್ರರೂಪವಾದ ಕರ್ಮಗಳೆಲ್ಲವೂ ಬಿಂಬನಿಂದಲೇ ಪ್ರೇರಿತವಾಗಿ ನಡೆಯುವುವು. ಜ್ಞಾನ, ಇಚ್ಛಾ ಮತ್ತು ಕ್ರಿಯಾ ಇವುಗಳನ್ನು ಅಭಿವ್ಯಕ್ತಿಗೊಳಿಸಲು ಜೀವನು ಸ್ವತಂತ್ರನಲ್ಲ. ಬಿಂಬಕ್ರಿಯಾದ್ವಾರವೇ ಸಕಲ ಕಾರ್ಯಗಳ ಅಭಿವ್ಯಕ್ತಿ. ಬಿಂಬರೂಪೀ ಶ್ರೀಹರಿಯು ಸ್ವರೂಪಾಂತರ್ಗತನಾಗಿದ್ದು, ಆತ್ಮ ಅಂತರಾತ್ಮನಾಮಕನಾಗಿ, ಜೀವರ ಹೆಸರಿನಲ್ಲಿ ಜೀವರ ಪರವಾಗಿ, ಒಂದು ವೇಳೆ ಜೀವನು ಸ್ವತಂತ್ರನಾಗಿದಿದ್ದರೆ ಏನೇನೂ ಕಾರ್ಯ ಮಾಡುತ್ತಿದ್ದನೋ ಆ ಸಮಸ್ತಕ್ರಿಯಾಕಲಾಪಗಳನ್ನೆಲ್ಲಾ ಜೀವಾಂತರ್ಗತ, ಜೀವನಿಯಾಮಕ, ಜೀವವಿಲಕ್ಷಣನಾದ ಆ ಬಿಂಬನೇ ಮಾಡಿ ಮಾಡಿಸುತ್ತಿರುವನು.

ಶ್ರೀಹರಿಯ ಬಿಂಬಕ್ರಿಯೆಯನ್ನು ಸರ್ವತ್ರ, ಸರ್ವಕಾಲ, ಅಧಿಷ್ಠಾನ, ದೇಶ, ಅವಸ್ಥಾದಿಗಳಲ್ಲಿ ಸ್ಮರಿಸುತ್ತಾ ಇರುವ ಪರಮಭಗವದ್ಭಕ್ತರು ನಿಷೇಧರೂಪವಾದ, ಪುಣ್ಯಕ್ಕೆ ವ್ಯತಿರಿಕ್ತವಾದ ಯಾವ ಕಾರ್ಯಗಳನ್ನು ಮಾಡಿದರೂ, ಅವು ಪ್ರತಿಕೂಲವಾಗುವುದಿಲ್ಲ. ಅನ್ಯ ಕರ್ಮಗಳಾದರೂ ಅವು ಪುಣ್ಯಕರ್ಮಗಳೆನಿಸುವುವು. ಕಾರಣವೇನೆಂದರೆ, ಪುಣ್ಯಕರ್ಮವಾಗಲೀ, ಪಾಪಕರ್ಮಗಳಾಗಲೀ, ಮಿಶ್ರಕರ್ಮವಾಗಲೀ, ಯಾವುದನ್ನು ಮಾಡುವುದಕ್ಕೆ ಜೀವನು ಸ್ವತಂತ್ರನಲ್ಲ. ಜೀವನ ದ್ವಾರಾ ನಡೆಯುತ್ತಿರುವ ಪುಣ್ಯ ಪಾಪ ಮಿಶ್ರಕರ್ಮಗಳೆಲ್ಲವೂ ಬಿಂಬಾಧೀನ. ಜೀವರ ಅನಾದಿಕರ್ಮಕ್ಕೆ ಅನುಗುಣವಾಗಿ ಕ್ರಿಯೆಗಳನ್ನೂ ಬಿಂಬನೇ ಜೀವರಲ್ಲಿ ನಿಂತು ನಡೆಯಿಸುತ್ತಾನೆ. ವಿಧಿನಿಷೇಧಗಳು ಯಾರಿಗೆ? ಜೀವನಿಗಲ್ಲವೇ ? – ಎಂಬ ಸಂಶಯವು ತಲೆದೋರುವುದು ಸಹಜ. ಆ ವಿಧಿನಿಷೇಧಗಳ ಲೇಪ ಯಾವಾಗ ಎಂದರೆ, ಆ ಜೀವನು ಸರ್ವಕರ್ತನಾದ ಬಿಂಬನ ಸ್ವತಂತ್ರಕರ್ತೃತ್ವವನ್ನು ಮರೆತು, ಅಹಂಕರ್ತೃತ್ವಭಾವದಿಂದ, ಅಹಂಕಾರ ಮಮಕಾರಗ್ರಸ್ತವಾಗಿ, ದೇಹಾಭಿಮಾನದಿಂದ, ನಾನೇ ಎಲ್ಲರದಕ್ಕೂ ಕರ್ತ ಎಂಬ ಭಾವನೆ ಹೊಂದಿದಾಗ, ಆ ಕರ್ಮಗಳ ಫಲ ಭಾಜನನಾಗುತ್ತಾನೆ. ಆದರೆ ಅಹಂಕರ್ತೃತ್ವವನ್ನು ಬಿಟ್ಟು, ಸರ್ವಕ್ಕೂ ಬಿಂಬನೆ ಕರ್ತಾ– ಎಂಬ ಬ್ರಹ್ಮಜ್ಞಾನಿಗಳಿಗೆ ಕರ್ಮಗಳ ಲೇಪವೇ ಇಲ್ಲ. ಅವರು ಕರ್ಮಜನ್ಯ ದೋಷವರ್ಜಿತರು.

ಪ್ರಮಾಣ :–

> "ಧರ್ಮೋಽಭವತ್ಯಧರ್ಮೋಽಪಿ ಕೃತೋ ಭಕ್ತೈಸ್ತವಾಚ್ಯುತ ।
> ಪಾಪಂ ಭವತಿ ಧರ್ಮೋಽಪಿ ಯೋ ನಭಕ್ತೈಃ ಕೃತೋ ಹರೇ । । "

**– ಎಂದು ಸದಾಚಾರಸ್ಮೃತಿ ವಾಕ್ಯ.**

ಭಕ್ತಿಭಾವದಿಂದ ಮಾಡಿದ ಕರ್ಮಗಳು ಪ್ರಮಾದವಶಾತ್ ಅಧರ್ಮವಾಗಿದ್ದರೂ, ಶ್ರೀ ಹರಿಯ ಪರಮಾನುಗ್ರಹದಿಂದ ಧರ್ಮವೇ ಎಂದೆನಿಸವುವು. ಯಾರು

ಭಕ್ತಿಹೀನರಾಗಿ, ಸತ್ಕರ್ಮಗಳನ್ನು ಮಾಡಿದಾರೂ, ಅವು ಅಧರ್ಮರೂಪನಾದ ಪಾಪಕರ್ಮಗಳೇ ಅಗುತ್ತವೆ. ನಿಷ್ಕಲ್ಮಷವಾದ ಭಕ್ತಿಯೇ ಬಿಂಬನ ಪರಮಾನುಗ್ರಹಕ್ಕೆ ಮುಖ್ಯಸಾಧನ. ಆ ಧರ್ಮಮೂರ್ತಿಯ ಪರಮಾನುಗ್ರಹವಾದ ಕೂಡಲೇ, ಪಾಪಗಳ ಲೇಪ ಆ ಜೀವನಿಗೆ ಎಂದಾದರೂ ಉಂಟೇ? ಶ್ರೀ ರಾಮನ ಪಾದಸ್ಪರ್ಶದಿಂದ ದೋಷಿಯಾಗಿದ್ದ ಅಹಲ್ಯಾ ಪಾವನೆಯಾದಳು. ಅಂತ್ಯಕಾಲದಲ್ಲಿ ನಾರಾಯಣ ಎಂದು ಒರಲಿದ ಅಜಾಮಿಳಗೆ ಸಮಸ್ತಪಾಪಕ್ಷಾಳನೆಗೈದು ಸದ್ಗತಿಯನ್ನು ಅನುಗ್ರಹಿಸಿದನು ಆ ಪರಮ ಕರುಣಾಸಾಗರ –ಹೀಗೆ ಪುರಾಣಗಲ್ಲಿ ದೃಷ್ಟಾಂತಗಳು ಹಲವಾರು. ಸರ್ವತ್ರವ್ಯಾಪ್ತನಾಗಿರುವ ಆ ಸರ್ವೋತ್ತಮನ್ನನ್ನು ಸ್ಮರಿಸದೇ, ತೀರ್ಥಾಟನೆ, ಗಂಗಾದಿಪವಿತ್ರತೀರ್ಥಗಳಲ್ಲಿ ಸ್ನಾನ, ಕ್ಷೇತ್ರಮೂರ್ತಿದರ್ಶನ, ಜಪ ತಪಾದಿಗಳು, ನಿತ್ಯ ತ್ರೈಕಾಲಿಕ ಸಂಧ್ಯಾವಂದನೆ, ಯೋಗಗಳು ಇತ್ಯಾದಿ ಯಾವ ಸತ್ಕರ್ಮಗಳನ್ನು ಮಾಡಿದರೂ, ಫಲವೇನೂಇಲ್ಲ. ಭಗವತ್ಪ್ರೀತಿಗಾಗಿ ಸಕಲಕರ್ಮಾನುಷ್ಠಾನ. ವ್ಯತಿರಿಕ್ತಕರ್ಮಗಳು ನಿಷ್ಫಲ. ಅನಂತವಾಗಿ ನಿತ್ಯ ಅನ್ನದಾನ, ವಸ್ತ್ರದಾನ, ಗೋದಾನ, ಅಶ್ವಗಜದಾನ, ಭೂದಾನ, ದ್ರವ್ಯದಾನಾದಿಗಳನ್ನು ಭಗವತ್ಪ್ರೀತಿಕರವಾಗಿ ಮಾಡದೇ ಇದ್ದರೆ ನಿರರ್ಥಕ ಎಂದು ತಾತ್ಪರ್ಯ.

ರಹಸ್ಯಾರ್ಥ:–

ಕಾರ್ಯ ಕಾರಣಭಾವದಿಂದ, ಒಂದು ಕಾರ್ಯ ನಡೆಯಬೇಕಾದರೆ, ಅದಕ್ಕೆ ಹಿನ್ನಲೆಯಾಗಿ ಮೂಲಭೂತವಾದ ಕಾರಣವಿದ್ದೇ ಇರಬೇಕು. ಕಾರ್ಯಾನಂತರ ಅದಕ್ಕನುಗುಣವಾದ ಫಲಪ್ರಾಪ್ತಿ. ಹೀಗೆ ಕಾರಣ–ಕಾರ್ಯ–ಫಲ ಎಂದು ತ್ರಿಕೋಣಸೂತ್ರವು. ಅದರಂತೆ ಪುಣ್ಯಕರ್ಮಬೀಜದಿಂದ ಪುಣ್ಯಕಾರ್ಯಾಚರಣೆ. ಅದಕ್ಕೆ ಪುಣ್ಯಕರ್ಮಜನ್ಯಫಲ. ಹಾಗೆಯೇ ಮಿಶ್ರ ಮತ್ತು ಪಾಪಕರ್ಮಗಳ ಪ್ರಾಪ್ತಿ. ಇದಕ್ಕೆ ಮೂಲಕಾರಣ ಅನಾದಿಕರ್ಮಬೀಜ. ಸ್ವರೂಪದೇಹದ ಸುತ್ತಲೂ ಲಿಂಗದೇಹವೆಂಬ ಆವರ್ಕವಿದೆ. ಇದು ತ್ರಿಗುಣಾತ್ಮಕವಾದುದ್ದು. 16 ಕಳೆಗಳಿಂದ

ಯುಕ್ತವಾಗಿರುವ ಶರೀರ. ಲಿಂಗದೇಹವು ಅನಾದಿ. ಈ ಲಿಂಗದೇಹಗತ ಸತ್ತ್ವ, ರಜ ಮತ್ತು ತಮ ಎಂಬ ತ್ರಿಗುಣಗಳ ಕಾರಣವಾಗಿ ಅನಾದಿಕರ್ಮ ಲಿಂಗಗತವಾಗಿದೆ. ಈ ಕಾರಣದಿಂದಲೇ ಲಿಂಗಶರೀರಕ್ಕೆ **ಕರ್ಮದೇಹವೆಂದು** ಹೆಸರು. ಅವ್ಯಕ್ತ ತತ್ತ್ವದಿಂದ ಯುಕ್ತವಾದ ಈ ದೇಹಕ್ಕೆ ತ್ರಿಗುಣಾಭಿಮಾನಿಗಳಾದ ಶ್ರೀ ಲಕ್ಷ್ಮೀಅಭಿಮಾನಿಯು. ಹೀಗೆ ರಮಾಭಿಮನ್ಯಮಾನವಾದ ಲಿಂಗದೇಹದಲ್ಲಿ ರಮಾಂತರ್ಗತನನಾದ ವಿಶ್ವ, ತೈಜಸ ಮತ್ತು ಪ್ರಾಜ್ಞರೂಪಗಳಿಂದ ಬಿಂಬನಾದ ಶ್ರೀಹರಿಯು ಶ್ರೀ ಲಕ್ಷ್ಮಿದೇವಿಯರ ಶ್ರೀ ಭೂದುರ್ಗಾರೂಪಗಳಿಗೆ ನಿಯಾಮಕನಾಗಿದ್ದು, ತದ್ವಾರಾ ಸತ್ತ್ವ, ರಜ ಮತ್ತು ತಮೋಗುಣಗಳ ವ್ಯಾಪಾರವನ್ನು ಮಾಡಿ ಮಾಡಿಸುವನು. ಈ ಕಾರಣದಿಂದ ಕರ್ಮಾಭಿವ್ಯಕ್ತಿ. ಜೀವರ ಅನಾದಿಯೋಗ್ಯತೆಗನುಗುಣವಾಗಿ, ಅನಾದಿ ಕರ್ಮವನ್ನನುಸರಿಸಿ, ಕರ್ಮಾಭಿವ್ಯಕ್ತಿ ಕರ್ಮಪತಿಯಾದ ಕೇಶವನಿಂದ. ಇದರಿಂದ ಜಗದ್ವಿಲಕ್ಷಣನಾದ ಜಗದೊಡೆಯನಿಗೆ ವೈಷ್ಯಾಮ್ಯಾದಿ ದೋಷಗಳಿಲ್ಲ . ನಿರ್ದೋಷನಾದ ಆ ನಿರಂಜನನಿಂದ ಅನಾದಿಕರ್ಮಾನುಸಾರ, ಕರ್ಮಾಭಿವ್ಯಕ್ತಿಯಾಗುತ್ತಿರುವುದರಿಂದ, ಸತ್ತ್ವಗುಣಪ್ರಾಚುರ್ಯದಿಂದ ಪುಣ್ಯಕಾರ್ಯಗಳೂ, ರಜೋಗುಣಪ್ರಾಚುರ್ಯದಿಂದ ಪಾಪ–ಪುಣ್ಯ ಮಿಶ್ರ ಕರ್ಮಗಳೂ ಮತ್ತು ತಮೋಗುಣ ಪ್ರಾಚುರ್ಯದಿಂದ ಪಾಪಕಾರ್ಯಗಳೂ ಪ್ರೇರಿತವಾಗಿ ನಡೆಯುತ್ತಿರುವುವು. ಈ ಜ್ಞಾನಾನುಸಂಧಾನವನ್ನು ಬಲ್ಲ ಬ್ರಹ್ಮ ಜ್ಞಾನಿಗಳಿಗೆ, ಪ್ರಮಾದವಶದಿಂದ ನಡೆದ ದೋಷರೂಪವಾದ ಅನ್ಯಕರ್ಮಗಳೂ ಪುಣ್ಯಬೀಜ–ಪಾಪ, ಪಾಪಬೀಜ ಪುಣ್ಯ ನ್ಯಾಯದಿಂದ, ಪುಣ್ಯಕರ್ಮಗಳೆಂದೆನಿಸಿ, ಭಗವತ್ಪ್ರೀತಿಗೆ ಕಾರಣವಾಗುವುವೇ ಹೊರತು, ಅವರ ಸತ್ಸಾಧನೆಗೆ ಪ್ರತಿಕೂಲ ವಾಗುವುದಿಲ್ಲ. ಶ್ರೀಹರಿಸ್ಮರಣೆ ಮರೆತು, ಅಹಂಕರ್ತೃತ್ವಭಾವದಿಂದ ಏನೇ ಸತ್ಕರ್ಮ ಮಾಡಲೀ, ಅವುಗಳಿಂದ ಪುಣ್ಯಫಲ ಪ್ರಾಪ್ತಿಯಿಲ್ಲ. ಅದನ್ನು ದೈತ್ಯರು ಸೆಳೆದೊಯ್ಯುವರು. ಆ ಕಾರ್ಯಗಳು ಶ್ರೀಹರಿಸ್ಮರಣೆ ವಿರಹಿತನಿಗೆ ಪ್ರತಿಬಂಧಕವೇ ಆಗುವುವು. ಇದೇ ಪ್ರಸಕ್ತಪದ್ಯದ ರಹಸ್ಯಾರ್ಥವು ||೮||

## ಪದ್ಯ ೯

ಮೂಲ :–

ಇಷ್ಟಭೋಜ್ಯಪದಾರ್ಥದೊಳು ಶಿಪಿ
ವಿಷ್ಟನಾಮದಿ ಸರ್ವಜೀವರ
ತುಷ್ಟಿಪಡಿಸುವ ದಿನದಿನದಿ ಸಂತುಷ್ಟ ತಾನಾಗಿ
ಕೋಷ್ಟದೊಳು ನೆಲೆಸಿದ್ದು ರಸಮಯ
ಪುಷ್ಟಿಯೈದಿಸುತಿಂದ್ರಿಯಗಳೊಳು
ಪ್ರೇಷ್ಟನಾಗಿದ್ದೆಲ್ಲ ವಿಷಯಗಳುಂಬ ತಿಳಿಸದಲೆ ||೯||

ಅವತರಣಿಕೆ

ಅನಿಷಿದ್ಧವಾದ ಭೋಜನಯೋಗ್ಯವಸ್ತುಗಳಲ್ಲಿ ವಿದ್ಯಮಾನನಾಗಿರುವ ಶಿಪಿವಿಷ್ಟನಾಮಕ ಸರ್ವಸಾರಭೋಕ್ತನು ಸರ್ವಚೇತನರ ಅನ್ನಮಯಾದಿ ಪಂಚಕೋಶಗಳಲ್ಲಿದ್ದು, ತಾನು ಭೋಜ್ಯವಸ್ತುಗತಸ್ವಾಖ್ಯರಸಸ್ವೀಕಾರದ್ವಾರಾ, ದೇಹಕ್ಕೆ ರಸವಿಭಾಗ ಮಾಡಿ, ಉಪಚಯ (ಪುಷ್ಟಿ) ನೀಡುತ್ತಾ, ಸರ್ವಕ್ಕೂ ಪ್ರೇರಕನಾಗಿ ಜೀವರಿಗೆ ತೃಪ್ತಿ ನೀಡುವನೆಂದು ತಿಳಿಸುತ್ತಾರೆ – **ಇಷ್ಟಭೋಜ್ಯ** – ಎಂಬ ಪ್ರಸಕ್ತ ಸಂಧಿಗತ ೯ನೆಯ ಪದ್ಯದಿಂದ. ||೯||

ಪ್ರತಿಪದಾರ್ಥ :–

**ಇಷ್ಟ** = ಜನರಿಗೆ ಇಷ್ಟವಾದ ನಿಷಿದ್ಧವಲ್ಲದ, **ಭೋಜ್ಯಪದಾರ್ಥದೊಳು** = ಭೋಜನಯೋಗ್ಯವಾದ ಸಕಲವಸ್ತುಗಳಲ್ಲಿಯೂ (ಭೋಜನ – ಎಂದರೆ ಕೇವಲ ತಿನ್ನುವಿಕೆ ಎಂದರ್ಥವಲ್ಲ. ಶ್ರವಣ, ದರ್ಶನ, ಸ್ಪರ್ಶ, ವಾಸನೆ ಇತ್ಯಾದಿಗಳೂ ವಿಷಯಪದಾರ್ಥಗಳೇ), **ಶಿಪಿವಿಷ್ಟನಾಮದಿ** = 'ಶಿಪಿವಿಷ್ಟ' – ಎಂಬ ಹೆಸರಿನಿಂದ (ವಿಷ್ಣುವಿಗೆ ಯಜ್ಞ ಎಂದು ಹೆಸರು. ಯಜ್ಞಪಶುವಿಗೆ – 'ಶಿಪಿ' ಎಂದು ಹೆಸರು.

ಯಜ್ಞನಾಮಕನಾಗಿ ಶ್ರೀವಿಷ್ಣುವು ಯಜ್ಞಪಶುಗಳಲ್ಲಿ ಪ್ರವಿಷ್ಟನಾಗಿರುವುದರಿಂದ, ತದ್ವಾರಾ ಯಜ್ಞಭೋಕ್ತನಾಗಿರುವುದರಿಂದ, ಪರಮಾತ್ಮನಿಗೆ – **'ಶಿಪಿವಿಷ್ಟ'** ನೆಂತ ಹೆಸರು) ಸರ್ವಜೀವರ = ಸಕಲತ್ರಿವಿಧರಾದ ಜೀವವರ್ಗಕ್ಕೆ, ತುಷ್ಟಿಪಡಿಸುವ = ತೃಪ್ತಿಯನ್ನೀಯುವವನು. ದಿನದಿನದಿ = ಅಂತಹ ಸರ್ವಸಾರಭೋಕ್ತ ಪ್ರತಿನಿತ್ಯದಲ್ಲೂ, **ಸಂತುಷ್ಟ ತಾನಾಗಿ** = ಆಪ್ತಕಾಮನಾಗಿದ್ದು, **ಕೋಷ್ಟದಲ್ಲಿ ನೆಲೆಸಿದ್ದು** =ಸ್ಥೂಲದೇಹಗತ ಅನ್ನಮಯಾದಿಪಂಚಕೋಶಗಳಲ್ಲಿ ಅನಿರುದ್ಧಾದಿ ಪಂಚರೂಪಗಳಿಂದ ವಿದ್ಯಮಾನನಾಗಿದ್ದು, **ರಸಮಯ** = ಭೋಜ್ಯವಸ್ತುಗತ ಭಗವದ್ರೂಪಗಳಲ್ಲಿ ಸ್ವಾಖ್ಯರಸಪದವಾಚ್ಯನಾಗಿದ್ದು ರಸಕ್ಕೆ ರಸರೂಪನಾಗಿ, **ಪುಷ್ಟಿಗೈಸುತ** = ಬಿಂಬಕ್ರಿಯಾದ್ವಾರಾ, ಸ್ಥೂಲದೇಹಕ್ಕೆ ರಸವಿಭಾಗದ್ವಾರಾ ಉಪಯಚ ಕೊಡುತ್ತಾ (ವೃದ್ಧಿಮಾಡುತ್ತಾ), **ಇಂದ್ರಿಯಗಳೊಳು** = ದೇಹಗತ ಮನಾದಿ ಏಕಾದಶೇಂದ್ರಿಯಗಳಲ್ಲಿ, **ಪ್ರೇಷ್ಟನಾಗಿದ್ದು** = ಪ್ರಿತಿವಿಷಯನಾಗಿದ್ದು (ಆಪ್ತ), **ತಿಳಿಸದಲೆ** = ತಾನು ಮಾತ್ರಾ ಗೋಚರನಾಗದೇ, **ಎಲ್ಲ ವಿಷಯಗಳುಂಬ** = ಸಮಸ್ತವಿಷಯಾಂತರ್ಗತಭಗವದ್ರೂಪಗಳಲ್ಲಿ ರಮಣ ಮಾಡುತ್ತಾ ಸ್ವಾಖ್ಯರಸ ಸ್ವೀಕಾರ ಮಾಡುವನು. ||೯||

## ವ್ಯಾಖ್ಯಾನಗಳು

### (೧) ಶ್ರೀ ಸಂಕರ್ಷಣಒಡೆಯರ ವ್ಯಾಖ್ಯಾನ : –

ಪೂರ್ವೋಕ್ತ ಆರುರಸಗಳ ಭೋಜನದಿಂದ ತುಷ್ಟಿಪಡಿಸಕ್ಕ ಭಗವದ್ರೂಪ ಹೇಳತಾರೆ.

ಅನಿಷ್ಟಪ್ರದಗಳಲ್ಲದ ಇಷ್ಟಪ್ರದಗಳಾದ, ಭೋಗಯೋಗ್ಯಗಳಾದ ಅನಿಷಿದ್ಧಗಳಾದ ಪದಾರ್ಥಗಳಲ್ಲಿ ಗರುಡನ ಮ್ಯಾಲೆ ಆವಿಷ್ಟನಾದ ಕೃಷ್ಣರೂಪಿಪರಮಾತ್ಮ ಇದ್ದವನಾಗಿ **'ಪುತ್ರಕಾಮೇಷ್ಟಿ ದೇವತಾ ಹರೇಃ ರೂಪಂ' ಭಾಗವತ ಚತುರ್ಥಸ್ಕಂಧ,**

ಭೋಜನಾನಂತರ ಜೀವರಸ ತತ್ತ್ವಾಭಿಮಾನಿದೇವತೆಗಳ ದ್ವಾರಾ ಸ್ಥೂಲದೇಹದ್ವಾರಾ ತುಷ್ಟಿ ಬಡಿಸುವ, ಜೀವಗೆ ಭೋಜನ ಮಾಡಿಸಿ ತೃಪ್ತಿಬಡಿಸುವನಾಗತಾನೆ ಎಂದ ತಾತ್ಪರ್ಯ. ಜೀವ ಭೋಜನಮಾಡತಕ್ಕ ಪ್ರಾಕೃತಪದಾರ್ಥದಲ್ಲಿ ಜೀವನ ದೇಹಕ್ಕೆ ಉಪಚಯವಾಗತಕ್ಕ ರಸವೇ ಇಲ್ಲ. ಆದ್ದರಿಂದ ಜೀವನ ದ್ವಾರಾ ದೇಹಕ್ಕೆ ಭೋಜನ ಮಾಡಿಸಿ, ದೇಹಾಭಿಮಾನ ಜೀವಗೆ ಇರೋಣದರಿಂದ, ದೇಹಕ್ಕೆ ಆದ ಉಪಚಯ ತನ್ನದೆಂದು ವ್ಯಾಪ್ತವಾದ ಜೀವೇಂದ್ರಿಯಗಳಿಗೆ ತಿಳಿಸಿ ತೃಪ್ತಿ ಬಡಿಸುವ. ಪ್ರತಿದಿನದಲ್ಲೂ ಜೀವಭುಕ್ತಪ್ರಾಕೃತರಸಗಳೊಳಗೆ ಪರಮಾತ್ಮ ರಸಮಯನಾಗಿದ್ದು, ಜೀವರ ಸ್ಥೂಲದೇಹದ ಉದರದಲ್ಲಿ ಬಿಂಬನಾಗಿ ಆವಾಸನಾಗಿದ್ದು, ದೇಹಾಕಾರನಾಗೀನೂ ಇದ್ದು, ಜೀವಭುಕ್ತದ್ವಾರಾ ತನ್ನ ಸ್ವಾಖ್ಯರಸಗಳು ತಾನುಂಡು ತನ್ನಿಂದ ತಾನೇ ಸಂತುಷ್ಟಿತನಾಗಿ, ಪ್ರಾಣಿಗಳ ಸ್ಥೂಲದೇಹದ ಮನ ಆದಿ ಏಕಾದಶೇಂದ್ರಿಯಗಳೊಳು ಹಾಗೆ ಸರ್ವಾಯವಗಳೊಳು ವ್ಯಾಪ್ತನಾಗಿ, ದೇಹಗತಜೀವಗೆ ಆಪ್ತನಾಗಿದ್ದು, ಭೋಜನಮಾಡಿದ ಪ್ರಾಕೃತರಸಗಳಿಂದ ಪ್ರಾಕೃತಸ್ಥೂಲದೇಹವನ್ನು ಪುಷ್ಟಿಗೈಸುತ, ತನ್ನ ಸ್ವಾಖ್ಯರಸಗಳ ತಾನು ಊಟ ಮಾಡೋದರನ್ನ ತನ್ನ ಕೂಡಾ ದೇಹದಲ್ಲಿ ವಿದ್ಯಮಾನನಾದ ಜೀವಗೆ ತಿಳಿಸದಲೆ, ಜೀವನಾದವ ದಾವ ದಾವ ವಿಷಯಗಳ ಉಣತಾನೋ, ಆ ಅಲ್ಪವಿಷಯಗಳಲ್ಲಿ ಇರತಕ್ಕ ತನ್ನ ಸ್ವಾಖ್ಯವಾದ ಎಲ್ಲಾ ವಿಷಯಗಳೂ ಉಣತಾನೆ ಎಂತ ತಾತ್ಪರ್ಯ ||೯||

(೩) ಭಾವಪ್ರಕಾಶಿಕೆ :—

ಪ್ರಾಣಿಗಳು ಪ್ರೀತಿಯಿಂದ ಭೋಗಿಸಲು ಯೋಗ್ಯವಾದ ಪದಾರ್ಥಗಳಲ್ಲಿ **ಶಿಪಿವಿಷ್ಟನೆಂಬ** ಹೆಸರುಳ್ಳ ಪರಮಾತ್ಮನು ಇದ್ದು, ತಾನು ತೃಪ್ತನಾಗಿ ಎಲ್ಲಾ ಜೀವರನ್ನೂ ತೃಪ್ತಿ ಪಡಿಸುವನು. **"ಯಜ್ಞೋವೈವಿಷ್ಣುಃ ಪಶವಃ ಶಿಪಿರ್ಯಜ್ಞ ಏವ ಪಶುಷು ಪ್ರವಿಷ್ಟಃ"** – ಎಂದು **ಶ್ರುತಿವಾಕ್ಯಾನುಸಾರ.** ವಿಷ್ಣುವಿಗೆ ಯಜ್ಞ ಎಂದು ಹೆಸರು. **ಶಿಪಿ** – ಎಂದರೆ ಯಜ್ಞಪಶು. ಯಜ್ಞನಾಮಕನು ಪಶುಗಳಲ್ಲಿ

ಪ್ರವಿಷ್ಟನಾಗಿರುವುದರಿಂದ **ಶಿಪಿವಿಷ್ಟನೆಂದು** ಪರಮಾತ್ಮನಿಗೆ ಹೆಸರು. ದೇಹದೊಳಗಿನ ಅನ್ನಮಯಾದಿ ಕೋಷ್ಟ (ಕೋಶ)ಗಳಲ್ಲಿ ರಸಮಯನೆಂಬ ಪರಮಾತ್ಮನು ಇದ್ದು, ದೇಹಗಳನ್ನು ಪುಷ್ಟಿಯಾಗುವಂತೆ ಮಾಡುವನು. ಇಂದ್ರಿಯಗಳಲ್ಲಿ ಎಲ್ಲರಿಗೂ ಬೇಕಾದವನಾಗಿದ್ದು, ಜೀವರಿಗೆ ತಿಳಿಸದೇನೆ, ವಿಷಯಭೋಗಗಳನ್ನುಂಡು ಉಣಿಸುವನು. ||೯||

**(೩) ಭಾವದರ್ಪಣಟೀಕಾ :–**

ಇಷ್ಟ ಭೋಗ್ಯೇತಿ ॥ "ಶಿಪವಿಷ್ಟ ಇತಿ" ॥ **"ಶಿಪವಃ ಯಜ್ಞಪಶವಃ ತೇಷು ಪ್ರವಿಷ್ಟ ಇತಿ –ಶಿಪಿವಿಷ್ಟಃ"** ॥ ಯಾವ ಸ್ತಂಭಕ್ಕೆ ಕಟ್ಟುವ ಯಜ್ಞಪಶುವಿನಲ್ಲಿ ಯಜ್ಞರೂಪದಿಂದ ಪ್ರವಿಷ್ಟನಾಗಿರುತ್ತಾನೆಂಬರ್ಥ.

"ಯಜ್ಞೋವೈವಿಷ್ಣುಃ ಪಶವಃ ಶಿಪಿರ್ಯಜ್ಞಏವೈಪಶುಷು ಪ್ರವಿಷ್ಟತಿ ॥" ಇತಿಶ್ರುತೇಃ

ಪ್ರೇಷ್ಠಂ – ಅತ್ಯಂತ ಇಷ್ಟನಾದವ ||೯||

**(೪) ಶ್ರೀವ್ಯಾಸದಾಸ ಸಿದ್ಧಾಂತ ಕೌಮುದೀ (ಸಂಸ್ಕೃತಮೂಲ) :–**

"ಇಷ್ಟ " ಇತಿ॥ "ಓಂ ಗೃಣೇ ವಿಶ್ರು (ಶ್ವ) ತಯೋ ಯಥಾಯಥಮಿಂದ್ರ ತ್ವದ್ಯಂತಿರಾತಯಃ ॥ (ತ್ವದ್ಯಾತಿರಾತಯಃ)॥ ತ್ವಾಮಿಚ್ಛ ವಸಸ್ಪತೇಯಂತಿಗಿರೋನ ಸಂಜಯಃ ಓಂ"॥ ಪರಮೇಷ್ಟ ಸುಖರೂಪತ್ವಾತ್ ಇಷ್ಟಃ॥ ಅಥವಾ ವೇದವಾಚಾಂ ಪ್ರತಿಪಾದಯಂತಂ ಇಷ್ಟಃ॥ "ಓಂ ರಾಜಾ ಆಸಸ್ರಾಣಾಂ ಸಃ (ಶ್ರಾಣಾಸಃ) ಶವಸಾನಮಚ್ಛೇಂದ್ರಂ ಸುಚಕ್ರೇ ರಥ್ಯೋಸೌ ಅಶ್ವಾಃ॥ ಅಭಿಶ್ರವ ಋಚ್ಯಂತೇ ವಹಯನ್ ಚೆನ್ನು ಓಂ"॥ (ಅಭಿಶ್ರಾಋಚ್ಯಂತೋವಹೇಯನ್ರ್ೂ ಚೆನ್ನ)॥ ಶಿಪಿ– ಯಜ್ಞಃ ॥ ಶಿಪಿಯಯ್ಞಸಾಧನಚರು ಪುರೋಡಾಶಾದಿಕಂ ವಿಶತಿ ಪ್ರವಿಶತಿ ಗೃಹ್ಣಾತಿ

ಇತಿ – ಶಿಪಿವಿಷ್ಟಃ ॥ ಕೋಷ್ಟಃ – ದೇಹಃ ॥ ರಸಮಯಃ–ಉತ್ತಮತ್ವ = ಪ್ರಚುರಃ ॥೯॥

**ಕನ್ನಡಾರ್ಥ :–**

"ಇಷ್ಟ " ಎಂಬ ಶಬ್ದವು ಶ್ರೀ ಪರಮಾತ್ಮನ **ಸಹಸ್ರನಾಮಾಂತರ್ಗತವಾಗಿದೆ.** ಈ ನಾಮದ ಶಬ್ದಾರ್ಥವನ್ನು ಬೃಹತೀಛಂದಸ್ಸಿನ **ಮಂತ್ರವು** – **"ಗೃಣೇ ವಿಶ್ವತಯಾ"** – ಇತ್ಯಾದಿ ವಿವರಿಸುತ್ತದೆ. ಪರಮಇಷ್ಟವಾದ, ಸುಖಪ್ರದಸ್ವರೂಪ ನಾದ್ದರಿಂದ "ಇಷ್ಟ"– ನೆಂದು ಪರಮಾತ್ಮನಿಗೆ ಹೆಸರು. ಪರಮಪ್ರಿಯನಾದ್ದರಿಂದ, ಇಷ್ಟನಾಮಕನು ಇದು **ಶ್ರುತ್ಯರ್ಥವು.** ವೇದವಾಕ್ಯಗಳು ಪರಮಮುಖ್ಯ ವೃತ್ತಿಯಿಂದ ಪರಮಾತ್ಮನನ್ನೇ ಹೇಳುವುವು. ವೇದಪ್ರತಿಪಾದ್ಯನು ಶ್ರುತಿವಾಕ್ಯಗಳಿಗೆ ಮುಖ್ಯ ತಾತ್ಪರ್ಯನು.

ಶಿಪಿವಿಷ್ಟ – ಎಂಬ ನಾಮವು **ವಿಷ್ಣುಸಹಸ್ರನಾಮಾಂತರ್ಗತವಾದುದು.** ***"ಶಿಪಿ"*** – ಎಂದರೆ, ಯಜ್ಞಸಾಧನದ್ರವ್ಯಗಳಾದ ಚರು ಪರೋಡಾಶ ಮುಂತಾದ ಹವಿರ್ದ್ರವ್ಯಗಳು. ಇವುಗಳಲ್ಲಿ ಪ್ರವೇಶಿಸಿ, ಸ್ವೀಕರಿಸುವುದರಿಂದ ಭಗವಂತನಿಗೆ **ಶಿಪಿವಿಷ್ಟನೆಂದು** ಹೆಸರು. ಇದು **ಬೃಹತೀಮಂತ್ರಸಾರಾರ್ಥವು.** 'ಕೋಷ್ಟ' ಎಂಬ ಪದಕ್ಕೆ ದೇಹವೆಂದರ್ಥ. "ರಸಮಯ" ಎಂದರೆ, ಉತ್ತಮತ್ವ ಪ್ರಚುರ ಎಂದರ್ಥ. ಪರಮಾತ್ಮನ ಉತ್ತಮೋತ್ತಮ ರಸಸ್ವಭಾವಕ್ಕೆ ಮಿತಿ ಇಲ್ಲ. ಅದು ಅಪರಿಮಿತವು. *"ಸ ಏಷ ರಸಾನಾಂ ರಸತಮಃ ಪರಮಃ ಪರಾರ್ಧ್ಯಃ ।* ." – ಎಂಬ *ಛಾಂದೋಗ್ಯ ಉಪನಿಷತ್ತಿನ ವಚನವು* ಇದಕ್ಕೆ ಆಧಾರವಾಗಿದೆ. ॥೯॥

## (ಜ) ಶ್ರೀ ಗುರುಹೃದಯಪ್ರಕಾಶಿಕೆ ವ್ಯಾಖ್ಯಾನ : –

ಶಿಪಿವಿಷ್ಟರೂಪ ಚಿಂತನೆ ತಿಳಿಸುತ್ತಾರೆ, ಇಷ್ಟವೆಂದು, *ಶಿದಲು ವಿಶರಣೆ* ಎಂಬ ಧಾತುರೀತ್ಯಾ, ಶೀದಮಾನವೆಂದರೆ ಬಳಲುವ ದೇಹವನ್ನು ಪಿನದ್ಧ ಎಂದರೆ, ಪುಷ್ಟಿ

ಮಾಡುವುದರಿಂದ ಸಿಪಿ ಎಂಬ ಇಷ್ಟ ಭೋಗ್ಯವಸ್ತುಗಳಲ್ಲಿ ವ್ಯಾಪ್ತನಾದ್ದರಿಂದ ಸಿಪಿವಿಷ್ಟ ನೆಂದು ಹೆಸರುಳ್ಳ ಅಥವಾ ಸಿಪವಃ ಯಜ್ಞಪಶವಃ ತೇಷು ಪ್ರವಿಷ್ಟಃ ಸಿಪಿವಿಷ್ಟಃ ಅಂದರೆ ಯಜ್ ಪೂಜಾಯಾಂ ಎಂಬ ಧಾತುವಿನಿಂದ ಪರಮಾತ್ಮನ ಪೂಜಾಕ್ಕೆ ಯೋಗ್ಯವಾದ ಸಮಸ್ತ ಪದಾರ್ಥಗಳಲ್ಲಿಯೂ ಪ್ರವಿಷ್ಟನಾಗಿರುವುದರಿಂದ ಸಿಪಿವಿಷ್ಟನೆಂಬ ಹೆಸರುಳ್ಳ, ರಸಮಯ ಎಂದರೆ, ಅನ್ನಾದಿ ಸರ್ವರಸದಲ್ಲೂ, ಪ್ರಚುರ ಎಂಬ ಅತಿಶಯರಸರೂಪದೇವರು ಸರ್ವಜೀವರನ್ನೂ ತೃಪ್ತಿಪಡಿಸುತ್ತಾ, ಸರ್ವೇಂದ್ರಿಯಗಳಲ್ಲೂ ವ್ಯಾಪ್ತನಾಗಿರುವುದರಿಂದ ಅತ್ಯಂತ ಇಷ್ಟನು. ಸರ್ವವಿಷಯಗತ ಸ್ವರಸವನ್ನು ಸ್ವೀಕರಿಸುವನು. ಕೋಷ್ಟವೆಂಬ ಅನ್ನಮಯಾದಿಕೋಶದಲ್ಲಿದ್ದು, ರಸಗಳಲ್ಲಿ ಪ್ರಚುರರೂಪನಾದ ಸ್ವಾಮಿಯು ಪುಷ್ಠಿ ಎಂಬ ಶರೀರೇಂದ್ರಿಯ ವೃದ್ಧಿಕೊಡುತ್ತಾ ಅಜ್ಞರಿಗೆ ತಿಳಿಸದಂತೆ ಇರುವನು, ಆದಾಗ್ಯೂ ನಿತ್ಯಸಂತುಷ್ಟನು.

ಷಾಡ್ವರ್ಗೀತಂ ಜಿಘ್ರತಿ ಷಡ್ಗುಣೇಶಃ ಎಂಬ ಭಾಗವತಾರ್ಥ.

ಅಹಂ ವೈಶ್ವಾನರೋಭೂತ್ವಾ ಪ್ರಾಣಿನಾಂ ದೇಹಮಾಸ್ಥಿತಃ ।
ಪ್ರಾಣಾಪಾನ ಸಮಾಯುಕ್ತಃ ಪಚಾಮ್ಯನ್ನಂ ಚತುರ್ವಿಧಂ ॥
ಎಂಬ ಗೀತಾರ್ಥ ಸಹ ವಿವರಿಸಲ್ಪಟ್ಟಿತು ॥೯॥

## ಸರ್ವವ್ಯಾಖ್ಯಾನಸಾರಸಂಗ್ರಹ

ಶಿಪಿವಿಷ್ಟ ನಾಮಕ ಸರ್ವಸಾರಭೋಕ್ತನಾದ ಸ್ವರಮಣನು ದೇಹಗತ ಪಂಚಕೋಶಗಲ್ಲಿ ನೆಲೆಸಿದ್ದು, ರಸಮಯನೆಂದೆನಿಸಿ, ೭೨,೦೦೦ ನಾಡಿಗಳ ದ್ವಾರಾ ರಸವಿಭಾಗಗೈದು, ತದ್ವಾರಾ ಸ್ಥೂಲದೇಹಕ್ಕೆ ಉಪಚಯರೂಪವಾದ ಪುಷ್ಟಿಯನ್ನೀಯುತ್ತಾ, ಜೀವರಿಗೆ ತೃಪ್ತಿಯನ್ನು ಕೊಡುವನು ಎಂಬ ರಸ್ಯಾರ್ಥವನ್ನು ತಿಳಿಸುತ್ತಾರೆ. ಇಷ್ಟ – ಎಂಬ ಪ್ರಸಕ್ತಪದ್ಯದಿಂದ.

೧ ಶ್ರೀಪರಮಾತ್ಮನು ಜೀವರಿಗೆ ಪರಮಪ್ರಿಯನಾಗಿರುವನು.

ಜೀವರಿಗೆ ಆನಂದವನು ಕೊಡುವುದರಿಂದ ಆ ಸುಖಪ್ರದಸ್ವರೂಪನಿಗೆ ಇಷ್ಟ ನೆಂದು ಹೆಸರು. ಈ ಪದದ ಶಬ್ದಾರ್ಥವು ವಿಷ್ಣುಸಹಸ್ರನಾಮಗಳಲ್ಲಿ ಒಂದು. ಇದರ ಅರ್ಥವನ್ನು ಬೃಹತೀಛಂಧಸ್ಸಿನ ಮಂತ್ರವು ವಿವರಿಸುವುದು.

೨ ನಿಷಿದ್ಧವಲ್ಲದ ಭೋಜನಯೋಗ್ಯವಾದ ವಸ್ತುಗಳೆಲ್ಲವೂ ಭೋಜ್ಯ ಪದಾರ್ಥಗಳೆನಿಸುವುವು . ಭೋಜನ ಎಂದರೆ ಜೀವ ನಾಲಿಗೆಯಿಂದ ರುಚಿ ನೋಡುವ ಪದಾರ್ಥಗಳಷ್ಟೇ ಅಲ್ಲ. ಶಬ್ದ, ಸ್ಪರ್ಶ, ರೂಪ, ರಸ ಮತ್ತು ಗಂಧಗಳೆಂಬ ವಿಷಯಗಳು ಕ್ರಮವಾಗಿ ಶ್ರವಣೇಂದ್ರಿಯ, ತ್ವಗಿಂದ್ರಿಯ, ನೇತ್ರೇಂದ್ರಿಯ, ರಸನೇಂದ್ರಿಯ ಮತ್ತು ಘ್ರಾಣೇಂದ್ರಿಯಗಳಿಗೆ ಸನ್ನಿಕರ್ಷವಾದಾಗ, ಆ ವಿಷಯ ಸನ್ನಿಕರ್ಷದಿಂದ ಮನಸ್ಸಿನ ದ್ವಾರಾ ಆ ವಿಷಯಗಳ ಭೋಗಾನುಭವವುಂಟಾಗುವುದು. ಹೀಗೆ ಶಬ್ದಾದಿಸಕಲವಿಷಯಗಳೂ **ಭೋಜ್ಯಪದಾರ್ಥಗಳೇ** ಆಗಿವೆ.

೩. ಜೀವರಿಗೆ ಪರಮಾಪ್ತನಾದ ಇಷ್ಟನಾಮಕ ಪರಮಾತ್ಮನು ವಿಷಯರೂಪಗಳಾದ ಸಕಲಭೋಜ್ಯಪದಾರ್ಥಗಳಲ್ಲಿ ಶಿಪಿವಿಷ್ಟ ನೆಂಬ ಹೆಸರಿನಿಂದ ವಿದ್ಯಮಾನನಾಗಿದ್ದಾನೆ. ಸಕಲಯಜ್ಞಗಳಿಗೆ ಮುಖ್ಯವಿಷಯನಾದ ವಿಷ್ಣುವಿಗೆ ಯಜ್ಞ ಎಂದು ನಾಮ. ಯಾಗಸ್ತಂಭಕ್ಕೆ ಕಟ್ಟಿರುವ ಯಜ್ಞಕ್ಕೆ ಅಹುತಿ ಕೊಡುವ ಯಜ್ಞಪಶುವಿಗೆ ಶಿಪಿ ಎಂದ ಹೆಸರು. ಯಜ್ಞನಾಮಕವಿಷ್ಣುವು ಶಿಪಿನಾಮಕ ಯಜ್ಞಪಶುಗಳಲ್ಲಿ ಪ್ರವಿಷ್ಟನಾಗಿರುವುದರಿಂದ ಪರಮಾತ್ಮನಿಗೆ **ಶಿಪಿವಿಷ್ಟ** ನೆಂದು ಹೆಸರು.

## ಪ್ರಮಾಣ :—

"ಯಜ್ಞೋವೈವಿಷ್ಣುಃ ಪಶವಃ ಶಿಪಿರ್ಯಜ್ಞಏವೈ ಪಶುಷು ಪ್ರವಿಷ್ಟಃ" — ಶ್ರುತಿಪ್ರಮಾಣ.

"ಶಿಪವಃ ಯಜ್ಞ ಪಶವಃ ತೇಷು ಪ್ರವಿಷ್ಟಃ ಇತಿ— ಶಿಪಿವಿಷ್ಟಃ"

ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನದಲ್ಲಿ. ಶಿಪಿ — ಗರುಡನ ಮೇಲೆ, ವಿಷ್ಟ—

ಆರೋಢನಾಗಿರುವ ಗರುಡಾರೂಢ ಕೃಷ್ಣನೆಂದು ಹೇಳಿದ್ದಾರೆ. ಪ್ರಸಕ್ತಪದ್ಯದಲ್ಲಿ ಭೋಜ್ಯವಸ್ತುಗತ ರಸವಿಭಾಗದ ವಿಷಯ ಪ್ರಸಕ್ತವಾಗಿರುವುದರಿಂದ, ಯಜ್ಞಪಶುವಿನಲ್ಲಿ ಪ್ರವಿಷ್ಟನಾಗಿರುವ ಯಜ್ಞನಾಮಕ ವಿಷ್ಣುವೆಂದು ತಿಳಿದು, ಆ ವಿಷ್ಣುವೇ ಗರುಡವಾಹನನಾಗಿದ್ದಾನೆಂದು ಸಮನ್ವಯ ಮಾಡಿಕೊಳ್ಳಬಹುದು. ಯಜ್ಞಸಾಧನ ಸಾಮಗ್ರಿಗಳಾದ ಚುರು ಪುರೋಡಶ ಇತ್ಯಾದಿ ಹವಿರ್ದ್ರವ್ಯಗಳಲ್ಲಿ ಪ್ರವಿಷ್ಟನಾಗಿರುವ ಭಗವದ್ರೂಪಕ್ಕೆ ಶಿಪಿವಿಷ್ಟ ಎಂದರ್ಥಮಾಡಿದರೆ ಹೆಚ್ಚು ಸಮಂಜಸವೆನಿಸುವುದು. ಪರಮಾತ್ಮನ ಈ ಶಿಪಿವಿಷ್ಟ ಎಂಬ ನಾಮವು ವಿಷ್ಣು ಸಹಸ್ರನಾಮಾಂತರ್ಗತವಾಗಿದೆ. ಬೃಹತೀಮಂತ್ರವು ಈ ಶಬ್ದಾರ್ಥವನ್ನು ವಿವರಿಸುವುದು.

"ಶಿದಲು, ವಿತರಣೆ'' –ಎಂಬ ಧಾತುರೀತ್ಯಾ **ಶೇದಮಾನವೆಂದರೆ,** ಬಳಲುವ ದೇಹವನ್ನು **ಪಿನದ್ಧ** ಎಂದರೆ, ಪುಷ್ಟಿಮಾಡುವುದರಿಂದ, **ಸಿಪಿ** ಎಂಬ ಇಷ್ಟ ಭೋಗ್ಯವಸ್ತುಗಳಲ್ಲಿ ವ್ಯಾಪ್ತನಾಗಿರುವುದರಿಂದ , ಪರಮಾತ್ಮನಿಗ ಸಿಪಿವಿಷ್ಟನೆಂದು ಹಸರು (ಗುರು ಹೃದಯ ಪ್ರಕಾಶಿಕಾ ವ್ಯಾಖ್ಯಾನಪ್ರಕಾರ). ಯಾವರೀತಿಯಿಂದ ಅರ್ಥಮಾಡಿದರೂ, ನಾವುಮಾಡುವ ಭೋಜನಕ್ರಿಯೆಯು ಪರಮಾತ್ಮನಿಗೆ ಯಜ್ಞರೂಪವಾದ ಪೂಜೆ ಎಂದರ್ಥ. ಭೋಜ್ಯವಸ್ತುಗಳಲ್ಲಿ ಅಂತರ್ಗತನಾಗಿರುವ ರಸಮಯಾತ್ಮಕಭಗವದ್ರೂಪವೇ **ಶಿಪಿವಿಷ್ಟ** ವೆನಿಸುವುದು.

೪. ಇಂತು ಇಷ್ಟನಾಮಕನಾದ ಶಿಪಿವಿಷ್ಟ ಶಬ್ದವಾಚ್ಯನಾದ ಶ್ರೀಪರಮಾತ್ಮನು ಸಕಲಭೋಜ್ಯವಸ್ತುಗಳಲ್ಲಿದ್ದು, ಸರ್ವವಿಧವಾದ ತ್ರಿವಿಧಜೀವವರ್ಗಕ್ಕೂ ತೃಪ್ತಿಪಡಿಸುವನು. ( ತೃಪ್ತಿಪಡಿಸುವ) ಈ ಕ್ರಿಯೆಯಿಂದ ಆಪ್ತಕಾಮನಾದ ಪರಮಾತ್ಮನಿಗೆ ಪ್ರಯೋಜನವೇನೂ ಇಲ್ಲ. ಜೀವರ ತೃಪ್ತಿಗಾಗಿ, ಜೀವರಿಗೆ ಪರಮಾಪ್ತನಾಗಿರುವುದರಿಂದ, ಈ ವ್ಯಾಪಾರ ನಡೆಸುವನು. ಸ್ವರಮಣನಾದ ಆ ಸಿರಿರಮಣನು ಸಂತುಷ್ಟನು. ಸಂತುಷ್ಟ ತಾನಾಗಿದ್ದು, ಪ್ರತಿನಿತ್ಯದಲ್ಲೂ ಜೀವರನ್ನು ತುಷ್ಟಿಡಿಸುತ್ತಿರುವ ಆ ಮಹಾಮಹಿಮನೆಂತಹ ಕರುಣಾಳು?

೫. ಸ್ಥೂಲದೇಹದಲ್ಲಿ ಅನ್ನಮಯ, ಪ್ರಾಣಮಯ, ಮನೋಮಯ, ವಿಜ್ಞಾನಮಯ ಮತ್ತು ಆನಂದಮಯಗಳೆಂಬ ಪಂಚಕೋಶಗಳಿವೆ. ಇವುಗಳನ್ನು **ಕೋಷ್ಠ** ವೆಂದು ಹೇಳಿರುವರು. ಕೋಷ್ಠ ಎಂದರೆ ಸ್ಥೂಲದೇಹ ಎಂತಲೂ ಇನ್ನೊಂದರ್ಥ. ಈ ಪಂಚಕೋಶಗತನಾಗಿ, ಅನಿರುದ್ಧಾದಿಪಂಚರೂಪಗಳಿಂದ ನೆಲೆಸಿದ್ದಾನೆ. ಪಂಚಕೋಶಗತಪರಮಾತ್ಮನಿಗೆ **ರಸಮಯನೆಂದು** ಹೆಸರು.ಸಮಸ್ತ ವಿಷಯಗಳಲ್ಲಿ ಅಂತರ್ಗತನಾಗಿದ್ದು, ಅವುಗಳ ಸಾರಭೂತವಾದ ರಸದಲ್ಲಿ **ಪ್ರಚುರ** ಎಂಬ ರಸಪ್ರಾಚುರ್ಯರೂಪದಿಂದ್ದಾನೆ. ಭೋಜ್ಯವಸ್ತುವಂತರ್ಗತ, ರಸಪ್ರಾಚುರ್ಯವಾದ ಭಗವದ್ರೂಪಕ್ಕೆ **ರಸಮಯ** ಎಂದು ಹೆಸರು.

ಪ್ರಮಾಣ :—

"ಏಷ ರಸಾನಾಂ ರಸತಮಃ ಪರಮಃ ಪರಾರ್ಧ್ಯಃ" — ಛಾಂಧೋಗ್ಯುಪನಿಷದ್ವಾಕ್ಯ.

೬. ಇಂತು ರಸಮಯನಾಮಕನು ಮನಾದಿ ಏಕಾದಶೇಂದ್ರಿಯಗಳಲ್ಲಿ ನೆಲೆಸಿದ್ದು. ಅಯಾಯಾ ಇಂದ್ರಿಯಗಳಿಗೆ ವಿಷಯವಾಗಿರುವ ಶಬ್ದಾದಿಗಳಲ್ಲಿ ತಾನು ವ್ಯಾಪ್ತನಾಗಿರುವ ತನ್ನದೇ ಆದ ಸ್ವಾಖ್ಯರೂಪವಾದ ಭಗವದ್ರೂಪಗಳಲ್ಲಿ ಕ್ರೀಡಿಸುವನು. ಆಗ ಸ್ಥೂಲವಿಷಯಗಳನ್ನು ಸ್ವಾಖ್ಯರಸ ಸ್ವೀಕಾರರೂಪೇಣ, ಸ್ವೀಕರಿಸುವುದರಿಂದ, ವಿಷಯಗಳನ್ನು ಉಂಬುವನು. ಇದು ಬಿಂಬಕ್ರಿಯಾ. ತದ್ವರಾ ಪ್ರತಿಬಿಂಬ ಭೂತರಾದ ಜೀವರಿಗೆ ತೃಪ್ತಿರೂಪವಾದ ಆನಂದಾನುಭವ. ದೇಹೋಪಚಯದ್ವಾರಾ ಜೀವರಿಗೆ ತೃಪ್ತಿಪ್ರದನು. ||೯||

## ಪದ್ಯ ೧೦

**ಮೂಲ :—**

ಕಾರಕಾ(ಣಾ)ಹ್ವಯ ಜ್ಞಾನ ಕರ್ಮ
ಪ್ರೇರಕನು ತಾನಾಗಿ ಕ್ರಿಯೆಗಳ
ತೋರುವನು ಕರ್ಮೇಂದ್ರಿಯಾಪಧಿರೊಳಗೆ ನೆಲೆಸಿದ್ದು
ಮೂರುಗುಣಮಯ ದ್ರವ್ಯಗತದಾ
ಕಾರ ತನ್ನಾಮದಲಿ ಕರೆಸುವ
ತೋರಿಕೊಳ್ಳದೆ ಜನರ ಮೋಹಿಪ ಮೋಹಕಲ್ಪಕನು ||೧೦||

**ಅವತರಣಿಕೆ :—**

ಸರ್ವವ್ಯಾಪಾರಗಳನ್ನು ಸ್ವತಂತ್ರನಾದ ಹರಿಯೇ ಮಾಡಿಸುವುದರಿಂದ ಅವನಿಗೆ **ಕಾರಕ** ನೆಂದು ಹೆಸರು. ಅಂತಹ ಕಾರಕಾಹ್ವಯನು ಜ್ಞಾನಕರ್ಮೇಂದ್ರಿಯಾಭಿಮಾನಿ ದೇವತೆಗಳಲ್ಲಿ ನೆಲೆಸಿದ್ದು, ಜ್ಞಾನ ಮತ್ತು ಕರ್ಮಪ್ರೇರಕನಾಗಿ, ಸತ್ತ್ವಾದಿಗುಣತ್ರಯಗಳಿಂದ ನಿರ್ಮಾಣವಾದ ಸಮಸ್ತದ್ರವ್ಯಗಳಲ್ಲಿ ತದಾಕಾರ, ತನ್ನಾಮಕನಾಗಿದ್ದು, ತೋರಿಸಿಕೊಳ್ಳದೆ, ಜನರನ್ನು ಸ್ವಾಭಿಮಾನಕರ್ತೃತ್ವದಿಂದ ಬಂಧಿಸಿ, ಮೋಹಿಸುವನೆಂದು ತಿಳಿಸುತ್ತಾರೆ— **ಕಾರಕಾಹ್ವಯ** – ಎಂಬ ಪ್ರಸಕ್ತಸಂಧಿಗತ ೧೦ನೆಯ ಈ ಪದ್ಯದಿಂದ. ||೧೦||

**ಪ್ರತಿಪದಾರ್ಥ :—**

ಕಾರಕಾಹ್ವಯ = ಸರ್ವಕಾರ್ಯಪ್ರವರ್ತಕನಾದ ಶ್ರೀಪರಮಾತ್ಮನು **ಕಾರಕನೆಂಬ** ಅಭಿದಾನದಿಂದ, ಜ್ಞಾನ = ಪಂಚಜ್ಞಾನೇಂದ್ರಿಯಗಳು ಮತ್ತು ತದಭಿಮಾನಿ ದೇವತೆಗಳಲ್ಲಿ, ಕರ್ಮ = ಪಂಚಕರ್ಮೇಂದ್ರಿಯಗಳು ಹಾಗೂ ಕರ್ಮೇಂದ್ರಿಯಾಭಿಮಾನಿಸುರರಲ್ಲಿ, ಪ್ರೇರಕನು ತಾನಾಗಿ = ನೆಲೆಸಿದ್ದು ತಾನೇ

ಬಿಂಬರೂಪದಿಂದ ಜ್ಞಾನ ಮತ್ತು ಕರ್ಮಗಳಿಗೆ ಚೋದನೆಯನ್ನು ಕೊಡುತ್ತಾ, **ಕ್ರಿಯೆಗಳ ತೋರುವನು** = ಜ್ಞಾನ ಮತ್ತು ಕರ್ಮಸಂಬಂಧವಾದ ವ್ಯಾಪಾರಗಳನ್ನು ಮಾಡಿ, ಮಾಡಿಸುವನು. **ಕರ್ಮೇಂದ್ರಿಯಾಧಿಪರೊಳಗೆ ನೆಲಸಿದ್ದು** = ಕರಣಾಭಿಮಾನಿಸುರರಲ್ಲಿ ವಿದ್ಯಮಾನನಾಗಿದ್ದು, **ಮೂರು ಗುಣಮಯ** = ಸತ್ತ್ವ, ರಜ ಮತ್ತು ತಮಗಳೆಂಬ ಮೂರುಗುಣಗಳಿಂದ ನಿರ್ಮಿತವಾದ, **ದ್ರವ್ಯಗ** = ಪ್ರಾಕೃತಿಕ ಸಮಸ್ತವಸ್ತುಗಳಲ್ಲಿ **ತದಾಕಾರ** = ಆಯಾಯಾ ವಸ್ತುಗಳ ಆಕಾರವನ್ನೇ ಹೊಂದಿ, **ತನ್ನಾಮದಲಿ** = ಆಯಾಯವಸ್ತುಗಳ ಹೆಸರುಗಳಿಂದಲೇ ಕರೆಯಿಸಿಕೊಳ್ಳುತ್ತಾ, **ಹೆಸುವ** = ತದಾಕಾರ ತನ್ನಾಮಕನಾಗಿ, **ತೋರಿಕೊಳ್ಳದೆ** = ತನ್ನ ಸರ್ವಚೇಷ್ಟಾಕರ್ತೃತ್ವ ಗುಣವನ್ನು ಯಾರಿಗೂ ತಿಳಿಸದಂತೆ, **ಮೋಹಕಲ್ಪಕನು** = ತಾನೇ ಮಾಡುತ್ತಿದ್ದೇನೆಂಬ ಅಜ್ಞಾನರೂಪವಾದ ಮೋಹಜ್ಞಾನವನ್ನು ಹುಟ್ಟಿಸಿ, **ಜನರ** = ಜೀವರನ್ನು (ಅಪಕ್ವದಶೆಯಲ್ಲಿರುವ) **ಮೋಹಿಪ** = ಮೋಹಿಸುವನು ||೧೦||

## ವ್ಯಾಖ್ಯಾನಗಳು

### (೧) ಶ್ರೀ ಸಂಕರ್ಷಣಒಡೆಯರ ವ್ಯಾಖ್ಯಾನ

ದೇಹೇಂದ್ರಿಯಾದಿಗತರೂಪಗಳ ಕ್ರಿಯೆಗಳ ನಡಿಸೋ ರೂಪಗಳ ಹೇಳತಾರೆ.

ಕಾರಕಶಬ್ದವಾಚ್ಯನಾಗಿ ಜ್ಞಾನೇಂದ್ರಿಯಗಳು ಐದರಲ್ಲಿ ವಿದ್ಯಮಾನರಾದ ಅಭಿಮಾನಿ ದೇವತೆಗಳಲ್ಲಿ, ಕರ್ಮೇಂದ್ರಿಯಗಳು ಐದಕ್ಕೆ ಅಧಿಪರಾದ ದೇವತೆಗಳೊಳಗೆ ಆವಾಸನಾಗಿದ್ದು, ದ್ರವ್ಯನಾಮದಿಂದ ವಾಚ್ಯನಾಗಿ ಇರೋವನಾಗಿ ಇದ್ದಾನೆ. ತ್ರಿಗುಣದಿಂದ ನಿರ್ಮಿತವಾದ ಉಂಗುಷ್ಟಾರಭ್ಯ ಶಿರಪರಿಯಂತ ದೇಹದಲ್ಲಿ ತದಾಕಾರದಿಂದ, ಆಯಾ ದೇಹನಾಮಗಳಿಂದ ಕರೆಸುತ ಇರೋವನಾಗಿದ್ದಾನೆ. ಪೂರ್ವೋಕ್ತ ಪ್ರಕಾರ ಜ್ಞಾನೇಂದ್ರಿಯ ಕರ್ಮೇಂದ್ರಿಯಾಧಿಪರೊಳು ಇದ್ದು, ಅವರ ದ್ವಾರಾ ಜೀವಗೆ, ಜೀವನ ದ್ವಾರಾ ದೇಹಕ್ಕೆ ಪ್ರೇರಕನು ಆದಿಯಲ್ಲಿ ತಾನೇ ಆಗಿ, ಆಯಾ

ಇಂದ್ರಿಯಗಳ ದ್ವಾರಾ ಕ್ರಿಯಾದಿವ್ಯಾಪಾರಗಳು ನಡೆಸಿ, ಜೀವ ತಾನೇ ಮಾಡಿದೆ ಎಂಬುದಾಗಿ ಜೀವಗೆ ತೋರಿಸೋವನಾಗತಾನೆ. ಈ ಪ್ರಕಾರ ತನ್ನಿಂದ ಆಗತಕ್ಕ ಕ್ರಿಯೆಗಳು, ತಾನು ಜೀವರಿಗೆ ತೋರಿಕೊಳ್ಳದೆ ನಡೆಸತಾನೆ. ಈ ಪ್ರಕಾರ ಮಾಡಿಸುತ್ತಾ, ಪರಮಾತ್ಮ ಮಾಡಸತಾನೆ ಎಂಬ ಜ್ಞಾನವಿಲ್ಲದೇ, ತಾವೇ ಮಾಡತೇವೆ ಎಂಬ ಜ್ಞಾನದಿಂದ ಜನರನ್ನ ಮೋಹಯುಕ್ತರನ್ನಾಗಿ ಮಾಡತಾನೆ. ಈ ಪರಮಾತ್ಮ ಎಂಥಾವನೆಂದರೆ, ಸಾಧನಾತ್ಪೂರ್ವದಲ್ಲಿ ಪ್ರಾಣಿಗಳಿಗೆ ಅಜ್ಞಾನರೂಪವಾದ ಮೋಹವನ್ನು ಉಂಟುಮಾಡಿ ಕೊಡತಕ್ಕವನು – ಎಂದರೆ ಮುಕ್ತಿಯೋಗ್ಯರಿಗೆ ಸ್ವರೂಪದಲ್ಲಿ ಅಜ್ಞಾನವಿಲ್ಲ. ಸ್ಥೂಲದೇಹದ್ವಾರಾ ಅಜ್ಞಾನ ಕಲ್ಪಿಸಿ ಮೋಹಯುಕ್ತರನ್ನಾಗಿ ಮಾಡತಾನೆ ಎಂತ ತಾತ್ಪರ್ಯ. ಮೇಲೆ ಹೇಳಿದ ಇಂದ್ರಿಯಗಳ ದ್ವಾರಾ ಕ್ರಿಯಾಕ್ರಮ ಹ್ಯಾಂಗೆಂದರೆ ಹೇಳತಾರೆ.

೧. **ಅಹಂಕಾರ ವೃತ್ತಿ** – ಪ್ರಾಣವಾಯು ಗಂಧ ಸಹಿತ ಘ್ರಾಣೇಂದ್ರಿಯಕ್ಕೆ ಬಂದು ಸುಗಂಧ, ದುರ್ಗಂಧ ವಿಷಯೀಕರಿಸಿ, ಗುದೇಂದ್ರಿಯದ್ವಾರಾ ಗಂಧಗುಣ ಪೃಥ್ವಿಯಲ್ಲಿ ಕೂಡತದೆ – **ಅನಿರುದ್ಧರೂಪಿ** ಪರಮಾತ್ಮ ***ಗಂಧಜ್ಞಾನ.***

೨ **ಚಿತ್ತ** – ಅಪಾನವಾಯು **ಪ್ರದುಮ್ನ** ಸಹಿತ ಜಿಹ್ವೇಂದ್ರಿಯಕ್ಕೆ ಬಂದು, ರಸ ಸ್ವೀಕರಿಸಿ ಗುಹ್ಯೇಂದ್ರಿಯ ದ್ವಾರಾ ರಸಗುಣ ಅಪ್ಪಿನಲಿ ಕೂಡತದೆ – ರಸಜ್ಞಾನ.

೩. **ಬುದ್ಧಿ**– ಉದಾನವಾಯು ***ಸಂಕರ್ಷಣ*** ಸಹಿತ ಚಕ್ಷುರಿಂದ್ರಿಯಕ್ಕೆ ಬಂದು ರೂಪಸ್ವೀಕರಿಸಿ ಪಾಣೇಂದ್ರಿಯದ್ವಾರಾ ರೂಪಗುಣ ತೇಜದಲ್ಲಿ ಕೂಡತದೆ – **ರೂಪಜ್ಞಾನ.**

೪. **ಮನಸ್ಸು** – ಸಮಾನವಾಯು **ವಾಸುದೇವ** ಸ್ಪರ್ಶ ಸಹಿತ ತ್ವಗಿಂದ್ರಿಯಕ್ಕೆ ಬಂದು ಸ್ಪರ್ಶ ಸ್ವೀಕರಿಸಿ, ಪಾಣೇಂದ್ರಿಯ ದ್ವಾರಾ ಸ್ಪರ್ಶಗುಣ ವಾಯುವಿನಲ್ಲಿ ಕೂಡತದೆ – **ಸ್ಪರ್ಶಜ್ಞಾನ.**

೫ **ಅಂತಃಕರಣ** – ವ್ಯಾನವಾಯು **ನಾರಾಯಣ** ಶಬ್ದ ಸಹಿತ ಶ್ರೋತ್ರೇಂದ್ರಿಯಕ್ಕೆ ಒಂದು ಶಬ್ದ ಸ್ವೀಕರಿಸಿ ವಾಗಿಂದ್ರಿಯ ದ್ವಾರಾ ಶಬ್ದಗುಣ ಆಕಾಶದಲ್ಲಿ ಕೊಡುತ್ತದೆ. – **ಶ್ರೋತ್ರಜ್ಞಾನ.**

ಈ ಪ್ರಕಾರ ಆಯಾ ಅಭಿಮಾನಿದೇವತೆಗಳ ಸಹಿತ ತನ್ಮಾತ್ರಗಳು ಪೃಥಿವ್ಯಾದಿಗಳಲ್ಲಿ ತದಭಿಮಾನಿಗಳು ಪೃಥುವ್ಯಾದಿ ಅಭಿಮಾನಿಗಳಲ್ಲಿ ಲಯವಾದರೆ, ಆಗ್ಗೆ ಪಂಚಜ್ಞಾನೇಂದ್ರಿಗಳಿಗೆ ತನ್ಮಾತ್ರಗಳು ಅದದು ಅದದಕ್ಕೆ ವ್ಯಕ್ತವಾಗತವೆ. ಈ ಪ್ರಕಾರ ಕ್ರಿಯೆಗಳ ತೋರಿಸುವವನಾಗತಾನೆ. ॥೧೦॥

(೨) ಭಾವಪ್ರಕಾಶಿಕೆ : –

ಶ್ರೀ ಪರಮಾತ್ಮನು, **ಕಾರಣನೆಂಬ** ಹೆಸರಿನಿಂದ ಜ್ಞಾನೇಂದ್ರಿಯ ಕರ್ಮೇಂದ್ರಿಯಗಳಳ ಅಭಿಮಾನದೇವತೆಗಳೊಳಗಿದ್ದು, ಜ್ಞಾನೇಂದ್ರಿಯ ಕರ್ಮೇಂದ್ರಿಯ ಪ್ರೇರಕನಾಗಿ ಜ್ಞಾನ ಕರ್ಮಕ್ರಿಯೆಗಳನ್ನು ತೋರ್ಪಡಿಸುವನು. ಸತ್ವರಜಸ್ತಮಸ್ಸೆಂಬ ತ್ರಿಗುಣ ಸಬಂಧವಾದ ಪದಾರ್ಥಗಳಲ್ಲಿ ಆಯಾ ಪದಾರ್ಥದ ಆಕಾರವುಳ್ಳವನಾಗಿ ಆಯಾ ಹೆಸರಿನಿಂದ ಕರಿಸಿಕೊಳ್ಳುತ್ತಾ, ಸತ್ಯಸಂಕಲ್ಪನಾದ ಶ್ರೀಹರಿಯು, ತನ್ನ ಆಕಾರವನ್ನು ತೋರಿಸಿಕೊಳ್ಳದೆ, ಜನರನ್ನು ಮೋಹಪಡಿಸುತ್ತಿರುವನು.

ವಿಷ್ಣು ರಹಸ್ಯ, ೪ನೆಯ ಅಧ್ಯಾಯದಲ್ಲಿ–

“ ಘಂಟಾಕಾರಂ ಭವತ್ಯೇವ ಘಟಸ್ಥಂ ಸಲಿಲಂ ಯಥಾ
ತತ್ತದಾಕಾರವಾನ್ ವಿಷ್ಣುಃ ತತ್ತದ್ವಸ್ತು ಸ್ಥಿತಃಸ್ತಥಾ ॥೫॥
ತನ್ಮಥಾನ್ನೈವಜಾನಂತಿ ಮಾಯಾಮುಷಿತ ಚಕ್ಷುಷಃ
ದೇಹೋಹಂ ಭಾವಿನೋನ್ಯತ್ರ ಮಮತಾ ಬದ್ಧಯಃ ಸದಾ ॥೮॥
ಅನಿಚ್ಛಂತೋಪಿ ಭುಂಜಂತಿ ದುಃಖಾನಿ ವಿವಿಧಾ ನ್ಯಪಿ ” ॥೯॥

ಅಂದರೆ, ಘಟದಲ್ಲಿರುವ ನೀರು ಘಟಾಕಾರವಾಗಿ ಹೇಗೆ ಕಾಣುವುದೋ, ಹಾಗೆ ಶ್ರೀ ಪರಮಾತ್ಮನು ಆಯಾವಸ್ತುಗಳಲ್ಲಿ ಆಯಾ ಆಕಾರಗಳಿಂದಲೇ ಇರುವನು. ಅದನ್ನು ಮೂಢರು ಅರಿಯದೆ, ಪರಮಾತ್ಮನ ಮಾಯೆಯಿಂದ ಮೋಹಿತರಾಗಿ, ದೇಹವೇ ತಾನೆಂತಲೂ, ಮಿಗಿಲಾದ ವಸ್ತುಗಳು ತಮ್ಮವೆಂತಲೂ ಭಾವಿಸಿ, ತಾವು ಅಪೇಕ್ಷಿಸದಿದ್ದರೂ ನಾನಾವಿಧವಾದ ದುಃಖವನ್ನೇ ಅನುಭವಿಸುವವರು– ಎಂದು ಹೇಳಿರುವರು. ಇದೇ ಅಭಿಪ್ರಾಯವನ್ನೇ ದಾಸರಾಯರು ಈ ಪದ್ಯದಲ್ಲಿ ತೋರಿಸಿದ್ದಾರೆ. ॥ ೧೦ ॥

**(೩) ಈ ಪದ್ಯಕ್ಕೆ ಭಾವದರ್ಪಣ ಟೀಕಾಕಾರರು ವ್ಯಾಖ್ಯಾನ ಕೊಟ್ಟಿಲ್ಲ.**

**(೪) ಶ್ರೀ ವ್ಯಾಸದಾಸ ಸಿದ್ಧಾಂತ ಕೌಮುದೀಃ–**

"ಕಾರಣ'' – ಇತಿ "ಪ್ರಾಣವತಾಶಬ್ದಾತ್'' – ಇತಿ ಚ "ಗುಣಮಯ'' ತದ್ವಿಕೃತ ಕಲ್ಪಕಃ ತತ್ಕರ್ತಾ. ॥೧೦॥

"ಓಂ ಪ್ರಾಣವತಾಶಬ್ದಾತ್ ಓಂ"– ಎಂಬ ಬ್ರಹ್ಮಸೂತ್ರದಲ್ಲಿ ( **ಅ.೨.ಪಾ.೪,** ಸೂ.೧೬, ಅಧಿ–೧೦) ಪರಮಾತ್ಮನೇ ತನ್ನ ಅಧೀನಗಳಾದ ಚಕ್ಷು ಶ್ರೋತ್ರ ಮುಂತಾದ ಕರಣಗಳಿಂದ , ಇಂದ್ರಿಯಗಳಿಂದ, ಜೀವನಿಂದ ನೋಡುವುದು ಮುಂತಾದ ವ್ಯಾಪಾರಗಳನ್ನು ಮಾಡಿಸುತ್ತಾನೆ. ಏಕೆಂದರ, **"ಏಷಹ್ಯೇನೇನ ಆತ್ಮನಾ ಚಕ್ಷುಷಾ ದರ್ಶಯತಿ, ಶ್ರೋತ್ರೇಣ ಶ್ರಾವಯತಿ, ಮನಸಾ ಮನಯತಿ,** ಬುದ್ಧ್ಯಾ ಬೋಧಯತಿ, ತಸ್ಮಾದೇತಾವಾಹುಃ ಸ್ಮೃತಿಸ್ಮೃತಿಃ "–ಎಂಬ **ಭಾಲ್ಲವೇಯಶ್ರುತಿಯು.** ಪರಮಾತ್ಮನು ಜೀವನಿಗೆ ಸ್ವಾಧೀನತೆಯಿಂದಲೇ ಇಂದ್ರಿಯಗಳ ಅಲ್ಪಸ್ವಾಮಿತ್ವವನ್ನು, ಇಂದ್ರಿಯಗಳ ಬಡತನವನ್ನು ಕೊಟ್ಟು ಅಸ್ವತಂತ್ರ ಜೀವನಿಂದ ತನ್ನ ಇಚ್ಛೆಯಂತೆ ವರ್ತಿಸುವ ನೇತ್ರೇಂದ್ರಿಯದಿಂದ ರೂಪ ಮೊದಲಾದವನ್ನು ತೋರಿಸುತ್ತಾನೆ. ಕಿವಿಯಿಂದ ಕೇಳಿಸುತ್ತಾನೆ. ಮನಸ್ಸಿನಿಂದ ಮನನಮಾಡಿಸುತ್ತಾನೆ. ಬುದ್ಧಿಯಿಂದ

ಬೋಧಿಸುತ್ತಾನೆ. ತಿಳಿಸುತ್ತಾನೆ. ಆದುದರಿಂದಲೇ ಪರಮಾತ್ಮನು ಸ್ವತಂತ್ರನು. ಸ್ವರೂಪ—ಜ್ಞಾನ ಇಚ್ಛಾ ಪ್ರವೃತ್ತಿ ಮುಂತಾದುವುಗಳಲ್ಲಿ ಪರಾಧೀನನಲ್ಲ. ಜೀವನು ಅಸ್ವಂತತ್ರನು. ಜ್ಞಾನ ಇಚ್ಛಾ ಮತ್ತು ಪ್ರವೃತ್ತಿ ಮುಂತಾದವುಗಳಲ್ಲಿ ಪರಮಾತ್ಮನನ್ನು ಅವಲಂಬಿಸಿರುವವನು. "—ಎಂದು ಹೇಳಿದೆ. ಈ ಸೂತ್ರಭಾಷ್ಯದಲ್ಲಿ **"ಕರಣೈಃ ಕಾರಣಂ ಬ್ರಹ್ಮ ಪುರುಷಾಪೇಕ್ಷಯಾಖಿಲಮ್—" "ಶ್ರೋತ್ರಾದಿಭಿಃ ಕಾರಯತಿ ಕರಣಾನೀತ್ಯತೋ ವಿದುಃ"** ಎಂಬ ವಚಾನಾನುಸಾರವಾಗಿ ಪರಮಾತ್ಮನು ಮುಖ್ಯ **ಕಾರಕನು**—ಎಂಬುದಾಗಿ ಹೇಳಲ್ಪಟ್ಟಿದೆ. ಆದುದರಿಂದ **"ಕಾರಣಾಹ್ವಯ"**—ಎಂದು ದಾಸವರ್ಯರು ನಿಬಂಧಿಸಿರುತ್ತಾರೆ. "ಗುಣಮಯ"—ಎಂಬಪದಕ್ಕೆ "ತ್ರಿಗುಣಗಳ ವಿಕಾರದಿಂದ ಆದದ್ದು"—ಎಂದರ್ಥ. "ಮೋಹಕಕಲ್ಪಕ—"ಎಂದರೆ, "ಮೋಹವನ್ನು ಹುಟ್ಟಿಸುವವನು"—ಎಂದರ್ಥವು. ॥೧೦॥

## (೪) ಶ್ರೀಗುರುಹೃದಯಪ್ರಕಾಶ ವ್ಯಾಖ್ಯಾನ :—

**ಕಾರಕಾದಿ** ರೂಪಸ್ಮರಣೆಯನ್ನು ತಿಳಿಸುತ್ತಾರೆ, **ಕಾರಕ** ಎಂದು. ಜ್ಞಾನೇಂದ್ರಿಯ ಐದು, ಕರ್ಮೇಂದ್ರಿಯ ಐದರಲ್ಲೂ ಸಹ ಕ್ರಿಯೆಗಳನ್ನು ಉದ್ಭೋದನೆ ಮಾಡುವುದರಿಂದ **ಕಾರಕನೆಂದು** ಹೆಸರುಳ್ಳ ದೇವರು, ಕರ್ಮೇಂದ್ರಿಯಾಭಿಮಾನಿ ದೇವತೆಗಳಲ್ಲಿ ಇದ್ದು, ಕ್ರಿಯಾ ವ್ಯಕ್ತಿ ಮಾಡುವನು. ಮೂರುಗುಣಮಯ ಅಂದರೆ, ಸತ್ತ್ವರಜಸ್ತಮೋಗುಣ ನಿಯಾಮಕ ಸ್ವಾಮಿ, ದ್ರವ್ಯವೆಂಬ ಪಂಚಭೂತಾತ್ಮಕ ದೇಹಾದಿಗಳಲ್ಲಿ ತದಾಕಾರ ತನ್ನಾಮಕನಾಗಿ ಶಾಸ್ತ್ರದಲ್ಲಿ ಕರೆಸಿಕೊಳ್ಳುತ್ತಾ, ತಾನು ಅಜ್ಞರಿಗೆ ಕಾಣಿಸದೆ, ಜೀವರಿಗೆ ಸ್ವಕೀಯಭ್ರಮೆ ಎಂಬ ಮೋಹವನ್ನು ಕಲ್ಪಿಸುತ್ತಾ, ಸರ್ವರಿಗೂ ಸ್ವಕೀಯ (ತನ್ನದು), ತಾನೇ ಮಾಡುವೆನೆಂಬ ಮೋಹವನ್ನು ಹುಟ್ಟಿಸುವನು.

ಘಟಾಕಾರಂ ಭವತ್ಯೇವ ಘಟಸ್ಥಂ ಸಲಿಲಂ ಯಥಾ
ತತ್ತದಾಕಾರವಾನ್ವಿಷ್ಣುಸ್ತತ್ತದ್ವಸ್ತುಷು ಸಂಸ್ಥಿತಃ

ತನ್ಮೂಢಾ ನೈವ ಜಾನಂತಿ ಮಾಯಾಮೂಷಿತ ಚೇತಸಃ

ದೇಹೇಹಂಭಾವಿನೋನ್ಯತ್ರ ಮಮತಾಬುದ್ಧಯಸ್ಸದಾ ॥

ಎಂಬ **ವಿಷ್ಣುರಹಸ್ಯ, ದ್ರವ್ಯಜ್ಞಾನಕ್ರಿಯಾತ್ಮಕಃ** ಎಂಬ **ಭಾಗವತಾರ್ಥ** ಸಹ ವಿವರಿಸಲ್ಪಟ್ಟಿತು. ॥೧೦॥

## ಸರ್ವವ್ಯಾಖ್ಯಾನಸಾರಸಂಗ್ರಹ

ಸರ್ವಕಾರ್ಯಗಳಿಗೂ ಮುಖ್ಯಕಾರಣನಾದ ಕಾರಣಾಹ್ವಯನು ಜ್ಞಾನ ಮತ್ತು ಕರ್ಮೇಂದ್ರಿಯಗಳಲ್ಲಿದ್ದು, ತದಭಿಮಾನಿದೇವತೆಗಳಲ್ಲಿ ವಿದ್ಯಮಾನನಾಗಿದ್ದು. ಸತ್ತ್ವಾದಿತ್ರಿಗುಣಾತ್ಮಕ ಸಕಲದ್ರವ್ಯಗಳಲ್ಲಿ ತದಾಕಾರನಾಗಿ, ತತ್ತನ್ನಾಮಕನಾಗಿದ್ದು, ತನ್ನ ಸ್ವರೂಪವನ್ನೇ ತೋರಿಸಿಕೊಳ್ಳದೆ, ಸಮಸ್ತವ್ಯಾಪಾರಗಳನ್ನು ತಾನೇ ಬಿಂಬಕ್ರಿಯಾದ್ವಾರಾ ನಡೆಯಿಸುತ್ತಾ, ಜನರನ್ನು ಮೋಹಗೊಳಿಸುತ್ತಾನೆ –ಎಂದು ತಿಳಿಸುತ್ತಾರೆ– ಕಾರಣಾಹ್ವಯ – ಎಂಬ ಪ್ರಸಕ್ತ ೧೧ನೆಯ ಪದ್ಯದಿಂದ

೧. ನಮ್ಮ ಸುತ್ತುಮುತ್ತಲಿನ ವಿಶಾಲವಾದ ಜಗತ್ತಿನಲ್ಲಿ ನಾನಾವಿಧವಾದ ಕ್ರಿಯೆಗಳನ್ನು ಪ್ರತಿನಿತ್ಯವೂ ನೋಡುತ್ತಾ ಇರುತ್ತೇವೆ. ಒಂದು ಕ್ರಿಯೆಯ ಹಿನ್ನಲೆಯಲ್ಲಿ ಮೂರು ಹಂತಗಳಿವೆ. (1) ಕಾರಣ (2) ಕ್ರಿಯೆ ಮತ್ತು (3) ಫಲ. ಕಾರಣವಿಲ್ಲದೇ ಕಾರ್ಯವಾಗಲಾರದು. ಕಾರ್ಯನಂತರ ತದನುಗುಣವಾದ ಫಲಪ್ರಾಪ್ತಿ. ಹೀಗೆ **ಕಾರಣ–ಕಾರ್ಯ–ಫಲ** ಎಂಬ ತ್ರಿಕೋಣಸೂತ್ರ ಸರ್ವಕಾಲಿಕವಾದದ್ದು. ಮೂಲಪ್ರಕೃತಿಯನ್ನು ಉಪದಾನಕಾರಣಮಾಡಿಕೊಂಡು, ಸೃಷ್ಟಿಕರ್ತನಾದ ಶ್ರೀ ಪರಮಾತ್ಮನು ಜಗತ್ತನ್ನು ಸೃಷ್ಟಿಸುತ್ತಾನೆ. ಕುಂಬಾರನಂತೆ ತಾನು ಮುಖ್ಯಕಾರಣನಾಗಿದ್ದಾನೆ. ಮಣ್ಣು ಮೂಲದ್ರವ್ಯ. ಅದು ಘಟೋತ್ಪತ್ತಿಗೆ ಉಪದಾನಕಾರಣವು. ಮುಖ್ಯಕಾರಣನು ಕುಲಾಲನು (ಕುಂಬಾರನು). ಬೆಂಕಿ, ಗಾಳಿ, ನೀರು, ಕುಲಾಲಚಕ್ರ, ದಂಡ ಇತ್ಯಾದಿಗಳು ಸಹಕಾರಸಾಮಗ್ರಿಗಳು. ಘಟನಿರ್ಮಾಣವತ್, ಜಗತ್ಸೃಷ್ಟಿಗೆ ಆದಿಕಾರಣನು

ಆದಿಮಧ್ಯಾಂತರಹಿತನಾದ ಆದಿಮೂಲನು. ಇದರಿಂದ ದಾಸರಾಯರು **ಕಾರಣಾಹ್ವಯ** ಎಂದಿದ್ದಾರೆ. ಶ್ರೀಸಂಕರ್ಷಣ ಒಡೆಯರವ್ಯಾಖ್ಯಾನದಲ್ಲಿ, **ಕಾರಕಾಹ್ವಯ** ಎಂಬ ಪಾಠಾಂತರವಿದೆ. ಉಳಿದ ಎಲ್ಲಾ ವ್ಯಾಖ್ಯಾನಗಳಲ್ಲಿ **ಕಾರಣಾಹ್ವಯ** ಎಂತಿದೆ. **ಕಾರಕ** ಎಂದರೆ ಸರ್ವಕರ್ತೃಎಂದು ಎಂದರ್ಥ. ಜಗತ್ತಿನ ಸಕಲವ್ಯಾಪಾರಗಳೂ ಆ ಜಗದಾಧಿಪನ ಪ್ರೇರಣೆಯಂತೆ ನಡೆಯುತ್ತಿರುವುದರಿಂದ, ಅವನೇ **ಸರ್ವಕರ್ತನು**. ಆದರೆ ಕ್ರಿಯೆಗೆ ಹೇತುರೂಪವಾದ ಕಾರಣ ವಿರಬೇಕು. ಈ ದೃಷ್ಟಿಯಿಂದ **ಕಾರಣಾಹ್ವಯ** ಎಂಬ ಶಬ್ದವು **ಕಾರಕಾಹ್ವಯ** ಎಂಬುದಕ್ಕಿಂತ ಸಮಂಜಸ ಎಂದು ತೋರುತ್ತದೆ. ಕಾರಣ ಕಾರ್ಯ ಭಾವವಿರುವುದರಿಂದ ಎರಡರ್ಥವನ್ನು ಸಮನ್ವಯ ಮಾಡಿಕೊಳ್ಳಬಹುದು.

೨. ವಿಷಯಗಳ ಸಂಪರ್ಕವಾದಾಗ, ನಮಗೆ ಜ್ಞಾನೇಂದ್ರಿಯಗಳ ದ್ವಾರಾ, ವಿಷಯ ಸಂಬಂಧವಾದ ಜ್ಞಾನ ವುಂಟಾಗುವುದು. ಶ್ರವಣೇಂದ್ರಿಯ (ಕಿವಿ), ತ್ವಗಿಂದ್ರಿಯ (ಚರ್ಮ), ಚಕ್ಷುರಿಂದ್ರಿಯ (ಕಣ್ಣು), ರಸನೇಂದ್ರಿಯ (ನಾಲಿಗೆ ) ಮತ್ತು ಘ್ರಾಣೇಂದ್ರಿಯ (ಮೂಗು) ಇವು ಪಂಚಜ್ಞಾನೇಂದ್ರಯಗಳು. ಇವುಗಳಿಗೆ ಕ್ರಮವಾಗಿ ಶಬ್ದ, ಸ್ಪರ್ಶ, ರೂಪ, ರಸ ಮತ್ತು ಗಂಧ ಎಂಬ ತನ್ಮಾತ್ರಾರೂಪವಾದ ವಿಷಯಗಳ ಸನ್ನಿಕರ್ಷವಾದಾಗ, ಶ್ರವಣಾನುಭವ, ಸ್ಪರ್ಶಜ್ಞಾನ, ರೂಪದರ್ಶನ, ರುಚಿಯ ಅನುಭವ ಮತ್ತು ವಾಸನೆ ಇತ್ಯಾದಿ ಜ್ಞಾನರೂಪಾವಾದ ಅನುಭವಗಳು ಮನಸ್ಸಿನ ದ್ವಾರಾ ಉಂಟಾಗುವುವು. ಇಂತಹ ಪಂಚಜ್ಞಾನೇಂದ್ರಿಯಗಳಲ್ಲಿ, ಇಂದ್ರಿಯಗೋಳಕಗಳಲ್ಲಿ, ತತ್ತ ದ್ವಿಷಯಗಳಲ್ಲಿ ತದಾಕಾರನಾಗಿ ತತ್ತಚ್ಛಬ್ದವಾಚ್ಯನಾಗಿ **ಹೃಷೀಕೇಶನಾಮಕನಿದ್ದಾನೆ**. ಇಂದ್ರಿಯಗಳು ಜಡವಾದ್ದರಿಂದ, ಅವುಗಳಿಗೆ ಅಭಿಮಾನಿಗಳಾದ ದಿಗ್ದೇವತೆಗಳು, ಅಹಂಕಾರಿಕ ಪ್ರಾಣ, ಸೂರ್ಯ, ವರುಣ ಮತ್ತು ಅಶ್ವಿನಿ ದೇವತೆಗಳು ಎಂಬ ಇಂದ್ರಿಯಾಭಿಮಾನಿ ದೇವತೆಗಳಲ್ಲಿದ್ದು. ಅವರ ದ್ವಾರಾ, ಜ್ಞಾನಾನುಭವವನ್ನು ಸ್ಥೂಲದೇಹದಲ್ಲಿ ಪ್ರಕಾಶತೋವ್ಯಾಪ್ತನಾಗಿರುವ

ಜೀವನ ಆಯಾಯಾ ಇಂದ್ರಿಯಗಳ ದ್ವಾರಾ ತಂದೀಯುವನು. ಇದರಿಂದ **ಕಾರಣನಾಮಕನು.**

೩. ವಿಷಯಸಂಬಂಧವಾದ ಜ್ಞಾನವು ಮನಸ್ಸಿಗೆ ಜ್ಞಾನೇಂದ್ರಿಯಗಳ ದ್ವಾರಾ ಮುಟ್ಟಿ ಮನಸ್ಸು ತದನುಗುಣವಾದ ವ್ಯಾಪಾರಗಳನ್ನು **ಪಂಚಕರ್ಮೇಂದ್ರಿಯಗಳ** ದ್ವಾರಾ ಪ್ರವರ್ತಿಸುವುದು. ಪಾಣೀಂದ್ರಿಯ (ಎರಡು ಹಸ್ತಗಳು), ಪಾದೇಂದ್ರಿಯ (ಎರಡು ಕಾಲುಗಳು) ವಾಗಿಂದ್ರಿಯ (ಜಿಹ್ವಾ), ಗುದೇಂದ್ರಿಯ (ಮಲವಿಸರ್ಜನಾಂಗ) ಮತ್ತು ಉಪಸ್ಥೇಂದ್ರಿಯ (ಮೂತ್ರ ಮತ್ತು ರೇತೋವಿಸರ್ಜನಾಂಗ) ಇವು ಪಂಚ ಕರ್ಮೇಂದ್ರಿಗಳು. ಇವುಗಳ ದ್ವಾರಾ, ದಾನ, ಸ್ವೀಕಾರಕಾರ್ಯ, ಗಮನಾಗಮನ ಕ್ರಿಯೆ, ವಾಗ್ರೂಪವಾದ ಕಾರ್ಯ, ಮಲಮೂತ್ರ ವಿಸರ್ಜನಾ ರೂಪವಾದ ಕ್ರಿಯೆಗಳು ಇತ್ಯಾದಿ ವ್ಯಾಪಾರಗಳನ್ನು ಆ ಕರ್ಮೇಂದ್ರಿಯಗಳಲ್ಲಿದ್ದು. ಆ ಕರಣಾಭಿಮಾನಿಗಳಾದ ದಕ್ಷ, ಜಯಂತ, ಅಗ್ನಿ, ಮಿತ್ರನಾಮಕ ಸೂರ್ಯ ಮತ್ತು ಸ್ವಾಯಂಭುವಮನು ಇವರ ದ್ವಾರಾ ಮಾಡಿ ಮಾಡಿಸುತ್ತಿರುವನು. ಇಂತು ಕಾರಣಾಹ್ವಯನಾದ ಏಕಕಾರಣನಾದ ನಾರಾಯಣನು ಜ್ಞಾನ ಮತ್ತು ಕರ್ಮ ಪ್ರೇರಕನಾಗಿ ತತ್ತತ್ಕ್ರಿಯೆಗಳನ್ನು ಮಾಡಿ ಮಾಡಿಸುತ್ತಿರುವನು.

೪. ಈ ಜಗತ್ತಿನ ಸೃಷ್ಟಿಗೆ ಮೂಲಪ್ರಕೃತಿಯೇ ಉಪಾದಾನಕಾರಣವು. ಪ್ರಕೃತಿಯ ಸಹಜ ಧರ್ಮಗಳೇ 1. ಸತ್ತ್ವ, 2. ರಜ, 3. ತಮ ಎಂಬ ಮೂರು ಪ್ರಕಾರವಾದ ಪ್ರಾಕೃತಿಕ ಗುಣಗಳು. ಈ ತ್ರಿಗುಣಗಳ ವೈಷಮ್ಯದಿಂದ ಸೃಷ್ಟಿಕ್ರಮ. ಈ ಜಗತ್ತಿನಲ್ಲಿ ಕಾರಣಾಹ್ವನಾದ ಆದಿಮೂಲನಿಂದ ಸೃಷ್ಟವಾದ ಸಮಸ್ತದ್ರವ್ಯಗಳೂ ತ್ರಿಗುಣಗಳಿಂದ ಜನ್ಯವು. ಇದರಿಂದ **ಮೂರುಗುಣ ದ್ರವ್ಯ** ಎಂದು ಶಬ್ದ ಪ್ರಯೋಗಮಾಡಿದ್ದಾರೆ ದಾಸವರ್ಯರು.

೫. ಅಂತಹ ತ್ರಿಗುಣಾತ್ಮಕವಾದ ದ್ರವ್ಯಗಳಲ್ಲಿ ತ್ರಿಗುಣಾಭಿಮಾನಿಗಳಾದ ಶ್ರೀ ಲಕ್ಷ್ಮಿದೇವಿಯವರ ಶ್ರೀ, ಭೂ, ದುರ್ಗಾ ರೂಪಗಳಲ್ಲಿ ಅಂತರ್ಗತನಾಗಿದ್ದು, ಆ ವಸ್ತುವಿನ ಆಕಾರದಂತೆಯೇ ಇದ್ದು (ತದಾಕಾರನಾಗಿ), ಆಯಾಯಾ ವಸ್ತುಗಳ ಹೆಸರಿನಿಂದಲೇ ಕರೆಯಿಸಿಕೊಳ್ಳುತ್ತಾ (ತತ್ತನ್ನಾಮಕನಾಗಿ), ದ್ರವ್ಯಗತನಾಗಿದ್ದು ಜಗದ್ವ್ಯಾಪಾರಗಳನ್ನು ನಿರ್ವಹಿಸುತ್ತಲಿರುವನು.

೬. ಸಕಲಇಂದ್ರಿಯಗಳಲ್ಲಿ ದೇಹಗತಸಮಸ್ತ ಅವಯವಗಳಲ್ಲಿ, ದ್ರವ್ಯಗಳಲ್ಲಿ ತಾನೇ ಸ್ಥಿತನಾಗಿದ್ದು, ಸಕಲವ್ಯಾಪಾರಗಳಿಗೂ ತಾನೇ ಮುಖ್ಯ ಕಾರಣನಾಗಿದ್ದಾಗ್ಯೂ ತಾನು ಮಾತ್ರ ಗೋಚರನಾಗುವುದಿಲ್ಲ. ತನ್ನ ಇರವನ್ನು **ತೋರಿಕೊಳ್ಳದೆ**, ಮೂಢಜೀವರಿಗೆ ಸ್ವಾಭಿಮಾನಕರ್ತೃತ್ವವನ್ನು ಕೊಟ್ಟು ಮೋಹಿಸುವನು ಮಾಯಾಪತಿಯಾದ ಆ ಮಹಾಮಹಿಮನು **ಮೋಹಕಲ್ಪಕನು.** ತನ್ನ ಸರ್ವಕರ್ತೃತ್ವವನ್ನು ತೋರಿಸಿಕೊಳ್ಳದೆ, ಆ ವಿಡಂಬನಮೂರ್ತಿಯು ಜೀವರಿಗೆ ಅಜ್ಞಾನರೂಪನಾದ ಮುಸುಕನ್ನೆಳೆದು, ಮೋಹಗೊಳಿಸುವನು. ಈ ರಹಸ್ಯವನ್ನರಿತ ಬ್ರಹ್ಮಜ್ಞಾನಿಗಳು ಆ ಮಾಯಾರಮಣನ ಮಹಾಮಹಿಮೆಯನ್ನು ತಿಳಿದು, ಅವನೇ **ಸರ್ವಕಾರಣ, ಕರ್ತನೆಂದು** ಉಪಾಸಿಸುವರು.॥೧೦॥

## ಪದ್ಯ ೧೧

ಮೂಲ :–

ದ್ರವ್ಯನೆನಿಸುವ ಭೂತ ಮಾತ್ರದೊ ।
ಳವ್ಯಯನು ಕರ್ಮೇಂದ್ರಿಯಗಳೊಳು।
ಭವ್ಯ ಸತ್ಕ್ರಿಯನೆನಿಪ ಜ್ಞಾನೇಂದ್ರಿಯಗಳೊಳಗಿದ್ದು ॥
ಸ್ತವ್ಯ ಕಾರಕನೆನಿಸಿ ಸುಖಮಯ ।
ಸೇವ್ಯ ಸೇವಕನೆನಿಸಿ ಜಗದೊಳು ।
ಹವ್ಯವಾಹನನರಣಿಯೊಳಗಿಪ್ಪಂತೆ ಇರುತಿಪ್ಪ ॥೧೧॥

ಅವತರಣಿಕೆ :–

ಮೂಲಪ್ರಕೃತಿಯಿಂದ ಜನ್ಯವಾದ ಪೃಥಿವ್ಯಾದಿ ಭೂತ ಪಂಚಕಗಳಲ್ಲಿ, ದ್ರವ್ಯ ನಾಮಕನಾಗಿ, ಗಂಧಾದಿ ಪಂಚತನ್ಮಾತ್ರಗಳಲ್ಲಿ ಅವ್ಯಯನಾಮಕನಾಗಿ, ಕರಚರಣಾದಿ ಪಂಚಕರ್ಮೇಂದ್ರಿಯಗಳಲ್ಲಿ ಭವ್ಯ ಶಬ್ದವಾಚ್ಯವಾಗಿ, ಶ್ರವಣಾದಿ ಪಂಚ ಜ್ಞಾನೇಂದ್ರಯಗಳಲ್ಲಿ ಸ್ತವ್ಯ ಕಾರಕ ನಾಮಕನಾಗಿ, ಜ್ಞಾನಾನಂದಮಯವಾದ ಶ್ರೀ ಪರಮಾತ್ಮನು ಸೇವ್ಯ ಸೇವಕನೆನಿಸಿ ಈ ಜಗತ್ತಿನಲ್ಲಿ ಕಾಷ್ಠಗತಅಗ್ನಿಯಂತೆ ಅಗೋಚರನಾಗಿದ್ದಾನೆ ಎಂದು ಹೇಳುತ್ತಾರೆ – **ದ್ರವ್ಯನೆನಿಸುವ** – ಎಂಬ ಪ್ರಸಕ್ತ ಸಂಧಿಗತ ೧೧ನೆಯ ಪದ್ಯದಿಂದ ॥೧೧॥

ಪ್ರತಿಪದಾರ್ಥ :–

**ಭೂತ** = ಪೃಥಿವ್ಯಾದಿ ಪಂಚಭೂತಗಳಲ್ಲಿ, **ದ್ರವ್ಯನೆನಿಪ** = ದ್ರವ್ಯನಾಮಕನಾಗಿದ್ದಾನೆ. **ಮಾತ್ರದೊಳು** = ಗಂಧಾದಿ ಪಂಚತನ್ಮಾತ್ರಗಳಲ್ಲಿ,

**ಅವ್ಯಯನು** = ನಾಶರಹಿತನಾಗಿ ಅವ್ಯಯನಾಮದಿಂದ ಇದ್ದಾನೆ. **ಕರ್ಮೇಂದ್ರಿಯಗಳೊಳು** = ಕರಚರಣಾದಿ ಪಂಚಕರ್ಮೇಂದ್ರಿಯಗಳಲ್ಲಿ, **ಭವ್ಯ ಸತ್ಕ್ರಿಯನೆನಿಪ** = ಭವ್ಯನಾಮಕನಾಗಿ ಉತ್ತಮಕ್ರಿಯಾದಿ ಪ್ರವರ್ತಕನೆಂದೆನಿಸಿ, **ಜ್ಞಾನೇಂದ್ರಿಯಗಳೊಳು** = ಶ್ರವಣೇಂದ್ರಿಯಾದಿ ಪಂಚಜ್ಞಾನೇಂದ್ರಿಯಗಳಲ್ಲಿ, **ಸ್ತವ್ಯಕಾರಕನೆಂದೆನಿಸಿ** =ಸ್ತವ್ಯ ಎಂಬ ಹೆಸರಿನಿಂದ ಕ್ರಿಯಾಪ್ರವರ್ತಕನೆಂದೆನಿಪ, **ಸುಖಮಯ** = ಆನಂದ ಸ್ವರೂಪಿಯಾದ ಆ ಸಚ್ಚಿದಾನಂದಾತ್ಮಕನು, **ಸೇವ್ಯಸೇವಕನೆನಿಸಿ** = ಸೇವೆಯನ್ನು ತೆಗೆದುಕೊಳ್ಳುವ ಜೀವರಲ್ಲಿ ಸೇವ್ಯನೆಂತಲೂ, ಸೇವೆ ಮಾಡುವ ಭೃತ್ಯ ಜನರಲ್ಲಿ ಸೇವಕ ನಾಮದಿಂದಲೂ ಇದ್ದು, **ಜಗದೊಳು** = ಚರಾಚರಾತ್ಮಕವಾದ ಈ ಜಗತ್ತಿನಲ್ಲಿ, **ಹವ್ಯವಾಹನನು** = ಹವಿಸ್ಸನ್ನು ದೇವತೆಗಳಿಗೆ ಮುಟ್ಟಿಸುವ ಅಗ್ನಿಯು, **ಅರಣಿಯೊಳಗಿಪ್ಪಂತೆ** = ಯಜ್ಞಕಾರ್ಯದಲ್ಲಿ ಅಗ್ನಿ ಉತ್ಪಾದನೆಗಾಗಿ ಉಪಯೋಗಿಸುವ **ಅರಣಿ** ಎಂಬ ಕಾಷ್ಠದಲ್ಲಿ ಇರುವಂತೆ, **ಇರುತಿಪ್ಪ** = ಕಣ್ಣಿಗೆ ಗೋಚರವಾಗದಂತೆ ಅವ್ಯಕ್ತರೂಪದಿಂದಿದ್ದಾನೆ. ||೧೧||

## ವ್ಯಾಖ್ಯಾನಗಳು

### (೧) ಶ್ರೀ ಸಂಕರ್ಷಣಒಡೆಯರ ವ್ಯಾಖ್ಯಾನ : –

ಇನ್ನೂ ಪೂರ್ವೋಕ್ತ ಸಂಗತಿಯೇ ಹೇಳುತ್ತಾರೆ.

ಪೃಥಿವ್ಯಾದಿ ಪಂಚಭೂತಗಳೊಳಗೆ **ದ್ರವ್ಯ** ಎಂದ ಕರೆಸೋವನಾಗಿದ್ದಾನೆ. ಗಂಧ ರಸ ರೂಪಾದಿ ತನ್ಮಾತ್ರದೊಳು **ಅವ್ಯಯನಾಮಕ** ಪರಮಾತ್ಮನು, ಕರ್ಮೇಂದ್ರಿಯಗಳಲ್ಲಿ **ಭವ್ಯನಾಮಕ** ಪರಮಾತ್ಮನು, ಜ್ಞಾನೇಂದ್ರಿಯಗಳಲ್ಲಿ **ಸಕ್ರಿಯ** ಎಂತ ಎನಿಸಿದವನಾಗಿ ಅವ್ಯಕ್ತತತ್ವ ಮಹತ್ತತ್ತ್ವ ಅಹಂಕಾರ ತತ್ತ್ವ ಈ ಮೂರರಲಿ ಇರೋವನಾಗಿದ್ದಾನೆ. ಪೂರ್ವೋಕ್ತ ಪ್ರಕಾರ ಇದ್ದು, ಇದೇ ರೀತ್ಯಾ ಸರ್ವಪ್ರಾಣಿಗಳಲ್ಲಿ ಇದ್ದು, ಸುಖಮಯಗಳಾದ ತನಗೆ ಅಭಿನ್ನಗಳಾದ ರೂಪಗಳಿಂದ, ಸರ್ವಪ್ರಾಣಿಗಳೊಳಗೆ ಒಬ್ಬ ಸೇವಕ

ಎಂತಲೂ, ಒಬ್ಬ ಸ್ವಾಮಿ ಎಂತಲೂ ಎರಡು ಪ್ರಕಾರ ಇರೋದಾಗಿ ಇದೆ. ಈ ರೀತ್ಯಾ ಇರತಕ್ಕ ಸೇವಕವೃತ್ತಿ ಮಾಡತಕ್ಕವನಲ್ಲಿ **ಸೇವಕನೆಂತಲೂ,** ಸೇವೆ ಮಾಡಿಸಿಕೊಳ್ಳತಕ್ಕವನಲ್ಲಿ **ಸೇವ್ಯ** ಎಂತಲೂ ಈ ಪ್ರಕಾರ ನಾಮದಿಂದ ಕರೆಸಿ, ತನ್ನ ರೂಪದಿಂದ ತಾನೇ ಒಂದು ಪ್ರಕಾರದಿಂದ ಸೇವೆ ಮಾಡಿಸಿಕೋತಾನೂ, ಮತ್ತೊಂದು ಪ್ರಕಾರದಿಂದ ಸೇವೆ ಮಾಡತಾನೂ ಇರೋವನಾಗಿದ್ದಾನೆ. ಅಧಿಕಾರಿ ಅನ್ಯರಿಂದ ಸೇವಾ ತೊಕ್ಕೊಂಡರೂ, ಅನ್ಯರಿಗೆ ಸೇವಾ ಮಾಡಿದರೂ ಈ ರೀತ್ಯಾ ಅನುಸಂಧಾನ ಭಗವದರ್ಪಿತ ಮಾಡಬೇಕು. ಈ ಪರಮಾತ್ಮ ಪೂರ್ವೋಕ್ತ ಅಧಿಷ್ಠಾನಗಳಲ್ಲಿ ಅಗ್ನಿ ಕಾಷ್ಠದಲ್ಲಿ ಇರೋ ಹಾಂಗೆ ಕಣ್ಣಿಗೆ ಕಾಣದಲೆ ಇದ್ದಾನೆ. ಇದ್ದು, ಪೂರ್ವೋಕ್ತ ಪ್ರಕಾರ **ಸೇವ್ಯ ಸೇವಕನಾಗಿದ್ದಾನೆ.**

**ತಾತ್ಪರ್ಯ** :— ಅರಣಿ ಮಥನ ಮಾಡಿದ ಹೊರ್ತು ಅಗ್ನಿ ಹ್ಯಾಂಗೆ ಕಣೋದಿಲ್ಲವೋ ತದ್ವತ್ ಜ್ಞಾನ–ಭಕ್ತಿ–ವೈರಾಗ್ಯಗಳಿಂದ ಮಥನ ಮಾಡಿದರೆ, ಅಂತರ್ಗತನಾದ ಪರಮಾತ್ಮನ ಕಾಣತಾನೆ. ಹತ್ತನೇ ಶ್ಲೋಕದಲ್ಲಿ ಇಂದ್ರಿಯಾಭಿಮಾನಿ ದೇವತಾಂತರ್ಗತ ರೂಪಗಳು ಹೇಳಿದರು. ಈ ಶ್ಲೋಕದಲ್ಲಿ ಇಂದ್ರಿಯಾಂತರ್ಗತ ರೂಪಗಳ ಹೇಳಿದರು. ಇಂದ್ರಿಯಗಳಲ್ಲಿ ಅನೇಕ ಪ್ರಕಾರ ರೂಪಗಳ ಹೇಳುತಾರೆ. ಅದಕ್ಕೆ ಕ್ರಿಯೆಗಳು ಅನೇಕ ಪ್ರಕಾರ ಉಂಟು. ಸ್ಥೂಲದೇಹದಲ್ಲಿ ಇಂದ್ರಿಯಗೋಳಕಗಳು ಒಂದು, ತದ್ಗತ ಅನಿರುದ್ಧಶರೀರಗತ ಇಂದ್ರಿಯಗಳು. ಇದರಲ್ಲಿ ಮಹತ್ತತ್ತ್ವಗತ ಇಂದ್ರಿಯಗಳು. ಇದರಲ್ಲಿ ಜೀವನ ಸ್ವರೂಪೇಂದ್ರಿಯಗಳು. ಈ ಪ್ರಕಾರ ಸ್ಥೂಲದೇಹಗತ ಇಂದ್ರಿಯ ಗೋಳಕಗಳಲ್ಲಿ ವ್ಯಾಪ್ತವಾಗಿ ಅದೆ. ಈ ವಿವಕ್ಷಾದಿಂದ ಇಂದ್ರಿಯಗಳಲ್ಲಿ ಅನೇಕ ಪ್ರಕಾರ ರೂಪಗಳ ಹೇಳೋದಕ್ಕೆ ಕಾರಣ ಮತ್ತು ಒಂದೊಂದು ಇಂದ್ರಿಯಗಳಲ್ಲಿ ಕಾರ್ಯಬೇಧಗಳ ಅನುಸರಿಸಿ ಅನೇಕ ರೂಪಗಳ ಹೇಳಲಿಕ್ಕೆ ಕಾರಣವೆಂದು ತಿಳಿಯಬೇಕು. ||೧೧||

(೩) ಭಾವಪ್ರಕಾಶಿಕೆ :—

ಶ್ರೀ ಹರಿಯು ಪಂಚಭೂತಗಳಲ್ಲಿ ದ್ರವ್ಯ ನಾಮದಿಂದಲೂ, ಶಬ್ದ ಸ್ಪರ್ಶಾದಿ ಮಾತ್ರಾಗುಣಗಳಲ್ಲಿ **ಅವ್ಯಯನೆಂತಲೂ,** ಕರ್ಮೇಂದಿರಯಗಳಲ್ಲಿ **ಸತ್ಕ್ರಿಯ** ರೂಪದಿಂದಲೂ, ಇದ್ದು, ಸ್ತುತ್ಯನು ಸ್ತೋತ್ರ ಮಾಡುವವನೂ ಸುಖಸ್ವರೂಪನೂ ತಾನೇ ಆಗಿ, ಕೆಲವರಲ್ಲಿ ಸೇವ್ಯನಾಗಿಯೂ, ಕೆಲವರಲ್ಲಿ ಸೇವಕನಾಗಿಯೂ ಆಯಾ ಕಾರ್ಯಗಳನ್ನು ಮಾಡಿ ಮಾಡಿಸುತ್ತಿರುವನು. ಕಾಷ್ಠದೊಳಗಿನ ಅಗ್ನಿಯಂತೆ ನಿರ್ಲಿಪ್ತನಾಗಿರುವನು. ಕಾಷ್ಠದಲ್ಲಿ ಅಗ್ನಿ ಇರುವುದೆಂದು ಗೊತ್ತಾಗಬೇಕಾದರೆ, ದೊಡ್ಡದಾದ ಕಾಷ್ಠವನ್ನು ಕೆಳಗಿಟ್ಟು ಅದರಮೇಲೆ ಕಡಗೋಲಿನಂತೆ ಉದ್ದವಾದ ಕಟ್ಟಿಗೆಯಿಂದ ಬೈರಗಿ ಹಿಡಿಯುವಂತೆ, ಅಥವಾ ಮೊಸರು ಕಡೆಯುವಂತೆ, ಕಡೆಯಲು, ಬೆಂಕಿ ಹುಟ್ಟುವುದು. ಬೆಂಕಿಯು ಹುಟ್ಟಿ ಕಟ್ಟಿಗೆಗೆ ಸಂಬಂಧವಾದ ಕೂಡಲೇ ಕಾಷ್ಠವನ್ನು ಸುಡುವುದು. ಅದೇ ಅಗ್ನಿಯು ಮಥನ ಮಾಡುವುದಕ್ಕೆ ಮೊದಲು, ಕಾಷ್ಠದಲ್ಲಿದ್ದರೂ, ಇತರರಿಗೆ ಕಾಣಿಸದಂತೆ ಇರುವುದು. ಹಾಗೆ ಶ್ರೀ ಪರಮಾತ್ಮನು ಸರ್ವತ್ರ ಇದ್ದರೂ, ನಿರ್ಲಿಪ್ತನಾಗಿ ಭಗವತ್ಸ್ವರೂಪವನ್ನು ಧ್ಯಾನದಿಂದ ಮಥನ ಮಾಡುವಸಜ್ಜನರಿಗೆ ಮಾತ್ರ ಗೋಚರಿಸುವನು. ||೧೧||

(೩) ಭಾವದರ್ಪಣಟೀಕಾ :—

ದ್ರವ್ಯೇತಿ || ಅವ್ಯಯ — ನಾಶರಹಿತ ಎಂಬರ್ಥ. ***ಉಕ್ತಂಚ ಗಾರುಡೇ*** — **"ಸ್ವರೂಪತೋ ಯಸ್ಯ ನಾಸ್ತಿ ವಿನಾಶಃ ಸೋಽವ್ಯಯಃ ಸ್ಮೃತ ಇತಿ"** || ಭವ್ಯೇತೀ — ಕಶಲನಾಮಕ ಎಂಬರ್ಥ. **"ಭವ್ಯಂ ಕುಶಲಮಾಸ್ತ್ರೀಯಾ ಮಿತ್ಯಭಿಧಾನಾತ್"**|| ಸವ್ಯ—ಸ್ತುತ್ಯ. ಹವ್ಯವಾಹನ—ಅಗ್ನಿ. ಅರಣಿ — ಅಶ್ವತ್ಥಕಾಷ್ಠ. ||೧೧||

(೪) ಶ್ರೀವ್ಯಾಸದಾಸ ಸಿದ್ಧಾಂತ ಕೌಮುದೀ (ಸಂಸ್ಕೃತಮೂಲ) :—

"ದ್ರವ್ಯ" — ಇತಿ || ದ್ರವಣ ಪ್ರಾಪ್ಯತ್ವಾತ್ ದ್ರವ್ಯಮ್ || " ಅವ್ಯಯಃ" —

"ಓಂ ತ್ವಯಾಪವಯುಂ ಶಾಶದ್ಮಹೇರಣೇಷುನದಂ ಜದತೀನಾಮ್। ಪ್ರಪಶ್ಯಂತೋ ಯುಧ್ಧೇನ್ಯಾನಿ ಭೂರಿನದಂ ಯೋ ಯುವತೀನಾಮ್ – ಓಂ || ಅವಿನಶ್ವರ ಗುಣಜಾತಾತ್ಮಕತ್ವಾತ್ ಅವ್ಯಯಾನಿ ಗುಣಜಾತಾನಿ ಅಸ್ಯ ಇತಿ ಮತ್ವರ್ಥೀಯ ಅಚ್‌ಪ್ರತ್ಯಯೇ ಅವ್ಯಯಃ ಇತಿ || ಭವ್ಯಃ – ಮಂಗಲಃ || "ಸತ್ಕ್ರಿಯಃ" – "ಓಂ ಮಹೇವೀರಾಯ ತವಸೇ ತುರಾಯ ವಿರಪ್ಸಿನೇ ವಜ್ರಿಣೇ ಶಂತಮಾನಿ || ವಚಾಂಸ್ಯಾಸಾ ಸ್ಥವಿರಾಯ ತಕ್ಷಂ ಸಮಾರತಾ ||ಓಂ||" ಸತೀ ಸಮೀಚೀನಾ ಕೃತಿಃ ಸ್ತುತಿಃ ನಿರ್ಮಾಣರೂಪಾ ಕೃತಿಃ ಯಸ್ಯ ಸಃ ಸತ್ಕೃತಿಃ ||"ಸ್ತವ್ಯಃ" – "ಓಂ ಮಹೇಮ್ಯೃಶಸ್ವ ಶೂಧರಾಧಸೇ ಉದೂಷು ಮಹ್ಯೈ ಮಘಿವನ್ ಮಘತ್ತಯೇ ಉದಿಂದ್ರ ಶ್ರವಸೇ ಮಹೇ || ತ್ವಲನ ಇಂದ್ರಕೃತಯಃ ಓಂ||" ರಾಧಸಾ ದ್ರವಿಣೇನ ಅನೇನ ಜ್ಞಾನಾದಿನಾ ಚ ಸ್ತೃಣಾತಿ –ಆಚ್ಛಾದಯತಿ – ಭಕ್ತಾನ್ ಇತಿಸ್ತವ್ಯಃ|| "ಕಾರಕ" – ಜ್ಞಾನಜನಕಃ"|| ಹವ್ಯವಾಹನೇತ್ಯಗ್ನಿಃ || ಅರಣಿ – ಅಶ್ವತ್ಥ. ||೧೧||

ಕನ್ನಡಾರ್ಥ :—

ಗಮನಾಗಮನಾ ಇತ್ಯಾದಿ ಚಲನಕ್ರಿಯೆಯಿಂದ ಯಾವುದು ಪ್ರಾಪ್ತಿಯೋ ಅದು "ದ್ರವ್ಯ" – ವೆನಿಸುವುದು. "ಅವ್ಯಯ" ನಾಮವು **ಶ್ರೀ ವಿಷ್ಣುಸಹಸ್ರನಾಮಾಂತರ್ಗತವು.** "ತ್ವಯಾಮಯಂ" – ಎಂಬ **ಬೃಹತೀ ಮಂತ್ರವು** ಈ ಶಬ್ದಾರ್ಥವನ್ನು ವಿವರಿಸುವುದು. ಶ್ರೀಹರಿಯು ನಾಶವಿಲ್ಲದಂತಹ ಗುಣಗಣ ಪರಿಪೂರ್ಣಸ್ವರೂಪನು. ಇದರಿಂದ ನಾಶರಹಿತನು. ಅಂದರೆ, **ಅವ್ಯಯನೆಂದು** ಮಂತ್ರಾರ್ಥ. "ಭವ್ಯ" – ಎಂಬ ಪದಕ್ಕೆ "ಮಂಗಲನು" – ಎಂಬರ್ಥ. "ಸತ್ಕ್ರಿಯ" – ಈ ಶಬ್ದವೂ ಸಹ **ಶ್ರೀ ವಿಷ್ಣು ಸಹಸ್ರನಾಮಾಂತರ್ಗತವು.** ಇದು **"ಸತ್ಕೃತಿ"** – ಎಂಬ ನಾಮದ ಸಮಾನಾರ್ಥಕವಾಗಿದೆ. ಈ ಶಬ್ದಾರ್ಥವು **ಬೃಹತೀಮಂತ್ರದಲ್ಲಿ** ವಿವರಿಸಲ್ಪಟ್ಟಿದೆ. "ಸಮೀಚೆನವಾದ ಸ್ತೋತ್ರವುಳ್ಳವನು. ನಿರ್ದುಷ್ಟವಾದ ಉತ್ತಮಕ್ರಿಯಾ ಜಗನಿರ್ಮಾಣ ಇತ್ಯಾದಿ ಕ್ರಿಯಾಪ್ರವರ್ತಕನು"

– ಎಂದು ಮಂತ್ರಾರ್ಥವು. "ಸ್ತವ್ಯ" – ಇದೂ ಸಹ **ಶ್ರೀವಿಷ್ಣುಸಹಸ್ರನಾಮಂತರ್ಗತವಾದುದು.** "ದ್ರವ್ಯ – ಅನ್ನ – ಜ್ಞಾನ ಇತ್ಯಾದಿಗಳಿಂದ ಭಕ್ತರಿಗೆ ಹೊಂದಿಸುವವನು. ಪೂರೈಸಿ ಆನಂದಪಡಿಸುವವನು" – ಎಂಬ "ಮಹೇಮ್ಯೃಶಸ್ವ" ಎಂಬ **ಬೃಹತೀಮಂತ್ರಾರ್ಥವಾಗಿದೆ.** "ಕಾರಕ" – ಎಂಬ ಪದವು "ಜ್ಞಾನಜನಕ" – ಎಂಬರ್ಥವನ್ನು ಪ್ರತಿಪಾದಿಸುವುದು. "ಹವ್ಯವಾಹನ" – ಎಂದರೆ, ಅಗ್ನಿ. "ಅರಣಿ" – ಎಂದರೆ, ಅಗ್ನಿಯ ಅಧಿಷ್ಠಾನವಾದ "ಅಶ್ವತ್ಥ" – ವೆಂಬ ಕಾಷ್ಠವಿಶೇಷವು. ॥೧೧॥

## (ಔ) ಶ್ರೀ ಗುರುಹೃದಯಪ್ರಕಾಶಿಕೆ ವ್ಯಾಖ್ಯಾನ : –

ಮೇಲೆ ಹೇಳಿದ್ದನ್ನೇ ಸಂಗ್ರಹಿಸಿ ತಿಳಿಸುತ್ತಾರೆ – ದ್ರವ್ಯವೆಂದು. ಪಂಚಭೂತ, ಶಬ್ದಾದಿ ತನ್ಮಾತ್ರದಲ್ಲೂ ಸಹ ಇದ್ದು, **ಅವ್ಯಯನೆಂಬ** ವಿಕಾರರಹಿತ ಸ್ವಾಮಿ **ದ್ರವ್ಯವೆಂದು** ಕರೆಸುವನು. ಕಣ್ಣು ಮೊದಲಾದ ಜ್ಞಾನೇಂದ್ರಿಯಗಳಲ್ಲಿದ್ದು ಕಾರ್ಯ ನಡೆಸುವುದರಿಂದ **ಕಾರಕನೆಂದು** ಹೇಳಿಸಿಕೊಳ್ಳುವನು. ವಾಗಾದಿ ಪಂಚಕರ್ಮೇಂದ್ರಿಯಗಳಲ್ಲಿದ್ದು ಕ್ರಿಯಾವ್ಯಕ್ತಿ ಮಾಡುವುದರಿಂದ **ಭವ್ಯವೆಂಬ** ಕುಶಲಸ್ವರೂಪನು. ಸ್ವಾನಂದರೂಪನು ಆದ ದೇವರು **ಸತ್ಕ್ರಿಯ** ಎಂದು ಕರೆಸುವನು. ಉತ್ತಮರಲ್ಲಿ ಸೇವ್ಯನೆಂಬ ಪೂಜ್ಯನಾಗಿಯೂ, ಚಿಕ್ಕವರಲ್ಲಿ ಸೇವಕನಾಗಿಯೂ ಇದ್ದು ಹವ್ಯವಾಹನನೆಂಬ ಅಗ್ನಿಯು, ಅರಣಿ ಎಂಬ ಕಾಷ್ಠದಲ್ಲಿ ವ್ಯಾಪ್ತವಾಗಿರುವಂತೆ ವ್ಯಾಪ್ತನಾಗಿ, ಪೂಜ್ಯಪೂಜಕ ನಿಮಿತ್ತ ಗುಣದೋಷಗಳಿಲ್ಲದಂತೆ ಇರುವನು. ಆದ್ದರಿಂದ **ಸ್ತವ್ಯ** ಎಂದರೆ ಸ್ತುತಿಗೆ ಅರ್ಹನು. ॥೧೧॥

## ಸರ್ವವ್ಯಾಖ್ಯಾನಸಾರಸಂಗ್ರಹ

ಸರ್ವತ್ರ ವ್ಯಾಪ್ತನಾಗಿ ಶ್ರೀ ಹರಿಯು, ಸಮಸ್ತ ವಸ್ತುಗಳಲ್ಲಿ ತತ್ತದಾಕಾರನಾಗಿ, ತತ್ತನ್ನಾಮಕನಾಗಿ. ತದ್ವಾಚ್ಯನಾಗಿ, ತದ್ರೂಪನಾಗಿ, ತದ್ಭಿನ್ನನಾಗಿ ಇದ್ದು,

ಆನಂದಮಯಸ್ವರೂಪನು ಅರಣಿಯೊಳಗಿಪ್ಪ ಅಗ್ನಿಯಂತೆ ಅಗೋಚರನಾಗಿದ್ದು, ಸಮಸ್ತ ವ್ಯಾಪಾರ ಪ್ರವರ್ತಕನಾಗಿದ್ದಾನೆಂದು ತಿಳಿಸುತ್ತಾರೆ. **ದ್ರವ್ಯನೆನಿಸುವ** – ಎಂಬ ಪ್ರಸಕ್ತ ೧೧ನೆಯ ಪದ್ಯದಿಂದ.

೧. ಆಕಾಶ, ವಾಯು, ತೇಜಸ್ಸು, ಉದಕ ಮತ್ತು ಪೃಥ್ವಿ ಎಂಬ ಪಂಚಭೂತಗಳಲ್ಲಿ ವ್ಯಾಪ್ತನಾಗಿದ್ದು, **ದ್ರವ್ಯ** ವೆಂಬ ಹೆಸರಿನಿಂದ ಕರೆಯಿಸುತ್ತಾನೆ. ದ್ರವಣ ಪ್ರಾಪ್ಯತ್ವಾತ್ **ದ್ರವ್ಯಮ್** – ಎಂಬ ಶಬ್ದಾರ್ಥದಿಂದ, ಗಮನಾಗಮನ ರೂಪವಾದ ಚಲನಕ್ರಿಯೆಯಿಂದ ಯಾವುದು ಪ್ರಾಪ್ತವೋ ಅದಕ್ಕೆ **ದ್ರವ್ಯ** ಎಂತ ನಾಮ. ಪಾಂಚಭೌತಿಕ ತತ್ತ್ವಗಳದ್ವಾರಾ. ಚಲನಾದಿಗಳನ್ನುಂಟು ಮಾಡುವುದರಿಂದ, ಶ್ರೀ ಪರಮಾತ್ಮನಿಗೆ **ದ್ರವ್ಯ** ಎನ್ನುವರು.

೨. ಶಬ್ದ, ಸ್ಪರ್ಶ, ರೂಪ, ರಸ ಮತ್ತು ಗಂಧ ಎಂಬ – ಈ ಐದು ಗುಣಗಳು ಭೂತ ಪಂಚಕಗಳ ಸಹಜಗುಣ ಧರ್ಮಗಳು. ಇವುಗಳಿಗೆ **ಮಾತ್ರಾಗುಣ**ಗಳೆಂದು ಹೆಸರು. ಅಂತಹ ಪಂಚತನ್ಮಾತ್ರಗಳಲ್ಲಿ **ಅವ್ಯಯ** ನಾಮಕನಾಗಿದ್ದಾನೆ. ಶ್ರೀ ಹರಿಯ ಈ ನಾಮವು **ಶ್ರೀ ವಿಷ್ಣು ಸಹಸ್ರನಾಮಗಳಲ್ಲಿ** ಒಂದು. **ತ್ವಯಾಮಯಂ** – ಎಂಬ **ಬೃಹತೀ ಮಂತ್ರವು** ಈ ಪದದ ಶಬ್ದಾರ್ಥವನ್ನು ವಿವರಿಸುವುದು. **ಅವ್ಯಯನೆಂದರೆ, ನಾಶರಹಿತ**ವೆಂದರ್ಥ. ನಿರ್ವಿಕಾರನಾದ, ಶಶ್ವದೇಕ ಪ್ರಕಾರನಾಗಿ ಇರುವ ಶ್ರೀ ಹರಿಯು ನಾಶವಿಲ್ಲದಂತಹ ಗುಣಗಳ ಪರಿಪೂರ್ಣಸ್ವರೂಪನು. ಇದರಿಂದ **ಅವ್ಯಯ**ನೆಂದು ಕರೆಯಿಸುವನು. ಹೀಗೆ ಶಬ್ದಾದಿ ಪಂಚವನ್ಮಾತ್ರಗಳು **ಅವ್ಯಯನಾಮಕನಾಗಿರುವನು.** ಗುಣ ಮತ್ತು ಗುಣಿಗಳು ಭೇದಾಭೇಧಯುಕ್ತವಾದುವು. ಆಕಾಶಾದಿ ಪಂಚಭೂತಗಳ ತನ್ಮಾತ್ರಾಗುಣಗಳ ನಿತ್ಯ ಸ್ವಭಾವಕ್ಕೆ ಅವ್ಯಯನಾಮಕನು ಆ ಗುಣಧರ್ಮಗಳಲ್ಲಿ ವ್ಯಾಪ್ತನಾಗಿರುವುದೇಕಾರಣವು.

೩. ಹಸ್ತದ್ವಯಗಳು, ಪಾದದ್ವಯಗಳು, ವಾಗಿಂದ್ರಿಯ, ಗುದ ಮತ್ತು

ಉಪಸ್ಥ – ಈ ಐದು ಕರಣಗಳಿಗೆ **ಪಂಚಕರ್ಮೇಂದ್ರಿಯಗಳೆಂದು** ಹೆಸರು. ಪಾಣ್ಯಾದಿ ಪಂಚಕರ್ಮೇಂದ್ರಿಯಗಳಲ್ಲಿ ಶ್ರೀ ಪರಮಾತ್ಮನು **ಭವ್ಯ** ನಾಮದಿಂದ ವಿದ್ಯಮಾನನಾಗಿದ್ದಾನೆ. **ಭವ್ಯ** ಎಂಬ ಶಬ್ದಕ್ಕೆ **ಮಂಗಳವೆಂದರ್ಥ**. ಭವ್ಯ ನಾಮಕನಾಗಿ ಹಸ್ತಾದಿ ಪಂಚಕರ್ಮೇಂದ್ರಿಯಗತನಾಗಿದ್ದು, ಶ್ರವಣಮಂಗಲ ನಾಮಧೇಯನು ಕರ್ಮರೂಪವಾದ ಕ್ರಿಯಾವಿಶೇಷಗಳನ್ನು ಬಿಂಬಕ್ರಿಯಾದ್ವಾರಾ ಮಾಡಿ, ಇಂದ್ರಿಯಾಭಿಮಾನಿಗಳ ದ್ವಾರಾ ಮಾಡಿಸುತ್ತಿರುವನು. ಇಂತು **ಕುಶಲ** ರೂಪನಾದ ಶ್ರೀ ಹರಿಯು ಸಕಲ ಕ್ರಿಯಾಭಿವ್ಯಕ್ತಿಗೆ ಮುಖ್ಯ ಕಾರಣನು.

೪. ಕಿವಿ, ಚರ್ಮ, ಕಣ್ಣು, ನಾಲಿಗೆ ಮತ್ತು ಮೂಗು ಈ ಐದು **ಜ್ಞಾನೇಂದ್ರಿಯಗಳು** . ಶ್ರವಣಾದಿ ಪಂಚಜ್ಞಾನೇಂದ್ರಿಯಗಳಲ್ಲಿ **ಸತ್ಕ್ರಿಯ** ಎಂಬ ಹೆಸರಿನಿಂದ ಇದ್ದಾನೆ. ಈ ನಾಮವೂ ಸಹ **ಶ್ರೀವಿಷ್ಣು ಸಹಸ್ರನಾಮಾಂತರ್ಗತವಾದದ್ದು.** ಈ ಪದದ ಶಬ್ದಾರ್ಥವು **ಬೃಹತೀಮಂತ್ರ** ದಲ್ಲಿ ವರ್ಣಿತವಾಗಿದೆ. ಶ್ರೀಪರಮಾತ್ಮನು ಸಮೀಚೀನವಾದ ಸ್ತೋತ್ರ ಪ್ರತಿಪಾದ್ಯನು. ನಿರ್ದುಷ್ಟವಾದ ಜಗತ್ಸೃಷ್ಟಿ, ಪಾಲನೆ, ಲಯ ಇತ್ಯಾದಿ ಉತ್ತಮಕ್ರಿಯಾಪ್ರವರ್ತಕನಾದ್ದರಿಂದ, **ಸತ್ಕ್ರಿಯನಾಮಕನು.** ಶ್ರೋತ್ರಾದಿ ಪಂಚ ಜ್ಞಾನೇಂದ್ರಿಯಗತ ರೂಪವು **ಸತ್ಕ್ರಿಯನಾಮಕ** ಭಗವದ್ರೂಪವು ಈ ರೂಪದಿಂದ ಇಂದ್ರಿಯಗಳಿಗೆ ವಿಷಯಸನ್ನಿಕರ್ಷಮಾಡಿಸಿ, ತದ್ವಾರಾ ಆಯಾಯಾ ಇಂದ್ರಿಯಗಳ ಜ್ಞಾನರೂಪ ವ್ಯಾಪಾರ ಮಾಡಿ ಮಾಡಿಸುವನು.

೫. ಸಂಸ್ತುತ್ಯಮಾನನಾಗಿರುವುದರಿಂದ **ಸ್ತವ್ಯನೆಂದು** ಹೆಸರು. ದ್ರವ್ಯ (ಸಂಪತ್ತು ಮತ್ತು ಸಾಧನ ಸಾಮಗ್ರಿಗಳು), ಆಹಾರರೂಪವಾದ ಅನ್ನ (ದೇಹೋಪಚಯಕ್ಕೆ) ಮತ್ತು ಬುದ್ಧಿ ವಿಕಾಸಕ್ಕೆ ಜ್ಞಾನ ಇತ್ಯಾದಿಗಳನ್ನು ತನ್ನ ಭಕ್ತರಿಗೆ ಹೊಂದಿಸಿ, ತದ್ವಾರಾ ಆನಂದ ಪಡಿಸುವುದರಿಂದ, ಶ್ರೀ ಹರಿಗೆ **ಸ್ತವ್ಯ** ನೆಂದು ಹೆಸರು. ಈ ನಾಮವು **ಶ್ರೀ ವಿಷ್ಣು ಸಹಸ್ರನಾಮಾಂತರ್ಗವು. ಮಹೇಮ್ಯಶಸ್ವ – ಎಂಬ ಬೃಹತೀಮಂತ್ರವು** ಈ ಪದದ ಶಬ್ದಾರ್ಥವನ್ನು ವಿವರಿಸುವುದು.

೬. ಜ್ಞಾನಜನಕನಾದ್ದರಿಂದ **ಕಾರಕನಾಮಕನು.** **॥ ಕಾರಕಃ ಜ್ಞಾನ ಜನಕಃ ಇತ್ಯರ್ಥಃ ॥** ಸಕಲ ಇಂದ್ರಿಯಗಳಿಗೂ ಪರಮ ಮುಖ್ಯ ವೃತ್ತಿಯಿಂದ ಪ್ರೇರಕನಾಗಿದ್ದು, ಕ್ರಿಯಾಭಿವ್ಯಕ್ತಿಮಾಡುವುದರಿಂದ **ಕಾರಕನಾಮಕನು.**

೭. ಸೇವೆಯನ್ನು ಕೈಗೊಂಬ ಉತ್ತಮಾಧಿಷ್ಠಾನದ ಜನರಲ್ಲಿ ಬಿಂಬನಾಗಿರುವುದರಿಂದ **ಸೇವ್ಯ** ವೆನಿಸುವನು. ಸೇವ್ಯನಾಮಕನು ಸಂಪೂಜ್ಯನು. ಭೃತ್ಯರಿಂದ ಸೇವ್ಯ ಜನರಲ್ಲಿದ್ದು ಸೇವಾಸ್ವೀಕಾರಮಾಡುವನು.

೮. ಭೃತ್ಯರಾದ ಸೇವಕರಲ್ಲಿ ಬಿಂಬನಾಗಿದ್ದು **ಸೇವಕ** ನೆನಿಸುವನು. ಅವರಲ್ಲಿ ಸೇವ್ಯನಾಮಕದಿಂದ ಇರುವ ಭಗವದ್ರೂಪನೇ ಸೇವ್ಯರಲ್ಲಿ ತನ್ನಾಮದಿಂದ ಇದ್ದು ಸೇವಾಸ್ವೀಕಾರ ಮಾಡಿ, ತನ್ನ ಅಭಿನ್ನ ರೂಪಗಳಲ್ಲಿಯೇ ರಮಿಸುವನು. ಇದಲ್ಲವೇ ಸ್ವರಣನ ಪರಮಾಶ್ಚರ್ಯ ಅದ್ಭುತಮಹಿಮೆ!

೯. ಶ್ರೀಪರಮಾತ್ಮನು ಆನಂದಸ್ವರೂಪಿಯು. ನಿತ್ಯಾನಂದಉದ್ರಿಕ್ತನು. ಇದರಿಂದ **ಸುಖಮಯನು.** ಯಾಗಶಾಲೆಯಲ್ಲಿ ಅಗ್ನಿ ಉತ್ಪತ್ತಿಮಾಡುವುದಕ್ಕೆ ಇರುವ ಕಾಷ್ಠವಿಶೇಷಕ್ಕೆ **ಅರಣಿ** ಎಂದು ಹೆಸರು. ಇದು ಅಶ್ವತ್ಥಕಾಷ್ಠವು. ಇದನ್ನು ಮಥಿಸಿದಾಗ ಅಗ್ನಿ ಉತ್ಪತ್ತಿಯಾಗುವುದು. ಬಕಾರೇ ಕಾಷ್ಠದಲ್ಲಿ ಗೋಚರವಾಗುವುದಿಲ್ಲ. ಯಜ್ಞಯಾಗಾದಿಗಳಲ್ಲಿ ದೇವತೆಗಳಿಗೆ ಹವಿಸ್ಸನ್ನು ಒಯ್ಯುವುದರಿಂದ ಅಗ್ನಿಗೆ **ಹವ್ಯವಾಹನ** ನೆಂದು ಹೆಸರು. ಅಂತಹ ಹವ್ಯವಾಹನನು ಆರಣಿಯಲ್ಲಿ ಇದ್ದೂ ಅಗೋಚರನಾಗಿರುವಂತೆ, ಸರ್ವತ್ರವ್ಯಾಪ್ತನಾದ ಶ್ರೀಹರಿಯು ಸರ್ವಾಧಿಷ್ಠಾನಗತನಾಗಿ ತನ್ನ ಇರವನ್ನು ತೋರಿಸಿಕೊಳ್ಳದೆ, ಅರಣಿಗತಅಗ್ನಿಯಂತೆ ಇದ್ದಾನೆ ಎಂದು ತಿಳಿಸುತ್ತಾರೆ.

ಭಗವದ್ರೂಪಗಳ ಚಿಂತನಾಕ್ರಮ :—

| ಕ್ರಮ ಸಂಖ್ಯೆ | ಅಧಿಷ್ಠಾನಗಳು | ಭಗವದ್ರೂಪದ ಹೆಸರು | ಶಬ್ದಾರ್ಥ |
|---|---|---|---|
| ೧ | ಪೃಥ್ವಿವ್ಯಾದಿ ಪಂಚಭೂತಗಳು | ದ್ರವ್ಯ | ಗಮನಾಗಮನ ಕ್ರಿಯಾಶಕ್ತಿ ಪ್ರವರ್ತಕರೂಪ |
| ೨ | ಗಂಧಾದಿ ಪಂಚತನ್ಮಾತ್ರಗಳು | ಅವ್ಯಯ | ನಾಶರಹಿತನು |
| ೩ | ಪಂಚಜ್ಞಾನೇಂದ್ರಿಯಗಳು | ಸತ್ಕ್ರಿಯ | ಸಂಸ್ತುತ್ಯಮಾನನು, ಸಕಲ ಕ್ರಿಯಾಭಿವ್ಯಕ್ತಿಗೆ ಕಾರಣನು |
| ೪ | ಪಂಚಕರ್ಮೇಂದ್ರಿಯಗಳು | ಭವ್ಯ | ಮಂಗಳಪ್ರದನಾದ ಕುಶಲ ಸ್ವರೂಪಿಯು |
| ೫ | ಸಾಧನಸಾಮಗ್ರಿಗಳು | ಸ್ತವ್ಯ | ಭಕ್ತರಿಗೆ ದ್ರವ್ಯ, ಅನ್ನ ಜ್ಞಾನಾದಿಪ್ರದನು |
| ೬ | ಸಮಸ್ತಕ್ರಿಯೆಗಳು | ಕಾರಕ | ಸಕಲ ಚೇಷ್ಟಾಭಿವ್ಯಕ್ತಿಗೆ ಪ್ರೇರಕನು |
| ೭ | ಉತ್ತಮರಲ್ಲಿ | ಸೇವ್ಯ | ಪೂಜ್ಯನಾಗಿ, ಸೇವಾ ಸ್ವೀಕಾರ |
| ೮ | ಅವರರಲ್ಲಿ (ಭೃತ್ಯರಲ್ಲಿ) | ಸೇವಕ | ಸೇವಾದಿಕ್ರಿಯಾಭಿವ್ಯಕ್ತಿ |

## ಪದ್ಯ ೧೨

**ಮೂಲ :—**

ಮನವೆ ಮೊದಲಾದಿಂದ್ರಿಯಗಳೊಳ ।
ಗನಿಲದೇವನು ಶುಚಿಯೆನಿಸಿಕೊಂ ।
ಡನವರತ ನೆಲೆಸಿಪ್ಪ ಶುಚಿಷದ್ಹೋತನೆಂದೆನಿಸಿ ॥
ತನುವಿನೊಳಗಿಪ್ಪನು ಸದಾ ವಾ ।
ಮನ ಹೃಷಿಕೇಶಾಖ್ಯರೂಪದ ।
ಲನುಭವಕೆ ತಂದೀವ ವಿಷಯಜಸುಖವ ಜೀವರಿಗೆ ॥೧೨॥

**ಅವತರಣಿಕೆ :—**

ಮನಸ್ಸೇ ಮೊದಲಾದ ಏಕಾದಶೇಂದ್ರಿಯಗಳಲ್ಲಿ ವಾಯುದೇವರು ಶುಚಿನಾಮಕರಾಗಿದ್ದಾರೆ. ವಾಯ್ವಂತರ್ಗತನಾಗಿ ಶ್ರೀ ಹರಿಯು **ಶುಚಿಷತ್** ಎಂಬ ಹೆಸರಿನಿಂದ ವಿದ್ಯಮಾನನಾಗಿದ್ದಾನೆ. **ಹೋತಾಖ್ಯಯನಾಗಿ** ವಾಯುದೇವರು ದೇಹಾದ್ಯಂತ ವ್ಯಾಪಿಸಿದ್ದಾರೆ. ತದಂಗರ್ತ ಹೋತೃನಾಮಕನಾಗಿ ಶ್ರೀಹರಿಯು **ವಾಮನನಾಮಕನಾಗಿ** ದೇಹಾಕಾರದಿಂದಲೂ, **ಹೃಷೀಕೇಶನಾಮಕನಾಗಿ,** ಸರ್ವೇಂದ್ರಿಯಗಳಲ್ಲಿಯೂ ಇದ್ದು , ವಿಷಯಜನ್ಯವಾದ ಸುಖಾನುಭವವನ್ನು ದೇಹಗತಇಂದ್ರಿಯಗಳ ದ್ವಾರಾ, ಪ್ರಕಾಶತೋವ್ಯಾಪ್ತನಾದ ಜೀವನಿಗೆ ತಂದೀಯುವುವನೆಂದು ತಿಳಿಸುತ್ತಾರೆ – **ಮನವೆ ಮೊದಲಾದ** – ಎಂಬ ಪ್ರಸಕ್ತ ಸಂಧಿಗತ ೧೨ನೆಯ ಈ ಪದ್ಯದಿಂದ. ॥೧೨॥

ಪ್ರತಿಪದಾರ್ಥ :—

**ಮನವೆ ಮೊದಲಾದ** = ಮನಸ್ಸೇ ಆದಿಯಾಗಿ, **ಇಂದ್ರಿಯಗಳೊಳು** = ದೇಹಗತ ಏಕಾದಶೇಂದ್ರಿಯಗಳಲ್ಲಿ, **ಅನಿಲದೇವನು** = ವಾಯುದೇವರು, **ಶುಚಿಯನಿಸಿಕೊಂಡು** = **ಶುಚಿ** ಎಂಬ ಹೆಸರಿನಿಂದ, **ಅನವರತ** = ನಿರಂತರದಲ್ಲಿಯೂ, **ನೆಲೆಸಿಪ್ಪ** = ಆವಾಸನಾಗಿದ್ದಾನೆ, **ತನುವಿನೊಳಗೆ** = ದೇಹದಲ್ಲಿ, **ಶುಚಿಷತ್** = **ಶುಚಿಷತ್** ಎಂಬ ನಾಮದಿಂದ ಋಕ್‌ಮಂತ್ರ ಪ್ರತಿಪಾದ್ಯನಾಗಿ ಶುಚಿನಾಮಕ ವಾಯ್ವಂತರ್ಗತನಾಗಿ, **ಹೋತನೆಂದೆನಿಸಿ** = **ಹೋತ** ನಾಮಕನಾಗಿ , **ಇಪ್ಪನು** = ದೇಹಾಕಾರನಾಗಿದ್ದಾನೆ. **ಸದಾ** = ಯಾವಾಗಲೂ, **ವಾಮನ** = ಹೋತೃನಾಮಕನೇ **ವಾಮನ**ನೆಂಬ ಹೆಸರಿನಿಂದ ಸಮಗ್ರದೇಹಕಾರದಿಂದಲೂ **ಹೃಷೀಕೇಶಾಖ್ಯ ರೂಪದಲಿ** = ಮನವೇ ಮೊದಲಾದ ಏಕಾದಶೇಂದ್ರಿಯಗಳಲ್ಲಿ ಹೃಷೀಕೇಶ (ಇಂದ್ರಿಯಾಧಿಪತಿ), ಎಂಬ ಹೆಸರಿನಿಂದಲೂ, ಇದ್ದು, **ಜೀವರಿಗೆ** = ದೇಹ ಮತ್ತು ದೇಹಗತ ಸಕಲೇಂದ್ರಿಯಗಳಲ್ಲಿ ಪ್ರಕಾಶತೋವ್ಯಾಪ್ತನಾದ ಜೀವನಿಗೆ, **ವಿಷಯಜಸುಖವ** = ವಿಷಯಭೋಗಗಳಿಂದ ಜನಿತವಾದ ಆನಂದಾನುಭವವನ್ನು, **ಅನುಭವಕೆ** = ಜೀವರ ಅನುಭವಕ್ಕೆ, **ತಂದೀವ** = ಹೊಂದಿಸುತ್ತಾನೆ, ಅಂದರೆ ಜೀವರ ಅನುಭವಕ್ಕೆ ವಿಷಯಭೋಗಸುಖವನ್ನು ಉಣಿಸುವನು. ||೧೨||

## ವ್ಯಾಖ್ಯಾನಗಳು

### (೧) ಶ್ರೀ ಸಂಕರ್ಷಣಒಡೆಯರ ವ್ಯಾಖ್ಯಾನ :—

ವಿಷಯಜನ್ಯಸುಖ ಅನುಭವಕ್ಕೆ ತಂದುಕೊಡುವ ಭಗವದ್ರೂಪಗಳನ್ನು ಹೇಳುತಾರೆ.

ಮನಸ್ಸೇ ಮೊದಲಾದ ಹನ್ನೊಂದು ಸಂಕೇತಗಳಾದ ಇಂದ್ರಿಯಗಳಲ್ಲಿ ವಾಯುದೇವರು **ಶುಚಿ** ನಾಮದಿಂದ ನಿರಂತರ ಆವಾಸವಾಗಿ ಇದ್ದಾರೆ. ಈ ಶುಚಿನಾಮಕವಾಯ್ವಂತರ್ಗತ **'ಹಂಸಃ ಶುಚಿಷದ್ವಸುರಂತ'** ಎಂಬ ಈ **ಋಕ್‌ಪ್ರತಿಪಾದ್ಯ**

ಹದಿನೆಂಟು ಭಗವದ್ರೂಪಗಳೊಳಗೆ, **ಶುಚಿಷತ್** ಎಂಬ ಭಗವದ್ರೂಪವನ್ನು ಚಿಂತಿಸಬೇಕು. ವಾಯುದೇವರು **ಹೋತಾ** ಎಂತ ಎನಿಸಿದವರಾಗಿ ದೇಹದೊಳು ದೇಹಾಕಾರದಂತೆ ಇರೋವರಾಗಿದ್ದಾರೆ. ತದಂತರ್ಗತ **ಹೋತೃನಾಮಕ** ಪರಮಾತ್ಮನ ಚಿಂತಿಸಬೇಕು. ಹೋತೃನಾಮಕನೇ **ವಾಮನ** ಎಂತ ದೇಹಾಕಾರದಿಂದಲೂ, ಶುಚಿನಾಮಕ ಪರಮಾತ್ಮನೇ **ಹೃಷೀಕೇಶ** ಎಂತಲೂ ಏಕಾದಶೇಂದ್ರಿಯಗಳೊಳು ಈ ನಾಮ ರೂಪಗಳಿಂದ, ನಿರಂತರದಲ್ಲಿ ವಿಷಯಭೋಗಳಿಂದ ಜನಿತ ಸುಖಗಳ, ಸರ್ವಪ್ರಾಣಿಗಳಿಗೆ ಅನುಭವಕ್ಕೆ ತಂದುಕೊಡುವ, ಅಂದರೆ **ಶುಚಿ ಹೋತಾ** ಎರಡೂ ರೂಪಗಳಿಂದ ವಿಷಯಗಳಿಂದ ಸುಖ ಉತ್ಪತ್ತಿ ಮಾಡುವ. ವಾಮನ–ಹೃಷಿಕೇಶ ರೂಪಗಳಿಂದ ಆ ಸುಖ ಅನುಭವಕ್ಕೆ ತಂದುಕೊಡುತ್ತಾನೆಂದು ತಾತ್ಪರ್ಯ. ||೧೨||

(೨) ಭಾವಪ್ರಕಾಶಿಕೆ : –

ಮನಸ್ಸು, ಜ್ಞಾನೇಂದ್ರಿಯಗಳು, ಕರ್ಮೇಂದ್ರಿಯಗಳು ಎಂಬ ೧೧ ಇಂದ್ರಿಯಗಳಲ್ಲಿ **ಶುಚಿ** ಎಂಬ ಹೆಸರಿನಿಂದ ವಾಯುದೇವರು ಇರುವರು. ಅವರ ಅಂತರ್ಯಾಮಿಯಾಗಿ **ಶುಚಿಷತ್** – ಎಂಬ ರೂಪದಿಂದ ಶ್ರೀ ಪರಮಾತ್ಮನಿರುವನು. ಮಿಕ್ಕೇಂದ್ರಿಯಗಳಲ್ಲಿ **ಹೋತನಾಮಕ** ವಾಯುದೇವರಲ್ಲಿ ಹೋತ ನಾಮಕನಾಗಿ ಪರಮಾತ್ಮನಿರುವನು. ಶರೀರದಲ್ಲಿ **ವಾಮನ ಮತ್ತು ಹೃಷಿಕೇಶ** – ಎಂಬ ಎರಡು ರೂಪಗಳಿಂದ ಇದ್ದು, ಭೋಜನ, ಪಾನ, ಸ್ತ್ರೀಯಾದಿ ಭೋಗ ಮೊದಲಾದ ಸಮಸ್ತ ವಿಷಯಸುಖಗಳನ್ನು ಜೀವರಿಗೆ ಬರುವಂತೆ ಮಾಡುವನು. ||೧೨||

(೩) ಭಾವದರ್ಪಣ ಟೀಕಾ :–

ಮನವೇತಿ || ಶುಚೇತಿ ವಾಯುಸ್ಥರೂಪ ಯಂತರ್ಥ. **"ವಾಯುಸ್ಥ ಶುಚಿಷತಸ್ಕೃತಃ" – ಇತಿ ತಾರಕಭಾಷ್ಯೋಕ್ತೇಃ ||** ಹೋತೇತಿ – ಸರ್ವೇಂದ್ರಿಯಸ್ಥ ಎಂತರ್ಥ. **"ಹೋತಾ ಸರ್ವೇಂದ್ರಿಯಾದಿಸ್ಥಿತಃ" – ತಾರಕಭಾಷ್ಯೋಕ್ತೇಃ ||** ||೧೨||

## (೪) ಶ್ರೀ ವ್ಯಾಸದಾಸಸಿದ್ಧಾಂತ ಕೌಮುದೀ :—

ಮನವೇ ಆದಿ ಇಂದ್ರಿಯಗಳಲ್ಲಿ ಮತ್ತು ಶರೀರಾದ್ಯಂತ ಚಿಂತಿಸಬೇಕಾದ ಭಗವದ್ರೂಪಗಳ ವಿಚಾರ ತಿಳಿಸುತ್ತಾರೆ. – **"ಮನವೆ"** – ಎಂಬ ಈ ಪದ್ಯದಿಂದ.

ಮನ ಆದಿ ಇಂದ್ರಿಯಗತ ವಾಯುವಿಗೆ **ಶುಚಿ** ಎಂತ ಹೆಸರು. ಇದು ಪ್ರಧಾನ್ಯವೆಂಬ ಗ್ರಂಥದಲ್ಲಿ ಉಕ್ತವಾಗಿದೆ. ಇದರಿಂದ ವಾಯುದೇವಸ್ಥ ಭಗವದ್ರೂಪಕ್ಕೆ **ಶುಚಿಷತ್** – ಎಂದು ಹೆಸರು. **ವಾಮನ** – ಎಂಬೀನಾಮವು **ಶ್ರೀ ವಿಷ್ಣುಸಹಸ್ರನಾಮಾಂತರ್ಗತವಾದುದು. "ವಾಮ"** – ಎಂದರೆ ಅತ್ಯಂತ ಅಭೀಷ್ಟವಾದುದು – ಪ್ರಿಯತಮವೆನಿಸಿರುವುದು. ಅದನ್ನು ಭಕ್ತರಿಗೆ ಒದಗಿಸಿಕೊಡುವುದರಿಂದ, **ವಾಮನನಾಮಕನು.** ಇದು **ಬೃಹತೀಮಂತ್ರದ** ಭಾವಾರ್ಥವಾಗಿದೆ. ॥೧೨॥

## (೫) ಶ್ರೀಗುರುಹೃದಯಪ್ರಕಾಶಿಕೆ ವ್ಯಾಖ್ಯಾನ :—

**ಶುಚಿಷತ್** ಎಂಬ ರೂಪಸ್ಮರಣೆ ತಿಳಿಸುತ್ತಾರೆ, ಮನವೆಂದು.

ಮನಸ್ಸು ಮೊದಲಾದ ಹನ್ನೊಂದು ಕರಣಗಳಲ್ಲಿ ಅನಿಲನೆಂಬ ಪ್ರಾಣದೇವರು ಶುದ್ಧಸ್ವರೂಪನಾದ್ದರಿಂದ **ಶುಚಿ** ಎನಿಸಿಕೊಂಡು ಸದಾ ವಾಸವಾಗಿರುವನು. ಪ್ರಾಣದೇವರಲ್ಲಿ **ಶುಚಿಷತ್** ಎಂಬ ನಾಮದಿಂದ ವಾಮನರೂಪಿ ಇರುವನು. ಹನ್ನೊಂದು ಇಂದ್ರಿಯಗಳಲ್ಲಿ ತ್ರಿವಿಕ್ರಮರೂಪದಿಂದ ತನುವೆಂಬ ಶರೀರದಲ್ಲಿದ್ದು, **ಹೋತೃನಾಮದಿಂದ** ವಿಷಯಗಳೆಂಬ ಶಬ್ದ ಸ್ಪರ್ಶಾದಿ ಭೋಗತೃಪ್ತಿಯನ್ನು ಅಖಿಳ ಜೀವರಿಗೆ ತಂದುಕೊಡುವನು. **ಹಂಸಶ್ಶುಚಿಷದ್ಹೋತಾ** ಎಂಬ ಮಂತ್ರಾರ್ಥವು ವಿವರಿಸಲ್ಪಟ್ಟಿತು. ॥೧೨॥

## ಸರ್ವವ್ಯಾಖ್ಯಾನಸಾರಸಂಗ್ರಹ

ಸಾಧನಶರೀರವೆಂದೆನಿಪ ಈ ದೇಹದ್ಯಾಂತ, ಸಕಲಇಂದ್ರಿಯಗಳಲ್ಲಿ ವ್ಯಾಪ್ತವಾಗಿರುವ

ವಾಯ್ವಂತರ್ಗತ ಭಗವದ್ರೂಪಗಳ ವಿವರಗಳನ್ನು ತಿಳಿಸುತ್ತಾರೆ – **ಮನವೆ ಮೊದಲಾದ** – ಎಂಬ ಪ್ರಸಕ್ತ ೧೨ನೆಯ ಪದ್ಯದಿಂದ.

೧. ಮನಸ್ಸು – ಶ್ರೋತ್ರೇಂದ್ರಿಯ, ತ್ವಗಿಂದ್ರಿಯ, ಚಕ್ಷುರಿಂದ್ರಿಯ, ರಸನೇಂದ್ರಿಯ ಮತ್ತು ಘ್ರಾಣೇಂದ್ರಿಯಗಳೆಂಬ **ಪಂಚಜ್ಞಾನೇಂದ್ರಿಯಗಳು** – ಹಸ್ತ, ಪಾದ, ವಾಕ್ಕು, ಗುದ ಮತ್ತು ಉಪಸ್ಥಗಳೆಂಬ ಪಂಚ ಕರ್ಮೇಂದ್ರಿಯಗಳು – ಈ ೧೧ ಸಂಖ್ಯಾಕವಾದ ಏಕಾದಶೇಂದ್ರಿಯಗಳಲ್ಲಿ **(ಮನವೆ ಮೊದಲಾದಿಂದ್ರಿಯಗಳೊಳು),** ವಾಯುದೇವರು ತತ್ತ್ವ ದೇವತೆಗಳಿಗೆ ಅಧಿಪತಿಗಳಾಗಿದ್ದಾರೆ. ಅಂತಹ ವಾಯುದೇವರು ಶುದ್ಧಸ್ವರೂಪರು. ಸತ್ತ್ವ ಪ್ರಾಚುರ್ಯಮಹತ್ತತ್ವ ದೇಹದಿಂದ ವಿರಾಜಮಾನರಾಗಿದ್ದಾರೆ. ಅವರು ಪರಮ ಪಾವನ ಮೂರ್ತಿಗಳಾದ್ದರಿಂದ, **ಪವಮಾನನಾಮಕರು.** ಶ್ರೀಪರಮಾತ್ಮನ ಪ್ರಥಮಾಂಗಭೂತರಾದ (ಮುಖ್ಯಪ್ರತಿಬಿಂಬರು) ಪಾವನಸ್ವರೂಪರಾದ ಶ್ರೀವಾಯುದೇವರಿಗೆ **ಶುಚಿ** – ಎಂದು ಹೆಸರು. ಇದು **ಪ್ರಧಾನ್ಯ** ಎಂಬ ಗ್ರಂಥದಲ್ಲಿ ಉಕ್ತವಾಗಿದೆ.

೨. **ಶುಚಿಯೆನಿಸಿಕೊಂಬ ಈ ಅನಿಲದೇವರಲ್ಲಿ** ಅಂತರ್ಯಾಮಿಯಾಗಿ ಸರ್ವ ವ್ಯಾಪಾರಗಳನ್ನು ಮಾಡಿ ಮಾಡಿಸುತ್ತಿರುವ ಶ್ರೀಪರಮಾತ್ಮನಿಗೆ **ಶುಚಿಷತ್** ಎಂದು ಹೆಸರು. **"ಹಂಸ ಶುಚಿಷದ್ವಸುರಂತ" – ಎಂಬ ಋಕ್ ಪ್ರತಿಪಾದ್ಯ** ಶ್ರೀಪರಮಾತ್ಮನ ೧೮ ಭಗವದ್ರೂಪಗಳಲ್ಲಿ **ಶುಚಿಷತ್** ಎಂಬ ಭಗವದ್ರೂಪವು ಒಂದು.

**ಪ್ರಮಾಣ :–**

**"ವಾಯುಸ್ಥ ಶುಚಿಶತ್ಸ್ಮೃತಃ" – ಎಂಬ ಕಾಠಕೋಪನಿಷದ್ಭಾಷ್ಯ ವಚನ.**

೩. ಶರೀರಗತ ಸಕಲೇಂದ್ರಿಯಗಳಲ್ಲಿ ತತ್ತ್ವಸುರರಿದ್ದಾರೆ. ಆ ತತ್ತ್ವಪತಿ ದೇವತೆಗಳಿಗೆ ಶ್ರೀವಾಯುದೇವರು ನಿಯಾಮಕರು. ತತ್ತ್ವಾಭಿಮಾನಿಸುರರಿಗೆ

ವಾಯುದೇವರ ಪ್ರೇರಣೆ. ಈಶನ ಪ್ರೇರಣೆ ಶ್ರೀ ವಾಯುದೇವರಿಗೆ. ಹೀಗೆ ಬಿಂಬಕ್ರಿಯಾದ್ವಾರಾ ಭಗವದ್ವ್ಯಾಪಾರ ಸರಣಿ. ವಿಷಯ ಸನ್ನಿಕರ್ಷಣದಿಂದ ಇಂದ್ರಿಯಗಳ ದ್ವಾರಾ, ಜೀವನಿಗೆ ಭೋಗಾನುಭವ. ಹೀಗೆ ನಿರಂತರದಲ್ಲಿ ಇಂದ್ರಿಯಗಳ ದ್ವಾರಾ ಭೋಗಾನುಭವರೂಪವಾದ ಕ್ರಿಯೆಯು ಯಜ್ಞವೆಂದೆನಿಸುವುದು. ಇಂದ್ರಿಯಗಳಿಂದಾಗುವ ಸಕಲಕ್ರಿಯೆಗಳ ಅರ್ಪಣೆಯೇ ಆ ಯಜ್ಞನಾಮಕನಿಗೆ ಯಜನವೆನಿಸುವುದು. ಇಂತಹ ಯಜ್ಞರೂಪವಾದ ವ್ಯಾಪಾರಕ್ಕೆ ತತ್ತ್ವಪತಿಸುರಾಧಿಪರಾದ ಶ್ರೀವಾಯುದೇವರು **ಹೋತ** ರೆಂದೆನಿಸುವರು. ಇಂತಹ ಹೋತನಾಮಕರಾದ ವಾಯ್ವಂತರ್ಗತಭಗವದ್ರೂಪಕ್ಕೆ **ಹೋತ** – ಎಂತಲೇ ಹೆಸರು.

**ಪ್ರಮಾಣ :–**

**"ಹೋತಾ ಸರ್ವೇಂದ್ರಿಯಾದ್ವ್ಯಾಸ್ಥಿತಃ" – ಕಾಠಕೋಪನಿಷದ್ಭಾಷ್ಯವಾಕ್ಯ.**

೪. ಇಂತು, ಶುಚಿ ನಾಮಕರಾದ ಭಾರತೀರಮಣರಲ್ಲಿ **ಶುಚಿಷತ್** ನಾಮಕನಾಗಿ, ಮನಾದಿ ಏಕಾದಶೇಂದ್ರಿಯಗಳಲ್ಲಿ ವಿದ್ಯಮಾನನಾಗಿದ್ದಾನೆ. ದೇಹಗತ ಇತರ ಇಂದ್ರಿಯಗಳಲ್ಲಿ ವಾಯ್ವಂತರ್ಗತನಾಗಿ **ಹೋತ**ನಾಮಕದಿಂದ ಇದ್ದಾನೆ.

೫. ಪರಮಮಂಗಳಮೂರ್ತಿಯಾದ ಶ್ರೀ ಹರಿಗೆ **ವಾಮನ** ನೆಂದು ಹೆಸರು. ಅಂತಹ ಪಾವನಸ್ವರೂಪನು ತನ್ನ ಭಕ್ತರಿಗೆ ಅತ್ಯಂತ ಇಷ್ಟ ಪ್ರದನಾದುದರಿಂದ **ವಾಮನ** ಎಂತ ನಾಮ. ಈ ನಾಮವು **ಶ್ರೀವಿಷ್ಣುಸಹಸ್ರನಾಮಾಂತರ್ಗತವಾದದ್ದು.** ಅಂತಹ ವಾಮನನು ವಟುವೇಷಧಾರಿಯಾಗಿ ಬಲಿಯ ಯಜ್ಞಶಾಲೆಗೆ ಬಂದು, ಮೂರಡಿ ನೆಲವನ್ನು ಬೇಡಿ, ವಾಮನನಾಗಿ ಬಂದವನು ತ್ರಿವಿಕ್ರಮನಾಗಿ ಬೆಳೆದ. ಪಿಂಡಾಂಡರೂಪವಾದ ಈ ದೇಹಾದ್ಯಂತ ಆಪಾದಮೌಳಿಪರ್ಯಂತ, ತ್ರಿವಿಕ್ರಮ ರೂಪಿಯಾದ **ವಾಮನರೂಪೀ** ಪರಮಾತ್ಮನು ಹಬ್ಬಿ ಹರಡಿ, ವ್ಯಾಪಿಸಿದ್ದಾನೆ.

೬. ಇಂದ್ರಿಯಗಳಿಗೆ ನಿಯಾಮಕನಾದುದರಿಂದ ಶ್ರೀ ಪರಮಾತ್ಮನಿಗೆ

**ಹೃಷಿಕೇಶನೆಂದು** ಹೆಸರು. **ಹೃಷೀಕ** = ಇಂದ್ರಿಯಗಳು. **ಈಶ** = ನಿಯಾಮಕ. (ಹೃಷೀಕ + ಈಶ = ಹೃಷೀಕೇಶ). ಇಂತು ಹೃಷಿಕೇಶ ನಾಮಕನಾಗಿ ದೇಹಗತ ಸಕಲೇಂದ್ರಿಯಗಳಲ್ಲಿಯೂ, ವಾಮನನಾಮಕನಾಗಿ ದೇಹಾದ್ಯಂತ ಸಕಲ ಸರ್ವಾಂಗಗಳಲ್ಲಿಯೂ ಪ್ರಕಾಶತೋವ್ಯಾಪ್ತನಾಗಿರುವ ಜೀವನ ಅನುಭವಕ್ಕೆ ಬಿಂಬಕ್ರಿಯಾದ್ವಾರಾ, ವಾಯುಗೋಳಕ, ತತ್ತ್ವಪತಿದೇವತೆಗಳ ದ್ವಾರಾ ಹೊಂದಿಸುತ್ತಿರುವನು. ***(ಅನುಭವಕ್ಕೆ ತಂದೀವ ವಿಷಯಬಜಸುಖವ ಜೀವರಿಗೆ)***

***ವಿಷಯ ಸನ್ನಿಕರ್ಷಣೆಯ ಸರಣಿ*** :-

(೧) **ಆಕಾಶ** ತತ್ತ್ವ – ***ಶಬ್ದ*** ತನ್ಮಾತ್ರಾ – ಶ್ರೋತ್ರೇಂದ್ರಿಯ – ಪ್ರಾಣೇಂದ್ರಿಯ

(೨) **ವಾಯು** ತತ್ತ್ವ – ***ಸ್ಪರ್ಶ*** ತನ್ಮಾತ್ರಾ – ತ್ವಗಿಂದ್ರಿಯ – ಪಾದೇಂದ್ರಿಯ

(೩) **ತೇಜಸ್** ತತ್ತ್ವ – ***ರೂಪ*** ತನ್ಮಾತ್ರಾ – ನೇತ್ರೇಂದ್ರಿಯ – ವಾಗಿಂದ್ರಿಯ

(೪) **ಅಪ್** ತತ್ತ್ವ – ***ರಸ*** ತನ್ಮಾತ್ರಾ – ರಸನೇಂದ್ರಿಯ – ಉಪಸ್ಥೇಂದ್ರಿಯ

(೫) **ಪೃಥ್ವೀ** ತತ್ತ್ವ – ***ಗಂಧ*** ತನ್ಮಾತ್ರಾ –ನಾಸಿಕೇಂದ್ರಿಯ – ಗುದೇಂದ್ರಿಯ

॥೧೨॥

## ಪದ್ಯ ೧೩

**ಮೂಲ :–**

ಪ್ರೇರಕ ಪ್ರೇರ್ಯರೊಳು ಪ್ರೇರ್ಯ ।
ಪ್ರೇರಕನು ತಾನಾಗಿ ಹರಿ ನಿ ।
ರ್ವೈರದಿಂದ ಪ್ರವರ್ತಿಸುವ ತನ್ನಾಮ ರೂಪದಲಿ ॥
ತೋರಿಕೊಳ್ಳದೆ ಸರ್ವರೊಳು ಭಾ ।
ಗೀರಥೀಜನಕನು ಸಕಲ ವ್ಯಾ ।
ಪಾರಗಳ ತಾ ಮಾಡಿ ಮಾಡಿಸಿ ನೋಡಿ ನಗುತಿಪ್ಪ ॥೧೩॥

**ಅವತರಣಿಕೆ :–**

ಪ್ರೇರಣೆ ಮಾಡುವ ಜನರಲ್ಲಿ ಪ್ರೇರಕ ರೂಪದಿಂದಲೂ, "ಪ್ರೇರಿತರಾದವರಲ್ಲಿ ಪ್ರೇರ್ಯ ರೂಪದಿಂದಲೂ, ಬಿಂಬನಾದ ಶ್ರೀಹರಿಯು ಆಯಾಯಾ ಜೀವರಲ್ಲಿ ಅಂತರ್ಯಾಮಿಯಾಗಿದ್ದು **ಪ್ರೇರಕ ಪ್ರೇರ್ಯ** ಎಂಬ ಅದೇ ನಾಮಗಳಿಂದ ವಾಚ್ಯನಾಗಿದ್ದು, ತತ್ತನ್ನಾಮಕನಾಗಿ, ತದ್ರೂಪನಾಗಿದ್ದು, ಸರ್ವಜೀವರಲ್ಲಿ ತಾನಿದ್ದು, ಸಕಲವ್ಯಾಪಾರಗಳನ್ನು ತಾನೇ ಸ್ವತಂತ್ರವಾಗಿ, ಆಯಾಯಾ ಜೀವರ ಹೆಸರಿನಲ್ಲಿ, ಅವರ ಪರವಾಗಿ ಪ್ರವರ್ತಿಸುತ್ತಿದ್ದರೂ, ತಾನು ಮಾತ್ರ ಅಗೋಚರನಾಗಿದ್ದಾನೆಂದು ತಿಳಿಸುತ್ತಾರೆ –**ಪ್ರೇರಕ**– ಎಂಬ ಪ್ರಸಕ್ತ ಸಂಧಿಗತ ೧೩ನೆಯ ಈ ಪದ್ಯದಿಂದ.॥೧೩॥

**ಪ್ರತಿಪದಾರ್ಥ :–**

**ಪ್ರೇರಕ** = ಕ್ರಿಯೆಗಳನ್ನು ಪ್ರೇರಣೆ ಮಾಡುವವರಲ್ಲಿ, **ಪ್ರೇರ್ಯರೊಳು** = ಪ್ರೇರಿತರಾದ ಜೀವರಲ್ಲಿ, **ಪ್ರೇರ್ಯ ಪ್ರೇರಕನು ತಾನಾಗಿ** = ಪ್ರೇರ್ಯ ಮತ್ತು

ಪ್ರೇರಕ ಎಂಬ ಹೆಸರಿನಿಂದಲೇ ಕರೆಯಿಸಿಕೊಳ್ಳುತ್ತಾ, ಸರ್ವತಂತ್ರಸ್ವತಂತ್ರನಾದ ಬಿಂಬರೂಪೀ ಶ್ರೀಹರಿಯು, **ತನ್ನಾಮ ರೂಪದಲಿ** = ಆ ಹೆಸರಿನಿಂದಲೇ ವಾಚ್ಯನಾಗಿ, ತದ್ರೂಪ, ತದಾಕಾರದಿಂದ ಇದ್ದು, **ನಿರ್ವೈರದಿಂದ** = ಸ್ವಲ್ಪವೂ ಪಕ್ಷಪಾತಬುದ್ಧಿಯಿಲ್ಲದೆ, ಆಯಾಯಾ ಜೀವರ ಅನಾದಿಸ್ವರೂಪ ಸ್ವಭಾವದಂತೆ, **ಪ್ರವರ್ತಿಸುವ** = ಪ್ರೇರ್ಯ ಪ್ರೇರಕ ರೂಪಗಳಿಂದ ಬಿಂಬಕ್ರಿಯಾದ್ವಾರಾ ಕ್ರಿಯಾ ವಿಶೇಷಗಳನ್ನು ಮಾಡಿ ಮಾಡಿಸುವನು. **ಸರ್ವರೊಳು** = ತ್ರಿವಿಧವಾದ ಸಮಸ್ತ ಜೀವರಲ್ಲಿ, **ಭಾಗೀರಥೀ ಜನಕನು** = ಗಂಗಾಪಿತನಾದ ತ್ರಿವಿಕ್ರಮ ರೂಪೀ ಹರಿಯು (ಇವನೇ ದೇಹಾಕಾರನಾದ **ವಾಮನ ಮೂರ್ತಿಯು**), **ತೋರಿಕೊಳ್ಳದೆ** = ತಾನು ಮಾತ್ರ ಗೋಚರವಾಗದೇ, **ಸಕಲ ವ್ಯಾಪಾರಗಳ** = ದೇಹಗತ, ಅವಯವಗತ, ಇಂದ್ರಿಯಗತ ಸಮಸ್ತ ಕ್ರಿಯೆಗಳನ್ನು, **ತಾ ಮಾಡಿ** = ಸ್ವತಂತ್ರನಾಗಿ ತಾನೇ ಬಿಂಬನಾಗಿ ಮಾಡಿ, **ಮಾಡಿಸಿ** = ತತ್ತ್ವೇಶರ ದ್ವಾರಾ, ಇಂದ್ರಿಯಗಳ ದ್ವಾರಾ ಮಾಡಿಸುತ್ತಾ, **ನೋಡಿ** = ದೇಹಾದ್ಯಂತ ಪ್ರಕಾಶತೋವ್ಯಾಪ್ತನಾದ ಜೀವರ ದ್ವಾರಾ ನಡೆಯುವ ತಾನೇ ಮಾಡಿದ ಕ್ರಿಯೆಗಳನ್ನು ನೋಡುತ್ತಾ ಸರ್ವಸಾಕ್ಷಿಯಾಗಿದ್ದುಕೊಂಡು, **ನಗುತಿಪ್ಪ** = ಅಹಂಕರ್ತೃತ್ವಾಭಿಮಾನದಿಂದ ಅಜ್ಞಾನಗ್ರಸ್ತರಾದ ಜೀವರು ತಾವೇ ಸಕಲ ಕಾರ್ಯಗಳಿಗೂ ಕರ್ತ ಎಂಬ ಜ್ಞಾನವನ್ನು ಹೊಂದಿರುವುದನ್ನು ಕಂಡು, ಅವರ ಅಜ್ಞಾನಕ್ಕಾಗಿ ನಗುತ್ತಿರುತ್ತಾನೆ. || ೧೩||

## ವ್ಯಾಖ್ಯಾನಗಳು

(೧) ಶ್ರೀ ಸಂಕರ್ಷಣಒಡೆಯರ ವ್ಯಾಖ್ಯಾನ :—

ಪ್ರೇರ್ಯ ಪ್ರೇರಕ ವಿಚಾರ ಹೇಳುತಾರೆ—

ಜೀವನ ಅಣುಸ್ವರೂಪದಲ್ಲಿ ವಿದ್ಯಮಾನನಾದ ಬಿಂಬರೂಪಿ ಪರಮಾತ್ಮ ಜೀವೇಂದ್ರಿಯಾದಿಗಳಿಗೆ ಪ್ರೇರಕನು. ದಾವ ನಾಮ ದಾವ ರೂಪದಿದಲಿ ಜೀವನ

ದೇಹಗತ ಚತುರ್ವಿಂಶತಿತತ್ತ್ವಗಳಿಗೆ ಪ್ರೇರಕ ಎಂದರೆ, ಸ್ಥೂಲಶರೀರಗತ ಚತುರ್ವಿಂಶತಿ ತತ್ತ್ವಗಳಿಗೆ ನಿಯಾಮಕರಾದ ಬ್ರಹ್ಮಾದಿ ದೇವತೆಗಳಾದ ಅವರವರ ನಾಮ – ರೂಪದೋಪಾದಿಯಲ್ಲಿ ರೂಪದಿಂದ ಯುಕ್ತನಾಗಿ ಆಯಾ ಜೀವರ ಚತುರ್ವಿಂಶತಿ ತತ್ತ್ವಗಳಲ್ಲಿದ್ದು ಪ್ರೇರಕನು, ಸ್ಥೂಲದೇಹಗತ ತತ್ತ್ವಗಳಿಗೆ ಪ್ರೇರ್ಯರಾದ ತತ್ತ್ವದೇವತೆಗಳ ಅನುರೂಪದಲ್ಲಿನೂ ಇದೇ ಪ್ರಕಾರ ಪ್ರೇರಕನಾಗಿದ್ದು, ಸ್ಥೂಲದೇಹಗತ ತತ್ತ್ವಕಾರ್ಯ ಈ ಪ್ರಕಾರ ಮಾಡಿಸಿ, ಅವರಿಗೆ ಪ್ರೇರಣೆ ಮಾಡಿ, ಆಯಾ ತತ್ತ್ವಗಳಲ್ಲಿ ಪೃಥಕ್ ರೂಪಗಳಿಂದ ಇದ್ದು, ಬಿಂಬಕ್ರಿಯಾದ್ವಾರಾ ದೇವತೆಗಳಿಂದ ತತ್ತ್ವಕಾರ್ಯಗಳ ನಡಸತಾನೆ. ಜೀವನಲ್ಲಿ ವಾಯುದೇವರ ಪ್ರವೇಶ ಇಲ್ಲ ಎಂಬ ವಿಷಯ ಒಂಭತ್ತನೇ ಸಂಧಿ, ಏಳನೇ ಶ್ಲೋಕದಾರಭ್ಯ ಹನ್ನೆರಡನೇ ಪರಿಯಂತ, ಆರನೇ ಸಂಧಿ, ಇಪ್ಪತ್ತನಾಲ್ಕು ಇಪ್ಪತ್ತೈದನೇ ಶ್ಲೋಕಗಳಲ್ಲಿ ವಿದಿತವಾಗಿದೆ. ಆದ್ದರಿಂದ ಜೀವನಲ್ಲಿ ಪ್ರೇರಕ ಈಶ್ವರನ ವ್ಯತಿರಿಕ್ತ ಅನ್ಯರು ದಾರೂ ಇಲ್ಲ. ರಮಾನಿತ್ಯಾವಿಯೋಗಿನಿ. ಆದ್ದರಿಂದ ರಮಾಸಹಿತನಾಗಿ ಪರಮಾತ್ಮ ಎಂಬುದು ಅರ್ಥಾತ್‌ಸಿದ್ಧವು. ಈ ಪ್ರಕಾರ ದೇವ ಮಾನುಷರ ಸ್ವರೂಪದಲ್ಲಿ ಅನ್ಯಾಪೇಕ್ಷಾ ಇಲ್ಲದೆ ತನಗೆ ತಾನೇ ಆಗಿ ತತ್ತ್ವೇಶರ ರೂಪಗಳಿಂದ ಪ್ರೇರಕನು ತನಗೆ ತಾನೇ ಆಗಿ, ಈ ಪ್ರಕಾರ ತೃಣಾಂತ ತ್ರಿವಿಧ ಜೀವರೊಳು ಇದ್ದು, ಸಾಧನಿ ಪೂರ್ತಿ ಆಗಿ ಲಿಂಗಭಂಗ ಆಗೋವರಿಗೂ ಜೀವಾಂತರ್ಗತನಾದ ತಾನು ಮುಕ್ತಿಯೋಗ್ಯರಿಗೆ ತೋರಿಕೊಳ್ಳದೇ, ತಮೋಯೋಗ್ಯರಿಗೆ ದಾವಾಗಲೂ ತೋರಿಕೊಳ್ಳದೆ, ತಮೋಯೋಗ್ಯರಿಗೆ ಲಿಂಗಭಂಗಾನಂತರ ದುಃಖ, ನಿತ್ಯಸಂಸಾರಿಗಳಿಗೆ ಲಿಂಗಭಂಗಾನಂತರ ಮಿಶ್ರ, ಮುಕ್ತಿಯೋಗ್ಯರಿಗೆ ಲಿಂಗಾಭಂಗಾನಂತರ ಸುಖ, ವೈರ–ಸ್ನೇಹಗಳಿಲ್ಲದೆ ಕೊಡತಾನೆ ಅಂದರೆ, ವೈರವರ್ಜಿತನಾಗಿ ಅವರವರ ಅನಾದಿ ಸ್ವರೂಪ ಸ್ವಭಾವದಂತೆ ಪ್ರೇರ್ಯ–ಪ್ರೇರಕಾದಿಗಳಿಂದ ಪ್ರವರ್ತಿಸೋವನಾಗತಾನೆ. ಪ್ರವರ್ತಿಸಿ ಸಾಧನಿ ಪೂರ್ತಿ ಮಾಡಿಸಿ, ತ್ರಿವಿಧಗತಿ ಕೊಡತಾನೆ. ದಾರು ಎಂದರೆ, ಗಂಗಾಜನಕನಾದ ತ್ರಿವಿಕ್ರಮ ದೇವರು (ಇವನೇ ಪೂರ್ವೋಕ್ತ ದೇಹಾಕಾರನಾದ

ವಾಮನನು). ಸ್ಥೂಲದೇಹದಲ್ಲಿ ದೇಹಾಕಾರನಾಗಿದ್ದು, ಸಾಧನೀರೂಪವಾದ ವ್ಯಾಪಾರವೇ ಮೊದಲಾದ ಯಾವತ್ತೂ ಕರ್ಮಗಳ ಸ್ಥೂಲದೇಹದಿಂದ ಬಿಂಬಕ್ರಿಯಾ ದ್ವಾರಾ ತಾನು ಮಾಡಿ, ತತ್ತ್ವೇಶರು, ಜೀವ ಇವರ ದ್ವಾರಾ ದೇಹದಿಂದ ಮಾಡಿಸಿ ಗತಿಗಳ ಕೊಡತಾನೆ. ಈ ಅನುಸಂಧಾನ ಗುರುಮುಖದಿಂದ ತಿಳಿದು, ಅನುಷ್ಠಾನ ಮಾಡತಕ್ಕ ಅಧಿಕಾರಿ, ದೇಹದಲ್ಲಿ ಆಗತಕ್ಕ ವ್ಯಾಪಾರಗಳ ಅನುಸಂಧಾನದಿಂದ ನೋಡಿ, ಅಹಂಮಮತಾದಿಗಳು ತ್ಯಜಿಸಿ ನಗುತ್ತಾ ಸಂತೋಷದಲ್ಲಿ ಇರುತ್ತಾನೆ. ವಿಷಯ ಸಂಬಂಧ ಕ್ಲೇಶಕ್ಕೆ ಒಳಗಾಗೋದಿಲ್ಲ ಎಂತ ತಾತ್ಪರ್ಯ. ||೧೩||

(೨) ಭಾವಪ್ರಕಾಶಿಕೆ :—

ನಮ್ಮ ದೇಹದಲ್ಲಿ ತತ್ತ್ವಾಭಿಮಾನಿ ದೇವತೆಗಳು ೨೪ ಮಂದಿ ಹೇಗೆ ಇರುವರೋ, ಹಾಗೆಯೇ ದೈತ್ಯರೂ ಸಹ ಇರುವರು. ಪುಣ್ಯಕರ್ಮಗಳನ್ನು ದೇವತೆಗಳು ಪ್ರೇರಿಸುವರು. ಅದರಂತೆ ಪಾಪಕರ್ಮಗಳಿಗೆ ದೈತ್ಯರು ಪ್ರೇರಕರಾಗಿರುವರು. ತ್ರಿವಿಧಜೀವರಾಶಿಗಳೂ ಕೂಡ ಈ ತತ್ತ್ವೇಶರ ಪ್ರೇರಣೆಯಿಂದಲೇ ಪುಣ್ಯಾಪಾಪಗಳನ್ನು ಮಾಡುವರು. ಆ ಶಕ್ತಿಯು ತತ್ತ್ವೇಶರಿಗೆ ಇರುವುದಲ್ಲ. ಆದರೆ, ಪರಮಾತ್ಮನು, ತತ್ತ್ವೇಶರಾದ ದೇವತೆಗಳಲ್ಲಿಯೂ, ದೈತ್ಯರಲ್ಲಿಯೂ, ಸಕಲ ಪ್ರಾಣಿಗಳಲ್ಲಿಯೂ ಅದೇ ಹೆಸರಿನಿಂದ ಇದ್ದು, ತತ್ತ್ವೇಶರು ಪ್ರೇರಿಸುವ ಪುಣ್ಯಾಪಾಪಕರ್ಮಗಳನ್ನು ಪ್ರೇರಿಸುವನು, ಪ್ರೇರ್ಯರಾದ ಸಕಲ ಪ್ರಾಣಿಗಳಲ್ಲಿಯೂ ಇದ್ದು, ತಾನೇ ಮಾಡುವನು. ಹೀಗೆ ಪ್ರೇರ್ಯಪ್ರೇರಕ ತಾನೇ ಆಗಿ, ಸಕಲ ಕರ್ಮಗಳನ್ನೂ ಮಾಡಿಸಿ, ತಾನು ನಿರ್ವೈರದಿಂದ ನಿರ್ಲಿಪ್ತನಾಗಿ ನೋಡಿ ನಗುತ್ತಿರುವನು. ||೧೩||

(೩) ಭಾವದರ್ಪಣಟೀಕಾ :—

"ಮುಖ್ಯಕರ್ತಾ ಸ್ವತಂತ್ರತ್ವಾತ್ಸರ್ವೇಷಾಂ ಕರ್ಮಣಾಹರಂ ।

ನ ಕಿಂಚಿನ್ಮದೃತೇ ಕಶ್ಚಿತ್ಕರ್ಮ ಯತ್ಕರ್ತುಮೀಹತೇ ॥

ಸ್ಥಿತ್ವಾ ಭಕ್ತ ಶರೀರಾದೌ ಸ್ವಯಮೇವ ಸಮರ್ಚಯೇ ।

ಅತೋ ವಿಪ್ರತಮಾಃ ಪ್ರಾಹುಶ್ಚಿತ್ರಕರ್ಮಾ ಮಹಾನುತಿರಿತಿ ॥''

– ಇತಿ ವಿಷ್ಣುರಹಸ್ಯೋಕ್ತೇಃ ॥ ॥೧೩॥

(ಳ) ಶ್ರೀ ವ್ಯಾಸದಾಸಸಿದ್ಧಾಂತ ಕೌಮುದೀ (ಸಂಸ್ಕೃತ ಮೂಲ) :–

"ಪ್ರೇರಕ'' ಇತಿ ರಮಾಪ್ರೇರ್ಯಾ ಅಜಾದಯಃ ॥ "ಓಂ ನೋ ಅಭಯಂಕೃಧಿ ಮಘವನ್ ಶಗ್ಧಿ ತವ ತನ್ನ ಊತಿಭಿಃ ॥ ವಿದ್ವಿಷೋ ವಿಮೃಧೋ ಓಂ ॥ ತ್ವಂ ಹಿ ರಾಧಸ್ಪತೇ ರಾಧನೋ ಮಹಃ ಓಂ ॥ ಹರತಿ ಶತ್ರೂನ್ ಇತಿ ಹರಿಃ ॥ ॥೧೩॥

ಕನ್ನಡಾರ್ಥ :–

ಪ್ರೇರಕ ಮತ್ತು ಪ್ರೇರ್ಯರಲ್ಲಿ ಮಾಡಬೇಕಾದ ಭಗವಚ್ಚಿಂತನಾಕ್ರಮವನ್ನು ತಿಳಿಸುತ್ತಾರೆ, ಪ್ರಸಕ್ತ ಪದ್ಯದಿಂದ.

ಯೋಗ್ಯತೆಯಲ್ಲಿ ತನಗಿಂತ ಮಿಗಿಲಾದವರು, ಗುಣೋತ್ತಮರು. ಅವರೇ ಸ್ವೋತ್ತಮರು. ಸ್ವೋತ್ತಮರು ಸ್ವಾವರರಿಗೆ ಪ್ರೇರಕರು. ಪರಮಾತ್ಮನು ರಮಾದೇವಿಗೆ ಪ್ರೇರಕನು. ರಮಾದೇವಿಯು ಬ್ರಹ್ಮ ಇತ್ಯಾದಿಗಳಿಗೆ ಪ್ರೇರಕಳು. ಇಂತು, ಪ್ರೇರ್ಯ, ಪ್ರೇರಕರಲ್ಲಿ ಆಯಾಯಾ ನಾಮರೂಪಗಳಿಂದ ಇರುವ, ವ್ಯಾಪಾರಗಳನ್ನು ಪ್ರವರ್ತಿಸುವವನು **"ಹರಿ''** ಶಬ್ದವು **ಶ್ರೀವಿಷ್ಣು–ಸಹಸ್ರನಾಮಾಂತರ್ಗತವಾದುದು.** ಶತ್ರುಗಳನ್ನೂ ಸಂಹರಿಸುವುದರಿಂದ **ಹರಿ** – ಎಂದು ಹೆಸರು. ॥೧೩॥

(ಱ) ಶ್ರೀ ಗುರುಹೃದಯ ಪ್ರಕಾಶಿಕೆ ವ್ಯಾಖ್ಯಾನ :–

ಪ್ರೇರಕಪ್ರೇರ್ಯರೂಪ ಸ್ಮರಣೋಪಾಸನೆ ತಿಳಿಸುತ್ತಾರೆ – **ಪ್ರೇರಕ** ಎಂದು. ಗಂಗಾಜನಕ ಶ್ರೀಹರಿ ಸರ್ವರೊಳಗಿದ್ದು, ಸಕಲವ್ಯಾಪಾರಗಳನ್ನು ವ್ಯಕ್ತಿಮಾಡಿ

ಮಾಡಿಸುತ್ತಾ, ಇತರರಿಗೆ ತಿಳಿಸಿಕೊಳ್ಳದೆ, ನೋಡಿ ವಿನೋದಿಸುತ್ತಾ, ಪ್ರೇರ್ಯ ಪ್ರೇರಕರೆಂಬ ಹೇಳಿಕೇಳುವ ಗುರು–ಶಿಷ್ಯರಲ್ಲಿ, ಹೇಳಿ ಕೇಳುವ ಶಕ್ತಿಪ್ರದನಾಗಿ **ಪ್ರೇರ್ಯಪ್ರೇರಕನೆಂಬ** ಆ ನಾಮ, ರೂಪ ಧರಿಸಿ, ಪರಸ್ಪರ ವಿರೋಧವಿಲ್ಲದ ನಿಮಿತ್ತದಿಂದ ಪ್ರವರ್ತಿಸುವ ಅಂದರೆ, ಶಾಸ್ತ್ರಪ್ರವಚನ ಅಧ್ಯಯನಾದಿ ವ್ಯಾಪಾರ ಮಾಡಿಸುವನು.

**ತೇಜಸ್ವಿನಾವಧೀತಮಸ್ತು ಮಾವಿದ್ವಿಷಾವಹೈ ಎಂಬ ಶ್ರುತ್ಯರ್ಥ ವಿವರಿಸಲ್ಪಟ್ಟಿತು. ॥೧೩॥**

**ಸರ್ವವ್ಯಾಖ್ಯಾನಸಾರಸಂಗ್ರಹ : –**

**ಪ್ರೇರಕ ಪ್ರೇರ್ಯರಲ್ಲಿ** ವಿದ್ಯಮಾನನಾಗಿರುವ ಪರಮಾತ್ಮನ ಬಿಂಬಕ್ರಿಯಾ ರೂಪವಾದ ವ್ಯಾಪಾರವಿಶೇಷಗಳನ್ನು ತಿಳಿಸುತ್ತಾರೆ – **ಪ್ರೇರಕ** – ಎಂಬ ಪ್ರಸಕ್ತ ೧೩ನೆಯ ಪದ್ಯದಿಂದ.

೧. ಕ್ರಿಯಾಭಿವ್ಯಕ್ತರಾಗಿ ಪ್ರೇರಣೆ ಮಾಡುವವರಿಗೆ **ಪ್ರೇರಕ** ರೆಂದು ಹೆಸರು. ಅವರಿಂದ ಪ್ರೇರಿತರಾಗಿ ಕೆಲಸಮಾಡುವ ಜೀವರಿಗೆ **ಪ್ರೇರ್ಯ** ರೆಂತ ನಾಮ. ಯೋಗ್ಯತೆಯಲ್ಲಿ ತಮಗಿಂತ ಮೇಲಾದವರು **ಪ್ರೇರಕರಾಗುತ್ತಾರೆ.** ಅವರಿಗಿಂತ ಅವರರಾಗಿರುವವರು **ಪ್ರೇರ್ಯರು.** ಬಿಂಬ ರೂಪಿಯಾದ ಶ್ರೀ ಹರಿಯು ಸರ್ವ ಜೀವರಿಗೂ **ಮುಖ್ಯಪ್ರೇರಕನು.** ಅವನ ಪ್ರೇರಣೆ ಶ್ರೀ ರಮಾದೇವಿಯರಿಗೆ. ಶ್ರೀ ಇಂದಿರೆಯ ಪ್ರೇರಣೆ ಬ್ರಹ್ಮ ವಾಯ್ವಾದಿಗಳಿಗೆ. ಜೀವೋತ್ತಮರಾದ ವಾಯುದೇವರ ಪ್ರೇರಣೆ ಇತರ ತತ್ವೇಶರಾದ ದೇವತೆಗಳಿಗೆ. ಜೀವರಲ್ಲಿದ್ದು ಪಾಪಕಾರ್ಯಗಳನ್ನು ಮಾಡಿಸುವ ತತ್ತ್ವದೈತ್ಯರಿಗೆ ತತ್ತ್ವಾಭಿಮಾನಿದೇವತೆಗಳ ಪ್ರೇರಣೆ. ಹೀಗೆ **ಪ್ರೇರಕ–ಪ್ರೇರ್ಯರ ಕಾರ್ಯಸರಣಿ.** ಪ್ರೇರಣೆ ಮಾಡುವ ಜೀವರಲ್ಲಿ, ಜೀವಾಂತರ್ಗತನಾಗಿದ್ದು, ಜೀವಾಕಾರನಾಗಿ, ಅದೇ ಜೀವನಾಮಕನಾಗಿ, ವಿದ್ಯಮಾನನಾಗಿರುವ

ಬಿಂಬರೂಪೀ ಶ್ರೀಹರಿಯು ಅದೇ ಹೆಸರಿನಿಂದ **ಪ್ರೇರಕ** ನೆಂದು ಕರೆಯಿಸುವನು. ಪ್ರೇರಿತರಾದ **ಪ್ರೇರ್ಯ**ರಲ್ಲಿ ಬಿಂಬರೂಪೀ ಪರಮಾತ್ಮನು ತನ್ನಾಮದಿಂದ **ಪ್ರೇರ್ಯನೆಂದೆನಿಸುವನು.** ಹೀಗೆ ಪ್ರೇರಕ – ಪ್ರೇರ್ಯರಲ್ಲಿ ತದ್ರೂಪದಿಂದ, ತದಾಕಾರನಾಗಿದ್ದು, ತನ್ನಾಕನಾಗಿ **ಪ್ರೇರಕ–ಪ್ರೇರ್ಯ**ನೆಂತಲೇ ಕರೆಯಿಸುವನು. ಪ್ರೇರಕರಲ್ಲಿ ನಿಂತು ಪ್ರೇರಿಸುವನು. ಪ್ರೇರ್ಯಕರಲ್ಲಿ ಸ್ಥಿತನಾಗಿ ಕ್ರಿಯಾಭಿವ್ಯಕ್ತಿ ಮಾಡುವನು.

೨. ಬಿಂಬರೂಪೀ ಹರಿಯು ಪ್ರೇರಕ, ಪ್ರೇರ್ಯಕನಾಗಿದ್ದರೂ, ತಾನು ಮಾತ್ರ ಆ ಸಮಸ್ತಜೀವರಾಶಿಗಳಿಂದ ಅತ್ಯಂತಭಿನ್ನನಾಗಿರುವನು. ಜಗದ್ವಿಲಕ್ಷಣನಾದ ಶ್ರೀಹರಿಯು ಪ್ರೇರಕ ಮತ್ತು ಪ್ರೇರ್ಯ ಕಾರ್ಯಗಳಿಂದ ಉಂಟಾಗುವ ಫಲರೂಪವಾದ ಆ ಕರ್ಮಗಳಿಂದ ನಿರ್ಲಿಪ್ತನು. ಜೀವರ ಅನಾದಿಸ್ವರೂಪಯೋಗ್ಯತೆಗನುಸಾರ, ಅನಾದಿ ಕರ್ಮಕ್ಕನುಗುಣವಾಗಿ, ಶುಭ, ಮಿಶ್ರ ಮತ್ತು ಅಶುಭ ಕರ್ಮಗಳನ್ನು ಮಾಡಿ ಮಾಡಿಸುತ್ತಿರುವನು. ಇದರಿಂದ ಜೀವರಿಂದ ಅತ್ಯಂತ ಭಿನ್ನನಾದ ಬಿಂಬನಿಗೆ ವೈಷಮ್ಯ ಮತ್ತು ನೈರ್ಘೃಣ್ಯ ಇತ್ಯಾದಿ ದೋಷಗಳು ಲವಲೇಶವಾದರೂ ಇಲ್ಲ. ಇದರಿಂದ **ನಿರ್ವೈರ್ಯನು.**

೩. ನಿರ್ವೈರ್ಯನಾದ ಬಿಂಬರೂಪೀ ಶ್ರೀಹರಿಯು ಪ್ರೇರಕ ಪ್ರೇರ್ಯರೂಪಗಳಿಂದ ಸಮಸ್ತ ತ್ರಿವಿಧ ಜೀವರಾಶಿಗಳಲ್ಲಿ, ಜೀವಾಂತರ್ಗತನಾಗಿ, ಜೀವಾಕಾರನಾಗಿ, ತದ್ರೂಪ, ತತ್ತನ್ನಾಮಗಳಿಂದ ಪ್ರವರ್ತಿಸಿದರೂ, ತಾನು ಮಾತ್ರ ಯಾರಿಗೂ ಗೋಚರನಾಗದೆ, ಗುಪ್ತನಾಗಿರುವನು. ಸರ್ವಜೀವರ ಪಾಪಾಕ್ಷಾಳನೆಗೈಯ್ಯುವ ಗಂಗಾನದಿಯ ಜನಕನಾದ ಆ **ಭಾಗೀರಥಿಪಿತನು** ಸಮಸ್ತದೋಷವಿದೂರನು. ಪಾವನಕೆ ಪಾವನವೆನಿಸುವ ಆ ಪವಿತ್ರ ಮಂಗಳಸ್ವರೂಪಿಯು, ಜೀವರ ಅಧಿಷ್ಠಾನಗತನಾಗಿ, ಸಕಲವ್ಯಾಪಾರಗಳನ್ನು ಬಿಂಬಕ್ರಿಯಾದ್ವಾರಾ ತಾನೇ ಮಾಡಿ, ತದ್ಗತ ಸ್ವಾಖ್ಯ ರೂಪಗಳಲ್ಲಿ ರಮಿಸುತ್ತಾ, ತನ್ನಿಂದ ಭಿನ್ನರಾದ ಪ್ರತಿಬಿಂಬಭೂತರಾದ ದೇವತೆಗಳು,

ದೈತ್ಯರದ್ವಾರಾ, – ಮುಖ್ಯಪ್ರಾಣಗೋಳಕಾಂತರ್ಗತನಾಗಿ **ಪ್ರೇರಕ – ಪ್ರೇರ್ಯ** ರೂಪಗಳಿಂದ, ನಿರಂತರವೂ ಮಾಡಿ ಮಾಡಿಸುತ್ತಿರುವನು. ಆದರೆ ಜೀವರು ತಮ್ಮ ಅಜ್ಞಾನ ದೆಸೆಯಿಂದ, ಅಹಂಕರ್ತೃತ್ವಾಭಿಮಾನದಿಂದ, ಅಹಂಮಮಕಾರಗ್ರಸ್ತರಾಗಿ, ಸಕಲಕ್ರಿಯೆಗಳೂ ತಮ್ಮಿಂದಲೇ ಆಗುತ್ತಿರುವುವು – ಎಂದು ತಿಳಿಯುತ್ತಿರುವರು. ಜೀವರ ಈ **ಕೃತಿಚೌರ್ಯವನ್ನು** ನೋಡಿ, ಸರ್ವಕರ್ಮಸಾಕ್ಷಿಯಾಗಿರುವ ಶ್ರೀಹರಿಯು **ನಗುತಿಪ್ಪನು** ಎಂದು ರಹಸ್ಯಾರ್ಥವನ್ನು ತಿಳಿಸುತ್ತಾರೆ. ॥೧೩॥

❀ ❀ ❀

## ಪದ್ಯ ೧೪

**ಮೂಲ :—**

**ಹರಿಯೆ ಮುಖ್ಯ ನಿಯಮಾಕನು ಎಂ**
**ದರಿದು ಪುಣ್ಯಾಪುಣ್ಯ ಹರುಷಾ**
**ಮರುಷ ಲಾಭಾಲಾಭ ಸುಖದುಃಖಾದಿದ್ವಂದ್ವಗಳ**
**ನಿರುತ ಅವನಂಘ್ರಿಗೆ ಸಮರ್ಪಿಸಿ**
**ನರಕ ಭೂ ಸ್ವರ್ಗಾಪವರ್ಗದಿ**
**ಕರಣ ನಿಯಾಮಕನ ಸರ್ವತ್ರದಲಿ ನೆನೆವುತಿರು ||೧೪||**

ಅವತರಣಿಕೆ :—

ಸರ್ವಜೀವರ ಬಿಂಬರೂಪಿಯಾದ ಶ್ರೀಹರಿಯೇ ಸರ್ವಕ್ರಿಯಾವಿಶೇಷಗಳಿಗೂ ಮುಖ್ಯಕಾರಣ ಮತ್ತು ನಿಯಾಮಕನೆಂದು ಶಾಸ್ತ್ರಜನ್ಯಜ್ಞಾನದಿಂದ ಅರಿತು, ಶುಭ, ಮಿಶ್ರ, ಅಶುಭಕರ್ಮಗಳನ್ನು, ಲಾಭ–ನಷ್ಟ,, ಸುಖ–ದುಃಖ, ಜಯ–ಸೋಲು ಇತ್ಯಾದಿ ದ್ವಂದ್ವಕರ್ಮಗಳನ್ನು ಅನವರತವೂ ಪರಮಾತ್ಮನ ಪಾದಕಂಜಗಳಲ್ಲಿ ಅರ್ಪಿಸುತ್ತಾ, ನರಕ, ಸ್ವರ್ಗ, ಭೂಮಿ ಮುಕ್ತಿಧಾಮ ಇತ್ಯಾದಿ ಸರ್ವಸ್ಥಳ, ಕಾಲ, ದೇಶಾದಿಗಳಲ್ಲಿ, ಸರ್ವಜೀವರ ಇಂದ್ರಿಯನಿಯಾಮಕನೆಂದು ಸ್ಮರಿಸುತ್ತಿರಬೇಕು– ಎಂದು ತಿಳಿಸುತ್ತಾರೆ – **ಹರಿಯೆ ಮುಖ್ಯ ನಿಯಾಮಕನು** – ಎಂದು ಪ್ರಸಕ್ತ ಸಂಧಿಗತ ೧೪ನೆಯ ಈ ಪದ್ಯದಿಂದ ||೧೪||

ಪ್ರತಿಪದಾರ್ಥ :—

**ಹರಿಯೆ** = ಸರ್ವಜೀವರ ಅಂತರ್ಯಾಮಿ ಬಿಂಬರೂಪಿಯಾದ ಶ್ರೀ ಹರಿಯೇ, **ಮುಖ್ಯ ನಿಯಾಮಕನು** = ಪರಮಮುಖ್ಯವೃತ್ತಿಯಿಂದ, ಸಕಲ ವ್ಯಾಪಾರಗಳಿಗೂ

ನಿಯಾಮಕನಾಗಿದ್ದಾನೆ. **ಎಂದರಿತು** = ಶಾಸ್ತ್ರಜನ್ಯ ಜ್ಞಾನಪೂರ್ವಕ, ಗುರುಪದೇಶ ದ್ವಾರಾ ತಿಳಿದು, **ಪುಣ್ಯ** = ಇಂದ್ರಿಯಾಭಿಮಾನಿತತ್ತ್ವದೇವತೆಗಳ ದ್ವಾರಾ ನಡೆಯುತ್ತಿರುವ ಸತ್ಕರ್ಮರೂಪವಾದ ಪುಣ್ಯಕಾರ್ಯಗಳು, **ಅಪುಣ್ಯ** = ತತ್ತ್ವದೈತ್ಯರ ದ್ವಾರಾ ನಡೆಯುವ ದುಷ್ಕರ್ಮರೂಪನಾದ ಪಾಪಕ್ರಿಯೆಗಳು, **ಹರುಷ** = ಪುಣ್ಯಕರ್ಮಗಳ ಫಲರೂಪವಾದ ಸಂತೋಷವೇನು, **ಅಮರುಷ** = ಪಾಪಕರ್ಮಜನಿತ ದುಃಖಫಲಗಳೇನು, **ಲಾಭ** = ಜೀವನದಲ್ಲಿ ಒದಗುತ್ತಿರುವ ಆದಾಯರೂಪವಾದ ಫಲಗಳೇನು, **ಅಲಾಭ** = ನಷ್ಟಗಳೇನು, **ಸುಖ** = ಇಂದ್ರಿಯ, ಮನಸ್ಸು, ದ್ವಾರಾ ಜೀವನಿಗೆ ಉಂಟಾಗುವ ಆನಂದಾನುಭವವೇನು, **ದುಃಖ** = ನಿರಾಸೆ, ವಿಯೋಗ, ಆದಿವ್ಯಾಧಿಗಳಿಂದ ಉಂಟಾಗುತ್ತಿರುವ ದುಃಖಗಳೇನು, **ಆದಿ ದ್ವಂದ್ವಗಳ** = ಇತ್ಯಾದಿ ದ್ವಂದ್ವಕರ್ಮಗಳನ್ನು, **ನಿರುತ** =ಯಾವಾಗಲೂ, **ಅಪಸಂಪ್ರಿಗೆ** =ಶ್ರೀ ಹರಿಯ ಪಾದಾರವಿಂದಗಳಿಗೆ, **ಅರ್ಪಿಸು** = ಸರ್ವಕಾರ್ಯಕ್ಕೂ ಅವನೇ ಪ್ರೇರಕನೆಂಬ ಉತ್ತಮಜ್ಞಾನಾನುಸಂಧಾನವೇ **ಅರ್ಪಣೆ** ಎನಿಸುವುದು. ಹೀಗೆ ಸಮರ್ಪಣೆ ಮಾಡು. **ನರಕ** = ದುಃಖಾದಿಗಳನ್ನು ಅನುಭೋಗಿಸುವ ನರಕಲೋಕಗಳಲ್ಲಿ, **ಭೂ** = ಮಧ್ಯಲೋಕವಾದ ಸುಖದುಃಖರೂಪವಾದ ಮಿಶ್ರಕರ್ಮಫಲಗಳನ್ನು ಅನುಭವಿಸುವ ಭೂಲೋಕದಲ್ಲಿ, **ಸ್ವರ್ಗ** = ಸುಖಾನುಭವ ಮಾಡತಕ್ಕ ಊರ್ಧ್ವಲೋಕಗಳಲ್ಲಿ, **ಅಪವರ್ಗದಿ** = ವೈಕುಂಠಾದಿಮುಕ್ತಧಾಮಗಳಲ್ಲಿ, **ಕರಣ ನಿಯಾಮಕನ** = ಸರ್ವೇಂದ್ರಿಯಗಳ ವ್ಯಾಪಾರಗಳನ್ನು ಇಂದ್ರಿಯಾಭಿಮಾನಿದೇವತೆಗಳ ದ್ವಾರಾ ನಿಯಮನ ಮಾಡುತ್ತಿರುವ ಹರಿಯನ್ನು, **ಸರ್ವತ್ರದಲಿ** = ಪೂರ್ವೋಕ್ತ ಸಮಸ್ತ ದೇಶಗಳಲ್ಲಿ, **ನೆನೆವುತಿರು** = ಸ್ಮರಣೆ ಮಾಡುತ್ತಿರು. ||೧೪||

## ವ್ಯಾಖ್ಯಾನಗಳು

### (೧) ಶ್ರೀಸಂಕರ್ಷಣಒಡೆಯರ ವ್ಯಾಖ್ಯಾನ : –

ದ್ವಂದ್ವಕರ್ಮ ಅರ್ಪಿಸು. ಸರ್ವಪ್ರಾಣಿಗಳಲ್ಲಿ ಇಂದ್ರಿಯನಿಯಾಮಕ ಪರಮಾತ್ಮ ನೆಂದು ತಿಳಿ –ಎಂತ ಹೇಳತಾರೆ.

ಜೀವಾತಂರ್ಗತಬಿಂಬರೂಪಿಯಾದ ಹರಿಯೇ ಮುಖ್ಯನಿಯಾಮಕನು (ಮುಖ್ಯ ಶಬ್ದದಿಂದ ಬ್ರಹ್ಮ–ವಾಯ್ವಾದಿ ತತ್ತ್ವೇಶರ ವ್ಯಾವರ್ತನ) ಎಂತ ಅರಿತವನಾಗಿ, ಸ್ಥೂಲದೇಹೇಂದ್ರಿಯಾದಿಗಳಿಂದ ಮಾಡತಕ್ಕ ಪುಣ್ಯಕರ್ಮವೇನು, ಪಾಪಕರ್ಮಗಳೇನು, ಪುಣ್ಯಕರ್ಮದಿಂದ ಪ್ರಾಪ್ತವಾಗತಕ್ಕ ಈಶ್ವರನಿಂದ ದತ್ತವಾದ ಸಂತೋಷ ಫಲವೇನು, ಹಾಂಗೆ ಪಾಪಕರ್ಮದಿಂದ ಈಶ್ವರನಿಂದ ದತ್ತವಾದ ದುಃಖಫಲವೇನು, ಆದಾಯವೇನು, ನಷ್ಟವೇನು, ದೇಹಕ್ಕೆ ಆಗತಕ್ಕ ಸುಖವೇನು, ದುಃಖವೇನು – ಇವೇ ಮೊದಲಾದ ಏತಾದೃಶವಾದ ಉಭಯಗಳ ನಿರಂತರದಲ್ಲೂ ಬಿಂಬರೂಪಿ ಪರಮಾತ್ಮನ ಮರಿಯದೆ, ಬಿಂಬಕ್ರಿಯಾ ಅನುಸಂಧಾನದಿಂದ ಈ ಬಿಂಬರೂಪಿ ಪರಮಾತ್ಮನ ಪಾದಗಳಿಗೆ, ಪರಸ್ಪರ ಭಗದ್ರೂಪಗಳ ಐಕ್ಯಚಿಂತನರೂಪದಿಂದ ಅರ್ಪಿಸು. ನರಕಲೋಕಗಳಲ್ಲಿ (ಉಪಲಕ್ಷಣಯಾ ಅತಳಾದಿ ಅಧೋಲೋಕಗಳು ಏಳು ಗ್ರಾಹ್ಯ), ಮಧ್ಯಲೋಕವಾದ ಭೂಲೋಕ, ಸ್ವರ್ಗಲೋಕ (ಉಪಲಕ್ಷಣಯಾ ಊರ್ಧ್ವ ಸತ್ಯಾಂತ ಏಳು ಲೋಕಗಳು ಗ್ರಾಹ್ಯ), ವೈಕುಂಠಾದಿಲೋಕ, ಇತ್ಯಾದಿ ಪ್ರತಿಲೋಕಗಳಲ್ಲಿ ಈ ಯಾವುತ್ತೂ ಸ್ಥಳಗಳಲ್ಲಿ ವಿದ್ಯಮಾನರಾದ ಪ್ರಾಣಿಗಳ ಕರಣನಿಯಾಮಕನಾದ ಪರಮಾತ್ಮನ ಸ್ಮರಣೆ ಮಾಡುತ್ತಿರು. ಇದರಿಂದ ಸರ್ವರ ಇಂದ್ರಿಯಗಳು ಬಿಂಬಕ್ರಿಯಾದ್ವಾರಾನೇ ಚಲನಶಕ್ತಿಯೇ ಹೊರತು, ಅನ್ಯಥಾ ಚಲನಶಕ್ತಿ ಇಲ್ಲವೆಂದು ಸರ್ವದಾ ಅನುಸಂಧಾನ ಮಾಡಬೇಕು.

**ವಿಶೇಷಾರ್ಥ** – ಅರ್ಪಿಸೋ ಕ್ರಮ ಹ್ಯಾಗೆಂದರೆ ಹೇಳತಾರೆ. ಸರ್ವದಾ

ಬಾಯಿಂದ ಕೃಷ್ಣಾರ್ಪಣ ಎನ್ನಬಹುದು. ಅರ್ಪಣೆ ಎಂಬುದು ಅಂಥಾದ್ದಲ್ಲ. ಒಂದು ಪದಾರ್ಥ ನಮ್ಮದಾಗಿ ಇರೋವರಿಗೂ ಅದಕ್ಕೆ ಛೇದ–ಭೇದಾದಿಗಳು ಕಂಡರೆ ಅದರ ದುಃಖ ಇವರಿಗೆ ಸೇರೋದಿಲ್ಲ. ಸುಖ–ದುಃಖಾದಿಗಳ, ಪಾಪ–ಪುಣ್ಯಫಲ ಅರ್ಪಿಸಿದ ಅನಂತರ ಅದರ ಸುಖ–ದುಃಖಾದಿ ಫಲಗಳು ಮನಸ್ಸಿಗೆ ಹಚ್ಚಿಕೊಂಡು ಕ್ಲೇಶ–ಸಂತೋಷಾದಿಗಳಿಂದ ಯುಕ್ತನಾಗಬಾರದು. ಇಂಥಾ ಭಾವ ಇರಬೇಕು. ಅಂದರೆ ಇಂಥಾವನೇ ದ್ವಂದ್ವಕರ್ಮಗಳ ಅರ್ಪಿಸೋದಕ್ಕೆ ಅಧಿಕಾರಿ. ಅವಗೆ ದೋಷಾದೋಷಗಳು ಲೇಪವಾಗೋದಿಲ್ಲ. ತದನ್ಯರಿಗೆ **'ಅರ್ಪಿತ'** ಎಂತ ಬಾಯಿಂದ ಅಂದಮಾತ್ರಕ್ಕೆ ದೋಷಗಳು ಬಿಡಲಾರವು). ಈ ಪ್ರಕಾರ ಅರ್ಪಿಸಬೇಕು. ||೧೪||

(೨) ಭಾವಪ್ರಕಾಶಿಕೆ : –

ಶ್ರೀಹರಿಯೇ ಸಕಲಕರ್ಮಗಳನ್ನು ಮಾಡಿಸುವವನೆಂದು ತಿಳಿದು, ಪುಣ್ಯಪಾಪ ಗಳನ್ನು ಶ್ರೀಪರಮಾತ್ಮನಿಗೆ ಸಮರ್ಪಣೆ ಮಾಡಬೇಕು. ಸಂತೋಷ, ವ್ಯಸನ, ಲಾಭ, ನಷ್ಟ, ಸುಖ ದುಃಖ ಮೊದಲಾದ ದ್ವಂದ್ವಗಳು ಏನು ಬಂದರೂ, ಅವೆಲ್ಲವೂ ಭಗವದಿಚ್ಛೆಯೆಂದು ಭಾವಿಸಿ, ಪರಮಾತ್ಮನಿಗೆ ಸಮರ್ಪಿಸಿ, ನರಕ, ಭೂಮಿ, ಸ್ವರ್ಗ, ಮುಕ್ತಿ ಮೊದಲಾದ ಯಾವಸ್ಥಳಕ್ಕೆ ನಾವು ಹೋದರೂ, ನಮ್ಮ ಇಂದ್ರಿಯ ನಿಯಾಮಕನಾದ ಶ್ರೀಹರಿಯೇ ಅಲ್ಲಿದ್ದು, ಆಯಾಯಾ ಸುಖದುಃಖಾದಿಗಳನ್ನು ಕೊಡಿಸುವನೆಂದು ಎಲ್ಲಾ ಕಡೆಯಲ್ಲಿ ಪರಮಾತ್ಮನನ್ನು ಚಿಂತಿಸಬೇಕು ||೧೪||

(೩) ಭಾವದರ್ಪಣಟೀಕಾ :–

ಹರಿಯೇ ಇತಿ **"ಪುಣ್ಯಪಾಪಾದಿಕಂ ಕರ್ಮ ಅರ್ಪಣಂ ಕುರುಸರ್ವದಾ"** – ಇತಿ **ಬೃಹನ್ನಾರದೀಯಮಾನಾತ್** ||೧೪||

**(ஐ) ಶ್ರೀವ್ಯಾಸದಾಸಸಿದ್ಧಾಂತ ಕೌಮುದೀ (ಸಂಸ್ಕೃತಮೂಲ) :–**

"ಹರಿಯೆ " ಇತಿ "ನಿಯಾಮಕ" ಇತಿ **ಸಮರ್ಪಣಪ್ರಕಾಶಃ**॥ ಅರಿದು– ತಿಳಿದು, ನರಕಾದಿಷು ಅಪಿ ಹರಿಃ ಅಸ್ತಿ ತಸ್ಮಾತ್ ರಾಜಭೃತ್ಯವತ್ ಪದ್ದತ್ತ ಭೋಜೀ ಭಾವ್ಯಃ "ತತ್ರಾಪಿ" – ನಯಾರ್ಥಃ "ಕೃಚ್ಛ್ರಂ ಯದೃಚ್ಛಯಾತನಪ ಪ್ರೋಕ್ತಿ ತದ್ಧಿತನ್ಯ ಪರಂತಪಃ॥ ಇತಿ **ಭಾಗವತೇ** "ಲಾಭಾಲಾಭೌ ಹರ್ಯಾಧೀನೌ ಸುಖದುಃಖೇ ಭಗಪತೇಃ ಅಧೀನೇ" ಇತಿ ಚ **ಗುರುಚರಣಾಃ** ॥೧೪॥

**ಕನ್ನಡಾರ್ಥ : –**

"ಸಕಲ ಕರ್ಮಗಳಿಗೂ ಶ್ರೀ ಹರಿಯೇ ಮುಖ್ಯ ನಿಯಾಮಕನು" – ಎಂಬ ಉಪಾಸನಾವಿಧಾನವನ್ನು ತಿಳಿಸುತ್ತಾರೆ ಪ್ರಸಕ್ತ ಪದ್ಯದಿಂದ.

ಪುಣ್ಯಾಪುಣ್ಯ, ಲಾಭಾಲಾಭ ಇತ್ಯಾದಿ ಸಕಲದ್ವಂದ್ವಕರ್ಮಗಳನ್ನು ಹರಿಗೆ ಸಮರ್ಪಿಸಬೇಕು. ಸಮಸ್ತ ದ್ವಂದ್ವ ಫಲಸ್ವೀಕಾರ ಕಾರ್ಯವೇ ಸಮರ್ಪಣೆಯು. ಸಕಲಕ್ಕೂ ಶ್ರೀ ಹರಿಯೇ ಮುಖ್ಯ ನಿಯಾಮಕನು–ಸಕಲಕರ್ಮಗಳಲ್ಲಿ ಭಗವಧೀನತಾ ರೂಪವಾದ ಧ್ಯಾನವೇ ಸರ್ವಕರ್ಮಸಮರ್ಪಣವೆಂದೂ ಇಲ್ಲಿ ಅಭಿಪ್ರೇತವು. ನರಕಾದಿ ಸ್ಥಳಗಳಲ್ಲಿಯೂ ಸಹ ಶ್ರೀ ಹರಿಯು ನಿಮಾಯಮಕನು, ಹಾಗೂ ದುಃಖಾನುಭವರಹಿತನಾಗಿರುತ್ತಾನೆ. ರಾಜಾಧೀನನಾದ ರಾಜಭೃತ್ಯನಂತೆ ಸರ್ವ ನಿಯಾಮಕನಾದ ಶ್ರೀ ಹರಿಯು ಕೊಟ್ಟುದುದನ್ನು ಸಮಾಧಾನದಿಂದ ಭುಂಜಿಸಬೇಕು. ***"ಓಂ ತತ್ರಾಪಿ ಚ ತದ್ವ್ಯಾಪಾರಾದವಿರೋಧಃ ಓಂ ಎಂಬ ಬ್ರಹ್ಮಸೂತ್ರಾಧಿಕರಣಾರ್ಥವು*** ಇಲ್ಲಿ ಸಂಗ್ರಹೀತವಾಗಿದೆ. ॥೧೪॥

**(ಐ) ಶ್ರೀ ಗುರುಹೃದಯಪ್ರಕಾಶಿಕೆ ವ್ಯಾಖ್ಯಾನ : –**

ಹಗಲು ನಂದಾದೀಪದಂದದಿ ಎಂಬ ಎರಡನೇ ಪದ್ಯದಲ್ಲಿ, ಹೇಳಿದ

ನಿಷ್ಕಾಮೋಪಾಸನೆಯನ್ನೇ ಮೂರು ಪದ್ಯಗಳಿಂದ ವಿವರಿಸುತ್ತಾರೆ. ಶ್ರೀಹರಿಯೇ ಸರ್ವಕ್ಕೂ ಮುಖ್ಯ ನಿಯಾಮಕ, ಎಂದರೆ–ಗೊತ್ತುಗಾರನೆಂದು ತಿಳಿದು ಪುಣ್ಯವೆಂಬ ವಿಧಿ ವಿಹಿತಕ್ರಿಯೆ, ಅಪುಣ್ಯವೆಂಬ ಶಾಸ್ತ್ರವಿರುದ್ಧ ಪಾಪಕರ್ಮ, ಹರ್ಷಾಮರ್ಷವೆಂಬ ಸಂತೋಷ, ಕೋಪ, ಲಾಭಾಲಾಭವೆಂಬ ಪಡೆಯುವಿಕೆ ಮತ್ತು ನಷ್ಟಗಳು ಸುಖ–ದುಃಖಗಳೆಂಬ ಇಷ್ಟಾನಿಷ್ಟಗಳು, ಈ ಬಗೆದ್ವಂದ್ವಗಳನ್ನೆಲ್ಲಾ ನಿರುತ ಅವನಂಘ್ರಿಗೆ ಸಮರ್ಪಿಸು–ಅಂದರೆ, ಸದಾ ಜೀವ ಅಸ್ವತಂತ್ರನಾದ್ದರಿಂದ ಎಲ್ಲಾ ದೇವರ ಅಧೀನ, ದೇವರು ಕೊಟ್ಟದ್ದೆಂದು ಸುಖ–ದುಃಖಾದಿಗಳಲ್ಲಿ ಮಗ್ನನಾಗದೆ ಅದನ್ನು ಕೊಟ್ಟ ದೇವರ ಪಾದಗಳನ್ನೇ ಸ್ಮರಿಸುತ್ತಾ, ನರಕ ಭೂಮಿ ಸ್ವರ್ಗ ಅಪವರ್ಗವೆಂಬ ಮೋಕ್ಷ, ಈ ಸರ್ವತ್ರದಲ್ಲೂ ಕರಣವೆಂಬ ಮನ ಆದಿ ಸರ್ವೇಂದ್ರಿಯಗಳಿಗೆ ನಿಯಾಮಕ ದೇವರನ್ನೇ ಚಿಂತಿಸುತ್ತಿರುವುದು.

"ಸ್ವರ್ಗಾಪವರ್ಗ ನರಕೇಷ್ವಪಿತುಲ್ಯಾರ್ಥದರ್ಶಿನಃ" –ಎಂಬ **ಭಾಗವತಾರ್ಥ ವಿವರ** ಸಲ್ಪಟ್ಟಿತು ||೧೪||

## ಸರ್ವವ್ಯಾಖ್ಯಾನಸಾರ ಸಂಗ್ರಹ

ಸಮಸ್ತ ಜೀವರಾಶಿಗಳ ದೇಹಗತ ಅವಯವಗಳ ದ್ವಾರಾ, ಇಂದ್ರಿಯದ್ವಾರಾ ನಡೆಯುತ್ತಿರುವ ಸಕಲಕರ್ಮಗಳಿಗೂ ಬಿಂಬನಾದ ಶ್ರೀಹರಿಯೇ ಮುಖ್ಯ ಪ್ರೇರಕನು, ಪರಮಮುಖ್ಯ ವೃತ್ತಿಯಿಂದ ನಿಯಾಮಕನೆಂದು, ಆ ಪುರುಷೋತ್ತಮನ ಪಾದಪದ್ಮಂಗಳಿಗೆ ದ್ವಂದ್ವಕರ್ಮಗಳನ್ನು ಅರ್ಪಿಸಬೇಕೆಂದು ತಿಳಿಸುತ್ತಾರೆ– **ಹರಿಯೆ** – ಎಂಬ ಪ್ರಸಕ್ತ ೧೪ನೆಯ ಪದ್ಯದಿಂದ.

ಸಕಲ ಜೀವರಿಗೆ ಮುಖ್ಯಬಿಂಬನಾಗಿರುವ ಶ್ರೀ ಪರಮಾತ್ಮನಿಗೆ **ಹರಿ** ಎಂದು ಹೆಸರು. ಅಸೃಜ್ಯಾವಸ್ಥೆಯಲ್ಲಿ, ಸೃಷ್ಟಿಯಲ್ಲಿ, ಮುಕ್ತಾವಸ್ಥೆಯಲ್ಲಿ, ಸಕಲ ಕಾಲ ದೇಶಾದಿಗಳಲ್ಲಿ ಜೀವರಿಗೆ ಬಿಂಬರೂಪನಾದ ಭಗವಂತನೇ **ಹರಿ ನಾಮಕನು.**

೨. ಜೀವರ ದೈಹಿಕ, ವಾಚನಿಕ, ಮಾನಸಿಕ, ಕಾಲಿಕ, ದೇಶಿಕ ಇತ್ಯಾದಿ ಸರ್ವಾವಸ್ಥೆಗಳು, ಸರ್ವಕಾಲಗಳಲ್ಲಿ ನಡೆಯುತ್ತಿರುವ ಸಮಸ್ತಕರ್ಮಗಳಿಗೂ ಬಿಂಬರೂಪೀ ಶ್ರೀಹರಿಯೇ ಪರಮಮುಖ್ಯವೃತ್ತಿಯಿಂದ ನಿಯಾಮಕನು. ಸರ್ವಚೇಷ್ಟಾಪ್ರವರ್ತಕನಾದ ಬಿಂಬರೂಪೀ ಶ್ರೀಹರಿಯು ಜೀತಂರ್ಗತನಾಗಿ, ಜೀವಾಕಾರನಾಗಿ, ಜೀವಶಬ್ದವ್ಯಾಚ್ಯನಾಗಿ, ತಾನೇ ಜೀವರ ಸ್ವರೂಪ, ಲಿಂಗದೇಹಗತ ತ್ರಿಗುಣಗಳು, ಅವುಗಳಿಂದ ಪ್ರವರ್ತಿತವಾಗುವ ಸತ್ತ್ವ, ರಜ, ತಮೋಕರ್ಮಗಳಲ್ಲಿ, ಕರ್ಮಾಂತರ್ಗತವಾಗಿ, ಕರ್ಮಪತಿಯಾಗಿ, ಕರ್ಮಪ್ರೇರಕನಾಗಿ, ಬಿಂಬಕ್ರಿಯಾದ್ವಾರ ಸ್ವತಂತ್ರನಾದ ಶ್ರೀಹರಿಯು ಸಕಲಕರ್ಮಗಳನ್ನು ಮಾಡಿ ಮಾಡಿಸುತ್ತಿರುವನು. ಸತ್ತ್ವಗುಣಪ್ರಾಚುರ್ಯದಿಂದ ಪುಣ್ಯ ಕರ್ಮಗಳ ಅಭಿವ್ಯಕ್ತಿ. ಅದರಿಂದ ಪುಣ್ಯಫಲಪ್ರಾಪ್ತಿ. ತಮೋಗುಣಪ್ರಾಚುರ್ಯದಿಂದ ಪಾಪಕರ್ಮಗಳ ಅನುಷ್ಠಾನ. ತಜ್ಜನಿತ ದುಃಖರೂಪವಾದ ಪಾಪಫಲಪ್ರಾಪ್ತಿ. ಇಷ್ಟಕ್ಕೆಲ್ಲಾ ಬಿಂಬರೂಪಿಯಾದ ಶ್ರೀ ಹರಿಯೇ ಮುಖ್ಯನಿಯಾಮಕನು.

೩. ಈ ರೀತಿ, ಗುರೂಪದೇಶದ್ವಾರಾ, ಶಾಸ್ತ್ರಜನ್ಯವಾದ ಜ್ಞಾನದಿಂದ, ಸ್ವಾನುಭವದಿಂದ ತಿಳಿದು, ಸಕಲದ್ವಂದ್ವಕರ್ಮಗಳನ್ನೂ ಆ ಇಂದಿರೇಶನ ಪಾದಾರವಿಂದಗಳಿಗೆ ಮುಕುಂದಾರ್ಪಣಬುದ್ಧಿಯಿಂದ ಅರ್ಪಿಸುತ್ತಿರಬೇಕು— ಎಂಬ ಧರ್ಮ ಕರ್ಮ ರಹಸ್ಯಾರ್ಥವನ್ನು ತಿಳಿಸುತ್ತಾರೆ.

ವಿಧಿನಿಷೇಧರೂಪವಾದ ನಿತ್ಯ ನೈಮಿತ್ತಕ ಕರ್ಮಾನುಷ್ಠಾನ, ದೇವರಪೂಜಾ, ಅತಿಥಿ ಸತ್ಕಾರ, ಗುರುಹಿರಿಯರ ಶುಶ್ರೂಷಾ, ತೀರ್ಥಕ್ಷೇತ್ರಯಾತ್ರೆ, ಶ್ರೀಹರಿಗೆ ನಿವೇದಿತವಾದ ಆಹಾರ'ಭೋಜನ, ಕಾಲದೇಶಾದಿಗಳಿಗನುಗುಣವಾದ ಸತ್ಕರ್ಮಾಚರಣೆ ಇತ್ಯಾದಿ ಕಾರ್ಯಗಳು ಪುಣ್ಯಕರ್ಮಗಳೆನಿಸುವುವು. ಇಂತಹ ಪುಣ್ಯ ಕರ್ಮಗಳನ್ನು ಬಿಂಬನು ತತ್ತ್ವದೇವತೆಗಳ ದ್ವಾರಾ ಮಾಡಿ ಮಾಡಿಸುತ್ತಿರುವನು. ಇದಕ್ಕೆ ಲಿಂಗದೇಹಗತ ಸತ್ತ್ವಗುಣಪ್ರಾಚುರ್ಯವೇ ಉಪಾದಾನಕಾರಣವು. ಹಿಂಸೆ, ಅನಾಚಾರ, ಭಗವದ್ವೇಷ,

ಭಗವದ್ಭಕ್ತರಲ್ಲಿ ದ್ವೇಷ, ಕಾಮಾದಿ ಅರಿಷಡ್ವರ್ಗಗಳ ಪ್ರಾಬಲ್ಯ, ಕ್ರೌರ್ಯ, ನಾಸ್ತಿಕತೆ ಇತ್ಯಾದಿ ಕರ್ಮವಿಶೇಷಗಳು ಪಾಪಕರ್ಮಗಳೆನಿಸುವುವು. (ಅಪುಣ್ಯ). ಲಿಂಗದೇಹಗತ ತಮೋಗುಣಪ್ರಾಚುರ್ಯದಿಂದ ಕರ್ಮಪ್ರೇರಕನಾದ ಬಿಂಬನು ತತ್ತ್ವದೈತ್ಯರ ದ್ವಾರಾ, ಇಂತಹ ಪಾಪಕರ್ಮಗಳನ್ನು ಮಾಡಿ ಮಾಡಿಸುತ್ತಿರುವನು. ಪಾಪಕರ್ಮಗಳ ಫಲ ದುಃಖಾನುಭವ. ನರಕಾದ್ಯನರ್ಥಗಳ ಪ್ರಾಪ್ತಿ. ತಮೋಯೋಗ್ಯ ಜೀವರಿಗೆ ಲಿಂಗಭಂಗಾನಂತರ, ನಿತ್ಯದುಃಖರೂಪವಾದ ಅಂಧತಮಸ್ಸು ಪ್ರಾಪ್ತಿ. ಲಿಂಗದೇಹಗತ ರಜೋಗುಣಪ್ರಾಚುರ್ಯದಿಂದ, ಸುಖದುಃಖರೂಪವಾದ ಮಿಶ್ರಕ್ರಿಯಾಭಿವ್ಯಕ್ತಿ. ಇದರಿಂದ ಮಿಶ್ರಫಲಾನುಭವ. ಪುಣ್ಯಕರ್ಮಗಳನ್ನಾಗಲೀ, ಪಾಪಕರ್ಮಗಳನ್ನಾಗಲೀ, ಮಿಶ್ರಕರ್ಮಗಳನ್ನಾಗಲೀ ಮಾಡಲು ಜೀವನು ಸ್ವತಂತ್ರನಲ್ಲ. ಜೀವರ ಕರ್ತೃತ್ವಶಕ್ತಿಯು ಭಗವದಧೀನವಾಗಿದೆ. ಪರಾಧೀನರಾದ ಜೀವರ ಕರ್ತೃತ್ವವನ್ನು ಜೀವರ ಅನಾದಿ ಸ್ವಭಾವ, ಕರ್ಮಗಳಿಗನುಗುಣವಾಗಿ, ಸರ್ವತಂತ್ರಸ್ವತಂತ್ರನಾದ ಬಿಂಬನು ಪ್ರೇರಿಸಿ, ಕ್ರಿಯಾತ್ಮಕವನ್ನಾಗಿ ಮಾಡುವನು. ಅಂತಹ ಬಿಂಬಕ್ರಿಯಾದ್ವಾರಾ, ಪುಣ್ಯ, ಮಿಶ್ರ, ಪಾಪಕರ್ಮಗಳ ಅಭಿವ್ಯಕ್ತಿ. ನಂತರ ತಜ್ಜನ್ಯ ಫಲಪ್ರಾಪ್ತಿ.

೪. ಅಂತೆಯೇ ಪ್ರಾಪಂಚಿಕ ಭೋಗಗಳ ಪ್ರಾಪ್ತಿ, ಪುತ್ರ, ಕಳತ್ರ, ಗೃಹ, ಧನ, ಧಾನ್ಯಾದಿಗಳ ಸಂಪಾದನೆ ಇತ್ಯಾದಿಗಳು ಋಣಾನುಬಂಧರೂಪದಿಂದ ಜೀವನಿಗೆ ಸರ್ವಕರ್ಮನಿಯಾಮಕನಾದ ಸರ್ವೋತ್ತಮನ ಅನುಗ್ರಹದಿಂದ ಪ್ರಾಪ್ತಿಯಾಗುವುವು. ಆದಾಯರೂಪದಲ್ಲಿರುವ ಈ ವಸ್ತುಗಳು ಲಾಭ ವೆನಿಸುವವು. ದ್ರವ್ಯನಷ್ಟ, ಆಸ್ತಿಪಾಸ್ತಿಗಳ ನಷ್ಟ, ಮರಣಾದಿಗಳಿಂದ ಬಂಧು ಬಾಂಧವರ ವಿಯೋಗ, ಆರೋಗ್ಯಹಾನಿ ಇತ್ಯಾದಿ ಅಲಾಭರೂಪರಾದ ನಷ್ಟಗಳು. ಹೀಗೆ ಪುಣ್ಯ—ಪಾಪ, ಲಾಭ—ನಷ್ಟ, ಸುಖ—ದುಃಖ, ಜಯ—ಅಪಜಯ ಇತ್ಯಾದಿಗಳಿಗೆ ದ್ವಂದ್ವಕರ್ಮಗಳ ಫಲರೂಪವಾದ ಅನುಭವ ವೆಂದು ಹೇಳುವರು. ಇಂತಹ ಸಕಲದ್ವಂದ್ವಕರ್ಮಗಳಿಗೂ ಮುಖ್ಯಪ್ರೇರಕನು, ಹಾಗೂ ನಿಯಾಮಕನು ಬಿಂಬರೂಪಿಯಾದ ಶ್ರೀಹರಿಯೇ

ಹೊರತು, ಅನ್ಯರಲ್ಲ. ಈ ರಹಸ್ಯಾರ್ಥವನ್ನು ಅರಿತು, ಶ್ರೀಹರಿಯ ಚರಣಾರವಿಂದಗಳಲ್ಲಿ ದ್ವಂದ್ವಕರ್ಮಸಮರ್ಪಣೆ ಮಾಡು — ಎಂಬ ಎಚ್ಚರಿಕೆಯ ಮಾತುಗಳನ್ನಾಡಿದ್ದಾರೆ — ಕರ್ಮಗಳ ಮರ್ಮವನ್ನರಿತ ದಾಸರಾಯರು. ಸಕಲಕರ್ಮಗಳಲ್ಲಿ **ಭಗವದಧೀನತಾ ರೂಪವಾದ ಧ್ಯಾನವೇ ದ್ವಂದ್ವಕರ್ಮಸಮರ್ಪಣೆಯ ರಹಸ್ಯಾರ್ಥವು.**

**ಪ್ರಮಾಣ :—**

**"ಪುಣ್ಯಪಾಪಾದಿಕಂ ಕರ್ಮ ಅರ್ಪಣಂ ಕುರು ಸರ್ವದಾ"**

**— ಬೃಹನ್ನಾರದೀಯ ವಚನ**

೫. ಪಾಪಕರ್ಮಗಳ ಅನುಭವಕ್ಕಾಗಿ ನರಕಪ್ರಾಪ್ತಿ. ಪುಣ್ಯಕರ್ಮಗಳ ಭೋಗಕ್ಕಾಗಿ ಸ್ವರ್ಗಪ್ರಾಪ್ತಿ. ಮಿಶ್ರಕರ್ಮಫಲ ಭೋಗಕ್ಕಾಗಿ ಭೂಲೋಕದಲ್ಲಿ ಅನೇಕ ಯೋನಿಗಳ ಜನ್ಮಗಳ ಪ್ರಾಪ್ತಿ. ಲಿಂಗಭಂಗಾನಂತರ ಕರ್ಮವಿಮೋಚನಾದ್ವಾರ, ವೈಕುಂಠಾದಿ ಅಪವರ್ಗಗಳಲ್ಲಿ ಮುಕ್ತಿಧಾಮಗಳಲ್ಲಿ ನಿತ್ಯಾನಂದರೂಪವಾದ ಸ್ವಸ್ವರೂಪಾನುಭವ ಇತ್ಯಾದಿ ಸರ್ವದೇಶಗಳಲ್ಲಿ ಅಸೃಜ್ಯಾವಸ್ಥೆ, ಸೃಷ್ಟಿ—ಸ್ಥಿತಿ, ಮುಕ್ತಿದಶಾ ಇತ್ಯಾದಿ ಸರ್ವಾವಸ್ಥೆಗಳಲ್ಲಿ, ಭೂತ ವರ್ತಮಾನ ಭವಿಷ್ಯಾದಿ ಸರ್ವಕಾಲಗಳಲ್ಲಿ, ಸಕಲೇಂದ್ರಿಯಗಳ ನಿಯಾಮಕನಾದ ಬಿಂಬನಿಂದಲೇ ಶುಭ ಮಿಶ್ರ, ಅಶುಭಕರ್ಮಗಳು ಪ್ರವರ್ತಿತವಾಗುತ್ತಿವೆ ಎಂದು ತಿಳಿದು ಸರ್ವತ್ರ ಬಿಂಬನನ್ನು ಸ್ಮರಿಸುತ್ತಿರೆಂದು ಉಪದೇಶಿಸುತ್ತಾರೆ. ||೧೪||

## ಪದ್ಯ ೧೫

**ಮೂಲ :—**

**ಮಾಣವಕ ತತ್ಫಲಗಳನುಸಂ**
**ಧಾನವಿಲ್ಲದೆ ಕರ್ಮಗಳ ಸ್ವೇ**
**ಚ್ಛಾನುಸಾರದಿ ಮಾಡಿ ಮೋದಿಸುವಂತೆ ಪ್ರತಿದಿನದಿ**
**ಜ್ಞಾನಪೂರ್ವಕ ವಿಧಿನಿಷೇಧಗ**
**ಳೇನು ನೋಡದೆ ಮಾಡು ಕರ್ಮಪ್ರ**
**ಧಾನ ಪುರುಷೇಶನಲಿ ಭಕುತಿಯ ಬೇಡು ಕೊಂಡಾಡು ||೧೫||**

ಅವತರಣಿಕೆ :—

ವಿಧಿ ನಿಷೇಧರೂಪಗಳಾದ ಕರ್ಮಗಳನ್ನು ಮಾಡುವ ವಿಧಾನವನ್ನು **ಮಾಣವಕನ** ದೃಷ್ಟಾಂತದಿಂದ ವಿವರಿಸುತ್ತಾರೆ – **ಮಾಣವಕ** – ಎಂಬ ಪ್ರಸಕ್ತ ಸಂಧಿಗತ ೧೫ನೆಯ ಈ ಪದ್ಯದಿಂದ. ||೧೫||

ಪ್ರತಿಪದಾರ್ಥ :—

***ಮಾಣವಕ*** = ತಾನು ಮಾಡುವ ಕಾರ್ಯಗಳಲ್ಲಿ ಏನೂ ಫಲವನ್ನೂ ಅಪೇಕ್ಷಿಸದ ಸಣ್ಣ ಬಾಲಕನೋರ್ವನು, **ತತ್ಫಲಗಳನು** = ಕರ್ಮದಿಂದ ಜನಿತವಾದ ಫಲಗಳನ್ನು, **ಅನುಸಂಧಾನವಿಲ್ಲದೆ** = ಹೊಂದಬೇಕೆಂಬ ಅಪೇಕ್ಷೆ ಇಲ್ಲದೆ, ಅಂದರೆ, ಫಲಾಪೇಕ್ಷಾರಹಿತನಾಗಿ, ***ಕರ್ಮಗಳ*** = ಶುಭಾಶುಭರೂಪವಾದ ದ್ವಂದ್ವಕರ್ಮಗಳನ್ನು, **ಸ್ವೇಚ್ಛಾನುಸಾರದಿ** = ತನಗೆ ಇಷ್ಟಬಂದಂತೆ, **ಮಾಡಿ** = ಆಚರಿಸಿ, **ಮೋದಿಸುವಂತೆ** = ಸಂತೋಷಪಡುವ ರೀತಿಯಲ್ಲಿ, **ಪ್ರತಿದಿನದಿ** = ನಿತ್ಯದಲ್ಲಿಯೂ, **ಜ್ಞಾನಪೂರ್ವಕ** = ಶುಭಾಶುಭಕರ್ಮಗಳನ್ನು, ಅಂತೆಯೇ ಸಮಸ್ತ ದ್ವಂದ್ವಕರ್ಮಗಳನ್ನು ಸ್ವತಂತ್ರನಾದ ಬಿಂಬರೂಪೀ ಶ್ರೀಹರಿಯೇ ಜೀವನ

ಹೆಸರಿನಲ್ಲಿ, ಅವನ ಪರವಾಗಿ, ತಾನೇ ಬಿಂಬಕ್ರಿಯಾದ್ವಾರಾ ಮಾಡಿ, ತತ್ತ್ವೇಶ ದೇವತೆಗಳು ಮತ್ತು ದೈತ್ಯರ ದ್ವಾರಾ ಮಾಡಿಸಿ, ದೇಹದಲ್ಲಿ ಪ್ರಕಾಶತೋವ್ಯಾಪ್ತನಾದ ಜೀವನ ಅನುಭವಕ್ಕೆ ತಂದೀಯುತ್ತಿರುವನು – ಎಂಬ ಕರ್ಮಾಚರಣೆಯ ರಹಸ್ಯಾರ್ಥವನ್ನು ಜ್ಞಾನಪೂರ್ವಕ ತಿಳಿದು, **ವಿಧಿನಿಷೇಧಗಳ** = ಮಾಡಲೇಬೇಕಾದ ವಿಧಿರೂಪವಾದ ಕರ್ಮಗಳು, ತ್ಯಜಿಸಬೇಕಾದ ನಿಷೇಧರೂಪವಾದ ಕರ್ಮಗಳನ್ನು, **ಏನು ನೋಡದೆ** = ಇದು ವಿಧಿ ಕರ್ಮ, ಇದು ನಿಷಿದ್ಧಕರ್ಮ ಎಂದು ಪರಿಗಣಿಸದೆ, **ಮಾಡು** = ಅವನಿಗೆ ಅರ್ಪಿಸು (ಕರ್ಮಾಚರಣೆ ಎಂದರೆ, ಸಕಲಕರ್ಮಗಳನ್ನು ಶ್ರೀಹರಿಗೆ ಸಮರ್ಪಣೆ ಎಂದರ್ಥ. ಸರ್ವಕರ್ಮಸಮರ್ಪಣಾನುಸಂಧಾನವೇ ಕರ್ಮಗಳನ್ನು ಮಾಡುವುದೆಂದರ್ಥ) **ಪುರುಷೇಶನಲಿ** = ಕ್ಷರಾಕ್ಷರಪುರುಷರಿಗೆ ನಿಯಾಮಕನಾದ, **ಪ್ರಧಾನ** = ಸರ್ವೋತ್ತಮನಾದ ಶ್ರೀ ಹರಿಯಲ್ಲಿ, **ಭಕುತಿಯ** = ದೃಢವಾದ ಭಕ್ತಿಯನ್ನು, **ಬೇಡು** = ಕೊಡೆಂದು ಪ್ರಾರ್ಥಿಸು , **ಕೊಂಡಾಡು** = ಸರ್ವಕರ್ಮಪ್ರೇರಕನಾದ ಆ ಕರ್ಮಪತಿಯನ್ನು ಸ್ತೋತ್ರಮಾಡು. ||೧೫||

## ವ್ಯಾಖ್ಯಾನಗಳು

### (೧) ಸಂಕರ್ಷಣ ಒಡೆಯರ ವ್ಯಾಖ್ಯಾನ:–

ದಾವರಕರ್ಮ ಮಾಡಿದರೂ ಪರಮಾತ್ಮನಲ್ಲಿ ಭಕ್ತಿಯ ಬೇಡು. ತದನ್ಯಗಳ–ಬೇಡಬ್ಯಾಡ ಎಂತ ಹೇಳತಾರೆ.

ಬ್ರಹ್ಮಚಾರಿ (ಬ್ರಹ್ಮಜ್ಞಾನಿ ಎಂತ ತಾತ್ಪರ್ಯ) ಬ್ರಹ್ಮನಿಷ್ಠಿತ ಜ್ಞಾನಯುಕ್ತನಾಗಿ, ದೇಹೇಂದ್ರಿಯಾದಿಗಳಿಂದ ಕರ್ಮಗಳ, ಬಿಂಬನಾದ ದೇಹಾಂತರ್ಗತ ಪರಮಾತ್ಮನ ಇಚ್ಛಾನುಸಾರವಾಗಿ ಬಿಂಬಕ್ರಿಯಾ ದ್ವಾರಾ ಪಾಪವೇನು ಪುಣ್ಯವೇನು ಮಾಡತಾನೆ. ತದ್ವ್ಯತಿರಿಕ್ತ ದಾವ ಕರ್ಮ ಮಾಡೋದಕ್ಕೂ ನಾನೇನು, ಬ್ರಹ್ಮಾದಿ ದೇವತೆಗಳೇನು ಸಮರ್ಥರಲ್ಲ ಎಂತ ತಿಳಿದು, ಕರ್ಮಗಳ ಮಾಡಿ, ಆಯಾ ಕರ್ಮಜನಿತಫಲಗಳ

ಅಪೇಕ್ಷಾ ಇಲ್ಲದೆ, ಈ ಪ್ರಕಾರ ಜ್ಞಾನಿಗಳು ಕರ್ಮಗಳ ಮಾಡಿ ಮೋದಿಸುವಂತೆ ಪ್ರತಿದಿನದಲ್ಲೂ ವಿಧಿಕರ್ಮ ಎಂತಲೂ, ನಿಷೇಧಕರ್ಮ ಎಂತಲೂ ನೋಡದೇನೆ ಕರ್ಮ ಮಾಡು. ಮಾಡತಕ್ಕ ಕರ್ಮ ಪೂರ್ವೋಕ್ತ ಹರಿಗೆ ಅರ್ಪಿಸು –ಎಂದರೆ, ಚೆಂದಾಗಿ ಜ್ಞಾನದಿಂದ ತಿಳಿದು ಅರ್ಪಿಸು ಎಂತ ತಾತ್ಪರ್ಯ. ಇವನ ಯತ್ನ ಇಲ್ಲಿದೇನೆ ದೇಹಾಂತರ್ಗತನಾದ ಬಿಂಬರೂಪಿ ಪರಮಾತ್ಮ ಅನಾದಿಕರ್ಮಾನುಗುಣವಾಗಿ ತ್ರಿಗುಣಗಳ ಅನುಸರಿಸಿ, ದ್ವಂದ್ವಕರ್ಮಗಳ ಮಾಡಿಸತಾನೆ. ಆದ್ದರಿಂದ ಈ ವಿಧಿಯನ್ನು ಮಾಡುವವನು ನಾನಲ್ಲ. ನಿಷೇಧವನ್ನು ಬಿಡುವವನೂ ನಾನಲ್ಲ. ಸಕಲಕಾರ್ಯವೂ ಶ್ರೀ ಪರಮಾತ್ಮನದೇ – ಎಂದು ಭಾವಿಸಿ, ಭಗವಂತನು ಯಾವ ಕಾಲದಲ್ಲಿ ಏನು ಮಾಡಿಸಿದರೂ, ಅದನ್ನು ಮಾಡಿ ಪರಮಾತ್ಮನಿಗೆ ಅರ್ಪಿಸಬೇಕು. ಈ ವಿಷಯದಲ್ಲಿ **ಭಾಗವತಪಂಚಮಸ್ಕಂಧದಲ್ಲಿ** ಹೇಳಿರುವ **ಜಡಭರತನ** ಇತಿಹಾಸವು ದೃಷ್ಟಾಂತವು.

ಅದೇನೆಂದರೆ – ಋಷಭದೇವರ ಮಗನಾದ ಭರತರಾಜನು ಸಕಲಸಂಗಪರಿತ್ಯಾಗ ಮಾಡಿ, ವನದಲ್ಲಿದ್ದಾಗ, ಪ್ರಾರಬ್ಧಕರ್ಮವಶದಿಂದ ಒಂದು ಜಿಂಕೆಯ ಮರಿಯ ಸಹವಾಸವು ಅವನಿಗೆ ಸಿಕ್ಕಿತು. ಕಡೆಗೆ ಮರಣಕಾಲದಲ್ಲಿ ಅದೇ ಜಿಂಕೆಯನ್ನೇ ಸ್ಮರಿಸಿಕೊಂಡು, ದೇಹವನ್ನು ಬಿಟ್ಟನು. ಅದರಿಂದ ಮುಂದಿನ ಜನ್ಮದಲ್ಲಿ ಜಿಂಕೆಯಾಗಿ ಜನಿಸಿದನು. ಆ ಜನ್ಮದಲ್ಲಿ ಪೂರ್ವಪುಣ್ಯಪ್ರಭಾವದಿಂದ ಪರಮಾತ್ಮನಲ್ಲಿ ಭಕ್ತಿ ಹುಟ್ಟಿ ಕಾಲಾಂತರದಲ್ಲಿ ದೇಹವನ್ನು ಬಿಟ್ಟು ಬ್ರಾಹ್ಮಣೋತ್ತಮನಾಗಿ ಹುಟ್ಟಿದನು. ಬ್ರಾಹ್ಮಣಜನ್ಮದಲ್ಲಿಯೂ ಪೂರ್ವಪುಣ್ಯದಿಂದ ಎರಡು ಜನ್ಮಗಳ ಜ್ಞಾಪಕವೂ ಇದ್ದುದರಿಂದ, ಮಹಾಜ್ಞನಿಯಾಗಿ, ದೇಹಾಭಿಮಾನವನ್ನು ಬಿಟ್ಟು ಬಾಲ್ಯದಿಂದಲೂ ವಿರಕ್ತನಾಗಿದ್ದು, ಒಂದಾನೊಂದು ಕಾಲದಲ್ಲಿ ಸ್ವೇಚ್ಛಾವಿಹಾರ ಮಾಡುತ್ತಾ ಬರುತ್ತಿರುವಾಗ, ರಹೂಗಣನೆಂಬ ಭಗವದ್ಭಕ್ತನಾದ ರಾಜನೋರ್ವನು, ತತ್ತ್ವೋಪದೇಶವನ್ನು ಹೊಂದುವುದಕ್ಕಾಗಿ ಕಪಿಲಾಶ್ರಮಕ್ಕೆ ಹೋಗುವ ಮಾರ್ಗದಲ್ಲಿ,

ಅವನ ಪಾಲಕಿಯನ್ನು ಹೊರುವುದಕ್ಕೆ ಮನುಷ್ಯನನ್ನು ಒದಗಿಸಲು, ಅಪ್ಪಣೆ ಪಡೆದಿದ್ದ ಒಬ್ಬ ಗ್ರಾಮಾಧಿಕಾರಿಯು ಈ ಬ್ರಾಹ್ಮಣೋತ್ತಮನನ್ನು ಪಾಲಕಿ ಹೊರುವುದಕ್ಕೆ ಕಳುಹಿಸಿದನು. ಮಹಾವಿರಕ್ತನಾದ ಆ ಬ್ರಾಹ್ಮಣನು, ಅದೂ ಒಂದು ಭಗವತ್ಸೇವೆ ಎಂದು ಭಾವಿಸಿ, ಪಾಲಕಿಯನ್ನು ಹೊತ್ತುಕೊಂಡು ಹೋಗುವಾಗ, ಕ್ರಿಮಿಕೀಟಾದಿಗಳ ಮೇಲೆ ಎಲ್ಲ ಹೆಜ್ಜೆ ಬೀಳುವುದೋ ಎಂಬ ಭಯದಿಂದ ತನ್ನ ಹೆಜ್ಜೆಯ ಮೇಲೆಯೇ ದೃಷ್ಟಿ ಇಟ್ಟು ಹೋಗುತ್ತಿರುವಾಗ, ಸರಿಯಾದ ಮಾರ್ಗದಲ್ಲಿ ನಡೆಯದೇ ತಗ್ಗುದಿನ್ನೆಗಳಲ್ಲಿ ನಡೆಯುತ್ತಾ ಇರಲು, ಪಾಲಕಿಯು ಕೀಳುಮೇಲಾಗುತ್ತಿತ್ತು. ರಾಜನು ಅದನ್ನು ಕಂಡು, ಒಂದೆರಡಾವರ್ತಿ ಹಾಸ್ಯರೂಪವಾಗಿ ಅವನಿಗೆ ಹೇಳಿದರೂ, ಆ ಬ್ರಾಹ್ಮಣೋತ್ತಮನು, ಪೂರ್ವದಂತೆಯೇ ತಗ್ಗುದಿನ್ನೆಗಳಲ್ಲಿ ನಡೆಯುತ್ತಿರುವುದನ್ನು ಕಂಡು, ಆ ರಾಜನು ಬಹುಕೋಪದಿಂದ –

*"ಕಿಮರೇತ್ವಂ ಜೀವನ್ಮೃತೋಸಿ ಮಾಂತದರ್ಥೀಕೃತ್ಯ ಭರ್ತೃ ಶಾಸನಮತಿಚರಸಿ ಪ್ರಮತ್ತಸ್ಯತೇ ಕರೋಮಿ ಚಿಕಿತ್ಸಾಂದಂಡಪಾಣಿರಿವ ಎಂದನು" ||*

"ಎಲೈ ನೀಚನೇ, ಏನು ಬದುಕಿದ ಹೆಣವಾಗಿರುವೆ ? ನಾನಾರೆಂಬುದು ನಿನಗೆ ಗೊತ್ತಿಲ್ಲವೇ? ಪ್ರಭುವಾದ ನನ್ನನ್ನು ತಿರಸ್ಕರಿಸಿ, ನನ್ನ ಅಪ್ಪಣೆಯನ್ನು ಮೀರಿ ನಡೆಯುತ್ತಿರುವೆ? ಪ್ರಮತ್ತನಾಗಿರುವೆ? ಈಗ ನಾನು ನಿನ್ನನ್ನು ಯಮನಂತೆ ಶಿಕ್ಷಿಸುವೆನು " – ಎಂದನು. ಇದನ್ನು ಕೇಳಿದ ಬ್ರಾಹ್ಮಣೋತ್ತಮನು ನಕ್ಕು, ಹೇಳಿದ ವಾಕ್ಯವೇನೆಂದರೆ –

*ಬ್ರಾಹ್ಮಣ ಉವಾಚ – "ತ್ವಯೋದಿತಂ ವ್ಯಕ್ತಮವಿಪ್ರಲಬ್ಧಂಭರ್ತುಃ ಸಮೇಸ್ಯಾದ್ಯದಿ ವೀರಭಾರಃ । ಗಂತುರ್ಯದಿಸ್ಯಾದಧಿಗಮ್ಯ ಮಧ್ವಾಪೀವೇತಿ ಚೌನೌ ನವಿದಾಂ ಪ್ರವಾದಃ" ||*

"ಎಲೈ ರಾಜನೇ, ಭಾರವನ್ನು ಹೊರುವವನೂ, ಹೊತ್ತುಕೊಂಡು ನಡೆಯುವವನೂ

ನಾನಾಗಿದ್ದು, ನಾನು ನಡೆದುಹೋಗಲು ಸಾಧ್ಯವಾದ ಮಾರ್ಗವೂ ಒಂದಿದ್ದರೆ, ನೀನು ಹೇಳಿದುದೆಲ್ಲವೂ ನಿಜವೇ ಆಗಬಹುದು. ಅದೇ ಸುಳ್ಳು. ಭಾರವನ್ನು ಹೊತ್ತವನೂ ನಾನಲ್ಲ. ಮಾರ್ಗವನ್ನು ನಡೆಯುವವನೂ ನಾನಲ್ಲ. ಮಾರ್ಗವೂ ಇದಲ್ಲ " – ಎಂದುತ್ತರವಿತ್ತನು. ರಾಜನು ಮೊದಲು ಹಾಸ್ಯವಾಗಿ ಮಾತನಾಡುವಾಗ ಇವನು – "*ಸುಚಿರಂ ನಾತಿಪೀವಾನ್*" – ಇತ್ಯಾದಿ ವಾಕ್ಯಗಳಿಂದ ಇವನನ್ನೂ ಸ್ಥೂಲಕಾಯನೆಂದು ಹಾಸ್ಯಮಾಡಿದ್ದನು. ಅದಕ್ಕೆ ಉತ್ತರರೂಪವಾಗಿ – "*ಪೀವೇತಿ ಚೌಸೌ ನವಿದಾಂ ಪ್ರವಾದ* " – ನನ್ನನ್ನು ಟೊಣ್ಣನೆಂದು ಹಾಸ್ಯಮಾಡಿರುವೆ. ಇದು ತಿಳಿದವರ ಮಾತಲ್ಲ. ಅಂದರೆ, ಶುದ್ಧ ಮೂರ್ಖರು ಆಡುವ ಮಾತೆಂದರ್ಥ. ಜೀವನು ಪರಿಮತಿ ಇಲ್ಲದ ಅತಿಸೂಕ್ಷ್ಮರೂಪವುಳ್ಳವನು. ದೇಹಮಾತ್ರವೇ ಸ್ಥೂಲವಾಗುವುದು. ಕೃಶವಾಗುವುದು. ದೇಹವು ಜಡವಾದುದರಿಂದ ಕರ್ತೃತ್ವಾದಿಗಳು ದೇಹಕ್ಕಿಲ್ಲ. ನೀನು – ಎಂಬ ಸಂಬೋಧನೆಯು ಜೀವನಕ್ಕೇ ಹೊರತು ದೇಹಕ್ಕಲ್ಲ. ಜೀವನಿಗೆ ಸ್ಥೂಲಕಾಯವಾವುದು? ಕೃಶವಾವುದು? ಆದ್ದರಿಂದ ಇದು ಮೂರ್ಖರ ಮಾತೆಂದು ಭಾವನೆ. ಪ್ರತ್ಯಕ್ಷವಾಗಿ ತಾನು ಪಾಲಿಕೆಯನ್ನು ಹೊತ್ತಿರುವವನು. ಮಾರ್ಗ ನಡೆಯುತ್ತಿರುವವನು, ವಿಷಮವಾದ ಮಾರ್ಗವು ಕಾಣುತ್ತಿರುವುದು. ಹೀಗಿರಲು, ಈ ಬ್ರಾಹ್ಮಣೋತ್ತಮನು – "ಹೊತ್ತವನು ನಾನಲ್ಲ. ನಡೆಯುವವನೂ ನಾನಲ್ಲ. ಮಾರ್ಗವೂ ಇದಲ್ಲ' – ಹೀಗೆಂದು ಹೇಳಿದನು. ದೇಹ ಜಡವು. ಜೀವನು ಅಸ್ವತಂತ್ರನು. ಅಶಕ್ತನು. ಆದುದರಿಂದ "*ಭರ್ತಾಸನ್ ಭ್ರಿಯಮಾಣೋಪಿ ಭರ್ತ್ರೀಯವುತ್ರಿಧಾತು ಪೃಥವೀಮುತದ್ಯಾಂ*" – ಎಂಬಿವೇ ಮೊದಲಾದ **ಶ್ರುತಿಯಲ್ಲಿ** ಹೇಳಿದಂತೆ, ಹೊರುವವನೂ, ನಡೆಯುವವನೂ, ಮಾರ್ಗಭೂತನೂ ಪರಮಾತ್ಮನೇ ಆಗಿ, ಎಲ್ಲಾ ಕಾರ್ಯಗಳನ್ನೂ ಮಾಡಿ, ಮಾಡಿಸುವನೆಂಬ ಭಾವನೆಯಿಂದ ಭರತರಾಜನು ರಾಜನಿಗೆ ಹೀಗೆ ಉತ್ತರವನ್ನು ಕೊಟ್ಟನು. ಇದೇ ಅಭಿಪ್ರಾಯವನ್ನೇ ಈ ಪದ್ಯದಲ್ಲಿ ಹೇಳಿರುವರೆಂದು ತಿಳಿಯಬೇಕು. ಪರಮಾತ್ಮನ

ಪೂಜೆಯನ್ನೂ, ಸೇವೆಯನ್ನೂ ಮಾಡಿ, ಫಲವನ್ನು ಬೇಡಬಾರದು. ಭಕ್ತಿಯನ್ನು ಬೇಡು, ಕೊಂಡಾಡು – ಎಂದು ದಾಸರಾಯರು ಹೇಳಿರುವರು. ಭಕ್ತಿಯನ್ನಾದರೂ ಬೇಡಬಹುದೇ ? ಅದು ಕಾಮ್ಯವಲ್ಲವೇ? ಅಂದರೆ, ಭಕ್ತಿಜ್ಞಾನಗಳು ಫಲವಲ್ಲ. ಭಕ್ತಿಮಾಡುವುದು ಭಗವದನುಗ್ರಹಕ್ಕಾಗಿ. ಅದರಿಂದಾಗುವ ಫಲ ಮುಕ್ತಿಯು. ಅದನ್ನು ಮಾತ್ರ ಬೇಡಬಾರದು.

**ಭಾಗವತ ಏಕಾದಶಸ್ಕಂದದಲ್ಲಿ –**

**"ಸಾಲೋಕ್ಯ ಸಾರ್ಷ್ಟಿ ಸಾಮೀಪ್ಯ ಸಾರೂಪ್ಯೈಕತ್ವಮಪ್ಯುತ**
**ದೀಯಮಾನಂ ನಗೃಣ್ಹಂತಿ ವಿನಾಮತ್ಸೇವನಂ ಜನಾಃ"**

ಅಂದರೆ, ಸಾಲೋಕ್ಯ=ಪರಮಾತ್ಮನ ಲೋಕದಲ್ಲಿ ವಾಸಮಾಡುವುದು. ಸಾರ್ಷ್ಟಿ= ಪರಮಾತ್ಮನಿಗೆ ಸಮವಾದ ಐಶ್ವರ್ಯಹೊಂದುವುದು. ಸಾಮೀಪ್ಯ=ಪರಮಾತ್ಮನ ಸಮೀಪದಲ್ಲಿ ವಾಸಮಾಡುವುದು. ಸಾರೂಪ್ಯ= ಪರಮಾತ್ಮನಂತೆ ರೂಪಹೊಂದುವುದು. ಏಕತ್ವ=ಸಾಯುಜ್ಯಹೊಂದುವುದು. ಇಂತಹ ಐದುವಿಧ ಮುಕ್ತಿಯನ್ನು ಕೂಡ ನನ್ನ ಏಕಾಂತಭಕ್ತರು ಬೇಡುವುದಿಲ್ಲ–ಎಂದು ಪರಮಾತ್ಮನು **ಉದ್ಧವನಿಗೆ** ಬೋಧಿಸಿರುವನು. ಹೀಗೆ ಮುಕ್ತಿಯು ಫಲರೂಪವಾದುದರಿಂದ, ಅದನ್ನು ಬೇಡುವುದೂ ಕಾಮ್ಯವೆನಿಸುವುದು. ಭಕ್ತಿಯು ಕರ್ಮರೂಪವಾದ್ದರಿಂದ ಅದನ್ನು ಬೇಡುವುದು ಕಾಮ್ಯವಲ್ಲ. ||೧೫||

**(2) ಭಾವದರ್ಪಣ ಟೀಕಾ:–**

ಸಕಲ ಕರ್ಮಗಳೂ ಸ್ವಹೃದಯಸ್ಥ ಬಿಂಬನ ಕ್ರಿಯಾದಿಂದಲೇ ನಡೆಯುವುದರಿಂದ, ವಿಧಿನಿಷೇಧಗಳನ್ನು ಏನೂ ನೋಡದೆ, ಶ್ರೀಹರಿ ಮಾಡಿಸಿದ್ದೇ ಮಾಡು ಎಂದು ಹೇಳುತ್ತಾರೆ–ಮಾಣವಕೇತಿ

**ಬೇಡು –"ಭಕ್ತ್ಯಾ ತ್ವದೀಯಚರಣಾಂಬುಜಮಾದರೇಣ ಶ್ರೀಶ್ರೀನಿವಾಸ**

ಪುರುಷೋತ್ತಮ ದೇಹಿ ದಾಸ್ಯಮಿತಿ'' ಎಂದು ಮಹಾಭಾರತೋಕ್ತಿ ಇರುವುದರಿಂದ, ಜ್ಞಾನ, ಭಕ್ತಿ, ವೈರಾಗ್ಯ ಬೇಡು ಎಂಬ ಭಾವ ||೧೫||

## (4) ಶ್ರೀವ್ಯಾಸದಾಸಸಿದ್ಧಾಂತ ಕೌಮುದೀ (ಸಂಸ್ಕೃಮೂಲ):–

"ಮಾಣವಕ'' ಇತಿ "ಬಾಲವತ್‌ಕೃತ ನಿಶ್ಚಯ:– " ಇತಿ ಭಾಗವತ ತಾತ್ಪರ್ಯೇ "ವಿಧಿ'' ಇತಿ ಮಾಕರ್ಮಫಲಹೇತುಃ ಭೂಃ ಮಾತೇ ಸಂಗೋsಸ್ತ್ವ ಕರ್ಮಣಿ'' ಇತ್ಯುಕ್ತೇಃ ಸ್ವರ್ಗಾದ್ಯುದ್ದೇಶೇನ ಮಾಚರ ಕರ್ಮ "ಅತೀವ ನಿಂದಮಪಿ ಬಹು ಹಿಂಸಾಯುಗೇವ ಚ'' ಇತಿ ವಚನಾತ್ ಅನಿಷಿದ್ಧಮಪಿ ಅಸತ್ಯಭಾಷಣಂ ಮುಖಂ ಹಿಂಸಾನಿಂದಾದ್ಯುಪೇತಮಪಿ ಸದುಪಕಾರಕಂ ಚೇತ್ ತತ್ರ ದೃಷ್ಟಿಂ ಮಾಕೃಥಾಃ ಇತ್ಯತ್ರ ಚ ತಾತ್ಪರ್ಯಮ್|| ಉಪಕಾರಃ ಸತಾಂ ಯೇನ ತತ್ ಕೃತ್ವಾ ನೈವ ದುಷ್ಯತಿ'' ಇತಿ ಚತುರ್ಥತಾತ್ಪರ್ಯೇ|| ಅಭಿದಾನಾತ್ ಯದ್ವಾ ವಿಧಿನಿಷೇಧಪದೇನ ತದ್ವಚನಗೋಚರಂ ಪುಣ್ಯಂ ಪಾಪಂ ಚ ಗೃಹ್ಯತೇ ತಥಾ ಚ "ವಿಹಿತತ್ವಾತ್'' ಚರೇತ್ ಪುಣ್ಯಂ|| "ನಿವೃತ್ತೋsಸ್ಮಿ ಪಾಪಾತ್ ಇತಿ ಭ್ರಾಂತಿಂ ಮಾಭಜ||'' ಕಿಂತು ಪುಣ್ಯಪಾಪ ಕೃತಿ ಸ್ವಾತಂತ್ರ್ಯಾತ್ ತನ್ಮಾನಂ ಯಥಾ ಯಥೇಶ್ವರಃ ಕುರುತೇ ತಥಾ ತಥಾ ಭವಾಮಿ "ಇತಿ ಬುದ್ಧ್ಯಾ'' ತತ್ತತ್ಕಾಲೇ ಯದ್ಯತ್ಕರೋತಿ ತತ್ತತ್ಕರೋಮಿ ಇತಿ ಚ ವಿಚಿಂತ್ಯ–ಪುಣ್ಯಮೇನಮಾಪಾಪಮಿತೀ ಚ್ಛಾಯಾಮಪಿ ನಿಯಮ ವೈಪರೀತ್ಯಂ ಚ ಉಪಲಬ್ಧಿವನ್ನಯಾರ್ಥಮಪಿ ಅನುಭವಾರೂಢಂ ಕೃತ್ವಾ, ಕರ್ಮ ಯುಕ್ತಃ ಸಮಾಚರೇತ್ – ಇತಿ ತಾತ್ಪರ್ಯಮ್ ||

ಬೃಹದ್ಭಾಷ್ಯೇ ಚ ಆರ್ತಭಾಗ ಬ್ರಾಹ್ಮಣೇ – 'ಜ್ಞಾನಸ್ಥಿತೇನರೂಪೇಣ ದೇವಾನಾಂ ಮುಕ್ತಿದಃ ಹರಿಃ|| ಪುಣ್ಯಸಂತಾನರೂಪೇಣ ಸ್ವರ್ಗಂ ನಿರಯಮನ್ಯಗಃ ರಹಸ್ಯಮೇತತ್ ದೇವಾನಾಂ ವಿದುಃ ಕರ್ಮೇತಿ ಮಾನುಷಾಃ ಕರ್ಮನಾಮಾ ತು ಭಗವಾನ್ ಫಲಕರ್ತೃತ್ವತಃ ಹರಿಃ|| ಪಾಪನಾತ್ ಪಾಪ ನಾಮಾಸೌ ಪುನಾತೇಃ,

ಪುಣ್ಯ ನಾಮಾನ್ ಇತಿ ಭಾರತೇ|| ಇತಿ ಚ ಉಕ್ತಮ್||

ತತ್ರೈವ ಅನ್ಯತ್ರ – "ಸ ಯಥಾಕರೋತಿ ಪುರುಷಂ ತಥೈವಾಯಂ ಭವಿಷ್ಯತಿ|| ಸಾಧರ್ಭವತಿ ಸಾಧುಂ ಚೇತ್ ಕರೋತಿ ಪುರುಷೋತ್ತಮಃ|| ಪಾಪೋಭವತಿ ಪಾಪಂ ಚೇತ್ ಸ ಕರೋತಿ ಜನಾರ್ದನಃ|| ತತ್ಪ್ರೇರಿತೇನ ಪುಣ್ಯೇನ ಪುಣ್ಯೋ ಭವತಿ ಮಾನವಃ|| ತತ್ಪ್ರೇರಿತೇನ ಪಾಪೇನ ತಥಾ ಪಾಪಃ ಪುಮಾನ್ ಭವೇತ್|| ಅಹಶ್ಚ ತತಾಮಾಧೀನಂ ಜೀವಮೇವಂ ಸದೈವಹಿ|| ತತಾಮಾದಸ್ಯ ಕಾಮಃ ಸ್ಯಾತ್ ಯಥಾ ಕಾಮಃ ತಥಾ ಭವೇತ್|| ಸಭಗವಾನ್ ಸ ಯಥಾಕಾರೀ ಯಥಾ ಕಾರಯತಿ ಯಥಾ ಚಾರೀ ಯಥಾಚಾರಮತಿ ತಥಾ ಭವತಿ|| ಸ ಭಗವಾನ್ ಯಥಾ ಕಾಮೋ ಭವತಿ ತಥಾ ಜೀವೋ ಭವತಿ ಇತ್ಥಂ ಕಾಮೋಸ್ಯ ಭೂಯಾತ್ ಇತಿ ಭಗವದಿಚ್ಛಾವಶಾತ್ ಅಸ್ಯ ಕಾಮೋ ಭವತಿ ಇತ್ಯರ್ಥಃ ಇತಿ|| ಏವಂ **ಆನಂದತೀರ್ಥತೀರ್ಥೀಯ ತೀರ್ಥಗುಹ್ಯಂ ಪ್ರಕಾಶಿತಮ್** ಕೇಚಿತದವಿಜ್ಞಾಯ ಶಮಯಾ ಭರ್ತರಿಪ್ರಿಯೇ|| ಪುಣ್ಯಪಾಪಾದಿ ಕರ್ತೃತ್ವೇ ಶಂಕತೇ ಮಂಡಬುದ್ಧಯಃ "ಪಾಪಂ ಕುರ್ಯಾರಮ್ ಇತಿ ಜೀವಸ್ಯ ಭೂಯಾತ್ ಕಾಮಃ ಇತ್ಯೇವ ಜೀವರೂಪೇಚ್ಛಾ ಪ್ರೇರಕೇಶೇಚ್ಛಾಕಾರಃ|| "ಇತಿ ಯತ್ಕಿಂಚದೇತತ್ ಪ್ರಧಾನ ಪುರುಷೇಶ್ವರಃ||" ಓಂ–ಮಹೋ ವಿಶ್ವಾ ಅಪ್ಪಣೋದಪಶ್ವಾ ಧೇನೂನಾ ಮಿಷುದಸೇ – ಓಂ"|| ಪ್ರಧಾನಪುರುಷಯೋಃ ತತ್ಕಾರ್ಯಾ ವಿದ್ಯಾನಿರಸನೇನೇಶ್ವರಃ" ||೧೫||

ಕನ್ನಡಾರ್ಥ : –

**"ಬಾಲಕನವತ್ಕೃತ ನಿಶ್ಚಯಃ"** ಎಂದು **ಶ್ರೀಮದ್ಭಾಗವತ** ವಚನ. ಬಾಲಕನು ಕರ್ಮಗಳನ್ನು ಕ್ರೀಡಾರೂಪವಾಗಿ ಮಾಡುತ್ತಿರುವನು. ಮಾನಾಪಮಾನಗಳ ಲಕ್ಷ್ಯವಿಲ್ಲ. ಫಲಾಫಲಗಳ ಅಪೇಕ್ಷೆ ಇಲ್ಲ. ಆ ರೀತಿಯಲ್ಲಿ ಕರ್ಮಗಳನ್ನುರಿಸಬೇಕೆಂದು ಭಾವ. **ಶ್ರೀ ಮದ್ಭಾಗವತ ತಾತ್ಪರ್ಯದಲ್ಲಿ** – **"ಆತ್ಮಕ್ರೀಡೋಹಿ ಆತ್ಮರತಃ ವಿಚರಾಮಿ ಹ ಬಾಲವತ್ ಬುಧಃ ಬಾಲವತ್ ಕ್ರೀಡೇತ್** – ಎಂದು

**ಏಕಾದಶ ಸ್ಕಂದೋಕ್ತಿ.** ಅಂದರೆ, ಬ್ರಹ್ಮಜ್ಞಾನಿಗಳು ಫಲಾಪೇಕ್ಷಾರಹಿತನಾಗಿ ಬಾಲಕರಂತೆ ಕರ್ಮಾನುಷ್ಠಾನರತರಾಗುವರೆಂದರ್ಥ.

**"ವಿಧಿನಿಷೇಧಗಳಾನುನೋಡದೆ"** – ಎಂಬ ಪದಪ್ರಯೋಗವಿದೆ. ಇದಕ್ಕೆ ಕರ್ಮಗಳನ್ನು ಆಚರಿಸುವಾಗ, ವಿಧಿನಿಷೇಧಗಳನ್ನೇನೂ ನೋಡದೆ (ಲೆಕ್ಕಿಸದೆ) ಮಾಡಬೇಕೆಂಬ ಅರ್ಥ ಕಾಣಿಸುವುದು. ಇದು ಆಪಾತಃ ತೋರಿದರೂ, ಕರ್ಮರಹಸ್ಯಾರ್ಥವು ಬೇರೆಯೇ ಇದೆ. **"ಯಃ ಶಾಸ್ತ್ರವಿಧಿ ಮುತ್ಸೃಜ್ಯ ವರ್ತತೇ ಕಾಮಕಾರತಃ"** – ಎಂಬ ಶಾಸ್ತ್ರವಿಧಾನಕ್ಕೆ ವಿರೋಧ ಉಂಟಾಗುತ್ತದೆ. ವಿಧಿನಿಷೇದಗಳನ್ನೇನೂ ಮೀರಿ ಸ್ವೇಚ್ಛೆಯಾಗಿ ಕರ್ಮಮಾಡಬಹುದೆಂಬುದು ದಾಸರಾಯರ ಭಾವವಲ್ಲ. **ಭಗವದ್ಗೀತೆಯ ದ್ವಿತೀಯಾಧ್ಯಾಯದಲ್ಲಿ** –

"ಕರ್ಮಣ್ಯೇವಾಧಿಕಾರಸ್ತೇ ಮಾಫಲೇಷು ಕದಾಚನ ।
ಮಾ ಕರ್ಮಫಲಹೇತುಃ ಭೂಃ ಮಾತೇ ಸಂಗೋಽಸ್ತ್ವ ಕರ್ಮಣಿಃ ॥

ಎಂಬ **ಭಗವದ್ವಚನವಿದೆ.**

ಅಂದರೆ, ಕರ್ಮಾನುಷ್ಠಾನದಲ್ಲಿ ಮಾತ್ರ ನಿನಗೆ ಅಧಿಕಾರ. ಫಲಪ್ರಾಪ್ತಿಯಲ್ಲಿ ಎಂದೆಂದಿಗೂ ಇಲ್ಲ. ಫಲಪ್ರದತ್ವ ನನ್ನದೇ. ಎಂದು ಶ್ಲೋಕದ ಭಾವಾರ್ಥವು.

ಜ್ಯೋತಿಷ್ಟೋಮಾದಿಯಾಗಗಳನ್ನು ಸ್ವರ್ಗಾಪೇಕ್ಷೆಗಾಗಿ ಮಾಡುತ್ತಾರೆ. ಇದು ವಿಧಿಕೋಟಿಯಲ್ಲಿ ಸೇರಿಲ್ಲ. ಸ್ವರ್ಗಾದಿ ಫಲಕಾಮನೆ ಕ್ಷುದ್ರವಾದದ್ದು. ಯಾವ ಕರ್ಮವನ್ನು ಮಾಡಿದರೂ ಅದರ ಮುಖ್ಯೋದ್ದೇಶ – ಶ್ರೀ ವಿಷ್ಣುಪ್ರೀತಿಯೇ ಹೊರತು ಅನ್ಯಥಾ ಇಲ್ಲ. ಭಗವದನುಗ್ರಹಪ್ರಾಪ್ತಿಗೆ ಜ್ಞಾನ–ಭಕ್ತಿ–ವೈರಾಗ್ಯಗಳು ಸಹಕಾರಿಸಾಮಗ್ರಿಗಳು. ಅವು ಕರ್ಮಗಳೇ ಹೊರತು, ಫಲರೂಪಗಳಲ್ಲ. ಇವುಗಳನ್ನು ಬಿಡುವುದು ಸಹಜ. ಕರ್ಮಫಲಗಳ ಅಪೇಕ್ಷಾರಹಿತನಾಗಿ ಕರ್ಮಾನುಷ್ಠಾನವನ್ನು ಕೇವಲ **ಭಗವತ್ಪೂಜೆ** ಎಂದು ಆಚರಿಸಬೇಕು–ಇದೇ ದಾಸವರ್ಯರ ಹೃದ್ಗತ ಭಾವಾರ್ಥವು. ॥೧೫॥

### (4) ಶ್ರೀಗುರುಹೃದಯಪ್ರಕಾಶಿಕೆ ವ್ಯಾಖ್ಯಾನ :-

ಮಾಣವಕ ಎಂಬ ಹುಡುಗನು ತತ್ಫಲಗಳನುಸಂಧಾನವಿಲ್ಲದೆ ಕರ್ಮಗಳ ಸ್ವೇಚ್ಛಾನುಸಾರ ಮಾಡಿ ಮೋದಿಸುವಂತೆ ಅಂದರೆ, ಆಟದಿಂದ ಇನ್ನೊಂದು ಲಾಭಾಪೇಕ್ಷಿಸದೆ, ಆಟವೇ ಸುಖರೂಪವಾಗಿ ಎಣಿಸುವಂತೆ, ನಿತ್ಯದಲ್ಲೂ ಶ್ರೀಹರಿಯೇ ಸ್ವತಂತ್ರನೆಂಬ ಜ್ಞಾನಪೂರ್ವಕವಾಗಿ , ವಿಧಿ-ನಿಷೇಧಗಳೇನು ನೋಡದೆ ಕರ್ಮಮಾಡು ಅಂದರೆ, ಸ್ಮರ್ತವ್ಯಃ ಸತತಂ ವಿಷ್ಣುರ್ವಿಸ್ಮರ್ತವ್ಯೋ ನಜಾತುಚಿತ್ ಎಂಬ ಹರಿಸ್ಮೃತಿ-ವಿಸ್ಮೃತಿಯೇ ಮುಖ್ಯ ವಿಧಿ-ನಿಷೇಧಗಳು. ಇತರ ಬಾಹ್ಯವಿಧಿ ನಿಷೇಧಗಳು ಕಾಲದೇಶಾದಿಭೇದದಿಂದ ವ್ಯತ್ಯಾಸವಾಗುವುದರಿಂದ ಅಮುಖ್ಯಗಳೆಂದೆನಿಸಿ, ಯಥಾಯೋಗ್ಯ ಕ್ರಿಯೆಗಳನ್ನು ದೇವರ ಅಧೀನವೆಂದರ್ಪಿಸಿ, ಪ್ರಧಾನ ಪುರುಷೇಶನಲಿ ಅಂದರೆ, ಜಡವಾದ ದೇಹ ಅದರ ಕ್ರಿಯೆಕ್ಕೂ, ಪುರುಷನೆಂಬ ಜೀವ ತತ್ಕ್ರಿಯಕ್ಕೂ ಸಹ ಸ್ವಾಮಿಯಾದ ದೇವರಲ್ಲಿ ದೃಢಸ್ನೇಹರೂಪ ಭಕ್ತಿಯನ್ನೇ ಪ್ರಾರ್ಥಿಸಿ ಸ್ತುತಿಸು.

ನ ಮೇ ಮಾನಾವಮಾನೌಸ್ತಃ ನ ಚಿಂತಾ ಗೇಹ ಪುತ್ರಿಣಾಂ ।

ಆತ್ಮಕ್ರೀಡೋ ಹ್ಯಾತ್ಮರತೋ ವಿಚಾರತಮಾಹ ಬಾಲವತ್- ಎಂಬ ಭಾಗವತಾರ್ಥ ವಿವರಿಸಲ್ಪಟ್ಟಿತು ||೧೫||

## ಸರ್ವವ್ಯಾಖ್ಯಾನಸಾರಸಂಗ್ರಹ

ಪ್ರತಿಫಲಾಪೇಕ್ಷಾರಹಿತನಾಗಿ, ನಿಷ್ಕಾಮನಬುದ್ಧಿಯಿಂದ, ಕೇವಲ ಭಗವತ್ಪ್ರೀತಿಯಾಗಿ ಕರ್ಮಗಳನ್ನು ಆಚರಿಸಬೇಕೆಂದು ತಿಳಿಸುತ್ತಾರೆ- ಮಾಣವಕ-ಎಂಬ ಪ್ರಸಕ್ತ ೧೫ನೆಯ ಪದ್ಯದಿಂದ.

೧. ಏನೂ ಅರಿಯದ ಮುಗ್ಧಬಾಲಕನಿಗೆ ಮಾಣವಕ ಎಂದು ಹೆಸರು. ಬಾಲಕರ

ಮನಸ್ಸು ಕಲ್ಮಷರಹಿತವಾಗಿರುವುದು. ಮುಗ್ಧಮನಸ್ಸುಳ್ಳವರು. ಬಾಲಕರಿಗೆ ಕ್ರೀಡೆಯಾಡುವುದು ಸಹಜವಾದ ಪ್ರವೃತ್ತಿ. ಆಟವಾಡುತ್ತಿರುವಾಗ, ಮುಗ್ಧಮನಸ್ಸಿನ ಬಾಲಕರಿಗೆ, ಅದರಿಂದಾಗುವ ಪ್ರಯೋಜನರೂಪವಾದ ಫಲಾಪೇಕ್ಷೆ ಇರುವುದಿಲ್ಲ. ಕೇವಲ ತಮ್ಮ ಸಂತೋಷಕ್ಕಾಗಿ ಆಟಗಳನ್ನು ಆಡುವರು. ಅಂತೆಯೇ ಬ್ರಹ್ಮಜ್ಞಾನಿಗಳ ಚಿತ್ತವು ಮಾಣವಕನ ಮನಸ್ಸಿನಂತೆ ಕಲುಷದೂರವಾಗಿರುವುದು. ಅವರು ಆಚರಿಸುವ ಕರ್ಮಗಳೆಲ್ಲವೂ ಕೇವಲ ಭಗವತ್ಪ್ರೀತಿಗಾಗಿಯೇ ಹೊರತು, ಫಲ ಕಾಮನೆಯಿಂದಲ್ಲ. ಸ್ವಾನಂದಪ್ರಾಪ್ತಿಯೇ ಕರ್ಮಾಚರಣೆಗಳ ಮುಲೋದ್ದೇಶ. **ಮಾಣವಕ** ಎಂಬ ಶಬ್ದಕ್ಕೆ 'ಬ್ರಹ್ಮಚಾರಿ''– ಎಂತಲೂ ಇನ್ನೊಂದು ಹೆಸರುಂಟು. ಬ್ರಹ್ಮಚಾರಿಯಾದವನು ಬ್ರಹ್ಮಚರ್ಯಾಶ್ರಮೋಚಿತವಾದ ಕರ್ಮಾನುಷ್ಠಾನಮಾಡುತ್ತಾ, ಗುರುಶುಶ್ರೂಷಾ, ವೇದಾಧ್ಯಯನ ಇತ್ಯಾದಿ ಕರ್ಮಗಳಲ್ಲಿ ರತನಾಗಿರುತ್ತಾನೆ. ನಿಷ್ಕಾಮಭಾವನೆಯಿಂದ ಕರ್ಮಗಳನ್ನು ಆಚರಿಸುವನು. ಆ ಕರ್ಮಗಳ ಫಲರೂಪವಾದ ಪ್ರಯೋಜನಾಪೇಕ್ಷೆ ಇರುವುದಿಲ್ಲ. ಅಂತೆಯೇ ಮುಗ್ಧ ಬಾಲಕನಂತೆ, ಬ್ರಹ್ಮಚಾರಿಯಂತೆ, ಬ್ರಹ್ಮಜ್ಞಾನಿಗಳು ಆಚರಿಸುವ ಕರ್ಮಗಳ ರಹಸ್ಯ.

ಪ್ರಮಾಣ:–

(೧) **"ಬುಧೋ ಬಾಲಕವತ್ ಕ್ರೀಡೇತ್ ಆತ್ಮಕ್ರೀಡ ಆತ್ಮರತಃ ವಿಚಾರೌ ಮಾಹ ಬಾಲವತ್ "**

**–ಎಂದು ಭಾಗವತ ಏಕಾದಶ ಸ್ಕಂಧದ ವಚನ.**

ಬುಧರು, ಅಂದರೆ ಬ್ರಹ್ಮಜ್ಞಾನಿಗಳು ಬಾಲಕನಂತೆ (ಮಾಣವಕನಂತೆ) ವಿಹರಿಸುತ್ತಾರೆ. ಅವಧೂತಚರ್ಯೆಯಲ್ಲಿರುವ ಅವರು ಕರ್ಮಗಳನ್ನು ಕೇವಲ ಆತ್ಮಾನಂದಕ್ಕಾಗಿ ಆಚರಿಸುವರು. ಆ ಕರ್ಮಗಳ ಮೂಲಗುರಿ ಭಗವತ್ಪ್ರೀತಿಮಾತ್ರ. ಫಲಾಪೇಕ್ಷಾರಹಿತರು. ಮಾಣವಕನು ತತ್ಫಲಗಳ ಅನುಸಂಧಾನವಿಲ್ಲದೆ ಸ್ವೇಚ್ಛಾನುಸಾರ ಆಟಗಳನ್ನು

ಆಡುವಂತೆ, ಬ್ರಹ್ಮಜ್ಞಾನಿಗಳು ಕರ್ಮಜನ್ಯ ಫಲಗಳಲ್ಲಿ ಕಾಮನೆ ಇಡದೆ, ಬಿಂಬನಾದ ಶ್ರೀಹರಿಯು ಆಡಿಸಿದಂತೆ, ಮನಬಂದ ತೆರದಲ್ಲಿ ಕರ್ಮಗಳನ್ನು ಮಾಡುತ್ತಾ, ಕೇವಲ ಅವಧೂತಚರ್ಯೆಯಲ್ಲಿದ್ದು, ಸಮಸ್ತಕರ್ಮಗಳನ್ನು (ವಿಧಿಯಾಗಲೀ, ನಿಷೇಧರೂಪವಾದ ಕರ್ಮಗಳಾಗಲೀ), ಬಿಂಬವಾದ ಶ್ರೀಹರಿಯೇ ತಾನೇ ಮಾಡಿಸುತ್ತಿರುವನೆಂಬ ಉತ್ತಮಾನುಸಂಧಾನದಿಂದ ಸತತ ಆನಂದಮಗ್ನರಾಗಿರುವರು. ಸರ್ವಕರ್ಮಸಮರ್ಪಣೆಯನ್ನು ಸರ್ವೇಶನ ಚರಣಪಂಕಜಗಳಿಗೆ ಮಾಡುತ್ತಾ, ಕರ್ಮಫಲಗಳಿಂದ ನಿರ್ಲಿಪ್ತರಾಗಿರುತ್ತಾರೆ. ಇದೆ ಕರ್ಮಾಚರಣೆಯ ರಹಸ್ಯಾರ್ಥ. ಇದಕ್ಕೆ ಜಡಭರತನೇ ದಿವ್ಯದೃಷ್ಟಾಂತ.

೨. ಕರ್ಮಾನುಷ್ಠಾನವು ಸುಜ್ಞಾನಪ್ರಾಪ್ತಿಗೆ ಕಾರಣವಾಗಿರಬೇಕು. ಸುಜ್ಞಾನವು ಶ್ರೀಶನ ಪಾದಾರವಿಂದಗಳಲ್ಲಿ ನಿರತಿಶಯವಾದ, ಅವಿಚ್ಛಿನ್ನವಾದ, ಮಹಾತ್ಮ್ಯ ಜ್ಞಾನಪೂರ್ವಕವಾದ, ಸ್ನೇಹರೂಪವಾದ ಭಕ್ತಿ ಎಂಬ ದೈವೀಸಂಪತ್ತಿಗೆ ಕಾರಣವಾಗಬೇಕು. ಸುಜ್ಞಾನದಿಂದ ಭಕ್ತಿ ಪ್ರಾಪ್ತಿ. ದೃಢವಾದ ನಿಷ್ಕಲ್ಮಷವಾದ ನಿಷ್ಕಾಮಭಕ್ತಿಯಿಂದ ವೈರಾಗ್ಯಬುದ್ಧಿ ಸಹಜವಾಗಿ ಜನಿಸುವುದು. . ಜ್ಞಾನ, ಭಕ್ತಿ, ವೈರಾಗ್ಯ ಮಾಧ್ಯಮಗಳ ದ್ವಾರಾ. ಭಗವದನುಗ್ರಹ ಪ್ರಾಪ್ತಿ. ಭಗವದನುಗ್ರಹದಿಂದ ಅಪರೋಕ್ಷಜ್ಞಾನಪ್ರಾಪ್ತಿ. ಅದರಿಂದ ಸಂಚಿತಾಗಾಮಿಕರ್ಮಗಳ ನಾಶ. ಅವಶಿಷ್ಟ ರೂಪರಾದ ಪ್ರಾರಬ್ಧ ಕರ್ಮಭೋಗವನ್ನು ಕೇವಲ ಭಗವದರ್ಪಣಾನುಸಂಧಾನದಿಂದ ಮಾಡುತ್ತಾ, ಜೀವನ್ಮುಕ್ತ ಸ್ಥಿತಿಯನ್ನೈದಿ, ಬ್ರಹ್ಮಣಾಸಹ ವಿರಜಾನದಿಯ ಸ್ನಾನದಿಂದ ಲಿಂಗಭಂಗ ಹೊಂದಿ, ತದ್ವಾರಾ ಕರ್ಮವಿಮೋಚನೆಯನ್ನು ಹೊಂದಿ, ಕೊನೆಯಲ್ಲಿ ಶ್ರೀವಾಸುದೇವನಾಮಕ ಪರಮಾತ್ಮನ ಪರಮಾನುಗ್ರಹದಿಂದ ರಮಾದ್ವಾರಾ. ಸ್ವರೂಪಗತ ಆನಂದಪ್ರಾಪ್ತರೂಪವಾದ ನಿತ್ಯಸುಖರೂಪವಾದ ಮುಕ್ತಿಯನ್ನೈದುವರು. ಇದೇ ಸಕಲ ಕರ್ಮಗಳ ಆಚರಣೆಯಲ್ಲಿ ಅಡಗಿರುವ ಮರ್ಮ. ಕರ್ಮದ ಮರ್ಮವನ್ನು ಜ್ಞಾನಪೂರ್ವಕ ಅರಿತ ಬ್ರಹ್ಮಜ್ಞಾನಿಗಳಾದ ಅವಧೂತರಿಗೆ, ಇದು

ವಿಧಿ (ಅತ್ಯಗತ್ಯವಾಗಿ ಶಾಸ್ತ್ರವಿಧಿಯಂತೆ ಮಾಡಲೇಬೇಕಾದ ಕರ್ಮ). ಇದು ನಿಷೇಧ (ಶಾಸ್ತ್ರಸಮ್ಮತವಲ್ಲದ ತ್ಯಜಿಸಬೇಕಾದ ಕರ್ಮಗಳು) ಎಂದೇನೂ ನೋಡದೆ, ವಿಧಿನಿಷೇಧರೂಪವಾದ ಸಮಸ್ತಕರ್ಮಗಳನ್ನು ಲಿಂಗದೇಹಗತ ಕರ್ಮಬೀಜಗಳಿಗೆ ಕಾರಣಗಳಾದ ಗುಣತ್ರಯಗಳ ವ್ಯಾಪಾರವನ್ನು ಕರ್ಮಪತಿಯಾದ ಬಿಂಬನೇ ಮಾಡಿ ಮಾಡಿಸುತ್ತಿರುವನೆಂಬ ಸುಜ್ಞಾನ ಅವರಿಗೆ ಇರುವುದರಿಂದ, ಅಂತಹ ಅವಧೂತರು ವಿಧಿಕರ್ಮಗಳಿಂದ ಜನಿತವಾದ ಪುಣ್ಯಫಲಗಳಿಂದಗಾಲೀ, ನಿಷೇಧ ಕರ್ಮಗಳ ಫಲರೂಪವಾದ ಪಾಪಗಳಿಂದಲಾಗಲೀ ನಿರ್ಲಿಪ್ತರಾಗಿರುವರು. ಅವರಿಗೆ ಕರ್ಮಲೇಪವಿಲ್ಲ.

೩. ಬಿಂಬನಾದ ಶ್ರೀ ಹರಿಯು ಕರ್ಮಪತಿಯು. ಅವನೇ ಸರ್ವಕರ್ಮಪ್ರೇರಕನು. ಕರ್ಮಾಂತರ್ಗತನಾಗಿ, ಕರ್ಮಶಬ್ದವಾಚ್ಯನಾಗಿರುವುದುರಿಂದ, ಅವನೇ ಕರ್ಮಪ್ರಧಾನಪುರುಷನು. ಅಂದರೆ, ಸರ್ವಕರ್ಮಗಳಿಗೂ ಪ್ರಧಾನಕಾರಣನಾಗಿದ್ದಾನೆ. ಅಂತಹ ಆದಿಮೂಲನಾದ ಪುರುಷನಾಮಕ ಪರಮಾತ್ಮನಲ್ಲಿ ಭಕ್ತಿಭಾಗ್ಯವನ್ನು ಮಾತ್ರ ಬೇಡು – ಎಂದಿದ್ದಾರೆ ದಾಸರಾಯರು.

**ಪ್ರಮಾಣ : –**

**"ಭಕ್ತ್ಯಾ ತ್ವದೀಯ ಚರಣಾಂಬುಜಮಾದರೇಣ ಶ್ರೀ ಶ್ರೀನಿವಾಸ ಪುರಷೋತ್ತಮ ದೇಹಿ ದಾಸ್ಯಮ್ " – ಎಂದು ಮಹಾಭಾರತೋಕ್ತಿ.**

ಭಕ್ತಿ ಎಂಬುದು ಭಾಗವತರ ಸಹಜವಾದ ಧರ್ಮವೇ ಹೊರತು ಫಲವಲ್ಲ. ಇದರಿಂದ ಬೇಡುವುದು, ಕಾಮ್ಯಕರ್ಮವಲ್ಲ. ಭಕ್ತಿಯಿಂದ ಪರವಶನಾಗಿ, ಅ ಅಪಾರಮಹಿಮನ ಗುಣಗಳನ್ನು ಕೊಂಡಾಡು ಎಂದಿದ್ದಾರೆ. ||೧೫||

## ಪದ್ಯ ೧೬

**ಮೂಲ :–**

ಹಾನಿವೃದ್ಧಿ ಜಯಾಪಜಯಗಳು
ಏನುಕೊಟ್ಟುದು ಭುಂಜಿಸುತ ಲ
ಕ್ಷ್ಮೀನಿವಾಸನ ಕರುಣವನೆ ಸಂಪಾದಿಸನುದಿನದಿ
ಜ್ಞಾನಸುಖಮಯ ತನ್ನವರ ಪರ
ಮಾನುರಾಗದಿ ಸಂತೈಪ ದೇ
ಹಾನುಬಂಧಿಗಳಂತೆ ಒಳಹೊರಗಿದ್ದು ಕರುಣಾಳು ॥೧೬॥

**ಅವತರಣಿಕೆ :–**

ನಮ್ಮ ನಿತ್ಯ ಜೀವನದಲ್ಲಿ ನಮ್ಮ ಅನುಭವಕ್ಕೆ ಒಂದು ಒದಗುತ್ತಿರುವ ದ್ರವ್ಯನಾಶ. ಮರಣದೆಸೆಯಿಂದಾಗಿ ಬಂಧುಬಾಂಧವರ ವಿಯೋಗ ಇತ್ಯಾದಿ ಹಾನಿಗಳು, ದ್ರವ್ಯಸಂಪಾದನೆ, ಸನ್ಮಾನ, ಜನನ ಇತ್ಯಾದಿ ವೃದ್ಧಿಗಳು, ಸೋಲು–ಗೆಲವು ಎಂಬ ದ್ವಂದ್ವಗಳು, ಇತ್ಯಾದಿ ಪ್ರಸಂಗವಿಶೇಷಗಳು ರಮಾರಮಣನಾದ ಶ್ರೀಹರಿಯು ಕೊಟ್ಟದ್ದು ಎಂಬ ಅನುಸಂಧಾನದಿಂದ, ಹಿಗ್ಗದೇ ಕುಗ್ಗದೇ. ಸ್ಥಿತಪ್ರಜ್ಞನಾಗಿದ್ದು, ಸಂತೋಷದಿಂದ ಸ್ವೀಕರಿಸು. ಅದರಿಂದ ಭಗವದನುಗ್ರಹವನ್ನು ಸಂಪಾದಿಸು. ಜ್ಞಾನಾನಂದಮಯನಾದ, ಆ ಪರಾತ್ಪರನು ತನ್ನ ಭಕ್ತರಿಗೆ ಒದಗುವ ಆಪತ್ತುಗಳನ್ನು ಪರಿಹರಿಸಿ, ಪಾಪಪ್ರಕ್ಷಾಳನಗೈದು, ಆಪ್ತಬಂಧುವಿನಂತೆ, ದೇಹದ ಒಳಗೆ ಬಂಟನಾಗಿ ಅಂತರ್ಯಾಮಿಯಾಗಿದ್ದು ಹೊರಗೆ ವ್ಯಾಪ್ತರೂಪಗಳಿಂದ ವಿತತನಾಗಿದ್ದು. ಆ ಕರುಣಾಮಯನು ಸದಾ ಸಂರಕ್ಷಿಸುತ್ತಿರುವನು ಎಂದು ತಿಳಿಸುತ್ತಾರೆ –**ಹಾನಿವೃದ್ಧಿ** – ಎಂಬ ಪ್ರಸಕ್ತ ಸಂಧಿಗತ ೧೬ನೆಯ ಈ ಪದ್ಯದಿಂದ ॥೧೬॥

ಪ್ರತಿಪದಾರ್ಥ :–

**ಹಾನಿ** =ಜೀವನದಲ್ಲಿ ಉಂಟಾಗುವ ನಷ್ಟ–ದ್ರವ್ಯ ಧಾನ್ಯಾದಿಗಳ ನಷ್ಟ ಆರೋಗ್ಯಹಾನಿ, ಇಂದ್ರಿಯಗಳ ಕುಂದುವಿಕೆ, ಮರಣದಿಂದ ಆಪ್ತರ ವಿಯೋಗ– ಇತ್ಯಾದಿಗಳೆಲ್ಲವೂ ಹಾನಿಗಳೆನಿಸುವುವು. **ವೃದ್ಧಿ** = ಹೆಚ್ಚುವುದು – ದ್ರವ್ಯಸಂಪಾದನೆ, ಭೂಪ್ರಾಪ್ತಿ, ಅನುಕೂಲಳಾದ ಪತ್ನಿ, ವಿಧೇಯರಾದ ಪುತ್ರರು, ಇತ್ಯಾದಿ ವೃದ್ಧಿಗಳು. **ಜಯ** = ಜೀವನದಲ್ಲಿ ನಾವು ಹಿಡಿದ ಕಾರ್ಯಸಾಧನೆ, ಗೆಲವು ಇತ್ಯಾದಿ. **ಅಪಜಯ** = ಅವಮಾನ, ಸೋಲು ಇತ್ಯಾದಿ. ಏನು **ಕೊಟ್ಟದ** = ಹೀಗೆ ಹಾನಿಯೇ ಆಗಲಿ, ವೃದ್ಧಿಯೇ ಬರಲಿ, ಜಯವೇ ಲಭಿಸಲಿ, ಅಪಜಯವೇ ಸಂಭವಿಸಲಿ ಏನೇನೂ ಜೀವನದಲ್ಲಿ ದ್ವಂದ್ವಗಳು ಬಂದರೂ ಸರಿ. ಅವೆಲ್ಲವೂ ಭಗವದ್ದತ್ತವೆಂದು ಭಾವಿಸುತ್ತಾ, **ಭುಂಜಿಸುತ** = ಆ ದ್ವಂದ್ವಗಳನ್ನು ಸಹಿಸಿಕೊಂಡು, ನೆಮ್ಮದಿಯಿಂದ ಸ್ವೀಕರಿಸುತ್ತಾ, **ಲಕ್ಷೀನಿವಾಸನ** = ಶ್ರೀಲಕ್ಷ್ಮೀದೇವಿಯನ್ನು ತನ್ನ ವಕ್ಷಸ್ಥಳದಲ್ಲಿ ಧರಿಸಿರುವ, ರಮಾಪತಿಯ, **ಕರುಣವನು** = ಸಮಚಿತ್ತನಾಗಿ ಭಗವಂತನ ದಯೆಯನ್ನು, **ಅನುದಿನದಿ** = ಪ್ರತಿನಿತ್ಯದಲ್ಲೂ, **ಸಂಪಾದಿಸು** = ಹೊಂದುವವನಾಗು. **ಜ್ಞಾನಸುಖಮಯ** = ಅಪ್ರಾಕೃತವಾದ ಜ್ಞಾನ, ಆನಂದ ಇವುಗಳಿಂದ ಪರಿಪೂರ್ಣನಾದ ಆ ಸಚ್ಚಿದಾನಂದಾತ್ಮಕನು, **ತನ್ನವರ** =ತನ್ನ ಭಕ್ತರ, –**ದೇಹಾನುಬಂಧಿಗಳಂತೆ** = ದೇಹಾನುಬಂಧಿಗಳಾದ ಪರಮಾಪ್ತ ಬಂಧುವಿನಂತೆ, (ಅಥವಾ ನೇತ್ರ, ಶ್ರವಣ, ಕರಚರಣಾದ್ಯವಯವಗಳು ದೇಹಕ್ಕೆ ಸಂಭಂಧಿಸಿರುವ, ದೇಹಕ್ಕೆ ಅಪಾಯಗಳು ಬಾರದಂತೆ ಹೇಗೆ ರಕ್ಷಿಸುತ್ತವೆಯೋ, ಅಂತೆ) **ಕರುಣಾಳು** = ದಯಾಮಯನಾದ ಶ್ರೀಪರಮಾತ್ಮನು, **ಒಳ ಹೊರಗಿದ್ದು** =ಜೀವಾಂತರ್ಯಾಮಿಯಾಗಿದ್ದು, ಒಳಗೆ, ಹೊರಗೆ ಸ್ಥೂಲದೇಹಗತ ಇಂದ್ರಿಯಗಳಲ್ಲಿ ವ್ಯಾಪ್ತನಾಗಿದ್ದು, ಸುತ್ತಮುತ್ತಲಿನ ಪರಿಸರದಲ್ಲಿ ಹಬ್ಬಿ ವ್ಯಾಪಿಸಿಕೊಂಡಿದ್ದು, **ಸಂತೈಪ** =ಭಕ್ತರಿಗೆ ಅಡಿಗಡಿಗೆ ಬರುವ ಆಪತ್ತುಗಳನ್ನು ಪರಿಹರಿಸಿ, ಪಾಪಕ್ಷಾಳನಗೈದು, ಶುದ್ಧರನ್ನಾಗಿಸಿ ಉದ್ಧರಿಸುವನು.॥೧೬॥

## ವ್ಯಾಖ್ಯಾನಗಳು

### (೧) ಶ್ರೀಸಂಕರ್ಷಣಒಡೆಯರ ವ್ಯಾಖ್ಯಾನ :—

ಪರಮಾತ್ಮ ಕರುಣ ಸಂಪಾದಿಸಬೇಕಂತ ಹೇಳುತ್ತಾರೆ.

ಪ್ರಾಕೃತ ವನಿತಾದಿ ದ್ರವ್ಯ ಧಾನ್ಯಾದಿ ಇವುಗಳಿಂದ ಭೋಗಿಸತಕ್ಕ ಭೋಗಗಳು ಹಾನಿ ಮಾಡಿದ ಕಾಲಕ್ಕೂ, ಪೂರ್ವೋಕ್ತಗಳು ಅತಿಶಯವಾಗಿ ವೃದ್ಧಿ ಮಾಡಿದ ಕಾಲಕ್ಕೂ, ಮನೋನುಸಾರವಾಗಿ ಹಿಡಿದ ಕಾರ್ಯ ಜಯ ಮಾಡಿದಕಾಲಕ್ಕೂ, ಹಿಡಿದ ಕಾರ್ಯ ಅಪಜಯ ಮಾಡಿದಕಾಲಕ್ಕೂ, ಪೂರ್ವೋಕ್ತಗಳೊಳಗೆ ಏನು ಕೊಟ್ಟ ಕಾಲಕ್ಕೂ ಭೋಜನ ಮಾಡತಾ ಎಂದರೆ, ಸುಖ ಭೋಗಿಸೋ ಕಾಲ ದೇವರು ಪ್ರಾಪ್ತಮಾಡಿದ ಕಾಲದಲ್ಲಿ ಅದನ್ನು ಬ್ಯಾಡಾ ಅಂದರೆ ಬಿಡೋದಿಲ್ಲ. ಉಣಿಸಿಬಿಡುತ್ತಾನೆ. ತದ್ವತ್ ದುಃಖವೂ. ಆದ್ದರಿಂದ ಸುಖ–ದುಃಖಾದಿಗಳು ಪ್ರಾಪ್ತವಾದದ್ದು ಬ್ಯಾಡ ಬೇಕು ಎಂಬ ಇಚ್ಛಾಯುಕ್ತನಾಗದೇ ಈಶಸಂಕಲ್ಪವೆಂದು ಭೋಜನಮಾಡತಾ, ಪ್ರತಿದಿನದಲ್ಲೂ, ಲಕ್ಷ್ಮೀದೇವರನ್ನ ಹೃದಯದಲ್ಲಿ ನಿವಾಸರಾಗಿ ಮಾಡಿ ಇರುವ ಪರಮಾತ್ಮನ ಅಂತಃಕರಣವಿರುತ್ತದೆ. ಆದ್ದರಿಂದ ಅಂಥಾ ಸಮಚಿತ್ತನಾಗಿ ಪರಮಾತ್ಮನ ಕರುಣಸಂಪಾದಿಸು. ಇಂಥಾ ತನ್ನವರ ವಿಶೇಷಜ್ಞಾನದಿಂದ ಪ್ರಚುರವಾದವರ, ಸುಖಸ್ವರೂಪನಾದ, ದಯಾಳುವಾದ ಪರಮಾತ್ಮ ಅತ್ಯಂತವಾಗಿ ಅನುರಾಗದಿಂದ ದೇಹಕ್ಕೆ ಅನುಬಂಧ ಸಾಂಕೇತವಾದ ಕರ ನೇತ್ರ ಶ್ರವಣ ಪಾದ ಇವುಗಳು ದೇಹಕ್ಕೆ ಅಪಾಯಗಳು ಬಾರದಂತೆ ರಕ್ಷಿಸುತ್ತಾ ಇರುತ್ತವೆ. ಇವುಗಳಂತೆ ದೇಹದ ಒಳಗೆ ಹೊರಗೆ ಇದ್ದು ಮತ್ತು ಜೀವನ ಒಳಗೆ ಮತ್ತು ಹೊರಗೆ ಇರುವ ಸ್ಥೂಲದೇಹದ ಒಳಗೆ ಇದ್ದು ದೋಷದೂರನ್ನಾಗಿ ಮಾಡಿ, ಜ್ಞಾನ ಭಕ್ತಿ ವೈರಾಗ್ಯಗಳ ಅತಿಶಯವಾಗಿ ಕೊಟ್ಟು ಸಂರಕ್ಷಣೆ ಮಾಡುತ್ತಾನೆ. ॥೧೬॥

(೨) ಭಾವ ಪ್ರಕಾಶಿಕೆ:—

ವೃದ್ಧಿ, ಕ್ಷಯ, ಜಯ, ಪರಾಜಯ ಮೊದಲಾದುವುಗಳಲ್ಲಿ ಯಾವ ಕಾಲದಲ್ಲಿ ಈಶ್ವರ ಸಂಕಲ್ಪದಿಂದ ಏನು ಬರುವುದೋ—

**"ಈಶಾವಾಸ್ಯಮಿದಂ ಸರ್ವಂ ಯಜ್ಞಗತ್ಯಾಂ ಜಗನ್ಮನಃ ತೇನತ್ಯಕ್ತೇನ ಭುಂಜೀಥಾ। ಮಾಗೃಧಃ ಕಸ್ಯಚಿದ್ಧನ ಪತ"— ಎಂಬ ಈಶಾವಾಸ್ಯೋಪನಿಷತ್ತಿನ ವಚನಮ್॥**

ವಾಕ್ಯದಂತೆ, ಬಂದುದನ್ನು ಅನುಭವಿಸುತ್ತ, ಶ್ರೀಪರಮಾತ್ಮನ ಅನುಗ್ರಹವನ್ನು ಮಾತ್ರ ಸರ್ವದಾ ಸಂಪಾದಿಸಬೇಕು. ಹಾಗೆ ಮಾಡುವವರನ್ನು ಜ್ಞಾನಾನಂದಸ್ವರೂಪನಾದ ಶ್ರೀಹರಿಯು, ಕರುಣಾಳುವಾದ್ದರಿಂದ, ಅತಿಸಮೀಪ ಬಂಧುಗಳಂತೆ, ಅವರ ಒಳಗೂ ಹೊರಗೂ ಇದ್ದು, ಪರಮಪ್ರೀತಿಯಿಂದ ಸಂರಕ್ಷಿಸುವನು. ॥೧೬॥

(2) ಈ ಪದ್ಯಕ್ಕೆ ಭಾವದರ್ಪಣಟೀಕಾರಾರರು ವ್ಯಾಖ್ಯಾನವನ್ನು ಕೊಟ್ಟಿಲ್ಲ.

(2) ಶ್ರೀ ವ್ಯಾಸದಾಸ ಸಿದ್ಧಾಂತ ಕೌಮುದೀ (ಸಂಸ್ಕೃತ ಮೂಲ):—

"ಹಾನಿ"—ಇತಿ ಉಪಲಕ್ಷಣ ಹಾನಿ ಪದಮ್ ಪ್ರಕೃತಿ ದ್ವಂದ್ವ ಜಾತಾನಿ॥ "ಭುಂಜಿಸು"—"ಸಮದುಃಖಸುಖೋ ಭವ" "ತತ್ಕೃತೋತ್ರೇಕ ವಿಷಾದಶೂನ್ಯಃ ಸುಖೇ ದುಃಖೇ ಚ ವಿಷ್ಣು ಭಕ್ತ್ಯಾ ಸಮಃ"—ಇತಿ ತಾತ್ಪರ್ಯಾ ದೌ— "ಸಮದುಃಖ ಸುಖಧೀರಂ"—ಇತಿ ಸದ್ವ್ಯಾರ್ಥವರ್ಣನಾತ್॥ ಏಕವಿಂಶಾಧ್ಯಾಯ **ವಿಷ್ಣು ರಹಸ್ಯೇಚ** — "ಯದ್ಯದ್ ದುಃಖಮಯಂ ಕಾಲೇ ಪ್ರಾಪ್ನುಯಾತ ತದೈವ ಹೀ॥ ಭಾವಯೇತ್ ಭಕ್ತಿಮಾನ್ ವಿಷ್ಣೌ ಏತಸ್ಮಾತ್ ಅಧಿಕ ಮಮ॥ ಭಯಂ ದುಃಖಂ ದಯಾಲುಃ ಮೇ ಭೋಜಯಿತ್ಯಲ್ಪಮೇವ ಹಿ॥ ಅಪರಾಧ ಸಹಸ್ರಾಣಾಂ ಕರ್ತಾರಂ ದಯಯಾ ಹರಿಃ॥ ಅಲ್ಪೀಕೃತ್ಯೈವ ದುಃಖಾನಿ ಭೋಜಯಿತ್ಯೇವ ನಾನ್ಯಥಾ ಇತ್ಥಂ ಮಹಾವಿಪನ್ಮಗ್ನಃ ನ ಚಲೇತ್ ಹರಿಭಕ್ತಿತಃ॥ ಸ ಏವ ದೃಢಭಕ್ತಿಃ ಸ್ಯಾತ್ ಪಾತ್ರಂ ಮುಕ್ತೇಃ ಸ ಏವ ಹಿ॥ ದುಃಖೀ ದುಃಖಾದಿಕಾನ್ ಪಶ್ಯೇತ್ ನೈವ ಪಶ್ಯೇತ್

ಸುಖಾಧಿಕಾನ್ ಆತ್ಮಾಸಾಂ ಮಾನ ಶೋಕಾಭ್ಯಾಂ ಸತತಂ ವಿನಿವರ್ತಯೇತ್''– ಇತಿ ||೧೬||

ಕನ್ನಡಾರ್ಥ :–

"ಹಾನಿ''– ಎಂಬ ಪದವು ಸುಖದುಃಖ, ಮಾನಾಪಮಾನ ಇತ್ಯಾದಿ ಸಕಲದ್ವಂದ್ವಗಳ ಸಂಗ್ರಹೀತಾರ್ಥಸೂಚಕವಾಗಿದೆ. "ಭುಂಜಿಸು''–ಎಂದರೆ, ಆ ದ್ವಂದ್ವಗಳಿಂದ ಉಂಟಾಗುವ ಸುಖದುಃಖಗಳಲ್ಲಿ ಸಮತ್ವಬುದ್ಧಿಯುಳ್ಳವನಾಗೆಂದರ್ಥ. ವೈಷಯಿಕ ದುಃಖವು ಯಾರಿಂದಲೂ ಅಪೇಕ್ಷಿತವಲ್ಲ. ಹಾಗೆಯೇ ಅಲ್ಪವೂ, ಅಸ್ಥಿರವೂ ಮತ್ತು ಮೋಕ್ಷಕ್ಕೆ ಪ್ರತಿಬಂಧಕವೂ ಆದ ವೈಷಯಿಕಸುಖವೂ ಸಹ ವರ್ಜನೀಯವು. ಸುಖ ದುಃಖಗಳ ಸಂಬಂಧದಿಂದ ಮನೋವಿಕಾರಗಳನ್ನೂ ಹೊಂದದೇ ಇರುವಿಕೆ–ಎಂದು ತಾತ್ಪರ್ಯ. ತಾತ್ಪರ್ಯದಲ್ಲಿ– "ಸಮ ದುಃಖ ಸುಖಂ ಧೀರಂ'' –ಎಂದು ಉಕ್ತವಾಗಿದೆ. ಅಂದರೆ, ಸುಖದುಃಖಗಳಿಂದಾಗುವ ಉತ್ಸಾಹ ವಿಷಾದಗಳನ್ನು ಸ್ತಂಭನ ಮಾಡುವವನೇ ಧೀರನು – ಎಂದು ವಿಷ್ಣುರಹಸ್ಯದ ಇಪ್ಪತ್ತೊಂದನೆಯ ಅಧ್ಯಾಯದಲ್ಲಿ–"ಕಾಲಾನುಸಾರವಾಗಿ ಒದಗಿ ಬರುವ ಸುಖದುಃಖಗಳನ್ನು ಅನುಭವಿಸು. ಶ್ರೀಹರಿಯು ಕರುಣಾಮಯನು. ಆತನು ಅದರ ದುಃಖ, ವಿಪತ್ತುಗಳನ್ನು ಕಡಿಮೆಮಾಡಿ, ಸ್ವಲ್ಪವೇ ದುಃಖವನ್ನು ಕೊಡುತ್ತಾನೆ. ಇಲ್ಲದಿದ್ದರೆ ಅನಂತ ಅಪರಾಧಗಳಿಗೆ ಎಷ್ಟು ಶಿಕ್ಷೆಯಾಗಬೇಕು? ಸಹಸ್ರಾರು ಅಪರಾಧಗಳನ್ನು ಮಾಡಿದರೂ, ಭಕ್ತವತ್ಸಲನಾದ ಶ್ರೀಹರಿಯು ಪರಮದಯಾಳುವಾದುದರಿಂದ, ಅವೆಲ್ಲವನ್ನೂ ಕ್ಷಮಿಸಿ, ಕಿಂಚಿತ್ ಶಿಕ್ಷೆಯನ್ನು ವಿಧಿಸುವನು''– ಶ್ರೀವಿಷ್ಣುಭಕ್ತಿಯುತನಾಗಿ, ಎಲ್ಲವನ್ನು ಅನುಭವಿಸಬೇಕು. ಎಂಥಾ ವಿಪತ್ತಿನಲ್ಲಾದರೂ, ವಿಷ್ಣುಭಕ್ತಿ ವಿಚಲಿತವಾಗಬಾರದು. ಮಹಾವಿಪತ್ತಿನಲ್ಲಿ ಮುಳುಗಿದ್ದರೂ, ಅಚಲವಾದ ಹರಿಭಕ್ತಿಯುಳ್ಳವನೇ ದೃಢಭಕ್ತನು. ಸ್ಥಿತಪ್ರಜ್ಞನು. ಅಂತಹವನೇ ಮುಕ್ತಿಗೆ ಪಾತ್ರನು. ಉತ್ತಮಾಧಿಕಾರಿ. ಮಾನಾಪಮಾನ, ಶೋಕ

ಹರ್ಷಗಳಿಂದ ಮನಸ್ಸನ್ನು ದೂರ ಮಾಡಿ, ಸಮಚಿತ್ತನಾಗಿ, ಮನಸ್ಸನ್ನು ಶ್ರೀಹರಿಯಲ್ಲಿ ತೊಡಗಿಸಬೇಕು–"ಎಂಬುದೇ ಪ್ರಸಕ್ತ ಪದ್ಯದ ತಾತ್ಪರ್ಯಾರ್ಥ. ॥೧೬॥

## (4) ಶ್ರೀಗುರುಹೃದಯಪ್ರಕಾಶಿಕೆ ವ್ಯಾಖ್ಯಾನ : –

ಈ ಸರ್ವಸಮರ್ಪಣೆಯಿಂದ ದೇವರು ಹಾನಿ ವೃದ್ಧಿ ಜಯ ಅಪಜಯ ಮೊದಲಾದ್ದು ತತ್ತತ್ಕಾಲದಲ್ಲಿ ಏನು ಕೊಟ್ಟಾಗ್ಯೂ ಅನುಭವಿಸುತ್ತಾ, ದೇವರಸ್ಮರಣೆ ಬಿಡದೆ, ಲಕ್ಷ್ಮೀನಿಲಯನ ಕೃಪೆಯನ್ನೇ ಸದಾ ಪ್ರಾರ್ಥಿಸು, ಹೊಂದು. ಜ್ಞಾನಾನಂದಾತ್ಮಕನಾದ ದೇವರು, ಹೀಗೆ ಸ್ಮರಿಸುವ ತನ್ನ ಭಕ್ತರನ್ನು, ದೇಹಾನುಬಂಧಿಗಳು ಸ್ವಜನರನ್ನು ಪೋಷಿಸಿದಂತೆ, ಒಳ ಹೊರಗೆ ಕೂಡಾ ಸಂತೋಷಪಡಿಸುವನು. ಆದ್ದರಿಂದ ಕರುಣಾಶಾಲಿ. ॥೧೬॥

## ಸರ್ವವ್ಯಾಖ್ಯಾನಸಾರ ಸಂಗ್ರಹ

ಸುಖದುಃಖಾದಿ ದ್ವಂದ್ವಗಳನ್ನು ಸಮಚಿತ್ತದಿಂದ ಸ್ವೀಕರಿಸಿ, ಭಗವದನುಗ್ರಹವನ್ನು ಬೇಡುವಂತೇ ಹೇಳುತ್ತಾರೆ– ಹಾನಿವೃದ್ಧಿ– ಎಂಬ ಪ್ರಸಕ್ತ ೧೬ನೆಯ ಪದ್ಯದಿಂದ.

೧. ನಮ್ಮ ದಿನಚರಿಯಜೀವನದಲ್ಲಿ ಸುಖ–ದುಃಖ, ಹಾನಿ–ವೃದ್ಧಿ, ಜಯ–ಅಪಜಯ, ಮಾನ–ಅಪಮಾನ ಇತ್ಯಾದಿ ದ್ವಂದ್ವಗಳು ನಿರಂತರವೂ ಒದಗಿ ಬರುತ್ತಿರಲೇ ಇರುವುವು. ಇದು ಅಪರಿಹಾರ್ಯ. ಹಾನಿ– ಎಂದರೆ ನಷ್ಟ ಎಂದು ಹೆಸರು. ಇದು ಅನೇಕರೂಪಗಳಲ್ಲಿ ಒದಗುವುದು. ಸಂಪಾದಿಸಿದ ದ್ರವ್ಯ ಹಾನಿಯಾಗಬಹುದು. ಚರಸ್ಥಿರ ಆಸ್ತಿಗಳು ನಷ್ಟವಾಗಬಹುದು. ಮರಣದ ದೆಸೆಯಿಂದಾಗಿ ಬಂದೂದಗುವ ಬಂಧು–ಮಿತ್ರರ ವಿಯೋಗವೂ ಹಾನಿಯೇ. ಮಾನನಷ್ಟವೂ ಹಾನಿಎನಿಸುವುದು.

೨. ದ್ರವ್ಯಲಾಭ, ಧಾನ್ಯಲಾಭ, ವಾಹನಭೋಗಗಳ ಪ್ರಾಪ್ತಿ, ನೂತನಗ್ರಹ ಪ್ರಾಪ್ತಿ, ಇತ್ಯಾದಿ ಲಾಭರೂಪವಾದ ಪ್ರಾಪ್ತವಾಗುವ ವಸ್ತುಗಳೆಲ್ಲವೂ **ವೃದ್ಧಿ** ಎನಿಸುವುವು.

೩. ಜೀವನದಲ್ಲಿ ಒದಗುತ್ತಿರುವ ಕ್ರಿಯಾಪ್ರಯತ್ನಗಳ ಸಾಫಲ್ಯ, ಧ್ಯೇಯಗಳ ಸಾಧನೆ, ಇತ್ಯಾದಿ ಗೆಲುವುಗಳು **ಜಯವೆಂದೆನಿಸುವುವು.**

೪. ನಮ್ಮ ಪ್ರಯತ್ನಗಳ ವೈಫಲ್ಯ, ಧ್ಯೇಯಸಾಧನೆಯಲ್ಲಿ ಒದುಗುವ ಸೋಲು, ಯುದ್ಧದಲ್ಲಿ ಉಂಟಾಗುವ ಸೋಲು ಇತ್ಯಾದಿ ಪ್ರಸಂಗ ವಿಶೇಷಗಳು **ಅಪಜಯಗಳು** ಎಂದೆನಿಸುವುವು.

೫. ಇಂತು, ಹಾನಿ—ವೃದ್ಧಿ, ಜಯ—ಅಪಜಯ, ಮಾನ—ಅಪಮಾನ, ಸುಖ—ದುಃಖ ಇತ್ಯಾದಿಗಳೆಲ್ಲವೂ ದ್ವಂದ್ವಗಳು. ಇವೆಲ್ಲವೂ ತ್ರಿಗುಣಗಳ ಗೊಂದಲದ ಕಾರಣವಾಗಿ, ಕರ್ಮಾನುಸಾರ ಜೀವನದಲ್ಲಿ ಬಂದು ಒದಗುತ್ತಿರುವುವು. ಕರ್ಮಪತಿಯಾದ, ತ್ರಿಗುಣಗಳ ಪ್ರೇರಕನಾದ ಬಿಂಬನ ಪ್ರೇರಣೆಯಿಂದ ಒದಗುತ್ತಿರುವುವು. ಬಿಂಬನ ಪ್ರೇರಣೆಯಿಲ್ಲದೆ, ತ್ರಿಗುಣಗಳ ಸಹಜ ಧರ್ಮಗಳಾದ ಸತ್ತ್ವ, ರಜ ಮತ್ತು ತಮೋಗುಣಗಳ ಪ್ರವರ್ತನಕ್ರಿಯೆ ನಡೆಯಲಾರದು. ಅವು ಕ್ರಿಯಾತ್ಮಕವಾಗದಿದ್ದರೆ, ಕರ್ಮಗಳ ವ್ಯಾಪಾರ ನಡೆಯುವುದಿಲ್ಲ. ಈ ಸಮಸ್ತ ಕ್ರಿಯಾಸರಣಿಗಳಿಗೂ ಬಿಂಬನ ಪ್ರಚೋದನೆ ಅಲ್ಲದೇ ಅನ್ಯಥಾ ಇಲ್ಲ. ಕರ್ಮ ಧರ್ಮಗಳ ಈ ರಹಸ್ಯವನ್ನರಿತು, ದ್ವಂದ್ವಗಳು ಭಗವತ್ಪ್ರೇರಣೆಯಿಂದ, ಭಗವಂತನಿಂದ ದತ್ತವಾದುದೆಂದು ತಿಳಿದು, ಸಮಚಿತ್ತದಿಂದ, ಸ್ವೀಕರಿಸಿ ಅನುಭವಿಸಬೇಕು. ಸಮಸ್ತವೂ ಭಗವದಧೀನವಾದದ್ದು. ಅವನು ನಮ್ಮ ಕರ್ಮಾನುಸಾರ, ಏನು ಕೊಡುತ್ತಾನೋ, ಅದನ್ನು ಸಂತೋಷದಿಂದ ಸ್ವೀಕರಿಸಬೇಕು. ಸುಖದಲ್ಲಿ ಹಿಗ್ಗದೆ, ದುಃಖ ಒದಗಿದಾಗ ಕುಗ್ಗದೆ, ಸ್ಥಿತಪ್ರಜ್ಞನಂತೆ ಇರಬೇಕು.

೬. ಲಿಂಗದೇಹಗತ ಸತ್ತ್ವ ಗುಣ ಪ್ರಾಚುರ್ಯದಿಂದ ಸತ್ಕರ್ಮಗಳು ನಡೆಯುವುವು. ಸತ್ಕರ್ಮಾಚರಣೆಯ ಫಲವೇ ಪುಣ್ಯಪ್ರಾಪ್ತಿಯು. ರಜೋಗುಣ ಪ್ರಾಚುರ್ಯ ಕಾರಣದಿಂದ, ಮಿಶ್ರಕರ್ಮಗಳು – ಅದರಿಂದ ಪುಣ್ಯಪಾಪಗಳಫಲ.

ತಮೋಗುಣಪ್ರಾಚುರ್ಯವಾದಾಗ ಜೀವನದ್ವಾರಾ ದುಷ್ಕರ್ಮಗಳ ಆಚರಣೆ. ತತ್ಫಲವಾಗಿ ಪಾಪವನ್ನು ಹೊಂದುವನು. ಸೂಕ್ಷ್ಮ ಪ್ರಕೃತಿಯ ಸಹಜ ಧರ್ಮಗಳಾದ ಸತ್ತ್ವ, ರಜ ಮತ್ತು ತಮೋಗುಣಗಳೆಂಬ ತ್ರಿಗುಣಾತ್ಮಕವಾದದ್ದು ಲಿಂಗದೇಹ. ಅವ್ಯಕ್ತ ತತ್ತ್ವದ ಅಧಿಷ್ಠಾನವದು. ಅದಕ್ಕೆ ಗುಣತ್ರಯಾಭಿಮಾನಿಯಾದ ಶ್ರೀರಮಾ ಅಭಿಮಾನಿಯು. ಪ್ರಕೃತಿಯು ರಮಾಭಿಮನ್ಯುಮಾನವಾಗಿದೆ. ಅಂತಹ ಶ್ರೀಲಕ್ಷ್ಮೀದೇವಿಯು ಶ್ರೀಹರಿಯ ಅಧೀನಳು. ಪ್ರಕೃತಿಯನ್ನು ಉಪಾದಾನಕಾರಣವನ್ನಾಗಿ ಮಾಡಿಕೊಂಡು. ಜಗದೀಶನಾದ ಶ್ರೀಹರಿಯು ಪ್ರಧಾನಕಾರಣಪುರುಷನಾಗಿದ್ದು, ಚತುರ್ವಿಂಶತಿತ್ತ್ವಾತ್ಮಕವಾದ ಈ ಜಗತ್ತನ್ನು ಸೃಷ್ಟಿಸುವನು. ಈ ಕಾರಣದಿಂದ ಜಗತ್ತಿನ ತ್ರಿಗುಣಜನ್ಯವಾದ ಸಮಸ್ತವ್ಯಾಪಾರಗಳಿಗೂ ಶ್ರೀಹರಿಯೇ ಪರಮಮುಖ್ಯ ವೃತ್ತಿಯಿಂದ ನಿಯಾಮಕನು. ಈ ಕಾರಣದಿಂದ ಸುಖ ದುಃಖಾದಿ ಸಮಸ್ತ ದ್ವಂದ್ವಗಳೂ ಸರ್ವೇಶನಾದ ಆ ಲಕ್ಷ್ಮೀಪತಿಯ ಪ್ರೇರಣೆಯಿಂದ ಪ್ರವರ್ತಿವಾಗುತ್ತಿರುವುದ ರಿಂದ, ಅಂತಹ ಶ್ರೀ ಲಕ್ಷ್ಮೀನಿವಾಸನ ಕರುಣವನೆ ಸಂಪಾದಿಸು ಅನುದಿನದಿ– ಎಂದು ಜೀವರಿಗೆ ಮಾರ್ಗದರ್ಶನ ತೋರಿದ್ದಾರೆ – ಜ್ಞಾನಿಗಳಾದ ದಾಸವರೇಣ್ಯರು. ನಮ್ಮ ಅಧಿಷ್ಠಾನದಲ್ಲಿ ಬಿಂಬನ ಪ್ರೇರಣೆಯಿಂದ ನಡೆಯುತ್ತಿರುವ ಸಕಲ ದ್ವಂದ್ವಕರ್ಮಗಳನ್ನು ಆ ಪರೇಶನ ಪಾದಪದ್ಮಂಗಳಿಗೆ ಅರ್ಪಿಸುವುದೊಂದೇ ಸಕಲ ಸಚ್ಚಿತನರ ಬಾಳಿನ ಧರ್ಮ. ಭಗವಂತನ ಅನುಗ್ರಹವನ್ನು ಸಂಪಾದಿಸುವುದೇ ಸಕಲ ಕರ್ಮಾಚರಣೆಗಳ ಮುಖ್ಯಉದ್ದೇಶ್ಯ. ಭಗವತ್ಪ್ರೀತಿಗಾಗಿ ಸಕಲ ಕರ್ಮಗಳ ಆಚರಣೆ. ಈ ಉತ್ತಮಜ್ಞಾನಾನುಸಂಧಾನಕ್ರಮವೇ ದ್ವಂದ್ವಕರ್ಮ ಸಮರ್ಪಣೆಯು.

೭. ಅಪ್ರಾಕೃತ ಜ್ಞಾನ ಮತ್ತು ಆನಂದಸ್ವರೂಪಿಯಾದ, ಆ ಸಚ್ಚಿದಾನಂದಾತ್ಮನು ಆಪ್ತಬಂಧುಗಳಂತೆ, ಸದಾ ಜೀವರ ಬಿಂಬನಾಗಿದ್ದು, ಅರೆಕ್ಷಣವೂ ಜೀವರಿಂದ ಅಗಲದೆ, ತನ್ನ ಭಕ್ತರನ್ನು ಸಕಲ ಆಪತ್ತು ವಿಪತ್ತುಗಳಿಂದ ಸದಾ ಸಂರಕ್ಷಿಸುತ್ತಿರುವನು. ಸ್ವರೂಪದೊಳಗೆ ಅಂತರ್ಯಾಮಿಯಾಗಿದ್ದು, ದೇಹಗತಸಕಲಇಂದ್ರಿಯ, ಕೋಶ,

ನಾಡಿಗಳಲ್ಲಿ ಸ್ಥಿತನಾಗಿದ್ದು, ಸಮಸ್ತ ಮಾನಸಿಕ, ವಾಚನಿಕ, ಐಂದ್ರಿಕ ಕರ್ಮಗಳನ್ನು ಶರೀರದ ದ್ವಾರಾ ಮಾಡಿ, ಮಾಡಿಸುತ್ತಿರವನು. ಹೊರಗೆ ಸಮಸ್ತವಸ್ತುಗಳಲ್ಲಿ ವ್ಯಾಪ್ತನಾಗಿದ್ದು, ವಿಷಯಾದಿಗಳಿಂದ, ಸುತ್ತಮುತ್ತಲಿನ ಚರಾಚರಾತ್ಮಕವಾದ ಜಗತ್ತಿನಿಂದ ಅಡಿಗಡಿಗೆ ಸಂಭವಿಸುತ್ತಿರುವ ಆಪತ್ತು, ವಿಪತ್ತು ಇತ್ಯಾದಿ ದುಃಖಗಳಿಂದ, ಅಂತರ್ಬಹಿಶ್ಚವ್ಯಾಪ್ತನಾಗಿದ್ದು, ಸಲಹುವನು ಕರುಣಾಮಯನಾದ ಕಮಲದಳಾಯತಾಕ್ಷ ಆ ಲಕ್ಷ್ಮೀಧವನು. ॥೧೭॥

## ಪದ್ಯ ೧೭

ಮೂಲ:—

ಆ ಪರಮ ಸಕಲೇಂದ್ರಿಯಗಳೊಳು
ವ್ಯಾಪಕನು ತಾನಾಗಿ ವಿಷಯವ
ತಾ ಪರಿಗ್ರಹಿಸುವನು ತಿಳಿಸದೆ ಸರ್ವಜೀವರೊಳು
ಪಾಪರಹಿತ ಪುರಾಣಪುರುಷ ಸ
ಮೀಪದಲಿ ನೆಲೆಸಿದ್ದು ನಾನಾ
ರೂಪಧಾರಕ ತೋರಿಕೊಳ್ಳದೆ ಕರ್ಮಗಳ ಮಾಳ್ಪ ॥೧೭॥

ಅವತರಣಿಕೆ:—

ಸರ್ವೋತ್ತಮನಾದ ಶ್ರೀಹರಿಯು ದೇಹಗತ ಸಕಲಇಂದ್ರಿಯಗಳಲ್ಲಿ ವ್ಯಾಪಿಸಿದ್ದು, ಶಬ್ದಾದಿವಿಷಯಗಳನ್ನು ತಾನೇ ಪರಿಗ್ರಹಿಸಿ. ಅಂದರೆ, ಆ ವಿಷಯಾಂತರ್ಗತ ತನ್ನ ಭಗವದ್ರೂಪಗಳಲ್ಲಿ ವಿಹರಿಸುತ್ತಾ, ದೇಹದ್ಯಾಂತ ಪ್ರಕಾಶತೋವ್ಯಾಪ್ತನಾದ ಜೀವರಿಗೆ ತನ್ನ ಇರವನ್ನು ತಿಳಿಸದಂತೆ, ಸರ್ವದೋಷವಿವರ್ಜಿತನಾದ ಪುರಾತನ ಪುರುಷನಾದ ಬಿಂಬನು ಜೀವಾಂತರ್ಯಾಮಿಯಾಗಿ ಜೀವನ ಬದಿಗನಾಗಿದ್ದು, ಆಯಾಯಾ ಅವಯವಗಳಲ್ಲಿ ತದ್ರೂಪ, ತತ್ತನ್ನಾಮಕನಾಗಿ. ತನ್ನ ಅಸ್ತಿತ್ವವನ್ನು ತೋರಿಸಿಕೊಳ್ಳದೆ, ಸಕಲ ಶುಭಾಶುಭ ಮಿಶ್ರಕರ್ಮಗಳನ್ನು ತಾನೇ ಬಿಂಬಕ್ರಿಯಾದ್ವಾರಾ ಮಾಡಿ. ಇಂದ್ರಿಯಾಭಿಮಾನಿ, ದೇವ ದೈತ್ಯರ ದ್ವಾರಾ ಮಾಡಿಸುತ್ತಾ ಇರುವನು—ಎಂದು ತಿಳಿಸುತ್ತಾರೆ— ಆ ಪರಮ— ಎಂಬ ಪ್ರಸಕ್ತ ಸಂಧಿಗತ ೧೭ನೆಯ ಈ ಪದ್ಯದಿಂದ. ॥೧೭॥

ಪ್ರತಿಪದಾರ್ಥ:—

**ಆ ಪರಮ=** ಪರನಾಮಕಳಾದ ಶ್ರೀ ಲಕ್ಷ್ಮೀದೇವಿಯರಿಗಿಂತ ಅನಂತಾನಂತಕೋಟಿ ಗುಣಗಳಿಂದ ಉತ್ತಮನಾದ, ಸರ್ವೋತ್ಕೃಷ್ಟನಾದ ಶ್ರೀಪರಮಾತ್ಮನು, **ಸಕಲೇಂದ್ರಿಯಗಳೊಳು=** ಸರ್ವಜೀವರ ಶರೀರಗತ ಮನಾದಿ ಸಕಲ ಇಂದ್ರಿಯಗಳಲ್ಲಿ, **ವ್ಯಾಪಕನು ತಾನಾಗಿ** = ವ್ಯಾಪಕನಾಗಿ ತಾನಿದ್ದು, ***ವಿಷಯವ*** =ಶಬ್ದಾದಿ ಸಕಲ ವಿಷಯಗಳನ್ನು, **ತಾ** = ಬಿಂಬರೂಪಿಯಾದ ಶ್ರೀಹರಿಯು, ***ಪರಿಗ್ರಹಿಸುವನು*** = ಆಯಾಯಾ ವಿಷಯಗಳಲ್ಲಿ ಅಂತರ್ಗತವಾದ ಸ್ವಾಭಿನ್ನಗಳಾದ ಭಗವದ್ರೂಪಗಳಲ್ಲಿ ರಮಣಮಾಡುತ್ತಾ ಸ್ವೀಕರಿಸುತ್ತಿರುವನು. ***ಸರ್ವಜೀವರೊಳು*** =ಸಮಸ್ತರಾದ ಅಣುಸ್ವರೂಪನಾದ ತ್ರಿವಿಧಜೀವರಲ್ಲಿ, ***ತಿಳಿಸದೆ*** = ಬಿಂಬಕ್ರಿಯಾದ್ವಾರಾ ಸಕಲ ವಿಷಯ ಪರಿಗ್ರಹರೂಪವಾದ ಕರ್ಮಗಳನ್ನು ತಾನೇ ಮಾಡುತ್ತಿದ್ದರೂ, ಜೀವರಿಗೆ ತನ್ನ ವ್ಯಾಪಾರದ ರಹಸ್ಯವನ್ನು ತಿಳಿಸದೆ, ***ಪಾಪರಹಿತ*** = ಸಕಲದೋಷವಿದೂರನಾದ, ***ಪುರಾಣಪುರುಷ***=ಅನಾದ್ಯನಂತಕಾಲದಿಂದ ನಿತ್ಯನಾದ ಜೀವನಲ್ಲಿ ಜೀವಾಕಾರನಾಗಿ, ಜೀವನಾಮಕನಾಗಿ ತಾನು ಪುರುಷಶಬ್ದವಾಚ್ಯನಾದಬಿಂಬನು, ***ಸಮೀಪದಲ್ಲಿ***=ಜೀವರಲ್ಲಿ ನಿತ್ಯಾವಿಯೋಗಿಯಾಗಿ ಬಿಂಬನೆಂದೆನಿಸಿ, ***ನೆಲಸಿದ್ದು***=ಆವಾಸನಾಗಿದ್ದು, ***ನಾನಾರೂಪಧಾರಕ*** = ನಾನಾಪ್ರಕಾರವಾಗಿ ಆಯಾಯಾ ಇಂದ್ರಿಯಾಭಿಮಾನಿ ದೇವತೆಗಳಂತೆ ತದ್ರೂಪನಾಗಿದ್ದು, ***ತೋರಿಕೊಳ್ಳದೆ*** = ತನ್ನ ಇರವನ್ನು ತೋರಿಸಿಕೊಳ್ಳದೇ, ಅಗೋಚರನಾಗಿದ್ದು, ***ಕರ್ಮಗಳ*** = ದೇಹಗತಸಕಲೇಂದ್ರಿಯಗಳ ದ್ವಾರಾ, ಜೀವರ ಅನಾದಿಕರ್ಮದಿಂದ ಪ್ರವರ್ತಿತವಾದ ಶುಭ–ಅಶುಭ–ಮಿಶ್ರರೂಪವಾದ ಕರ್ಮಗಳನ್ನು, ***ಮಾಳ್ಪ*** = ತಾನೇ ಬಿಂಬಕ್ರಿಯಾದ್ವಾರಾ ಮಾಡಿ, ಇಂದ್ರಿಯಾಭಿಮಾನಿ ದೇವ ದಾನವರ ದ್ವಾರಾ ಮಾಡಿಸುತ್ತಾ, ಆ ಕರ್ಮಗಳ ಫಲಗಳನ್ನು ಈ ಶರೀರಾದ್ಯಂತ ಪ್ರಕಾಶತೋವ್ಯಾಪ್ತನಾದ ಜೀವರ ಅನುಭೋಗಕ್ಕೆ ತಂದೀಯುತ್ತಿರುವನು. ॥೧೭॥

## ವ್ಯಾಖ್ಯಾನಗಳು

### (೧) ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ :—

ವಿಷಯಗಳ ಸ್ವೀಕರಿಸತಕ್ಕವ ಕರ್ಮಗಳ ಮಾಡತಕ್ಕವ ಪರಮಾತ್ಮನೆಂದು ಹೇಳತಾರೆ.

ಪೂರ್ವೋಕ್ತ ಒಂಭತ್ತನೇ ಶ್ಲೋಕಗತ ಶಿಪಿವಿಷ್ಟ ಸಾಂಕೇತನಾದ, ಗರುಡವಾಹನನಾದ ಸರ್ವೋತ್ತಮನಾದ ಕೃಷ್ಣ, ಸಮಸ್ತರಾದ ಪ್ರಾಣಿಗಳ ಇಂದ್ರಿಯಗಳಲ್ಲಿ ಎಂದರೆ, ಸ್ಥೂಲದೇಹದಲ್ಲಿ ವ್ಯಾಪ್ತವಾದ ಸ್ವರೂಪೇಂದ್ರಿಯಗಳಲ್ಲಿ ವ್ಯಾಪಕನಾದ ಪರಮಾತ್ಮನು ತನಗೆ ತಾನಾಗೇ ದೇಹಗತನಾದ ಜೀವಗೆ ತಿಳಿಸದೇ, ಜೀವಭುಕ್ತ ವಿಷಯಗತ ತನ್ನ ಸ್ವಾಖ್ಯ ವಿಷಯವ, ತನ್ನ ಸ್ವಾಖ್ಯ ಇಂದ್ರಿಯಗಳಿಂದ ತಾನೇ ಪರಿಗ್ರಹಿಸೋವನಾಗತಾನೇ. ಸಮಸ್ತರಾದ ಅಣುಸ್ವರೂಪರಾದ ಜೀವರಲ್ಲಿ ಜೀವಸಂಬಂಧವಾದ, ಅಸ್ವಾತಂತ್ರ್ಯಾದಿ ದೋಷದೂರನಾದ, ಪುರಾಣಪುರುಷ, ಪುರುಷ ಶಬ್ದ ಜೀವರಿಗೆ ಇರೋದಾಗಿ ಅದೆ. ಪುರುಷ ಸಾಂಕೇತವಾದ ಜೀವನಲ್ಲಿ ಅನಾದಿಯಿಂದತದಾಕಾರನಾಗಿ ತಾನೂನೂ ಪುರುಷ ಎಂತ ಕರಿಸಿ, ಜೀವಗೆ ಬಿಂಬನಾಗಿ ಸಮೀಪದಲ್ಲಿ, ಸಮೀಪಶಬ್ದದಿಂದ ಅನಾದ್ಯನಂತ ಕಾಲಕ್ಕೂ ಜೀವನ ಸಮೀಪದಲ್ಲಿಯೇ ಅವಿಯೋಗನಾಗಿ ಆವಾಸನಾಗಿದ್ದು, ಜೀವನ ಸ್ವರೂಪೇಂದ್ರಿಯಗಳಲ್ಲಿ ನಾನಾವಿಧ ತತ್ತ್ವದೇವತಾರೂಪಗಳ ಧಾರಕನಾಗಿ, ಜೀವಾಂತರ್ಗತನಾಗಿ ಜೀವಗೆ ತೋರಿಕೊಳ್ಳದೆ, ಸ್ಥೂಲದೇಹದಿಂದ ಜೀವನದ್ವಾರಾ ದಾವಕರ್ಮಗಳ ಮಾಡಸಬೇಕೋ, ಅಂಥಾ ಕರ್ಮಗಳ ಮಾಡಿಸೋ ಉದ್ದಿಶ್ಯ, ಅಣುಸ್ವರೂಪನಾದ ಜೀವೇಂದ್ರಿಯಗಳಿಗೆ ಪ್ರಥಮಥಃ ಪ್ರೇರಣ ಮಾಡತಾನೆ. ಆ ಪ್ರೇರಣೆ ಲಿಂಗ, ಅವ್ಯಕ್ತ, ಅನಿರುದ್ಧ ಸ್ಥೂಲಶರೀರಗಳಲ್ಲಿ ಕ್ರಮಾತ್ ಪ್ರವೇಶವಾಗಿ ಸ್ಥೂಲದೇಹದಲ್ಲಿ ಕ್ರಿಯಾರೂಪವಾದ ಕರ್ಮಗಳ ಮಾಡಿ ಮಾಡಿಸತಾನೆಂತ ತಾತ್ಪರ್ಯ. ॥೧೭॥

(೨) ಭಾವಪ್ರಕಾಶಿಕೆ :—

ಶ್ರೀಪರಮಾತ್ಮನು ಸಕಲಪ್ರಾಣಿಗಳ ಸರ್ವೇಂದ್ರಿಯಗಳೊಳು ವ್ಯಾಪಿಸಿಕೊಂಡು ಜನರಿಗೆ ತಿಳಿಸದೆ, ವಿಷಯಸುಖವನ್ನು ತಾನು ಪರಿಗ್ರಹಿಸುವನು. ನಿರ್ದೋಷಿಯಾದ ಪಾಪಲೇಪ ಸಂಬಂಧವಿಲ್ಲದ ಪುರಾಣಪುರುಷನಾದ ಶ್ರೀಹರಿಯು, ಬಂಧು, ಬಳಗ, ಆನೆ, ಕುದುರೆ, ಮೊದಲಾದ ರೂಪಗಳಿಂದ. ಅವುಗಳಲ್ಲಿ ತಾನಿರುವುದನ್ನು ಯಾರಿಗೂ ತಿಳಿಸದಲೆ, ಅವರವರಿಂದ ಯಾವ ಯಾವ ಕಾರ್ಯಗಳು ಆಗಬೇಕೋ, ಅವುಗಳನ್ನು ತಾನೇ ಮಾಡುವನು. ॥೧೭॥

(೩) ಈ ಪದ್ಯಕ್ಕೆ ಭಾವದರ್ಪಣಟೀಕಾಕಾರರು ವ್ಯಾಖ್ಯಾನವನ್ನು ಬರೆದಿರುವುದಿಲ್ಲ.

(೪) ಶ್ರೀವ್ಯಾಸದಾಸಸಿದ್ಧಾಂತ ಕೌಮುದೀ :—

ಶ್ರೀಪರಮಾತ್ಮನು ದೇಹೇಂದ್ರಿಯಗಳಲ್ಲಿ ವ್ಯಾಪಕನಾಗಿದ್ದಾನೆ. ವಿಷಯಾದಿಗಳನ್ನು ಸ್ವೀಕರಿಸುತ್ತಾ, ಸರ್ವಜೀವರಲ್ಲಿ ನೆಲೆಸಿದ್ದಾನೆ. ನಾನಾರೂಪವಿಶೇಷಗಳಿಂದ ಕ್ರಿಯಾಕಲಾಪಗಳನ್ನೇ ಮಾಡುತ್ತಿದ್ದಾನೆ. ಇಷ್ಟಾದರೂ ಜೀವರಿಗೆ ತನ್ನ ಇರವನ್ನು ತಿಳಿಸಗೊಡನು ಎಂಬ ತತ್ತ್ವಾರ್ಥವನ್ನು ಹೇಳುತ್ತಾರೆ. **ಆ ಪರಮ** – ಎಂಬ ಪ್ರಸಕ್ತ ಪದ್ಯದಿಂದ ॥೧೭॥

(೫) ಶ್ರೀಗುರುಹೃದಯಪ್ರಕಾಶಿಕೆ ವ್ಯಾಖ್ಯಾನ :—

ಕರ್ತೃತ್ವ, ಭೋಕ್ತೃತ್ವ ದೇವರ ಅಧೀನವಲ್ಲದೆ, ಸ್ವತಂತ್ರ, ಜೀವಗಿಲ್ಲವೆಂದು ತಿಳಿಸುತ್ತಾರೆ – **ಆ ಪರಮ**– ಎಂದು. ಆ ಪರಮಾತ್ಮ ದೋಷದೂರನು. ಸರ್ವದೇಹ ಜೀವಸ್ಥಿತನುಆಗಿ ಸಮೀಪದಲ್ಲಿ ಸ್ಥಿರವಾಗಿದ್ದು, ಅನೇಕ ರೂಪ ಧರಿಸಿ, ಇತರರಿಗೆ ತಿಳಿಸಿಕೊಳ್ಳದೆ, ಸರ್ವಕರ್ಮಗಳನ್ನೂ ಮಾಡುವನು. ಸಕಲೇಂದ್ರಿಯಗಳಲ್ಲೂ ವ್ಯಾಪಿಸಿದ್ದು ರೂಪ–ರಸಾದಿ ವಿಷಯಗಳನ್ನು ತಾ ಪರಿಗ್ರಹಿಸುವನು. ಎಂದರೆ,

ರೂಪ–ರಸಾದಿ ಸರ್ವವಿಷಯಗತ ಸ್ವರಸವೆಲ್ಲಾ ತಾನೇ ತೆಗೆದುಕೊಳ್ಳುವನು. ಸರ್ವಜೀವರಲ್ಲೂ ತನ್ನ ವ್ಯಾಪಾರವನ್ನು ತಿಳಿಸದೆ ಇರುವನು.

**ಉತ್ಕ್ರಾಮಂತಂ ಸ್ಥಿತಂ ವಾಪಿ ಭುಂಜಾನಂ ವಾ ಗುಣಾನ್ವಿತಂ ।**

**ವಿಮೂಢಾ ನಾನುಪಶ್ಯಂತಿ ಜ್ಞಾನಚಕ್ಷುಷಃ॥**

**ಎಂಬ ಗೀತಾರ್ಥ ವಿವರಿಸಲ್ಪಟ್ಟಿತು. ॥೧೭॥**

## ಸರ್ವವ್ಯಾಖ್ಯಾನಸಾರಸಂಗ್ರಹ

ತ್ರಿಗುಣಗಳ ಫಲರೂಪವಾದ ಸಮಸ್ತವ್ಯಾಪಾರಗಳನ್ನು, ದೇಹಗತ ಸಕಲೇಂದ್ರಿಯಗಳ ದ್ವಾರಾ, ಸರ್ವಕರ್ತನಾದ ಬಿಂಬನೇ ಮಾಡಿ ಮಾಡಿಸುತ್ತಿರುವನೆಂಬ ಗುಹ್ಯಾರ್ಥವನ್ನು ತಿಳಿಸುತ್ತಾರೆ – ಆ ಪರಮ – ಎಂಬ ಪ್ರಸಕ್ತ ೧೨ನೆಯ ಪದ್ಯದಿಂದ.

೧. ನಿತ್ಯಮುಕ್ತಳೂ, ನಿರ್ವಿಕಾರಳೂ, ಶ್ರೀಶನನಿತ್ಯಾವಿಯೋಗಿನಿಯೂ, ಈಶಕೋಟಿ ಪ್ರವಿಷ್ಟಳೂ ಆದ ಶ್ರೀಲಕ್ಷ್ಮೀದೇವಿಯು ಅಕ್ಷರನಾಮಕಳು. ಬ್ರಹ್ಮಾದಿ ಸಕಲಜೀವಗಣಗಳಿಂದ ಅಧಿಕಳಾದ ಶ್ರೀ ಲಕ್ಷ್ಮೀದೇವಿಗೆ **ಪರ** ಎಂದು ಹೆಸರು . ಅಂತಹ ಪರನಾಮಕಳಾದ ಶ್ರೀರಮಾದೇವಿಯರಿಗಿಂತ ಅನಂತಾನಂತಕೋಟಿಗುಣಗಳಿಂದ ಉತ್ತಮೋತ್ತಮನಾದ ಸರ್ವೋತ್ಕೃಷ್ಟನಾದ ಶ್ರೀಹರಿಗೆ **ಪರಮ** ನೆಂದು ಶಾಸ್ತ್ರವಚನ.

೨. ಅಂತಹ ಪರಮನಾಮಕನಾದ ಸರ್ವೋತ್ತಮನಾದ ಶ್ರೀಹರಿಯು, ದೇಹಗತ ಮನಾದಿ ಏಕಾದಶೇಂದ್ರಿಯಗಳಲ್ಲಿಯೂ, ಸಕಲ ಅಂಗೋಪಾಂಗಗಳಲ್ಲಿ ಹಬ್ಬಿ ಹರಡಿಕೊಂಡು ವ್ಯಾಪಿಸಿಕೊಂಡಿದ್ದಾನೆ.

೩. ಸಕಲೇಂದ್ರಿಯಗಳಲ್ಲಿ **ವ್ಯಾಪಕನಾಗಿದ್ದು**,, ವಿಷಯಗಳನ್ನು ಆಯಾಯಾ ಇಂದ್ರಿಯಗಳಿಗೆ ಸಂಬಂಧವನ್ನುಂಟು ಮಾಡುವನು. ಶಬ್ದಾದಿ ಸಕಲವಿಷಯಗಳಲ್ಲಿ ಅಂತರ್ಗತನಾಗಿದ್ದಾನೆ. ಅಂತೆಯೇ ಇಂದ್ರಿಯಗಳಲ್ಲಿ, ಆಯಾಯಾ

ಇಂದ್ರಿಯಗೋಳಕಗಳಲ್ಲಿ ಸ್ಥಿತನಾಗಿದ್ದಾನೆ. ಇಂದ್ರಿಯಾಭಿಮಾನಿದೇವ, ತದ್ದೈತ್ಯರಲ್ಲಿ ಅಂತರ್ಯಾಮಿಯಾಗಿದ್ದಾನೆ. ವಿಷಯಸನ್ನಿಕರ್ಷದಿಂದ ಇಂದ್ರಿಯಗಳಿಗೆ ತತ್ತ್ವದ್ವಿಷಯಗಳ ಸಂಬಂಧ. ತದ್ವಾರಾ ಇಂದ್ರಿಯ, ಇಂದ್ರಿಯಾಭಿಮಾನಿ ದೇವತೆಗಳ ದ್ವಾರಾ ವಿಷಯ ಸಂಬಂಧವಾದ ಜ್ಞಾನಸ್ವೀಕಾರ. ಮನೇಂದ್ರಿಯದ್ವಾರಾ ಇಂದ್ರಿಯಗಳಲ್ಲಿ ಪ್ರಕಾಶತೋವ್ಯಾಪ್ತನಾದ ಜೀವನಿಗೆ ಅದರ ಅನುಭವ. ಇಂತು ಜ್ಞಾನಪರಿಗ್ರಹರೂಪವಾದ ಈ ಕ್ರಿಯಾಸರಣಿಯು ನಿರಂತರವಾಗಿ ವಿಷಯಗತ, ಇಂದ್ರಿಯಗತ, ಮನೋಗತ, ಚಿತ್ತಗತ, ಬುದ್ಧಿಗತ ಬಿಂಬನೇ ಆಯಾಯಾ ಅಧಿಷ್ಠಾನಗಳಲ್ಲಿ ತಾನೇ ಅಂತಸ್ಥಿತನಾಗಿದ್ದು, ಆಯಾಯಾ ಭಗವದ್ರೂಪಗಳಲ್ಲಿ ರಮಣಮಾಡುತ್ತಿರುವನು. ವಿಷಯಗತ ಭಗವದ್ರೂಪಗಳಿಗೂ, ಇಂದ್ರಿಯಗೋಳಕ, ಇಂದ್ರಿಯ, ಇಂದ್ರಿಯಾಭಿಮಾನಿ ದೇವತಾಂರ್ಗತಭಗವದ್ರೂಪಗಳಿಗೂ, ಜೀವನ ಮನಸ್ಸು, ಚಿತ್ತ, ಬುದ್ಧಿ, ಅಂತಃಕರಣಸ್ಥಿತ ಭಗವದ್ರೂಪಗಳಿಗೂ, ಜೀವನಲ್ಲಿ ಅಂತರ್ಯಾಮಿಯಾಗಿರುವ ಜೀವನಾಮಕ, ಜೀವಾಕಾರ, ಜೀವನಿಂದ ಅತ್ಯಂತ ಭಿನ್ನನಾದ ಬಿಂಬರೂಪಕ್ಕೂ ಐಕ್ಯ ಚಿಂತನಾರೂಪವಾದ ಜ್ಞಾನಾನುಸಂಧಾನವೇ– **ವ್ಯಾಪಕನು ತಾನಾಗಿ ವಿಷಯವ ತಾ ಪರಿಗ್ರಹಿಸುವನು**– ಎಂಬ ಶಬ್ದಪ್ರಯೋಗದ ಅರ್ಥವಿವರಣೆಯು.

ವಿಷಯಗಳು – ಇಂದ್ರಿಯಗಳು– ಇಂದ್ರಿಯಾಭಿಮಾನಿದೇವತೆಗಳು– ದೇವತಾಂತರ್ಗತ ಮುಖ್ಯಪ್ರಾಣರೂಪವಾಯ್ವಂತರ್ಗತ ಶ್ರೀಲಕ್ಷ್ಮೀನಾರಾಯಣನಾದ ಬಿಂಬ. – ಈ ಕ್ರಿಯಾಸರಣಿಯೇ **ಬಿಂಬಕ್ರಿಯೆಯ ಅರ್ಥವು**. ದೃಷ್ಟಾಂತಕ್ಕಾಗಿ –

(೧) ಶಬ್ದ ತನ್ಮಾತ್ರಾ (ವಿಷಯ) – ಶ್ರವಣೇಂದ್ರಿಯ – ಇಂದ್ರಿಯಾಭಿಮಾನಿ ದಿಗ್ದೇವತೆಗಳು – ವಾಯುಗೋಳಕ– ವಾಯ್ವಂತರ್ಗತ ಭಗವದ್ರೂಪ.

(೨) ಸ್ಪರ್ಶ – ತ್ವಗಿಂದ್ರಿಯ – ಇಂದ್ರಿಯಾಭಿಮಾನಿ ಅಹಂಕಾರಿಕ ಪ್ರಾಣ – ವಾಯ್ವಂತರ್ಗತ ಸ್ವಾಖ್ಯರೂಪ

(೩) ರೂಪ– ಚಕ್ಷುರಿಂದ್ರಿಯ– ಅಭಿಮಾನಿ ಸೂರ್ಯ– ವಾಯ್ವಂತರ್ಗತ ಭಗವದ್ರೂಪ.

(೪) ರಸ– ರಸನೇಂದ್ರಿಯ– ಅಭಿಮಾನಿ ವರುಣ – ವಾಯ್ವಂತರ್ಗತ ಭಗವದ್ರೂಪ.

(೫) ಗಂಧ– ಘ್ರಾಣೇಂದ್ರಿಯ – ಅಭಿಮಾನಿ ಧರಾ ಮತ್ತು ಶನೈಶ್ಚರ– ವಾಯ್ವಂತರ್ಗತ ಶ್ರೀಕೃಷ್ಣರೂಪ.

ಹೀಗೆಯೇ ಪಾಣಿ, ಪಾದ, ವಾಕ್ಕು, ಗುದ ಮತ್ತು ಉಪಸ್ಥಗಳೆಂಬ ಪಂಚಕರ್ಮೇಂದ್ರಿಯಗಳ ದ್ವಾರಾ ಕ್ರಿಯಾರೂಪವಾದ ವ್ಯಾಪಾರವಿಶೇಷಗಳು. ಆಯಾಯಾ ಅಧಿಷ್ಠಾನಗತ ಸ್ವಾಖ್ಯಾತ್ಮಕವಾದ ಭಗವದ್ರೂಪಗಳಲ್ಲಿ ಶ್ರೀಪರಮಾತ್ಮನ ಕ್ರೀಡೆಯೇ ಸಕಲ ಇಂದ್ರಿಯವ್ಯಾಪಾರಗಳಿಗೆ ಕಾರಣವು.

೪. ಹೀಗೆ ಸಕಲವಿಷಯಗಳಲ್ಲಿ, ಇಂದ್ರಿಯಗಳಲ್ಲಿದ್ದರೂ ಸಹ, ಅವುಗಳಿಗೆ ಸಂಬಂಧಪಟ್ಟ ಪಾಪ–ಪುಣ್ಯ–ಮಿಶ್ರ ಕರ್ಮಗಳಿಂದ ನಿರ್ಲಿಪ್ತನು. ಜೀವ, ಜಡಗಳಿಂದ ಅತ್ಯಂತ ಭಿನ್ನನಾದ, ಆ ಜಗದ್ವಿಲಕ್ಷಣನು ಸಮಸ್ತದೋಷವಿದೂರನು. ಇದರಿಂದ ಪಾಪರಹಿತನು.

೫. ದೇಹದಲ್ಲಿ ದೇಹಾಕಾರನಾಗಿ, ಜಗತ್ತಿನಲ್ಲಿ ವಿಶ್ವಾಕಾರನಾಗಿ, ಬ್ರಹ್ಮಾಂಡಕ್ಕೂ ಮೀರಿ, ಮಹದಾಕಾರನಾಗಿ, ಸರ್ವತ್ರವ್ಯಾಪ್ತನಾಗಿರುವ, ಶ್ರೀಪರಮಾತ್ಮನಿಗೆ ಪುರುಷ ನೆಂದು ಹೆಸರು. ಅಂತಹ ಪುರುಷನಾಮಕನಾದ ಪುರುಷೋತ್ತಮನು ಅನಾದ್ಯನಂತ ಕಾಲದಿಂದಲೂ, ಶಶ್ವದೇಕಪ್ರಕಾರನಾಗಿ, ಶಾಶ್ವತನಾಗಿದ್ದಾನೆ. ಇದರಿಂದ ಪುರಾಣ ಪುರುಷನು.

೬. ಜಗತ್ತಿನ ಸೃಷ್ಟ್ಯಾದಿವ್ಯಾಪಾರಗಳಿಗೆ ಮೂಲಕಾರಣನಾದ ಆ

ಆದಿಮೂಲನಾಮಕನು ಸಮೀರನಾಮಕರಾದ ಭಾರತೀಯರಮಣರಾದ ಮುಖ್ಯಪ್ರಾಣದೇವರಲ್ಲಿ ನೆಲೆಸಿರುವವನು. ಮಹಾಪ್ರಳಯಕಾಲದಲ್ಲಿಯೂ ಜಾಗ್ರತರಾಗಿರುವ, ಪರಶುಕ್ಲತ್ರಯರಲ್ಲಿ ಪ್ರವಿಷ್ಠರಾದ ಶ್ರೀಪರಮಾತ್ಮನ ಪ್ರಥಮಾಂಗಭೂತರಾದ. ಸತ್ವಗುಣಪ್ರಾಚುರ್ಯ ಶರೀರವುಳ್ಳ ಶ್ರೀ ವಾಯುದೇವರಿಗೆ ಸಮೀರ (ಸಮ್ಯಕ್ ಈರ) ರೆಂದು ಹೆಸರು.

೭. ಅಂತಹ ಸಮೀರನಾಮಕ ವಾಯುದೇವರ ಅಂತರ್ಯಾಮಿಯಾಗಿದ್ದು, ನಮ್ಮ ನಿತ್ಯಜೀವನದಲ್ಲಿ ಪ್ರತ್ಯಕ್ಷಅನುಭವಕ್ಕೆ ವಿಷಯವಾಗಿರುವ, ಸಮಸ್ತವಸ್ತುಗಳಲ್ಲಿ, ಆಯಾಯಾರೂಪಗಳಿಂದ ನೆಲೆಸಿರುವ ತದಾಕಾರ, ತತ್ತನ್ನಾಮ, ತದ್ರೂಪ, ತತ್ತಶಬ್ದವಾಚ್ಯನಾಗಿದ್ದು, ಆದರೂ ಅವುಗಳಿಂದ ಭಿನ್ನನಾಗಿದ್ದು, ಜೀವರಿಗೆ ತನ್ನ ಇರವನ್ನು ತೋರಿಸಿಕೊಳ್ಳದೆ, ಸಕಲೇಂದ್ರಿಯಗಳ ವ್ಯಾಪಾರಗಳನ್ನು ಬಿಂಬನೇ ಮಾಡುವನು. ॥೧೭॥

## ಪದ್ಯ ೧೮

**ಮೂಲ :—**

ಖೇಚರರು ಭೂಚರರು ವಾರಿ ನಿ
ಶಾಚರದೊಳಿದ್ದವರ ಕರ್ಮಗ
ಳಾಚರಿಸುವನು ಘನಮಹಿಮ ಪರಮಾಲ್ಪನೋಪಾದಿ
ಗೋಚರಿಸನು ಬಹುಪ್ರಕಾರಾ
ಲೋಚನೆಯ ಮಾಡಿದರು ಮನಸಿಗೆ
ಕೀಚಕಾರಿಪ್ರೀಯ ಕವಿಜನಗೇಯ ಮಹರಾಯ ॥೧೮॥

**ಅವತರಣಿಕೆ**

ಆಕಾಶಸಂಚಾರಿಗಳಾದ ಪಕ್ಷ್ಯಾದಿಜೀವರು, ಭೂಮಿಯಮೇಲೆ ಸಂಚರಿಸುವ ಮಾನವ, ಪಶ್ವಾದಿಜೀವರು, ಜಲಜರಪ್ರಾಣಿಗಳು, ರಾತ್ರಿ ಸಂಚರಿಸುವ ಪಿಶಾಚಾದಿ ಅಸುರಜೀವ ವರ್ಗ, ಇತ್ಯಾದಿ ಸಕಲಜೀವರಾಶಿಗಳಲ್ಲಿ ಇದ್ದು, ಆಯಾಯಾ ಯೋನಿಗಳಂತೆಯೇ ದೇಹಗತಕರ್ಮಗಳನ್ನು ಅತ್ಯಣುಸ್ವರೂಪನಾದ ಜೀವಾಕಾರನಾಗಿಯೇ ಇದ್ದು ಮಾಡುತ್ತಾ, ಎಷ್ಟು ರೀತಿಗಳಲ್ಲಿ ಆಲೋಚಿಸಿದರೂ, ಮನಸ್ಸಿಗೆ ಅಗೋಚರನಾಗಿದ್ದು, ಕೀಚಕಸಂಹಾರಿಯಾದ ಶ್ರೀಭೀಮಸೇನದೇವರ ಪ್ರಿಯನಾದ, ಬ್ರಹ್ಮಜ್ಞಾನಿಗಳಿಂದ ಗೇಗೀಯಮಾನನಾದ, ಸರ್ವೇಶನಾದ ಶ್ರೀ ಪರಮಾತ್ಮನು ವಿಹರಿಸುತ್ತಿರುವನು ಎಂದು ತಿಳಿಸುತ್ತಾರೆ— **ಖೇಚರರು** – ಎಂಬ ಪ್ರಸಕ್ತಸಂಧಿಗತ ೧೮ನೆಯ ಈ ಪದ್ಯದಿಂದ. ॥೧೮॥

**ಪ್ರತಿಪದಾರ್ಥ :—**

**ಖೇಚರರು** = ಆಕಾಶದಲ್ಲಿ ಸಂಚರಿಸುವ ಪಕ್ಷಿಜಾತಿ ಇತ್ಯಾದಿ ಜೀವಗಣ, **ಭೂಚರರು** = ಭೂಮಿಯ ಮೇಲೆ ಸಂಚರಿಸುವ, ಮಾನವರು, ಕುದುರೆ, ಆನೆ

ಇತ್ಯಾದಿ ಪಶ್ವಾದಿಜೀವರಾಶಿಗಳು, **ವಾರಿಚರ** = ನೀರಿನಲ್ಲಿ ವಾಸಿಸುವ ಮತ್ಸ್ಯಾದಿ ಜೀವವರ್ಗ, **ನಿಶಾಚರ** = ರಾತ್ರಿಕಾಲದಲ್ಲಿ ಸಂಚರಿಸುವ ಪಿಶಾಚಾದಿ ಜೀವಗಣ, **ರೊಳಿದ್ದು** = ಪೂರ್ವೋಕ್ತ ಸಕಲಜೀವವರ್ಗದಲ್ಲಿ ನೆಲೆಸಿದ್ದು, **ಅವರ**= ಆಯಾಯಾ ಜೀವರುಗಳ, **ಘನಮಹಿಮ** = ಅಸದೃಶ ಮಹಿಮೋಪೇತನಾದ ಶ್ರೀಪರಮಾತ್ಮನು, **ಪರಮ** = ಸರ್ವೋತ್ತಮನಾದ ಶ್ರೀಹರಿಯು, **ಅಲ್ಪನೋಪಾದಿ**= ಅತ್ಯಣುರೂಪದಲ್ಲಿರುವ ಜೀವರಂತೆಯೇ (ಅಲ್ಪ ಶಬ್ದಕ್ಕೆ ಪರಮ ಶಬ್ದವನ್ನು ವಿಶೇಷಣವನ್ನಾಗಿ ತೆಗೆದುಕೊಳ್ಳಬಹುದು. ಆಗ ಪರಮ ಎಂದರೆ ಅತ್ಯಂತ, ಅಲ್ಪ ಎಂದರೆ ಸೂಕ್ಷ್ಮವಾದ ಅಣುರೂಪ ಎಂದರ್ಥವಾಗುವುದು) **ಕರ್ಮಗಳ**= ಆಯಾಯಾ ಜೀವರ ಸ್ಥೂಲದೇಹದ್ವಾರಾ, ಕ್ರಿಯಾರೂಪವಾದ ವ್ಯಾಪಾರಗಳನ್ನು, **ಆಚರಿಸುವನು** = ಬಿಂಬಕ್ರಿಯಾದ್ವಾರಾ ಮಾಡಿ, ಜೀವರ ದ್ವಾರಾ ಮಾಡಿಸುತ್ತಿರುವನು. **ಬಹುಪ್ರಕಾರ** = ನಾನಾ ರೀತಿಗಳಲ್ಲಿ, **ಆಲೋಚನೆಯ ಮಾಡಿದರು** = ಮನಸಾ ಆಲೋಚಿಸಿದರೂ **ಮನಸಿಗೆ** = ಜೀವರ ಮನಸ್ಸಿಗೆ, **ಗೋಚರಿಸನು** = ವ್ಯಕ್ತನಾಗುವುದಿಲ್ಲ. **ಕೀಚಕಾರಿಪ್ರೀಯ** = ದುರುಳನಾದ ಕೀಚಕನನ್ನು ಸಂಹರಿಸಿದ ಶ್ರೀಭೀಮಸೇನ ದೇವರ ಪ್ರೀತಿಗೆ ವಿಷಯನಾದ, **ಕವಿಜನಗೇಯ** = ಬ್ರಹ್ಮಜ್ಞಾನಿಗಳಿಂದ ಸ್ತುತ್ಯನಾದ, **ಮಹರಾಯ**= ಸರ್ವನಿಯಾಮಕನಾದ ಶ್ರೀಪರಮಾತ್ಮನು ವಿಹರಿಸುತ್ತಿದ್ದಾನೆ.॥೧೮॥

## ವ್ಯಾಖ್ಯಾನಗಳು

### (೧) ಶ್ರೀ ಸಂಕರ್ಷಣೊಡೆಯರ ವ್ಯಾಖ್ಯಾನ :—

ಚತುರ್ವಿಧದೇಹಧಾರಿಗಳಾದ ಯಾವತ್ತೂ ಜೀವಕರ್ಮಗಳ ತಾನು ಆಚರಿಸಿ, ಅವರ ದ್ವಾರಾ ಆಚರಿಸುವಂತೆ ಮಾಡತಾನೆಂತ ಹೇಳತಾರೆ.

ಆಕಾಶದಲ್ಲಿ ಸಂಚರಿಸುವ ಜೀವರು, ಭೂಮಿಯಲ್ಲಿ ಸಂಚರಿಸತಕ್ಕ ಜೀವರು,

ಉದಕದಲ್ಲಿ ಸಂಚರಿಸತಕ್ಕ ಜೀವರು, ರಾತ್ರಿಕಾಲದಲ್ಲಿ ಸಂಚರಿಸತಕ್ಕ ಜೀವರು, (ಅಸುರರು, ಪಿಶಾಚಾದಿ ಜೀವರು) ತ್ರಿವಿಧರೂ ಇದರಲ್ಲೇ ಅಂತರ್ಭೂತರು. ಇವರೊಳಗೆ ಇದ್ದು, ಎಂದರೆ ಅವರವರ ಅಣುಸ್ವರೂಪದೊಳಗಿದ್ದು, ಆದಿಯಲ್ಲಿ ಸ್ವರೂಪೇಂದ್ರಿಯಗಳಿಗೆ, ಸ್ಥೂಲದೇಹದಿಂದ ದಾವ ಕರ್ಮವ ಮಾಡಿಸಬೇಕೋ ಅಂಥಾ ಇಚ್ಛಾ ಹುಟ್ಟಿಸಿ, ನಂತರ ಆಯಾಪ್ರಾಣಿಗಳ ಸ್ಥೂಲದೇಹದ್ವಾರಾ ಕ್ರಿಯಾರೂಪವಾದ ಕರ್ಮಗಳ, ತನ್ನ ಸ್ವಾಖ್ಯಕರ್ಮಗಳ ಪ್ರಥಮಥಃ ಆಚರಿಸುವನು. ತದ್ದ್ವಾರಾ ಜೀವನಿಂದ ಆಚರಣೆ ಮಾಡಿಸುವನು. ಗಂಭೀರವಾದ, ಅಸದೃಶವಾದ ಮಹಿಮೋಪೇತನಾದ ಪರಮಾತ್ಮನು, ಜೀವರು ಅತ್ಯಂತ ಅಲ್ಪರು ,ಅವರ ಅಂತರ್ಗತನಾದ ಬಿಂಬರೂಪಿ ಪರಮಾತ್ಮ ಅಲ್ಪರಾದ ಜೀವರೋಪಾದಿಯಲ್ಲಿ, ತನ್ನ ಘನಮಹಿಮೆ ವ್ಯಕ್ತಮಾಡದೇಇದ್ದು ಮನಸ್ಸಿಗೆ ಗೋಚರನಾಗತಾನೆ, ಎಂದರೆ, ಅಧಿಷ್ಠಾನಯೋಗ್ಯತಾನುಸಾರ ಅಲ್ಪಶಕ್ತಿಯೇ ಪ್ರದರ್ಶನಮಾಡತಾ ಇರತಾನೆ. ಎಂಥಾ ಪರಮಾತ್ಮನೆಂದರೆ, ಕೀಚಕಗೆ ಶತ್ರುವಾದ ವಾಯುದೇವರಿಗೆ, ತಥಾ ಭೀಮಸೇನದೇವರಿಗೆ ಪ್ರೀತಿವಿಷಯನಾದವ ಮತ್ತು ಸರ್ವಜ್ಞರಿಂದ ಸರ್ವಸಜ್ಜನರಿಗೆ ಪ್ರೀತಿವಿಷಯನಾದವ. ಜ್ಞಾನಿಗಳಿಂದ ಸ್ತುತ್ಯನಾದವ. ಸರ್ವಪ್ರಾಣಿಗಳನ್ನೂ ಆಳತಕ್ಕ ಸರ್ವೋತ್ತಮನಾದ ರಾಜನಾದವನು. ಇಂಥಾ ಪರಮಾತ್ಮ, ನಾನಾಪ್ರಕಾರ ಧ್ಯಾನಾದಿಗಳಿಂದ ರೂಪವೂ, ಆಲೋಚನಿಯಿಂದ ಗುಣಗಳು ಈ ಪ್ರಕಾರ ಮಾಡಿದರೂ, ಮನೋಇಂದ್ರಿಯಕ್ಕೆ ಗೋಚರನಾಗೋದಿಲ್ಲ ಮತ್ತು ಅವತಾರಗಳ ಮಾಡಿ ಅಲ್ಪರಾದ ಮನುಷ್ಯರೋಪಾದಿಯಲ್ಲಿ ಗೋಚರಿಸುತ್ತಾ ಇರುತ್ತಾನೆ ಎಂತ ತಾತ್ಪರ್ಯ. ॥೧೮॥

(೨) ಭಾವಪ್ರಕಾಶಿಕೆ :—

ಅಂತರಿಕ್ಷದಲ್ಲಿ ಸಂಚರಿಸುವ ಪಕ್ಷಿಗಳು, ದೇವತೆಗಳು, ಗಂಧರ್ವರು, ಮೊದಲಾದವರು, ಭೂಚರರಾದ ಪಶು ಮನುಷ್ಯಾದಿಗಳು, ಜಲದಲ್ಲಿ ಚರಿಸುವ

ಮೀನು ಮುಂತಾದವು, ರಾತ್ರಿಯಲ್ಲಿ ಸಂಚಾರ ಮಾಡುವ ರಾಕ್ಷಸಾದಿಗಳು – ಇವರುಗಳಲ್ಲಿದ್ದು, ಮಹಾಮಹಿಮೆಯುಳ್ಳವನಾದರೂ, ಕೇವಲ ಅಲ್ಪಪ್ರಾಣಿಗಳಂತೆ, ಆಯಾಜೀವರ ಕೃತ್ಯವನ್ನು ಮಾಡಿ ಮಾಡಿಸುವನು. ವಾಯುದೇವರಿಗೆ ಮುಖ್ಯಪ್ರೀತಿವಿಷಯನು. ಜ್ಞಾನಿಗಳಿಂದ ಸ್ತುತ್ಯನು. ಬ್ರಹ್ಮಾದಿಗಳಿಂದ ಪೂಜಾರೂಪವಾದ ಕಪ್ಪವನ್ನು ಕೈಗೊಳ್ಳುವನಾದುದರಿಂದ ಮಹರಾಯನು ಅಂದರೆ, ಚಕ್ರವರ್ತಿಯು ಆದ ಶ್ರೀಪರಮಾತ್ಮನು ತನ್ನ ಭಕ್ತರಿಗೆ ಅವರವರ ಯೋಗ್ಯತಾನುಸಾರ ಗೋಚರನಾಗುವನಲ್ಲದೆ ದೇಹಿಗಳು ಎಷ್ಟು ಪ್ರಕಾರ ಆಲೋಚನೆ ಮಾಡಿದರೂ, ಪರಮಾತ್ಮನು ಗೋಚರಿಸುವುದಿಲ್ಲ. ಮಹಾರಾಜ ಎಂಬ ನಾಮವು ಪರಮಾತ್ಮನಿಗೆ ಅನ್ವರ್ಥಕ. ಮಿಕ್ಕ ರಾಜರುಗಳಿಗೆ ಔಪಚಾರಿಕ. ***ಭಾಗವತ ದಶಮಸ್ಕಂಧ ಶ್ರುತಿಗೀತೆಯಲ್ಲಿ (ಅಧ್ಯಾಯ ೮೭ – ಶ್ಲೋಕ ೩೦)*** –

"ವರ್ಷಭುಜೋಖಿಳ ಕ್ಷಿತಿಪತಿರಿವ ವಿಶ್ವಸ್ಯೈಜೋವಿದಧತಿಯತ್ರೇತ್ಯದಿ ಕೃತಾಭವ

ತಶ್ಚಕೇತಾಃ ತ್ವಮೇಕಃ ಸ್ವರಾಡಖಿಳಕಾರಕ ಶಕ್ತಿಧರಸ್ತಾವಬಲಿಮುದ್ವಂಹತಿ ಸಮದಂತಿ ಚಯೀನಿಮಿಷಾಃ" ॥

ಅಂದರೆ, "ಎಲೈ ಸ್ವಾಮಿಯೇ, ನೀನೊಬ್ಬನೇ ಚಕ್ರವರ್ತಿಯು. ಎಲ್ಲಾ ಕಾರ್ಯಗಳನ್ನೂ ಎಲ್ಲರಿಂದಲೂ ಮಾಡಿಸುವ ಶಕ್ತಿಯುಳ್ಳವನು. ಬ್ರಹ್ಮಾದಿದೇವತೆಗಳೆಲ್ಲರೂ ಇತರರಿಂದ ತಾವು ಪೂಜಾದಿಗಳನ್ನು ಸ್ವೀಕರಿಸಿ, ನಿನಗೆ ಪೂಜಾರೂಪವಾದ ಕಪ್ಪವನ್ನು ಒಪ್ಪಿಸುವರು".

"ಖಂಡಾಧೀಶಾಃ ಸಾರ್ವಭೌಮಸ್ಯ ಯದ್ವದ್ಬ್ರಹ್ಮೇಶಾದ್ಯಾಃ ಕುರ್ವತೇ ತೇನುಶಾಸ್ತಿಮ್" – ಎಂಬ ಶಾಂಡಿಲ್ಯಶ್ರುತಿಯಲ್ಲಿಯೂ ಇದೇ ಅರ್ಥವು ಪ್ರತಿಪಾದಿತವಾಗಿದೆ. ॥೧೮॥

**(೩) ಭಾವದರ್ಪಣಟೀಕಾ :–**

ಸಮಸ್ತಚೇತನರಲ್ಲಿ ನಿಂತು, ಕರ್ಮ ತಾನೇ ಮಾಡುವನೆಂದು ಹೇಳುತ್ತಾರೆ. – ಖೇಚರೇತಿ ॥

**ಉಕ್ತಂಚ ಶ್ರೀಮದ್ಭಗವತ್ಪಾದಪೂಜ್ಯಚರಣೈಃ ಏಕಾದಶಸ್ಕಂಧ ಸಪ್ತಮಾಧ್ಯಾಯ ತಾತ್ಪರ್ಯೇ :–**

**"ಸ ಏವ ಚ ಮಯಿ ಇಸ್ಥಿತ್ವಾನಿಂದ್ಯಾನಿಂದ್ಯೆ ಕರೋತ್ಯಜ ಇತಿ" ॥೧೮॥**

**(೪) ಶ್ರೀ ವ್ಯಾಸದಾಸ ಸಿದ್ಧಾಂತ ಕೌಮುದೀ (ಸಂಸ್ಕೃತಮೂಲ) :–**

"ಖೇಚರ – ಇತಿ ಖೇಚರಾಃ – ದಿವಿಜಾಃ ॥ 'ಭೂಚರಾಃ – ಮನುಜಾಃ'॥ ನಿಶಾಚರಾಃ – ರಾಕ್ಷಸಾಃ ॥ ವಾರಿಚರಾಃ – ಮಕರಾದಯಃ ॥೧೮॥

**ಕನ್ನಡಾರ್ಥ :–**

ದೇವ – ಮನುಷ್ಯ,– ರಾಕ್ಷಸ – ಮೊಸಳೆ – ಮೀನ ಇತ್ಯಾದಿ ಸಮಸ್ತ ಪ್ರಾಣಿಗಳಲ್ಲಿ ಅಂತಸ್ಥಿತನಾಗಿದ್ದು, ಅವರವರಿಗೆ ವಿಹಿತವಾದ ಕರ್ಮಗಳನ್ನು ಮಾಡಿ ಮಾಡಿಸುತ್ತಿರುವನು. ಜೀವರು ಎಷ್ಟು ಆಲೋಚಿಸಿದರೂ ಗೋಚರನಾಗುವುದಿಲ್ಲ – ಎಂದು ಹೇಳುತ್ತಾರೆ.. ***"ಖೇಚರರು"***– ಎಂಬ ಪದ್ಯದಿಂದ.

ಖೇಚರರೆಂದರೆ ಅಂತರಿಕ್ಷಸಂಚಾರಿಗಳಾದ ದೇವತಾವರ್ಗ. ಭೂಚರರೆಂದರೆ, ಭೂಮಿಯ ಮೇಲೆ ಸಂಚರಿಸುವ ಮಾನವ ವರ್ಗ. ನಿಶಾಚರರೆಂದರೆ, ರಾತ್ರಿಯ ವೇಳೆಯಲ್ಲಿ ಸಂಚರಿಸುವ ರಾಕ್ಷಸಗಣ. ವಾರಿಚರರೆಂದರೆ, ನೀರಿನಲ್ಲಿ ಅಡ್ಡಾಡುವ ಮೀನ ಮೊಸಳೆ ಇತ್ಯಾದಿ ಪ್ರಾಣಿವರ್ಗ. ॥೧೮॥

### (ಔ) ಶ್ರೀ ಗುರುಹೃದಯಪ್ರಕಾಶಿಕೆ ವ್ಯಾಖ್ಯಾನ :–

ಸರ್ವಕರ್ತೃತ್ವ ನಿಮಿತ್ತದಿಂದ ದೇವರಿಗೆ ನಿಕೃಷ್ಟತ್ವಾದಿ ದೋಷವಿಲ್ಲವೆಂದು ತಿಳಿಸುತ್ತಾರೆ – ***ಖೇಚರರು*** ಎಂದು. ಜ್ಞಾನಿಗಳಿಂದ ವರ್ಣಿತನಾದಂಥ ಕೀಚಕಶತ್ರುವಾದ ಭೀಮಗೆ ಪ್ರಿಯನಾದ, ಮಹಾರಾಜನಾದ ದೇವರು, ಖೇಚರರೆಂಬ ದೇವತಾಪಕ್ಷ್ಯಾದಿಜೀವರಲ್ಲೂ, ವಾರಿಚರರೆಂಬ ಮೀನು ಮೊದಲಾದ ಜೀವರಲ್ಲೂ, ನಿಶಾಚರರೆಂಬ ರಾಕ್ಷಸಾದಿ ಜೀವರಲ್ಲೂ ಸಹಾ ಇದ್ದು, ಅವರ ಕರ್ಮವೆಂಬ ಶ್ರೇಷ್ಠ, ನಿಕೃಷ್ಟ ಸರ್ವೇಂದ್ರಿಯವ್ಯಾಪಾರಗಳನ್ನು ಪರಮಅಲ್ಪಜೀವರಂತೆ, ತತ್ತಚ್ಛಕ್ತ್ಯಾನುಸಾರ ಕ್ರಿಯಾವ್ಯಕ್ತಿ ಮಾಡುವನು. ಆದಾಗ್ಯೂ ಘನಮಹಿಮ– ಎಂದರೆ ತತ್ತದಂತರ್ಯಾಮಿ ದೇವರಿಗೆ ಅಲ್ಪಶಕ್ತಿತ್ವಾದಿ ದೋಷವಿಲ್ಲವೆಂದರ್ಥ. ಬಹುಪ್ರಕಾರ ಆಲೋಚನೆ ಮಾಡಿದರೂ ಮನಸ್ಸಿಗೆ ಗೋಚರಿಸನು– ಎಂದರೆ, ಪೂರ್ಣಶಕ್ತನಾದರೆ ಅಲ್ಪಕ್ರಿಯಾ ಮಾಡುವುದಕ್ಕೆ ನಿಮಿತ್ತವಿಲ್ಲ ಎಂಬ ಯುಕ್ತಿಯಿಂದ ಆಲೋಚಿಸಿದ ಮನಸ್ಸಿಗೆ ದೇವರು ಬಹುವಿಧವಾದಾಗ್ಯೂ ಗೊತ್ತಾಗುವುದಿಲ್ಲ ಎಂದರ್ಥ.

**ನ ಋತೇ ತ್ವತ್ಕ್ರಿಯತೇ ಕಿಂಚನಾರೇ ಎಂಬ ಶ್ರುತಿ,**

**ಯದಾಶ್ನಾತಿ ತದಾಶ್ನಾತಿ ಯದಾ ಜಿಘ್ರತಿ ಜಿಘ್ರತಿ** ಎಂಬ **ವಾಯುಪುರಾಣ,**

**ನೈಷಾತರ್ಕೇಣಮತಿರಾಪನೇಯಾ** ಎಂಬ **ಶ್ರುತಿ** ಮೊದಲಾದುವರ ಅರ್ಥ ವಿವರಿಸಲ್ಪಟ್ಟಿತು. ॥೧೮॥

## ಸರ್ವವ್ಯಾಖ್ಯಾನಸಾರಸಂಗ್ರಹ

ಸಮಸ್ತಜೀವರಾಶಿಗಳಲ್ಲಿ ಶ್ರೀಪರಮಾತ್ಮನು ಬಿಂಬರೂಪನಾಗಿದ್ದು, ಆಯಾಯಾ ಜೀವರ ಯೋನಿಗಳು, ದೇಹಗಳಿಗೆ ಅನುಗುಣವಾದ, ಕರ್ಮಗಳನ್ನು, ಕೇವಲ ಅತ್ಯಣುಸ್ವರೂಪನಾದ ಆ ಜೀವರಲ್ಲಿ ಅಂತರ್ಯಾಮಿತ್ವೇನ ಇದ್ದು, ಮಾಡಿ ಮಾಡಿಸುತ್ತಿರುವನು. ಸರ್ವಚೇಷ್ಟಾಪ್ರವರ್ತಕನಾಗಿದ್ದಾಗ್ಯೂ, ಅಪಾರಮ

ಹಿಮಾಸಂಪನ್ನನು. ಜೀವರು ನಾನಾಪ್ರಕಾರವಾಗಿ, ಆಲೋಚಿಸಿದರೂ, ತನ್ನ ಬಿಂಬ ಕ್ರಿಯಾರೂಪನಾದ ಸಕಲಕಾರ್ಯನಿರ್ವಹಣೆಯನ್ನು ತಿಳಿಸಿದೆ, ತಾನು ಅಗೋಚರನಾಗಿರುವನು – ಎಂದು ತಿಳಿಸುತ್ತಾರೆ. – **ಖೇಚರರು** – ಎಂಬ ಪ್ರಸಕ್ತ ೧೫ನೆಯ ಪದ್ಯದಿಂದ.

೧.ಆಕಾಶಮಾರ್ಗದಲ್ಲಿ ಸಂಚರಿಸುವ ಪಕ್ಷಿಗಳು, ರೆಕ್ಕೆಗಳುಳ್ಳ ಸಣ್ಣ ಕ್ರಿಮಿಕೀಟಾದಿಗಳು, ದೇವತೆಗಳು, ಗಂಧರ್ವರು ಇತ್ಯಾದಿ ಚೇತನವರ್ಗಕ್ಕೆ **ಖೇಚರರು** ಎಂದು ಹೆಸರು (ಖಂ – ಆಕಾಶ, ಖೇ–ಆಕಾಶದಲ್ಲಿ, ಚರ–ಸಂಚರಿಸುವವರು) ಇಲ್ಲಿ ಗಂಧರ್ವಾದಿದೇವತಾವರ್ಗವನ್ನು ಪ್ರಧಾನವಾಗಿ ಅರ್ಥೈಯಿಸಬೇಕು.

೨. ಭೂಮಿಯ ಮೇಲೆ ಸಂಚರಿಸುವ, ಅಶ್ವಾದಿ ಪಶುವರ್ಗ, ಸಣ್ಣ ಆಕಾರದಲ್ಲಿರುವ ಕ್ರಿಮಿಕೀಟಾದಿಗಳು, ಮಾನವರು ಇತ್ಯಾದಿ ಜೀವಗಣವನ್ನು **ಭೂಚರರು** ಎಂದು ಕರೆಯುವರು. ಇಲ್ಲಿ ಮಾನವವರ್ಗವನ್ನು ಮುಖ್ಯವಾಗಿ ಪರಿಗ್ರಹಿಸಬೇಕು.

೩. ಜಲದಲ್ಲಿ ವಿಹಾರಮಾಡುವ, ಮೀನು, ಮೊಸಳೆ, ತಿಮಿಂಗಿಲ ಇತ್ಯಾದಿ ಜೀವಜಂತುಗಳಿಗೆ **ವಾರಿಚರರು** ಎಂದು ಹೆಸರು.

೪. ರಾತ್ರಿಯ ಸಮಯದಲ್ಲಿ ಸಂಚರಿಸತಕ್ಕ ಭೂತ, ಪ್ರೇತ, ಪಿಶಾಚಾದಿ ವರ್ಗ, ರಾಕ್ಷಸಗಣ– ಇವರಿಗೆ **ನಿಶಾಚರರೆಂತ** ನಾಮ.

೫. ಇಂತು, ಖೇಚರ–ಭೂಚರ–ವಾರಿಚರ–ನಿಶಾಚರ ಎಂಬ ಸಮಸ್ತ ಜೀವರಾಶಿಗಳಲ್ಲಿ ಶ್ರೀ ಪರಮಾತ್ಮನು ವ್ಯಾಪಿಸಿದ್ದು, ಬಿಂಬರೂಪದಿಂದ ಸ್ಥಿತನಾಗಿದ್ದು, ಆಯಾಯಾ ಚೇತನವರ್ಗದ ದೇಹಧರ್ಮಗಳಿಗನುಸಾರವಾಗಿ, ಸಕಲೇಂದ್ರಿಯ ವ್ಯಾಪಾರಗಳನ್ನು ಬಿಂಬಕ್ರಿಯಾದ್ವಾರಾ ತಾನೇ ಮಾಡಿ, ಇಂದ್ರಿಯಾಭಿಮಾನಿಗಳ

ದ್ವಾರಾ ಮಾಡಿಸುತ್ತಾ, ದೇಹಗತ ಸಕಲಾವಯುವಗಳಲ್ಲಿ ಪ್ರಕಾಶತೋವ್ಯಾಪ್ತರಾಗಿರುವ ಆಯಾಯಾ ಜೀವರಿಗೆ ಅನುಭವರೂಪದಲ್ಲಿ ತಂದೀಯುವನು. ಹೀಗೆ ಸಕಲ ಚೇತನರಲ್ಲಿ ಇದ್ದು ಅವರ **ಕರ್ಮಗಳಾಚರಿಸುವನು.**

೬. ಸರ್ವಕರ್ತನಾದ ಆ ಪರಮಾತ್ಮನಾದರೋ ಅಪಾರಮಹಿಮಾಸಂಪನ್ನನು. ಅವನ ಮಹಿಮಾವಿಶೇಷಗಳು ನಿರತಿಶಯ ಹಾಗೂ ಅಸದೃಶವಾದವು. ಇದರಿಂದ **ಘನಮಹಿಮನು.**

೭. ಅಂತಹ ಘನಮಹಿಮಾನ್ವಿತವಾದ ಶ್ರೀಪರಮಾತ್ಮನು. ಪರನಾಮಕಳಾದ ಶ್ರೀಲಕ್ಷ್ಮೀದೇವಿಗಿಂತ ಅನಂತಾನಂತಗುಣಗಳಿಂದ ಉತ್ತಮನು. ಸರ್ವೋತ್ತಮನಾದ ಶ್ರೀ ಹರಿಯು **ಪರಮನು.**

೮. ಇಂತು, ಘನಮಹಿಮನೂ, ಪರಮನೂ ಆದ ಆ ಪರಾತ್ಪರನು ಅಣುಸ್ವರೂಪನಾದ ಜೀವರಂತೆ ಅಲ್ಪನಂತೆ, ಆಯಾಯ ಜೀವರ ಆಕಾರನಾಗಿದ್ದು, ಜೀವನಾಮಕನಾಗಿ, ಜೀವಾಂತರ್ಯಾಮಿಯಾಗಿ, ಸಕಲಕರ್ಮಗಳನ್ನು ನಿರ್ವಹಿಸುತ್ತಿರುವನು. ಬ್ರಹ್ಮಾದಿತೃಣಾಂತಸಮಸ್ತಜೀವರೂ ಪರಮಾಣು ಸ್ವರೂಪರಾದ್ದರಿಂದ, ಪರಮ ಎಂಬ ಶಬ್ದವನ್ನು ಅತ್ಯಲ್ಪಅಣುಸ್ವರೂಪವಾದ ಜೀವರಂತೆ – ಎಂತಲೂ ಅರ್ಥಮಾಡಬಹುದು.

೯. ದೇಹಗತಸಕಲೇಂದ್ರಿಯಗಳ ದ್ವಾರಾ, ಜೀವರು ಮಾಡಬೇಕಾದ ಸಮಸ್ತಕರ್ಮಗಳನ್ನೂ ಕ್ರಿಯಾತ್ಮಕವಾಗಿ, ಬಿಂಬಕ್ರಿಯಾದ್ವಾರಾ ಮಾಡಿಸುತ್ತಿರುವನು. ಬಿಂಬನ ವ್ಯಾಪಾರ ಇಷ್ಟಿದ್ದರೂ, ಜೀವರು ನಾನಾಪ್ರಕಾಶವಾಗಿ ಆಲೋಚಿಸಿದರೂ, ತನ್ನ ಇರವನ್ನು ತೋರ್ಪಡಿಸಿಕೊಳ್ಳದೆ, ಅಗೋಚರನಾಗಿರುವನು. ಬಹುಪ್ರಕಾರದ ಆಲೋಚನೆ ಮಾಡಿದರೂ, ಜೀವರ ಮನಸ್ಸಿಗೆ ಗೋಚರಿಸನು. ಪುಷ್ಪಗತ ಪರಿಮಳದಂತೆ, ಕಾಷ್ಟವೆಂಬ ಅರಣಿಗತ ಅಗ್ನಿಯಂತೆ, ಅಗೋಚರನಾಗಿದ್ದಾನೆ.

ಅಗೋಚರನಾದ ಆ ಅಪ್ರಮೇಯನ ಮಹಿಮಾತಿಶಯಗಳನ್ನು ಅರಿಯದ ಅಜ್ಞಾನಿಗಳು ಅಹಂಕಾರ ಮಮಕಾರಗಳಿಂದ ಗ್ರಸ್ತರಾಗಿ, ಅಹಂಕರ್ತೃತ್ವಾಭಿಮಾನವನ್ನು ಹೊಂದಿರುತ್ತಾರೆ. ಅಜ್ಞಾನರೂಪವಾದ ಈ ಪ್ರತಿಬಂಧಕವು ಮಾಯಾರಮಣನಾದ ಶ್ರೀಪರಮಾತ್ಮನ ಪರಮಾನುಗ್ರಹದಿಂದ ಮಾತ್ರ ನಿವಾರಣೆಯಾಗಲು ಸಾಧ್ಯ. ಅನ್ಯಥಾ ಮಾರ್ಗವೇ ಇಲ್ಲ.

೧೦. ಧರ್ಮಾತ್ಮರಾದ ಪಾಂಡವರು ಛದ್ಮವೇಷದಲ್ಲಿ ವಿರಾಟನಗರದಲ್ಲಿದ್ದಾಗ, ಕಾಮಾಂಧನಾದ ಕೀಚಕನು ದ್ರೌಪದಿಯ ಚೆಲುವಿಕೆಗೆ ಮರುಳಾಗಿ, ಬಲಾತ್ಕರಿಸಲು, ನರ್ತನಶಾಲೆಯಲ್ಲಿ ಮೋಹಿನೀವೇಷಧಾರಿಯಾಗಿದ್ದ ಶ್ರೀಭೀಮಸೇನದೇವರಿಂದ ಸಂಹೃತನಾದನು. ಅಂತಹ ಕೀಚಕನನ್ನು ಸಂಹರಿಸಿದ ಭೀಮಸೇನ ದೇವರ ಪ್ರೀತಿಗೆ ಮುಖ್ಯ ವಿಷಯನಾದ್ದರಿಂದ, ಯದುಕುಲ ಲಲಾಮನಾದ ಶ್ರೀಕೃಷ್ಣನು **ಕೀಚಕಾರಿಪ್ರಿಯನು.**

೧೧. ಕೀಚಕಾರಿಪ್ರಿಯನನ್ನು ಬ್ರಹ್ಮಜ್ಞಾನಿಗಳು ವಿಶೇಷವಾಗಿ ಸ್ತುತಿಸುವನು. ಹೀಗೆ ಜ್ಞಾನಿಗಳಿಂದ (ಕವಿಜನ) ಸಂಸ್ತುತ್ಯಮಾನನಾದ (ಗೇಯ) ಶ್ರೀಹರಿಯು **ಕವಿಜನಗೇಯನು.**

೧೨. ಈಶಕೋಟಿಪ್ರವಿಷ್ಟಳಾದ ಶ್ರೀಲಕ್ಷ್ಮೀದೇವಿ, ಜೀವಕೋಟಿಪ್ರವಿಷ್ಟರಾದ ಬ್ರಹ್ಮಾದಿ ತೃಣಾಂತಸಮಸ್ತತ್ರಿವಿಧ ಜೀವವರ್ಗ ಇವರೆಲ್ಲರಿಗೂ ಸರ್ವಪ್ರಕಾರಗಳಿಂದಲೂ ಉತ್ತಮೋತ್ತಮನಾದ ಆ ಸರ್ವೋತ್ಕೃಷ್ಟನು ಚರಾಚರಾತ್ಮಕವಾದ ಈ ವಿಶ್ವಕ್ಕೆ ಚಕ್ರವರ್ತಿ ಸಾರ್ವಭೌಮನು. ಬ್ರಹ್ಮ ರುದ್ರ, ಇಂದ್ರ, ಸೂರ್ಯ ಇತ್ಯಾದಿ ಸಮಸ್ತ ದೇವತಾವರ್ಗವು ತಮ್ಮನ್ನು ಆರಾಧಿಸುವ ಜೀವರು ಮಾಡುವ ಸೇವಾರೂಪವಾದ ಕಪ್ಪವನ್ನು ಸ್ವೀಕರಿಸಿ, ಸಾಮಂತರಾಜರಂತೆ, ಆ ಅನಂತಕೋಟಿಬ್ರಹಾಂಡನಾಯಕನ ಅಡಿದಾವರೆಗಳಿಗೆ ಅರ್ಪಿಸುತ್ತಿರುವರು. ಇದರಿಂದ **ಮಹರಾಯನು.**

## ಪ್ರಮಾಣಗಳು :—

(೧) ಖಂಡಾಧೀಶಾಃ ಸಾರ್ವಭೌಮಸ್ಯ ಯದ್ವದ್ಬ್ರಹ್ಮೇಶಾದ್ಯಾಃ ಕುರ್ವತೇ ತೇಸುಶಾಸ್ತಿಮ್''॥

— **ಶಾಂಡಿಲ್ಯಶ್ರುತಿವಚನ**

(೨) "ಸ ಏವಚ ಮಯಿಸ್ಥಿತ್ವಾ ನಿಂದ್ಯಾನಿಂದ್ಯೇ ಕರೋತ್ಯಜಃ''

— **ಇತಿಏಕಾದಶಸ್ಕಂಧ — ಸಪ್ತಮಾಧ್ಯಾಯ —ಶ್ರೀ ಭಾಗವತ ತಾತ್ಪರ್ಯ**

(೩) "ನ ಖಿಯತೇ ತ್ವತ್ಪ್ರಿಯತೇ ಕಿಂಚನಾರೇ''॥

— ಎಂಬ ಶ್ರುತಿವಾಕ್ಯ

(೪) "ಯದಾಪ್ನೋತಿ ತದಾಶ್ನಾತಿ ಯದಾ ಜಿಘ್ರುತಿ ಜಿಘ್ರುತಿ''

— **ವಾಯುಪುರಾಣ ವಚನ**

## ಪದ್ಯ ೧೯

**ಮೂಲ :—**

ಒಂದೆ ಗೋತ್ರ ಪ್ರವರ ಸಂಧ್ಯಾ
ವಂದನೆಗಳನು ಮಾಡಿ ಪ್ರಾಂತಕೆ
ತಂದೆ ತನಯರು ಬೇರೆ ತಮ್ಮಯ ಪೆಸರುಗೊಂಬಂತೆ
ಒಂದೆ ದೇಹದೊಳಿದ್ದು ನಿಂದ್ಯಾ
ನಿಂದ್ಯ ಕರ್ಮವ ಮಾಡಿ ಮಾಡಿಸಿ
ಇಂದಿರೇಶನು ಸರ್ವಜೀವರೊಳೀಶನೆನಿಸುವನು ॥೧೯ ॥

**ಅವತರಣಿಕೆ :—**

ಒಂದೇ ದೇಹದಲ್ಲಿ ಸರ್ವಾಂಗಗಳಲ್ಲಿ ವ್ಯಾಪಕನಾಗಿದ್ದು, ನಿಂದ್ಯವಾದ ಪಾಪಕರ್ಮಗಳನ್ನೂ ಮತ್ತು ಅನಿಂದ್ಯವಾದ ಪುಣ್ಯಕರ್ಮಗಳನ್ನೂ ಬಿಂಬಕ್ರಿಯಾ ದ್ವಾರಾ ಮಾಡಿ, ತತ್ತ್ವದೇವತೆಗಳು ಹಾಗೂ ದೈತ್ಯರ ದ್ವಾರಾ ಮಾಡಿಸಿ, ಇಂದಿರಾರಮಣನಾದ ಶ್ರೀಹರಿಯು ಸಮಸ್ತತ್ರಿವಿಧಜೀವರಲ್ಲಿ ಅಂತರ್ಯಾಮಿಯಾಗಿದ್ದು, ಸರ್ವನಿಯಾಮಕನೆಂದು ಕರೆಯಿಸುತ್ತಾನೆ – ಎಂಬ ತತ್ತ್ವವನ್ನು ಒಂದೇ ಗೋತ್ರ ಪ್ರವರಗಳಿಗೆ ಸೇರಿದ ತಂದೆ ಮತ್ತು ಮಕ್ಕಳು ಸಂಧ್ಯಾವಂದನಾದಿನಿತ್ಯಕರ್ಮಗಳನ್ನು ಮಾಡುವಾಗ, ಒಂದೇ ಗೋತ್ರ ಮತ್ತು ಪ್ರವರಗಳನ್ನು ಉಚ್ಚರಿಸಿದ್ದಾಗ್ಯೂ, ತಮ್ಮ ತಮ್ಮ ಹೆಸರುಗಳಿಂದಲೇ ಆ ಕರ್ಮವಿಧಾನವನ್ನು ಶ್ರೀಲಕ್ಷ್ಮೀನಾರಾಯಣ ಪ್ರೇರಣೆಯಾ ಶ್ರೀಲಕ್ಷ್ಮೀನಾರಾಯಣ ಪ್ರೀತ್ಯರ್ಥಂ ಎಂಬ ಸಂಕಲ್ಪಾನುಸಾರ ಹೇಗೆ ಕೃಷ್ಣಾರ್ಪಣಪೂರ್ವಕ ಅರ್ಪಿಸುತ್ತಾರೆಯೋ ಅಂತೆಯೇ ಎಂಬ ಸುಂದರವಾದ ದೃಷ್ಟಾಂತದಿಂದ ತಿಳಿಸುತ್ತಾರೆ. ***ಒಂದೇ ಗೋತ್ರಪ್ರವರ*** – ಎಂಬ ಪ್ರಸಕ್ತಸಂಧಿಗತ ೧೯ನೆಯ ಪದ್ಯದಿಂದ. ॥೧೯॥

ಪ್ರತಿಪದಾರ್ಥ :—

ತಂದೆ = ತಂದೆಯಾದವನು, ತನಯರು = ಆ ತಂದೆಯ ಮಕ್ಕಳು, ಒಂದೆ= ಏಕಪ್ರಕಾರವಾಗಿ (ವ್ಯತ್ಯಾಸವಿಲ್ಲದಂತೆ), ಗೋತ್ರ = ತಮ್ಮ ತಮ್ಮ ಗೋತ್ರವೇನು, ಪ್ರವರ = ಪ್ರವರವೇನು, ಸಂಧ್ಯಾವಂದನೆಗಳು = ನಿತ್ಯಕರ್ಮರೂಪವಾದ ತ್ರಿಕಾಲ ಸಂಧ್ಯಾವಂದನೆಗಳನ್ನು, ಮಾಡಿ = ತ್ರಿಕಾಲಗಳಲ್ಲಿಯೂ ಆಚರಿಸಿ, ಪ್ರಾಂತಕೆ = ಸಂಧ್ಯಾವಂದನೆಯ ಮುಕ್ತಾಯಕಾಲದಲ್ಲಿ, ತಮ್ಮ ಪೆಸರು = ತಂದೆ ಮತ್ತು ಮಕ್ಕಳು ಒಂದೇ ಗೋತ್ರ ಪ್ರವರ ಉಚ್ಚರಿಸಿದರೂ, ಕರ್ಮಾರ್ಪಣೆಯ ಕಾಲದಲ್ಲಿ ತಮ್ಮ ತಮ್ಮ ಜನ್ಮನಾಮಗಳನ್ನು, ಬೇರೆ = ಪ್ರತ್ಯೇಕ ಪ್ರತ್ಯೇಕವಾಗಿ, ಕೊಂಬಂತೆ = ಹೇಳುವಂತೆ, ಒಂದೇ ದೇಹದೊಳಿದ್ದು = ಏಕದೇಹದಲ್ಲಿ ಆವಾಸರಾಗಿದ್ದು (ಪರಮಾತ್ಮ ತಂದೆ ಸದೃಶ, ಈಶಾಧೀನನಾದ ಜೀವ ಪುತ್ರ ಸದೃಶ. ಇಬ್ಬರೂ ಏಕದೇಹಾವಾಸಿಗಳೇ) ನಿಂದ್ಯಾ = ನಿಷಿದ್ಧವಾದ ಪಾಪಕಾರ್ಯಗಳೇನು, ಅನಿಂದ್ಯಾ = ವಿಧ್ಯುಕ್ತ ಪುಣ್ಯಕರ್ಮಗಳೇನು, ಮಾಡಿ ಮಾಡಿಸಿ = ಬಿಂಬಕ್ರಿಯಾದ್ವಾರಾ ತಂದೆಯು ತನಯನಿಗೆ ಉಪದೇಶಿಸುವಂತೆ, ತಾನೇ ಮಾಡಿ, ಪ್ರತಿಬಿಂಬಕ್ರಿಯಾದ್ವಾರಾ ಪ್ರತಿಬಿಂಬಭೂತರಾದ ಜೀವರ ಮೂಲಕ ಮಾಡಿಸಿ, ಇಂದಿರೇಶನು = ಶ್ರೀಲಕ್ಷ್ಮೀಪತಿಯಾದ ಪರಮಾತ್ಮನು (ಲೋಕಜನನಿ ಇಂದಿರಾ ಸರ್ವಜೀವರಿಗೂ ಮಾತೆ) ಸರ್ವಜೀವರೊಳು = ತ್ರಿವಿಧವರ್ಗಕ್ಕೆ ಸೇರಿದ ಸಮಸ್ತಜೀವರಾಶಿಗಳ ಸ್ವರೂಪದೇಹದಲ್ಲಿ ಬಿಂಬನಾಗಿದ್ದು, ಲಿಂಗಾನಿರುದ್ಧ ಸ್ಥೂಲಶರೀರಗಳಲ್ಲಿ ವ್ಯಾಪ್ತನಾಗಿದ್ದು, ಈಶನೆನಿಸುವನು = ಸರ್ವವ್ಯಾಪಾರಗಳನಿಗೂ ನಿಯಾಮಕನು ಎಂದೆನಿಸಿದ್ದಾನೆ. ॥೧೯॥

## ವ್ಯಾಖ್ಯಾನಗಳು

### (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ :—

ಕರ್ಮಗಳು ಜೀವ ಪರಮಾತ್ಮನು ಸೇರಿ ಮಾಡಿದರೂ ಜೀವಭುಕ್ತಬ್ಯಾರೆ, ಈಶಭುಕ್ತ ಬ್ಯಾರೆ ಎಂತ ಹೇಳತಾರೆ.

ತಂದೆ ಮಕ್ಕಳು ಭೇದವಿಲ್ಲದೆ ಏಕಪ್ರಕಾರವಾಗಿ ಇರತಕ್ಕ ಗೋತ್ರವೇನು, ಪ್ರವರವೇನು ಇವುಗಳಿಂದ ಯುಕ್ತವಾದ ಒಂದೇ ಪ್ರಕಾರವಾದ ಗಾಯತ್ರೀ ಅರ್ಘ್ಯ ಮೊದಲಾದ ಸಂಧ್ಯಾವಂದನೆಗಳೇನು ಮತ್ತು ತ್ರಿಕಾಲಸಂಧ್ಯಾವಂದನೆಗಳನ್ನು ತ್ರಿಕಾಲದಲ್ಲೂ ಮಾಡಿ, ಸಂಧ್ಯಾವಂದನ ಮುಗಿಯೋ ಸಮಯಕ್ಕೆ ತಂದೆ–ಮಕ್ಕಳು ತಮ್ಮ ಜನ್ಮನಾಮಗಳು ಬ್ಯಾರೇ ಬ್ಯಾರೇ ಉಚ್ಚಾರಣೆಗೆ ಸ್ವೀಕರಿಸುವಂತೆ ಈ ದೇಹದೊಳು ತಂದೆಸದೃಶ ಪರಮಾತ್ಮ, ತಂದೆ ಅಧೀನನಾದ ಪುತ್ರಸದೃಶವಾದ ಈಶಧೀನನಾದ ಜೀವ ಉಭಯರು ಆವಾಸನಾಗಿ ಇದ್ದು, ಪಾಪ–ಪುಣ್ಯಕರ್ಮವ, ಸಂಧ್ಯಾವಂದನೆ ತಂದೆಯಾದವ ಪುತ್ರಗೆ ಹೇಳಿಕೊಡಬೇಕಾದರೆ ಉಚ್ಚಾರರೂಪದಿಂದ ತಾನು ಪ್ರಥಮಥಃ ಮಾಡಿ, ತದ್ವಾರಾ ಪುತ್ರನ ಕಡಿಯಿಂದ ಮಾಡಿಸಿದಂತೆ, ನಿಂದ್ಯಾನಿಂದ್ಯ ಕರ್ಮಗಳ ಪರಮಾತ್ಮ ಆದಿಯಲ್ಲಿ ತಾನು ಮಾಡಿ ನಂತರ ಜೀವನಕಡಿಯಿಂದ ಮಾಡಿಸತಾನೆ. ಒಂದೇ ಕರ್ಮ ಜೀವ, ಪರಮಾತ್ಮರು ಮಾಡಿದ ಕಾಲಕ್ಕೂ, ಪರಿಯವಸಾನಕ್ಕೆ ಅವರವರ ಹೆಸರು, ಬ್ಯಾರೆ ಬ್ಯಾರೆ ಆದ್ದರಿಂದ ಅವರ ಹೆಸರು ಅವರವರು ಸ್ವೀಕರಿಸೋವರಾದರು. ಹಾಂಗೆ ನಿಂದ್ಯಾನಿಂದ್ಯಕರ್ಮಗತ ತನ್ನ ಸ್ವಾಖ್ಯ ಪರಮಾತ್ಮನೂ, ಜೀವಭುಕ್ತ ಜಡವಿಷಯಗಳ ಜೀವನೂ ಸ್ವೀಕರಿಸತಾರೆ. ಇಂದಿರಾಪತಿಯಾದ ಪರಮಾತ್ಮ ಸರ್ವಪ್ರಾಣಿಗಳ ಸ್ವರೂಪದಲ್ಲಿ, ಸ್ಥೂಲಶರೀರದಲ್ಲಿ ಇದ್ದು, ನಿಯಾಮಕ ಸ್ವಾಮಿ ಎಂತಲೂ, ಜೀವ ಅವನಿಂದ ಪ್ರೇರಿತನಾದ ಭೃತ್ಯ ಎಂತಲೂ ಎನಿಸೋವನಾಗತಾನೆ.

ವಿಶೇಷಾರ್ಥ :— ಶ್ರುತಿ–ಸ್ಮೃತಿಗಳ ಅನುಸರಿಸಿ ಕರ್ಮ ಮಾಡತಾನೇ, ವಿಧಿಕರ್ಮವೇ ಮಾಡತಾನೇ ಹೊರತು, ನಿಷೇಧಕರ್ಮ ಮಾಡೋದಿಲ್ಲ ಎಂದರೆ ನಡಿಯತಕ್ಕದ್ದಲ್ಲ. ದ್ವಂದ್ವಕರ್ಮಗಳು ಆಚರಿಸಬೇಕೆಂದು ಹೇಳತಾರೆ. ಒಂದೇಗೋತ್ರ, ಪ್ರವರ, ಸಂಧ್ಯಾವಂದನೆ ಒಂದೇ. ಇವು ಮೂರೂ ತಂದೆ ಮಕ್ಕಳಿಗೆ ಒಂದೇ. ಲೇಶವಾದರೂ ವ್ಯತ್ಯಾಸವಿಲ್ಲದೆ ತಂದೆ ಮಕ್ಕಳು ಉಚ್ಚಾರ ಮಾಡತಾರೆ. ಉಪಸಂಹಾರಕ್ಕೆ ತಂದೆ ಮಗ ಇಬ್ಬರೂ ಪ್ರತ್ಯೇಕವಾಗಿ ತಂದೆ ಹೆಸರು ತಂದೆಯೂ, ಮಗನ ಹೆಸರು ಮಗನೂ ಬ್ಯಾರೆ ಬ್ಯಾರೆ ಹೆಸರು ಉಚ್ಚಾರಮಾಡೋವರಾಗತಾರೆ. ಅವರೋಹಾದಿಯಲ್ಲಿ ಜೀವಾತಂತರ್ಗತನಾದ ಪರಮಾತ್ಮ ನಿಷಿದ್ಧಕರ್ಮ ಅನಿಷಿದ್ಧಕರ್ಮ ಎರಡೂ ಪ್ರೇರಿಸಿ ಮಾಡಸತಾನೆ. ಆದ್ದರಿಂದ ನಿಷಿದ್ಧ ತ್ಯಾಗ ಮಾಡೋದಕ್ಕೂ, ವಿಧಿ ಆಚರಣೆ ಮಾಡೋದಕ್ಕೂ ಎರಡಕ್ಕೂ ಜೀವ ಸಮರ್ಥನಾಗೋದಿಲ್ಲ. ಪರಮಾತ್ಮನಿಂದೇ ಪ್ರೇರಿತವಾದ ದ್ವಂದ್ವಕರ್ಮಗಳು ಆಚರಣೆ ಮಾಡಬೇಕೆ ಹೊರತು, ಅನ್ಯಥಾ ಕೂಡೋದಿಲ್ಲ. ಪರಮಾತ್ಮ ಯಾಕೆ ಹಾಂಗೆ ಮಾಡಸತಾನೆ ಎಂದರೆ, ಅನಾದಿಕರ್ಮಸ್ವಭಾವ ಅಂಥಾದ್ದು. ಈ ಅನಾದಿಕರ್ಮ ಈಶ್ವರನಿಂದ ರಚಿತವಲ್ಲ, ಜಡಕರ್ಮವು ಪರಮಾತ್ಮ ಅದರನ್ನು ವ್ಯಕ್ತ ಮಾಡತಾನೆ. ಆದರೆ ವಿಧಿ ತಪ್ಪಿದವನಾಗತಾನಲ್ಲ ಎಂದರೆ, ಆಗಲಿಲ್ಲ. ಆದನೂ ವಿಧಿ ಹೇಳತಕ್ಕ ಶಾಸ್ತ್ರದಲ್ಲಿ ದಾವಪ್ರಕಾರ ಅನುಸಂಧಾನ ಮಾಡಬೇಕೆಂದು ಹೇಳತದೋ ಆ ವಿಧಿಯನ್ನು ಆಚರಿಸಿದ್ದರಿಂದ ದ್ವಂದ್ವಕರ್ಮವೂ ನಿಷಿದ್ಧಕರ್ಮವೇ ಆಯಿತು. ವಿಧಿಯನ್ನು ಅನುಸರಿಸಿ ದಾವ ಕರ್ಮವೂ ಮಾಡಿದವನಾಗೋದಿಲ್ಲ. ಆದ್ದರಿಂದ ವಿಧಿಯನ್ನು ಅನುಸಂಧಾನಮಾಡಿ ಪರಮಾತ್ಮನಿಂದ ಮಾಡಿಸಲ್ಪಟ್ಟ ದ್ವಂದ್ವಕರ್ಮಗಳ ಮಾಡೋವದಾವನೋ ಅವ ವಿಧಿ ತಪ್ಪಿದವನಲ್ಲ. ತದ್ವ್ಯತಿರಿಕ್ತ ಸತ್ಕರ್ಮಗಳ ಮಾಡಿದವರೆಲ್ಲಾ ವಿಧಿ ತಪ್ಪಿದವರೇ ಎಂತ ಭಾವ. ತಂದೆ ಹೆಸರು ಮಗ, ಮಗನ ಹೆಸರು ತಂದೆ ಉಚ್ಚರಿಸೋಣ ಪರಸ್ಪರ ನಿಷೇಧ ಹ್ಯಾಂಗೋ, ಮತ್ತು ಅವರವರ ಹೆಸರು ಅವರವರೇ ಉಚ್ಚಾರ ಮಾಡೋಣ ನಿಷಿದ್ಧ

ಹ್ಯಾಂಗಲ್ಲವೋ ತದ್ವತ್ ಸಂಧ್ಯಾವನಂದನಕ್ಕೆ ಸದೃಶವಾದ ದೇಹ ಒಂದು. ತದ್ಗತ ಪರಮಾತ್ಮ ಒಬ್ಬನೇ ಆಗಿದ್ದು ತಂದೆ ಮಕ್ಕಳು ತಮ್ಮ ಹೆಸರು ಬ್ಯಾರೆ ಬ್ಯಾರೆ ಉಚ್ಚಾರಮಾಡಿದಂತೆ ಪರಮಾತ್ಮ ದ್ವಂದ್ವಕರ್ಮಗಳ ಪ್ರೇರಿಸತಾನೆ. ಅದರಂತೆ ಮಾಡಸತಾನೆ. ಜೀವ ಮಾಡತಾನೆ. ಆದರೆ ಜೀವ ದೋಷಿ ಆಗತಾನ ಅಥವಾ ಆಗಲಾರನ ಹ್ಯಾಂಗೆ? ದ್ವಂದ್ವಕರ್ಮ ಮಾಡದೇ ಹೋದರೇನೆ ಜೀವದೋಷಿ ಆಗತಾನೆ. ತಂದೆ–ತನಯರು ತಮ್ಮ ತಮ್ಮ ಹೆಸರು ಬ್ಯಾರೆ ಬ್ಯಾರೆ ಉಚ್ಚಾರ ಮಾಡದೇ ಹೋದರೆ ದೋಷಿಗಳಾಗತಾರೆ. ಪ್ರತ್ಯೇಕ ಉಚ್ಚಾರಣೆ ಮಾಡೋದರಿಂದ ದೋಷಿಗಳಾಗೋದಿಲ್ಲ. ದ್ವಂದ್ವಕರ್ಮಗಳು ಯಾಕೆ ದೋಷಗಳಾಗಲಿಲ್ಲ ಎಂದರೆ, ಮಹಾರಾಜನ ಆಜ್ಞಾ ಉಲ್ಲಂಘನ ಮಾಡಿ ಛಲೋಕಾರ್ಯ ಮಾಡಿದಕಾಲಕ್ಕೂ ರಾಜ ತನ್ನ ಆಜ್ಞಾ ಉಲ್ಲಂಘನ ಮಾಡಿದ ದೋಷಕ್ಕಾಗಿ ಶಿಕ್ಷಾ ಮಾಡತಾನೆ. ರಾಜಾಜ್ಞಾದಿಂದ ನಿಷಿದ್ಧಕರ್ಮ ಮಾಡಿದಾಗ್ಯೂ, ರಾಜ, ತನ್ನ ಅಜ್ಞಾದಂತೆ ನಡೆದನೆಂದು ಆ ಪುಣ್ಯದಿಂದ ಮಹದೈಶ್ವರ್ಯವನ್ನು ಅವನಿಗೆ ಕೊಟ್ಟು ಐಶ್ವರ್ಯವಂತನ ಮಾಡತಾನೆ. ಆದ್ದರಿಂದ ಮಹಾರಾಜನಾದ ಬಿಂಬನ ಆಜ್ಞಾ ಉಲ್ಲಂಘನರೂಪವಾದ ಕರ್ಮ ಪುಣ್ಯಕರ್ಮವಾಗಲಾರದು. ಪಾಪವೇ ಆಗತದೆ. ತದ್ವತ್ ಪಾಪಕರ್ಮ ಪುಣ್ಯಕರ್ಮ ಆಗತದೆ. ಪರಮಾತ್ಮ ಸರ್ವಜೀವಾಂತರ್ಯಾಮಿ ಯಾಗಿದ್ದು, ಬಿಂಬಕ್ರಿಯಾದ್ವಾರಾ ಪ್ರತಿಬಿಂಬಿಕ್ರಿಯಾ ನಡೆಸುತ್ತಾ, ತನ್ನ ಸ್ವಾಖ್ಯ ತಾನು ಭುಂಜಿಸಿ, ಈಶ ಎಂತ ಕರೆಸತಾನೆ. ಆದ್ದರಿಂದ ಬಿಂಬಕ್ರಿಯಾದ್ವಾರಾ ಪ್ರತಿಬಿಂಬನಾದ ನಾನು ದ್ವಂದ್ವಕರ್ಮ ಮಾಡತೇನೆಂದರೆ ಏನಾಗತದೆ ಎಂದರೆ, ಮಹಾರಾಜನ ಆಜ್ಞದಿಂದ ಮ್ಯಾಲೆ ಹೇಳಿದ ಪ್ರಕಾರ ಮಾಡಿದ ಪಾಪಕರ್ಮ ಪಾಪವಾಗಲಾರದು. ಪುಣ್ಯವೇ ಆಗತದೆ. ದಾರಿಗೆ ಎಂದರೆ, ಅರಿಷಡ್ವರ್ಗಗಳ ನಿಗ್ರಹ ಮಾಡಿ, ಅಹಂಮಮತಾದಿಗಳ ತ್ಯಾಗಮಾಡಿ ವಿಧ್ಯುಕ್ತಾನುಸಾರ ಅನುಸಂಧಾನಉಳ್ಳವಗೆ ಎಂತ ತಾತ್ಪರ್ಯ. ||೧೯||

(೨) ಭಾವಪ್ರಕಾಶಿಕೆ :—

ಒಂದೇ ಗೋತ್ರ, ಒಂದೇ ಪ್ರವರದಲ್ಲಿ ಹುಟ್ಟಿದ ತಂದೆ ಮತ್ತು ಮಕ್ಕಳು ಸಂಧ್ಯಾವಂದನೆ ಮಾಡಿ, ಕೊನೆಯಲ್ಲಿ ಒಂದೇ ಗೋತ್ರ, ಒಂದೇ ಪ್ರವರಗಳನ್ನು ಉಚ್ಚರಿಸಿ. ಹೆಸರುಗಳನ್ನು ಮಾತ್ರ ಬೇರೆ ಬೇರೆ ಹೇಳಿಕೊಳ್ಳುವರು. ಹಾಗೆಯೇ ಪರಮಾತ್ಮನು ಒಂದೊಂದು ದೇಹದಲ್ಲಿಯೂ ಇದ್ದು, ಪುಣ್ಯಪಾಪಕರ್ಮಗಳನ್ನು ತಾನೆ ಮಾಡಿ, ಮಾಡಿಸಿ ಕಡೆಗೆ ತಾನು ಈಶನೆನಿಸುವನು. ಅಂದರೆ, ತಂದೆ ಮತ್ತು ಮಕ್ಕಳು ಗೋತ್ರಾದಿಗಳನ್ನು ಉಚ್ಚರಿಸುವಾಗ ಒಂದೇ ಆದರೂ, ಹೆಸರು ಹೇಳುವಾಗ, ಬೇರೆ ಬೇರೆ ಹೇಳಿಕೊಳ್ಳುವರು. ಹಾಗೆಯೇ ಪರಮಾತ್ಮನು ಒಂದೊಂದು ದೇಹದಲ್ಲಿಯೂ ಇದ್ದು, ಪುಣ್ಯವಾದ ಕರ್ಮಗಳನ್ನು ತಾನೆ ಮಾಡಿ, ಮಾಡಿಸಿ ಕಡೆಗೆ ತಾನು ಈಶನೆನಿಸುವನು. ಅಂದರೆ, ತಂದೆ ಮತ್ತು ಮಕ್ಕಳು ಗೋತ್ರಾದಿಗಳನ್ನು ಉಚ್ಚರಿಸುವಾಗ ಒಂದೇ ಆದರೂ, ಹೆಸರು ಹೇಳುವಾಗ, ಬೇರೆ ಬೇರೆ ಹೇಗೆ ಆಗುವರೋ, ಹಾಗೆಯೇ ಜೀವರೊಳಗಿದ್ದು, ಕರ್ಮಗಳನ್ನು ಮಾಡಿ ಮಾಡಿಸುವನು. ಒಬ್ಬನೇ ಆದರೂ, ಫಲಾನುಭವಕಾಲದಲ್ಲಿ ಅಸ್ವಂತ್ರನಾದ ಜೀವನು ಬೇರೆ, ಸ್ವಾಮಿಯಾದ ಪರಮಾತ್ಮನು ಬೇರೆಯಾಗಿಯೇ ಇರುವರು. ಅಂದರೆ ಜೀವನು ಮಾತ್ರ ಸುಖದುಃಖಭಾಗಿಯಾಗುವನು. ಪರಮಾತ್ಮನು ಮಾತ್ರ ನಿರ್ಲಿಪ್ತನಾಗಿರುವನು. ||೧೯||

(೩) ಭಾವದರ್ಪಣಟೀಕಾ :—

ಸಮಸ್ತಜೀವರಲ್ಲೂ, ತತ್ವೇಶರಲ್ಲೂ ಸಹ ಶ್ರೀಹರಿಯು ತಾನೇ ನಿಂತು, ಕರ್ಮಮಾಡಿ ಮಾಡಿಸಿ, ಸರ್ವರಿಗೂ ಸ್ವಾಮಿ ಅನಿಸುತ್ತಾನೆಂದು ಹೇಳುತ್ತಾರೆ ವಂದೇ ಗೋತ್ರೇತಿ||

"ವಿಷ್ಣುರ್ವಾಯುಂ ಪುರಸ್ಕೃತ್ಯ ಸರ್ವೇಷ್ವೇತೇಷು ಸಂಚರನ್ ।
ಕರೋತಿ ಕಾರಯತ್ಯಜಾ ಜಗತ್ಕಾರ್ಯಮತಂದ್ರಿತಜ್ಞತಿ ॥

– ಶಾಂಡಿಲ್ಯಸೂತ್ರೋಕ್ತೇಃ ॥ ॥೧೯॥

(೪) ಶ್ರೀವ್ಯಾಸದಾಸಸಿದ್ಧಾಂತ ಕೌಮುದೀ ( ಸಂಸ್ಕೃತಮೂಲ) :–

"ಒಂದೆ " ಇತಿ॥ "ಪೆಸರು – ಹೆಸರು"॥ "ಸಕಾರಯೇತ್" ಇತ್ಯುಕ್ತಂವ್ಯನಕ್ತಿ॥ "ಒಂದೆ " – ಇತಿ॥ ಏಕಾದಶತಾತ್ಪರ್ಯೇ ಚ "ಸ ಏವ ಚ ಮಯಿ ಸ್ಥಿತ್ವಾ ನಿಂದ್ಯಾನಿಂದ್ಯೇ ಕರೋತ್ಯಜಃ॥ ನಮೇ ದೋಷಃ ನ ಚ ಗುಣಃ ಕರ್ತೃತ್ವಾಭಾವತಃ ಸ್ಫುಟಮ್॥ ಸ್ವತಂತ್ರತ್ವಾತ್ ನಚೇತಸ್ಯ ಯೇಜ್ಞಾಃ ತೇಷುಭವದೇಪಿ॥ ಜ್ಞಾನೀತ್ವ ಕರ್ತೃತಾಮಾನಾತ್ ಈಶ ಕರ್ತೃತ್ವ ನಿಶ್ಚಯಾತ್॥ ಕಿಂತು ಪೂರ್ಣಗುಣಾಯ್ಯೆವ ನತು ದೋಷಾಪನುತ್ತಯೇ॥ ನಚಾಲ್ಪಗುಣ ಸಿದ್ಧ್ಯರ್ಥಂ ಬಾಲವತ್ ಕೃತ ನಿಶ್ಚಯಃ॥ ಇತಿ ಪೂರ್ಣಗುಣಃ ಹರಿಃ॥ ತತ್ಪ್ರೀತ್ಯರ್ಥಂ ತದಾಲಯ ಮುಕ್ತ್ಯರ್ಥಂ ವಾ ಸ್ವರ್ಗಾದ್ಯಾಪ್ಯಗುಣಾಃ ಸರ್ವೇದೋಷಾಃ ಸರ್ವೇ ತಥೈವ ಚ॥ ಆತ್ಮನಃ ಕರ್ತೃತಾ ಭ್ರಾಂತ್ಯಾ ಜಾಯಂತೇ ನಾತ್ರ ಸಂಶಯಃ ॥ ಇತಿ ಚ ಶ್ರೀಶಪ್ರಪದಂ – ಇಂದಿರೇಶ ಪದಮ್"॥ ಓಂ ಯತ್ರಾ ಸೋಮಸ್ಯ ತೃಂಪಸಿ ಇಂದ್ರನೇದೀಯ, ಏದಿಹಮಿತಮೇ ದಾಭಿರೂತಿಭಿಃ॥ ಆಶಂತಮಶಂತ ಮಾಭಿರಭಿಷ್ಟಿಭಿಃ ಓಂ॥ ಶ್ರೀ ಮೇಧಾಃ ಜ್ಞಾನಿಂ ತನ್ಮಾನೀ ರಮಾನಾಥಃ ॥೧೯॥

ಕನ್ನಡಾರ್ಥ :–

"ಒಂದೇ " – ಎಂಬ ಪ್ರಸಕ್ತ ಪದ್ಯದಿಂದ – "ಆ ಪರಮಾತ್ಮನೇ ಜೀವರಿಂದ ಸಮಸ್ತಕಾರ್ಯಗಳನ್ನು ಮಾಡಿಸುತ್ತಾನೆ" – ಎಂದು ತಿಳಿಸುತ್ತಾರೆ. ಭಾಗವತ ಏಕಾದಶಸ್ಕಂಧ ತಾತ್ಪರ್ಯದಲ್ಲಿ – ಪರಮಾತ್ಮನೇ ನನ್ನಲ್ಲಿ ಸ್ಥಿತನಾಗಿ ಸದಸತ್ಕರ್ಮಗಳನ್ನು ಮಾಡಿ ಮಾಡಿಸುತ್ತಾನೆ. ನಮಗೆ ಕರ್ತೃತ್ವವಿಲ್ಲದಿರುವುದರಿಂದ ಗುಣ ದೋಷಗಳಿಲ್ಲ.

ಪರಮಾತ್ಮನೇ ಸ್ವತಂತ್ರನು. ಈಶನೇ ಮುಖ್ಯ ಕರ್ತೃವು. ಅಜ್ಞರು ತಾವು ಕರ್ತೃಗಳೆಂದು ತಿಳಿಯುತ್ತಾರೆ. ಆದ್ದರಿಂದ ದೋಷಭಾಗಿಗಳಾಗುತ್ತಾರೆ. ಜ್ಞಾನಿಗಳು ತಾವು ಕರ್ತೃಗಳಲ್ಲ – ಈಶನೇ ಕರ್ತನು ಎಂಬ ನಿಶ್ಚಯಜ್ಞಾನವುಳ್ಳವ ರಾಗಿರುತ್ತಾರೆ. ಆದ್ದರಿಂದ ಅವರಿಗೆ ಗುಣ ದೋಷಗಳಿರುವುದಿಲ್ಲ. ಭಗವತ್ಪ್ರೀತಿಗಾಗಿ, ಅವನ ನಿಲಯವಾದ ಮುಕ್ತಿಸ್ಥಾನಪ್ರಾಪ್ತಿಗಾಗಿ, ಕರ್ಮಗಳನ್ನು ಆಚರಿಸುತ್ತಾರೆ. ಸ್ವರ್ಗಾಪೇಕ್ಷೆ ಅವರಿಗಿಲ್ಲ. ಅಲ್ಪವಾದ ಸ್ವರ್ಗಾದಿಫಲಗಳನ್ನು ಅಪೇಕ್ಷಿಸಿ ಕರ್ಮಮಾಡುವವರು ಬಾಲಸ್ವಭಾವದನು– ಹೀಗೆಂದು ನಿರೂಪಿತವಾಗಿದೆ. **"ಇಂದೀರೇಶ"** – ಎಂಬ ಪದವು, **"ಶ್ರೀಶ"** – ಎಂಬ **ವಿಷ್ಣು ಸಹಸ್ರನಾಮದ** ಸಮಾನಾರ್ಥಕವಾಗಿರುತ್ತದೆ.

"ಜ್ಞಾನ, ಮೇದಸ್ಸುಗಳನ್ನು ಕೊಡಲು ನಿಯಾಮಕನು" – ಎಂದು **"ಶ್ರೀಶ"** ನಾಮದ ಬೃಹತೀಮಂತ್ರದ ಸಾರ. ||೧೯||

## (ಜ) ಶ್ರೀ ಗುರುಹೃದಯಪ್ರಕಾಶಿಕೆ ವ್ಯಾಖ್ಯಾನ : –

ದೇಹದಲ್ಲಿ ನಡೆಯುವ ಅಶನಾದಿ ಒಂದೊಂದು ಕ್ರಿಯದಲ್ಲೂ ಜೀವೇಶ್ವರಕ್ರಿಯೆ ಎರಡನ್ನು ಸದೃಷ್ಟಾಂತ ತಿಳಿಸುತ್ತಾರೆ – ***ಒಂದೇ*** –ಎಂದು. ಒಂದೇ ಗೋತ್ರ ಪ್ರವರ ಸಹ ಇರುವ ತಂದೆ ಮಕ್ಕಳು ಸಂಧ್ಯಾವಂಧನೆ ಎಂದರೆ, ಆಪೋಹಿಷ್ಠಾ ಎಂಬುದೇ ಮೊದಲಾದ ಒಂದೊಂದೇ ಮಂತ್ರವನ್ನು ತಂದೆ ಹೇಳಿಕೊಟ್ಟದ್ದನ್ನೇ ಮಗನು ಹೇಳಿ ಆಚರಿಸಿ, ಪ್ರಾಂತಕೆ ಅಂದರೆ, ಪ್ರವರವು ಹೇಳಿ ಮುಗಿದ ನಂತರ ಬೇರೆ ತಮ್ಮ ತಮ್ಮ ಹೆಸರು ಮಾತ್ರ ಹೇಳುವ ಹಾಗೆ, ಒಂದೇ ದೇಹದಲ್ಲಿ ಜೀವಾಂತರ್ಯಾಮಿಯಾಗಿರುವ ದೇವರು, ನಿಂದ್ಯಾನಿಂದ್ಯಗಳೆಂಬ ಸುಕೃತ ದುಷ್ಕೃತಗಳನ್ನೆಲ್ಲಾ ಈಶನೆಂದು ಹೆಸರುಳ್ಳವನಾಗಿ ಸರ್ವರಲ್ಲಿಯೂ ಇರುವನು. ಜೀವರು ದಾಸರೆಂದು ಹೆಸರುಳ್ಳವರು– ಎಂತ ಅರ್ಥ ವಿವರಿಸಲ್ಪಟ್ಟಿತು. ||೧೯||

## ಸರ್ವವ್ಯಾಖ್ಯಾನಸಾರಸಂಗ್ರಹ

ಒಂದೇ ದೇಹದಲ್ಲಿ ಈಶನಾಮಕನಾದ ಶ್ರೀಪರಮಾತ್ಮ, ಭೃತ್ಯನಾಮಕನಾದ ಜೀವಾತ್ಮ ಇಬ್ಬರೂ ಆವಾಸರಾಗಿದ್ದಾರೆ. ಸರ್ವತಂತ್ರಸ್ವತಂತ್ರನು ಈಶನು. ಅವನಿಂದ ಪ್ರೇರ್ಯನು ಜೀವನು. ಸರ್ವಕರ್ಮಗಳನ್ನು ಜೀವಾಂತರ್ಯಾಮಿಯಾಗಿ, ಬಿಂಬನೇ ಸ್ವಾಖ್ಯರೂಪಗಳಿಂದ ತಾನೇ ಮಾಡಿ ಪರಾಧೀನನಾದ ಜೀವನದ್ವಾರಾ ಮಾಡಿಸುತ್ತಾನೆ ಎಂಬ **ದ್ವಾಸುಪರ್ಣಾಶ್ರುತಿಗತ** ತತ್ತ್ವವನ್ನು ಸದೃಷ್ಟಾಂತ ತಿಳಿಸುತ್ತಾರೆ – ***ಒಂದೇ ಗೋತ್ರ*** – ಎಂಬ ಪ್ರಸಕ್ತ ೧೯ನೆಯ ಪದ್ಯದಿಂದ.

೧. ತಂದೆ ಮತ್ತು ಅವನ ಮಕ್ಕಳು (ಪುತ್ರರು) ಏಕಗೋತ್ರ ಮತ್ತು ಪ್ರವರಕ್ಕೆ ಸೇರಿದವರು. ಅವರು ತ್ರಿಕಾಲಸಂಧ್ಯಾವಂದನೆಗಳನ್ನು ನಿತ್ಯಕರ್ಮರೂಪವಾಗಿ ಮಾಡುತ್ತಿರುವಾಗ, ಮುಕ್ತಾಯಘಟ್ಟದಲ್ಲಿ – **ಚತುಸ್ಸಾಗರ ಪರ್ಯಂತಂ . . .** ಎಂಬ ಮಂತ್ರದಿಂದ ಒಂದೇ ಗೋತ್ರ ಮತ್ತು ತತ್ಪ್ರವರಗಳನ್ನು ಉಚ್ಚರಿಸುತ್ತಾ, ಆ ಮಂತ್ರದಕೊನೆಯಲ್ಲಿ **ಅಹಂ .... ಶರ್ಮನ್ ಅಭಿವಾದಯೇ ಅಭಿವಾದಯಿಷ್ಯಾಮಿ** – ಎಂದು ತಂದೆಯು ತನ್ನ ಜನ್ಮನಾಮವನ್ನೂ, ಪುತ್ರರು ಅವರವರ ಜನ್ಮನಾಮಗಳನ್ನೂ ಪ್ರತ್ಯೇಕ ಪ್ರತ್ಯೇಕವಾಗಿಯೇ ಹೇಳಿಕೊಂಡು, ತಮ್ಮ ದ್ವಾರಾ ಬಿಂಬನಿಂದ ಪ್ರೇರಿತವಾದ ಕರ್ಮವನ್ನು ಸ್ವಬಿಂಬನಿಗೆ ಅರ್ಪಿಸುವರು. ಜೀವಗಳು ಭಿನ್ನಭಿನ್ನರಾಗಿರುವುದರಿಂದ, ಒಬ್ಬರ ಫಲಾನುಭವ ಇನ್ನೊಬ್ಬರಿಗಿಲ್ಲ. ಭಿನ್ನ ಜೀವ –ಭಿನ್ನ ಕರ್ಮಾನುಭವ. ಈ ದೃಷ್ಟಾಂತದಿಂದ, ಸರ್ವಕರ್ಮಪ್ರೇರಕನಾದ ಬಿಂಬರೂಪೀ ಶ್ರೀಪರಮಾತ್ಮನಿಗೂ ಮತ್ತು ಭಗವದಧೀನನಾದ ಅಸ್ವಂತ್ರ ಜೀವನಿಗೂ ಇರುವ ವೈಲಕ್ಷಣ್ಯವನ್ನು ನಿರೂಪಿಸುತ್ತಾರೆ – ತತ್ತ್ವಮಾರ್ಗಪ್ರದರ್ಶಕರಾದ ಶ್ರೀದಾಸರಾಯರು.

೨. ಸಕಲಸಾಧನರೂಪವಾದ ಕರ್ಮಗಳೆಲ್ಲವೂ ಈ ಸ್ಥೂಲಶರೀರದ ದ್ವಾರವೇ ನಡೆಯುತ್ತಿರುವುವು. ಇದರಿಂದ ಈ ಸ್ಥೂಲಶರೀರಕೆ **ಸಾಧನಶರೀರ** ವೆಂದು

ಹೆಸರು. ಸಾಧನ ಶರೀರವೆಂದೆನಿಪ ಈ ದೇಹವು ಒಂದೇ. ಏಕಗೋತ್ರ ಪ್ರವರ ಸಾದೃಶ. ಏಕೆಂದರೆ, ಗೋತ್ರಪ್ರವರ್ತಕರಾದ ಋಷಿಗಳ ಮೂಲದಿಂದ ಮನುಕುಲದ ಉತ್ಪತ್ತಿ. ಪಾಂಚಭೌತಿಕಶರೀರ ಸಾಧನಸಂಪತ್ತುಗಳಿಂದ ಯುಕ್ತವಾದ ಆ ಋಷಿಗಳ ಪರಂಪರೆಯಲ್ಲಿ ಬಂದಿದ್ದು.

೩. ಈ ಶರೀರದಲ್ಲಿ ಜೀವನಿಗೆ ಪರಮಾಪ್ತನಾಗಿ, ಜೀವನನ್ನು ಅರೆಕ್ಷಣವೂ ಎಡಬಿಡದೆ ಇರುವ ಬಿಂಬರೂಪೀ ಪರಮಾತ್ಮನು ಜೀವರಿಂದ ನಿತ್ಯಾವಿಯೋಗಿಯು. ಪರಮಾತ್ಮ ಮತ್ತು ಜೀವಾತ್ಮ ಇಬ್ಬರೂ ಅನಾದಿನಿತ್ಯರು. ಸಕಲಕರ್ಮಪ್ರೇರಕನಾದ ಶ್ರೀಪರಮಾತ್ಮನು ಜೀವರಿಗೆ ಬಿಂಬನು. ಅವನಿಂದ ಸರ್ವಕರ್ಮಗಳಲ್ಲಿ ಪ್ರೇರಿತರಾದ ಜೀವರು ಪರಮಾತ್ಮನ ಪ್ರತಿಬಿಂಬಭೂತರು. ಪ್ರತಿಬಿಂಬದ ಸರ್ವಕ್ರಿಯೆಯೂ ಬಿಂಬಾಧೀನವು. ಇಂತು ಬಿಂಬನು ಪ್ರೇರಕನು. ಪ್ರತಿಬಿಂಬಸದೃಶನಾದ ಜೀವನು ಪ್ರೇರ್ಯನು. ಬಿಂಬನು ನಿಯಾಮಕನು. ಪ್ರತಿಬಿಂಬನು ನಿಯಮ್ಯನು. ಇದರಿಂದ ಬಿಂಬನು ಈಶನು. ಪ್ರತಿಬಿಂಬನಾದ ಜೀವನು ಸರ್ವಪ್ರಕಾರಗಳಲ್ಲಿ ಬಿಂಬನ ಅಧೀನನು. ಇದೇ ಜೀವ–ಈಶರಿಗೆ ಇರುವ ಅನಾದಿನಿತ್ಯವಾದ ಅನ್ಯೋನ್ಯಸಂಬಂಧ. ಬಿಂಬನಾದ ಶ್ರೀಪರಮಾತ್ಮನು **ತಂದೆಯ ಸದೃಶನು**. . ಶ್ರೀಪರಮಾತ್ಮನ ಅಧೀನರಾದ ಜೀವರು **ಪುತ್ರಸದೃಶರು**. ಈಶ–ಜೀವರಿಗೆ ಇರುವ ಭೇದವು ಅನಾದಿನಿತ್ಯವು. ಈಶನು ಜೀವ ಮತ್ತು ಜಡವರ್ಗಗಳಿಂದ ಅತ್ಯಂತಭಿನ್ನನು. ಇದರಿಂದ ಒಂದೇ ಗೋತ್ರೋದ್ಭವವಾದ ತಂದೆ ಮತ್ತು ಮಕ್ಕಳು , ಒಂದೇ ಗೋತ್ರ, ಪ್ರವರಗಳನ್ನು ಉಚ್ಚಾರಮಾಡಿದಾಗ್ಯೂ, ಕೊನೆಯಲ್ಲಿ ತಮ್ಮ ತಮ್ಮ ಹೆಸರುಗಳನ್ನು ಪ್ರತ್ಯೇಕವಾಗಿಯೇ ಹೇಳಿಕೊಂಡು, ಕರ್ಮಾರ್ಪಣೆ ಮಾಡುವರು.

೪. ಮೂಲಪ್ರಕೃತಿಯು ಜಗತ್ತಿನ ಸೃಷ್ಟಿಗೆ ಉಪಾದಾನಕಾರಣವು. ಗುಣತ್ರಯಾತ್ಮಕವಾದ ಮೂಲಪ್ರಕೃತಿಗೆ **ಶ್ರೀಲಕ್ಷ್ಮೀದೇವಿ** ಅಭಿಮಾನಿಯು. ಶ್ರೀ ಭೂ ದುರ್ಗಾ ರೂಪತ್ರಯಗಳಿಂದ ವಿರಾಜಮಾನಳಾಗಿರುವ ಇಂದಿರೆಯ

ದ್ವಾರಾ, ಗುಣವೈಷಮ್ಯದಿಂದ ಸಮಸ್ತತತ್ತ್ವಗಳ ಸೃಷ್ಟಿ. ಅದರಿಂದ ಚತುರ್ವಿಂಶತಿ ತತ್ತ್ವಾತ್ಮಕವಾದ ಈ ಜಗತ್ತಿನ ಅಭಿವ್ಯಕ್ತಿ. ಬ್ರಹ್ಮಾಂಡದ ಸೂಕ್ಷ್ಮರೂಪದಲ್ಲಿರುವ ಪಿಂಡಾಂಡರೂಪವಾದ ಈ ಸ್ಥೂಲದೇಹದ ದ್ವಾರಾ ಸರ್ವಕರ್ಮಗಳ ಅಭಿವ್ಯಕ್ತಿ. ಅವ್ಯಕ್ತತತ್ತ್ವಾತ್ಮಕ ಲಿಂಗಶರೀರಗತಅನಾದಿಕರ್ಮವು ಭಗವದಧೀನವಾಗಿದೆ. ಕರ್ಮಾಂತರ್ಯಾಮಿಯಾಗಿ, ಕರ್ಮನಾಮಕನಾಗಿ ಬಿಂಬನಿದ್ದು, **ನಿಂದ್ಯ ಮತ್ತು ಅನಿಂದ್ಯ** ಎಂಬ ಸಮಸ್ತ ಶುಭ, ಅಶುಭ, ಮಿಶ್ರಕರ್ಮಗಳನ್ನೂ, ಕರ್ಮಪ್ರವರ್ತಕನಾಗಿದ್ದು, ತಾನೇ ಬಿಂಬಕ್ರಿಯಾದ್ವಾರಾ ಮಾಡುವನು. ಬಿಂಬಕ್ರಿಯಾಭಿವ್ಯಕ್ತಿ ಪ್ರತಿಬಿಂಬನಾದ ಜೀವನದಲ್ಲಿ. ಜೀವನು ಅನಾದ್ಯನಂತಕಾಲದಿಂದಲೂ ಅಸ್ವತಂತ್ರನು. ತನ್ನದೇ ಆದ ಕರ್ಮಗಳನ್ನು ತಾನೇ ಸ್ವತಂತ್ರನಾಗಿ ಮಾಡಲಾರ. ಈ ಕಾರಣದಿಂದ ಕರುಣಾಳುವಾದ ಬಿಂಬನು ಜೀವನ ಹೆಸರಿನಲ್ಲಿ, ಜೀವನ ಪರವಾಗಿ, ತಾನೇ ಬಿಂಬಕ್ರಿಯಾದ್ವಾರಾ ಮಾಡಿ, ಆ ಕರ್ಮಾನುಭವರೂಪವಾದ ಫಲವನ್ನು ತನ್ನ ಅಧೀನನಾದ ಜೀವರಿಗೆ ಉಣಿಸುವನು. ಇದರಿಂದ ಜೀವರು ಸೃಷ್ಟಿಯಾದ ಕಾಲದಿಂದ ಪ್ರಾರಂಭಿಸಿಕೊಂಡು, ವಿರಜಾನದಿಸ್ನಾನ ಪರ್ಯಂತ, ಅವರ ಮೂಲಕ ಕರ್ಮಗಳನ್ನು ಮಾಡಿಸುತ್ತಾ, ಬಹುಜನ್ಮಗಳು ಕಳೆದನಂತರ, ಕ್ರಮವಾಗಿ ಅನಾದಿಕರ್ಮವು ಕ್ಷೀಣಿಸುತ್ತಾ ಬಂದು, ವಿರಜಾನದಿಯ ಸ್ನಾನದಿಂದ ಲಿಂಗಭಂಗದ್ವಾರಾ ಕರ್ಮವಿಮೋಚನೆಯಾಗುವುದು. ಆಗ ಜೀವರು ಕರ್ಮಕಾಂಡದಿಂದ ಮುಕ್ತರಾಗಿ, ಭಗವದನುಗ್ರಹದಿಂದ ಸ್ವರೂಪಗತವಾದ ನಿತ್ಯಾನಂದರೂಪನಾದ ಮೋಕ್ಷಸುಖವನ್ನು ಹೊಂದುವರು. **ಕ್ರೀಡೆಗೋಸುಗ, *ಅವರವರ ಗತಿಗಳ ನೀಡಲೋಸುಗ*** – ಈ ಜಗತ್ತಿನ ವ್ಯಾಪಾರವಿಶೇಷಗಳು. ಜೀವರು ಕರ್ಮಫಲಗಳಿಗೆ ಭಾಗಿಗಳಾದರೂ, ಕೊನೆಯಲ್ಲಿ ಅವರವರ ನಿಜಗತಿಯನ್ನು ಕರ್ಮಕ್ಷಯರೂಪವಾದ ಈ ಸಾಧನಾಮಾರ್ಗದಿಂದ ಬಿಂಬನಾದ ಇಂದಿರೇಶನು ಸರ್ವಕಾರ್ಯಗಳಿಗೂ ಮುಖ್ಯನಿಯಾಮಕನಾಗಿ ಅಂದರೆ, **ಈಶನೆಂದೆನಿಸಿ,** ಸ್ವಸ್ವರೂಪಾನಂದಾವಿರ್ಭಾವರೂಪವಾದ ಮೋಕ್ಷಾನಂದವನ್ನು ಕರುಣಿಸುವನು.

ಈಶನು ಸ್ವಾಖ್ಯಫಲಭೋಕ್ತನು. ಜಡಕರ್ಮಗಳಿಂದ ನಿರ್ಲೇಪನು. ಯಾವಫಲವನ್ನೂ ಉಣ್ಣದೆ, ನಿರ್ಲಿಪ್ತನಾಗಿರುವ ಈಶನು ನಿರ್ವಿಕಾರವಾಗಿ ಪುಷ್ಟನಾಗಿರುವನು. ಕರ್ಮಫಲಭೋಕ್ತೃವಾದ ಜೀವನು ಕೃಶವಾಗಿದ್ದಾನೆ. ||೧೯||

## ಪದ್ಯ ೨೦

ಮೂಲ :—

ಕಿಟ್ಟಗಟ್ಟಿದ ಲೋಹ ಪಾವಕ
ಸುಟ್ಟು ವಿಂಗಡ ಮಾಡುವಂತೆ ಘ
ರಟ್ಟ ವ್ರೀಹಿಗಳೊಳಿಪ್ಪ ತಂಡುಲ ಕಡೆಗೆ ತೆಗೆವಂತೆ
ವಿಠ್ಠಲಾ ಎಂದೊಮ್ಮೆ ಮೈಮರೆ
ದಟ್ಟಹಾಸದಿ ಕರೆಯೆ ದುರಿತಗ
ಳಟ್ಟುಳಿಯ ಬಿಡಿಸವನ ತನ್ನೊಳಗಿಟ್ಟು ಸಲಹುವನು ||೨೦||

ಅವತರಣಿಕೆ :—

ಭಕ್ತಿಭಾವದಿಂದ ಶ್ರೀಹರಿಯ ಸಂಸ್ಮರಣೆಯನ್ನು ನಿತ್ಯವೂ ಮಾಡುತ್ತಿರುವ ಭಕ್ತಜನರ ದುರಿತಗಳನ್ನು ಕಳೆದು, ತನ್ನಲ್ಲಿ ಆಶ್ರಯವನ್ನಿತ್ತು ಸಂರಕ್ಷಿಸುವನೆಂದು, ಕಶ್ಮಲಯುಕ್ತವಾದ ಲೋಹವನ್ನು ಅಗ್ನಿಯು ಹೇಗೆ ಕಶ್ಮಲವನ್ನು ಸುಟ್ಟು ತೆಗೆದುಹಾಕಿ, ಲೋಹವನ್ನು ಶುದ್ಧಗೊಳಿಸುವುದೋ, ಬೀಸುವಕಲ್ಲು ಅಕ್ಕಿಯನ್ನು ಭತ್ತ ಮತ್ತು ಭತ್ತದ ಹೊಟ್ಟಿನಿಂದ ಪ್ರತ್ಯೇಕಿಸಿ ತೆಗೆಯುವುದೋ ಹಾಗೆ, ಭಕ್ತರ ಪಾಪಕ್ಷಾಳನಗೈದು, ಅವರನ್ನು ಪಾವನರನ್ನಾಗಿ ಮಾಡುವನು ಆ ಪತಿತಪಾವನನು – ಎಂದು ತಿಳಿಸುತ್ತಾರೆ – **ಕಿಟ್ಟಗಟ್ಟಿದ ಲೋಹ** – ಎಂಬ ಪ್ರಸಕ್ತಸಂಧಿಗತ ೨೦ನೆಯ ಈ ಪದ್ಯದಿಂದ. ||೨೦||

**ಪ್ರತಿಪದಾರ್ಥ :–**

**ಪಾವಕ** – ಅಗ್ನಿಯು, **ಕಿಟ್ಟಗಟ್ಟಿದ** = ಇತರ ಕಶ್ಮಲಗಳಿಂದ ಯುಕ್ತವಾದ, **ಲೋಹ** = ಖನಿಜವಸ್ತುವನ್ನು (ಇಲ್ಲಿ ಕಬ್ಬಿಣ), **ಸುಟ್ಟು** = ಆ ಲೋಹವನ್ನು ಚೆನ್ನಾಗಿ ಸುಟ್ಟು, **ವಿಂಗಡ ಮಾಡುವಂತೆ** = ಲೋಹವನ್ನು ಕಶ್ಮಲರೂಪದಲ್ಲಿರುವ ಇತರ ಧಾತುಗಳಿಂದ ಪ್ರತ್ಯೇಕಿಸಿ, ಶುದ್ಧಗೊಳಿಸುವಂತೆ, **ಘರಟ್ಟ** = ಬೀಸುವ ಕಲ್ಲು, **ವ್ರೀಹಿಗಳೊಳಿಪ್ಪ** = ಧಾನ್ಯರೂಪದಲ್ಲಿರುವ, **ತಂಡುಲ** = ಕಾಳನ್ನು (ಭತ್ತದಲ್ಲಿರುವ ಅಕ್ಕಿಕಾಳನ್ನು), **ಕಡೆಗೆ ತೆಗವಂತೆ** = ಬೀಸುವ ಘರ್ಷಣಾಕಾರ್ಯದ ಫಲವಾಗಿ, ಪ್ರತ್ಯೇಕಿಸಿ, ತೆಗೆಯುವೋಪಾದಿಯಲ್ಲಿ, **ಮೈಮರೆದು** = ಅಹಂ ಮಮಕಾರರಹಿತನಾಗಿ, ಭಕ್ತ್ಯುದ್ರೇಕಭಾವದಿಂದ ಮೈಮರೆತು, **ವಿಠ್ಠಲಾ ಎಂತೊಮ್ಮೆ**= ಪಾಪಪರಿಹಾರಕನೂ, ಜ್ಞಾನಪ್ರದನೂ ಆದ ಹೇ ಹರೇ ವಿಠ್ಠಲಾ ಎಂದು, ಒಂದು ಸಾರಿಯಾದರೂ, **ಅಟ್ಟಹಾಸದಿ** = ಪರಮಾತ್ಮನಲ್ಲಿ ಮಹಾತ್ಮ್ಯಜ್ಞಾನಪೂರ್ವಕ ಸ್ನೇಹರೂಪವಾದ ಧೃಢಭಕ್ತಿಯಿಂದ, **ಕರೆಯೆ** = ಗಟ್ಟಿಯಾಗಿ ನಾಮಸ್ಮರಣೆ ಮಾಡಲಾಗಿ, **ದುರಿತಗಳ ಅಟ್ಟುಳಿಯ** = ಪಾಪಸಮೂಹಗಳೆಲ್ಲವನ್ನು ದೂರ ಓಡಿಸಿ, ಏನೂ ಉಳಿಯದಂತೆ ನಿಶ್ಶೇಷವಾಗಿ ಕ್ಷಾಳನಗೈದು, **ಬಿಡಿಸುವ** = ಪಾಪದಿಂದ ರಹಿತರನ್ನಾಗಿಮಾಡಿ, **ತನ್ನೊಳಗಿಟ್ಟು** = ತನ್ನ ಉದರದಲ್ಲಿ ಆಶ್ರಯ ನೀಡಿ **ಸಲಹುವನು** = ಸಂರಕ್ಷಿಸುವನು. ||೨೦||

## ವ್ಯಾಖ್ಯಾನಗಳು

### (೧) ಶ್ರೀಸಂಕರ್ಷಣಒಡೆಯರ ವ್ಯಾಖ್ಯಾನ : –

ಪೂರ್ವೋಕ್ತ ಪ್ರಕಾರ ಅನುಸಂಧಾನಯುಕ್ತನಾದವಗೆ ದೇವರು ಸಂರಕ್ಷಣೆ ಮಾಡುವ ವಿಧಿಯನ್ನು ಹೇಳತಾರೆ.

ಅಹಂಮಮತಾದಿಗಳಿಂದ ರಹಿತನಾಗಿ ಹಿಂದೆ ಹೇಳಿದ ಪ್ರಕಾರ

ಅನುಸಂಧಾನಯುಕ್ತನಾಗಿ, ಸರ್ವಲಕ್ಷ್ಯವೂ, ಪರಮಾತ್ಮನಲ್ಲೇ ಇಟ್ಟು ಬಾಹ್ಯ ವಿಷಯಗಳಲ್ಲಿ ಮನವಿಡದೆ ಮೈಮರೆದು, ಪಾಪಪರಿಹಾರಕನಾದ ವಿಠ್ಠಲ ಎಂತ ಒಂದಾವರ್ತಿ ಅಟ್ಟಹಾಸ ವಿಸ್ತಾರ, ಪರಮಾತ್ಮನಲ್ಲಿ ಮಾಹಾತ್ಮ್ಯಜ್ಞಾನಪೂರ್ವಕ ಸುದೃಢಸ್ನೇಹ ವಿಸ್ತಾರಮಾಡಿಕೊಂಡು, ಉದ್ಧಾರಮಾಡಬೇಕು ಎಂತ ಪರಮಾತ್ಮ ಕರದರೆ, ಆ ವಿಠ್ಠಲ ಎಂಬ ನಾಮದಲ್ಲಿ ಪರಮಾತ್ಮ ಸನ್ನಿಹಿತನಾಗಿ, ಈ ಪ್ರಕಾರ ನಾಮೋಚ್ಚಾರಣೆ ಮಾಡಿದ ಅಧಿಕಾರಿಯನ್ನು, ಕಿಟ್ಟ ಎಂದರೆ ತುಕ್ಕುಹಿಡಿದ ಕಬ್ಬಿಣವನ್ನು ಅಗ್ನಿ ಸುಟ್ಟವನಾಗಿ, ಆ ತುಕ್ಕನ್ನು ಯಾವತ್ತೂ ಪರಿಹಾರ ಮಾಡಿ ಆ ಲೋಹವನ್ನು ಕೆಡದಂತೆ ಮಾಡತಾನೆ– ಎಂದರೆ ಅದರಲ್ಲಿ ತಾನು ಪ್ರವೇಶ ಮಾಡಿ, ಆ ಲೋಹಕ್ಕೆ ದಾವ ಲೋಪ ಇಲ್ಲದಂತೆ ಆ ಲೋಹಕ್ಕೆ ಏನು ಸಂಬಂಧವಾದರೂ ಸುಡತಾ ಇರತಾನೆ. ಇದರಂತೆ ಲೋಹಕ್ಕೆ ಸದೃಶನಾದ ಅಧಿಕಾರಿ, ಕಿಟ್ಟಕ್ಕೆ ಸದೃಶವಾದ ಪಾಪಗಳಿಂದ ಯುಕ್ತನಾಗಿರುತಾನೆ. **ವಿಠ್ಠಲ** ಎಂತ ಉಚ್ಚಾರಣೆ ಮಾಡಿದ ಮಾತ್ರಕ್ಕೆ ವಿಠ್ಠಲಾಖ್ಯಅಗ್ನಿ ಪಾಪಗಳ ಸುಟ್ಟು ಪುನಶ್ಚ ಪಾಪ ಲೇಪವಾಗದಂತೆ, ದೇಹೇಂದ್ರಿಯಾದಿಗಳಲ್ಲಿ ಅಗ್ನಿಸದೃಶವಾಗಿ ಇದ್ದು, ಬಂದ ಪಾಪಗಳು ಲೇಪವಾಗದಂತೆ ಸುಡತಾ ಇರತಾನೆ. ಈ ಪ್ರಕಾರ ಪಾಪಗಳಷ್ಟೂ ಉಳಿಯದಂತೆ ಅಧಿಕಾರಿಗೆ ಬಿಡಿಸಿ, ಅನಂತರ, ಮರದ ಬೀಸೋಕಲ್ಲುಗಳು ನೆಲ್ಲಿನಾಗೆ (ಭತ್ತದಲ್ಲಿ) ಇರತಕ್ಕ ಅಕ್ಕಿಯನ್ನು, ಆಚ್ಛಾದಿತವಾದ ಹೊಟ್ಟಿನಿಂದ ದೂರಮಾಡಿ ಬ್ಯಾರೆ ಮಾಡುವಂತೆ, ಅಂದರೆ ನೆಲ್ಲು ಹಾಕಿ ಬೀಸಿದರೆ ಹೊಟ್ಟು ಬ್ಯಾರೆ ಅಕ್ಕಿ ಬ್ಯಾರೆ ಅಗತದೆ. ತದ್ವತ್ ಪರಮಾತ್ಮ ವಿಠ್ಠಲಾಖ್ಯ ಬೀಸೋಕಲ್ಲಿನಾಗೆ, ಲಿಂಗದೇಹಸಹಿತನಾದ ಜೀವನ್ನ ಸೇರಿಸಿ ಬೀಸೋ ಪುರುಷನ ಸದೃಶ. ಬ್ರಹ್ಮನ ಸಹ ಲಿಂಗಭಂಗ ಐದಿಸಿ, ಜೀವನ ಪ್ರತ್ಯೇಕ ಮಾಡಿ ತನ್ನ ಉದರದೊಳಿಟ್ಟು ಪ್ರಳಯಾವಸಾನದವರೆವಿಗೂ ಸಲಹಿ, ನಂತರ ಯೋಗ್ಯವಾದ ಮುಕ್ತಿಸ್ಥಾನದಲ್ಲಿ ಇಟ್ಟು ಸಂರಕ್ಷಣೆ ಮಾಡತಾನೆ ಎಂತ ತಾತ್ಪರ್ಯ.

ವಿಠಲರೂಪಿ ಪರಮಾತ್ಮ ಪಾಪಪರಿಹಾರಕ ಎಂಬುದಕ್ಕೆ ಪ್ರಮಾಣ –

**ವಿದಾಜ್ಞಾನೇನ ತಾನ್ ಶೂನ್ಯಾನ್ ಲಾತಿ ಗೃಹ್ಣಾತಿ ಯತ್ತತಃ ವಿಠಲಾಖ್ಯೋ ಹರಿಃ ಪಾಪಹರಣಾದೇವಂ ಕೀರ್ತಿತಃ ||೨೦||**

(೨) ಭಾವಪ್ರಕಾಶಿಕೆ : –

ಕಬ್ಬಿಣದಲ್ಲಿ ಕಿಟ್ಟವೆಂಬ ಒಂದು ವಿಧವಾದ ಮಲವಿರುವುದು. ಕಬ್ಬಿಣವನ್ನು ಚೆನ್ನಾಗಿ ಕಾಯಿಸಲು, ಆ ಕಿಟ್ಟವು ಹೋಗಿ, ಕಬ್ಬಿಣವು ಸ್ವಚ್ಛವಾಗಿ ಬೇರೆಯಾಗುವುದು. ಅದು ಹೇಗೋ ಹಾಗೆ, ಭಕ್ತಿಯಿಂದ ಮೈಮರೆತು, **ವಿಠ್ಠಲಾ** ಎಂದು ಉಚ್ಚಸ್ವರದಲ್ಲಿ ಕರೆಯಲು, ಅವನ ಪಾಪಗಳನ್ನು ಪರಿಹರಿಸಿ, ಉತ್ಪತ್ತಿಗೆ ಬೀಜಭೂತನಾದ ಲಿಂಗಶರೀರವನ್ನು ಭಂಗಮಾಡಿ, ಮುಕ್ತಿಯನ್ನು ಕೊಟ್ಟು, ಉದ್ಧರಿಸುವನು. ಇಲ್ಲಿ ಲೋಹದಲ್ಲಿರುವ ಕಿಟ್ಟವನ್ನು ಬೆಂಕಿಯು ಸುಟ್ಟು ಬೇರ್ಪಡಿಸುವಂತೆ, ಪಾಪವನ್ನು ಸುಡುವನೆಂತಲೂ, ಕುಟ್ಟುವ ಒನಕೆಯಿಂದ ಕುಟ್ಟಿದರೆ, ಹೊಟ್ಟನ್ನು ಪುಡಿ ಮಾಡಿ, ಅಕ್ಕಿಯನ್ನು ಬೇರೆ ಮಾಡಿದಂತೆ, ಲಿಂಗಶರೀರವು ಭಂಗವಾಗಿ, ಜೀವನ ಸ್ವರೂಪ ದೇಹಕ್ಕೆ ಮುಕ್ತಿ ಕೊಡುವನು. ||೨೦||

(೩) ಭಾವದರ್ಪಣಟೀಕಾ :–

ಸಚ್ಛಾಸ್ತ್ರಶ್ರವಣ ಮನನಾದಿಸಾಧನ ಮಾಡಿಸಿ, ತಜ್ಜನ್ಯಜ್ಞಾನಾಗ್ನಿಯಿಂದ ಕಬ್ಬಿಣಕ್ಕೆ ಲೇಪವಾದ ಕಿಟ್ಟದಂತೆ ಇರುವ ಜೀವಸಂಬಂಧ ಪಾಪಸುಟ್ಟು, ಆತನನ್ನು ಜೀವನ್ಮುಕ್ತಮಾಡಿ, ನಂತರ, ಘರಟ್ಟ ಎಂದರೆ, ತೊಳಲೀಕಲ್ಲೊಳಗಿಂದ ನೆಲ್ಲು ಒಡೆದು ಅಕ್ಕಿ ತೆಗೆದ್ಹಾಂಗೇ, ಲಿಂಗದೇಹದಿಂದ ತೆಗೆದು, ಸ್ವರೂಪವ್ಯಕ್ತಿಮಾಡಿ, ಸುಖಕೊಡುವನೆಂದು ದೃಷ್ಟಾಂತದ್ವಯದಿಂದ ಹೇಳುತ್ತಾರೆ – **ಕಿಟ್ಟೇತಿ** . ||೨೦||

(೪) ಶ್ರೀವ್ಯಾಸದಾಸ ಸಿದ್ಧಾಂತ ಕೌಮುದೀ (ಸಂಸ್ಕೃತಮೂಲ):–

"ಕಿಟ್ಟ" – ಇತಿ|| "ವಿಂಗಡ" – ಬೇರೆಗೈದು "ಘರಟ್ಟ" – ಬೀಸುವಕಲ್ಲು ಅಥವಾ ಒನಿಕೆ, "ಮೈಮರೆತು" – ಭಕ್ತಪರವಶಃ|| "ವಿವಶಃಗೃಣನ್ – ಇತಿ

**ಭಾಗವತ ತಾತ್ಪರ್ಯಯೋಃ** ತಥಾ ಅವಗಮಾತ || "ಅಟ್ಟಲೀ" ವೇಗ ||೨೦||

**ಕನ್ನಡಾರ್ಥ :–**

"ಆಪನ್ನಃ ಸಂಸೃತಿಂ ಘೋರಾಂ ಯನ್ನಾಮ ವಿವಶ್ಯ ಗೃಣನ್ ||
ತತಃ ಸದ್ಯೋ ವಿಮುಚ್ಯೇತ್" " ಶೃಣ್ವನ್ ಗೃಣನ್" ||

– ಎಂದು **ಭಾಗವತಶ್ಲೋಕಗಳೆರಡೂ** – ಭಕ್ತಿಪರವಶನಾಗಿ ಪರಮಾತ್ಮನ ನಾಮವನ್ನು ಅನನ್ಯಮನಸಾ ನೆನೆನೆನೆದು ನುಡಿಯುವವನಿಗೆ ಘೋರ ಸಂಸಾರಾದಿ ಸಕಲವಿಪತ್ತುಗಳೂ ಪರಿಹಾರವಾಗುವುವು. ಹೀಗೆ **'ವಿಠ್ಠಲ'** – ನಾಮೋಚ್ಚರಣ ಸಮಸ್ತಪಾತಕಗಳಿಂದ ಶೋಧಿಸಿ, ಪವಿತ್ರೀಕರಿಸಿ ಸಂರಕ್ಷಿಸುತ್ತದೆ – ಎಂದು ದಾಸರಾಯರು ನಿರೂಪಿಸುತ್ತಾರೆ. ||೨೦||

## (ಜ) ಶ್ರೀ ಗುರುಹೃದಯ ಪ್ರಕಾಶಿಕೆ ವ್ಯಾಖ್ಯಾನ :–

ಆದ್ದರಿಂದ ಜೀವರು ಭಕ್ತಿಪೂರ್ವಕ ಹರಿನಾಮಸ್ಮರಣೆಯಿಂದ ಮುಕ್ತರಾಗುವರೆಂದು ಸದೃಷ್ಟಾಂತ ತಿಳಿಸುತ್ತಾರೆ– **ಕಿಟ್ಟ** ಎಂದು. 'ವಿತ್' ಎಂಬ ಜ್ಞಾನದಿಂದರಹಿತರನ್ನು **'ಲ'** ಎಂದರೆ, ಅನುಗ್ರಹಿಸುವದ್ದರಿಂದ **ವಿಠ್ಠಲಾ** ಎಂದು ಹೆಸರುಳ್ಳ ಶ್ರೀಹರಿ ಕಿಟ್ಟಗಟ್ಟಿದ ಲೋಹ ಎಂದರೆ, ಕಲ್ಮಶದಿಂದ ಕೂಡಿರುವ ಚಿನ್ನ ಮೊದಲಾದದ್ದರನ್ನು ಅಗ್ನಿಯು ಸುಟ್ಟು ಕಲ್ಮಷ ಬೇರೆ, ಶುದ್ಧಲೋಹ ಬೇರೆ ಮಾಡುವ ಹಾಗೂ, ಘಾರಟ್ಟವೆಂಬ ನೆಲ್ಲು ಒಡೆಯುವ ಕಲ್ಲು, ವ್ರೀಹಿಗಳೆಂಬ ಭತ್ತದೊಳಗಿರುವ ತಂಡುಲವನ್ನು ಪ್ರತ್ಯೇಕ ಒಡೆದು ತೆಗೆಯುವಂತೆಯೂ, ಭಕ್ತಿಪರವಶರಾಗಿ ಹರ್ಷದಿಂದ ತನ್ನನ್ನು ಸ್ಮರಿಸುವ ಸಜ್ಜನರನ್ನು ದುರಿತವೆಂಬ ಪಾಪದ ಉಪದ್ರವ ಬಿಡಿಸಿ, ತನ್ನನ್ನು ಹೊಂದುವ ಸದ್ಗತಿಯನ್ನು ಕೊಡುವನು. ಸೂಕ್ಷ್ಮಬುದ್ಧಿ ಸ್ಥೂಲಬುದ್ಧಿಗಳಿಗೆ ಸಹ ತಿಳಿಯವುದಕ್ಕೆ ಎರಡು ದೃಷ್ಟಾಂತವೆಂದು ತಿಳಿಯಬೇಕು.

ವಿದಾಜ್ಞಾನೇನ ಠಾನ್ ಶೂನ್ಯಾನ್ ಲಾತೀ ಘೃಣ್ಣಾತಿಯತ್ತತಃ ।

ವಿಠಲಾಖ್ಯೋ ಹರಿಃ ಪಾಪಹರಣಾದೇವ ಕೀರ್ತಿತಃ ||
ಹರಿರಿತ್ಯವಶೇನಾಹ ಪುಮಾನ್ನಾರ್ಹತಿಯಾತನಾಂ |
ಯಥಾಗ್ನಿ ನಾ ಹೇಮಮಲಂ ಜಹಾತಿಧ್ಮಾತಂ ಪುನಃ ಸಂಭಜತೇ ಚ ರೂಪ ||
ಆತ್ಮಾ ಚ ಕಾಮಾನುಶಯಂ ವಿಧೂಯಮದ್ಭಕ್ತಿಯೋಗೇನ ಭಜತ್ಯಥೋಮಾಂ
ಎಂಬ **ಭಾಗವತಾರ್ಥ** ವಿವರಿಸಲ್ಪಟ್ಟಿತು. ||೨೦||

## ಸರ್ವವ್ಯಾಖ್ಯಾನಸಾರಸಂಗ್ರಹ

ಭಕ್ತಿವಪರವಶನಾಗಿ, ಭಕ್ತ್ಯುದ್ರೇಕರದಿಂದ ಮೈಮರೆತು, **"ವಿಠ್ಠಲಾ"** ಎಂದು ಮಹಾತ್ಮ್ಯಜ್ಞಾನಪೂರ್ವಕವಾಗಿ, ಗಟ್ಟಿಯಾಗಿ ಹರಿನಾಮೋಚ್ಚಾರಣೆ ಮಾಡತಕ್ಕ ಹರಿದಾಸರ ಪಾಪಗಳನ್ನು, ಅಗ್ನಿಯು ಲೋಹದಲ್ಲಿರುವ ಕಶ್ಮಲಗಳನ್ನು ಸುಟ್ಟು ಪ್ರತ್ಯೇಕಿಸಿ ಲೋಹವನ್ನು ಸ್ವಚ್ಛಗೊಳಿಸುವಂತೆ, ಕ್ಷಾಳನಗೈದು, ಅವರನ್ನು ಪಾವನರನ್ನಾಗಿ ಮಾಡಿ, ಕಲ್ಪಾವಸಾನಕ್ಕೆ ವಿರಜಾನದಿಯಲ್ಲಿ ಸ್ನಾನದ್ವಾರಾ, ಸ್ವರೂಪದೇಹಕ್ಕೆ ಪ್ರತಿಬಂಧಕವಾಗಿ ಆವರಣರೂಪವಾದ ಲಿಂಗದೇಹವನ್ನು ಭಂಗಗೊಳಿಸಿ, ಅವರ ಸ್ವರೂಪಗತ ಆನಂದ ಅವಿರ್ಭಾವರೂಪವಾದ ನಿತ್ಯಾನಂದವೆಂಬ ಮೋಕ್ಷಸಾಮ್ರಾಜ್ಯವನ್ನು, ಬೀಸುವ ಕಲ್ಲು, ಭತ್ತದಲ್ಲಿರುವ ಅಕ್ಕಿಕಾಳನ್ನು ಭತ್ತದ ಹೊಟ್ಟಿನಿಂದ ಪ್ರತ್ಯೇಕಿಸುವಂತೆ, ಲಿಂಗದೇಹಭಂಗ ದ್ವಾರಾ, ಅನುಗ್ರಹಿಸುವನು ಎಂದು ತಿಳಿಸುತ್ತಾರೆ – ಎರಡು ಸುಂದರವಾದ ದೃಷ್ಟಾಂತ ಸಹಿತ – **ಕಿಟ್ಟಗಟ್ಟಿದ** ಎಂಬ ಪ್ರಸಕ್ತ ೨೦ನೆಯ ಪದ್ಯದಿಂದ.

೧. ಸಾಮಾನ್ಯವಾಗಿ ಕಬ್ಬಿಣ, ತ್ರಾಮ, ಚಿನ್ನ, ಬೆಳ್ಳಿ, ಇತ್ಯಾದಿ ಲೋಹಗಳು ಭೂಗರ್ಭದಲ್ಲಿ ಖನಿಜಗಳ ರೂಪದಲ್ಲಿ ದೊರೆಯುವುವು. ಈ ಖನಿಜ ವಸ್ತುಗಳಿಗೆ ಆಯಾಯಾ ಲೋಹದ **"ಅದುರು"** ಎನ್ನುತ್ತಾರೆ ಖನಿಜಶಾಸ್ತ್ರದಲ್ಲಿ. ಇಂತಹ ಅದುರುಗಳಲ್ಲಿ ಲೋಹಗಳು ಇತರ ವಸ್ತುಗಳ ರೂಪದಲ್ಲಿರುವ ಕಶ್ಮಲಗಳಿಂದ

ಕೂಡಿರುವುವು. ಸಂಯುಕ್ತವಸ್ತುಸ್ಥಿತಿಯಲ್ಲಿರುವ ಲೋಹಗಳನ್ನು, ಇತರ ಕಶ್ಮಲಗಳಿಂದ ಬೇರ್ಪಡಿಸಲು, ಆ ಅದುರುಗಳನ್ನು ಅಗ್ನಿಯಲ್ಲಿ ಚೆನ್ನಾಗಿ ಕಾಯಿಸುತ್ತಾರೆ. ಆಗ ಅಗ್ನಿಸಂಬಂಧದಿಂದ ಲೋಹವು ಕಶ್ಮಲಗಳಿಂದ ಬೇರ್ಪಟ್ಟು, ಶುದ್ಧರೂಪವನ್ನು ಹೊಂದುವುದು. ನಂತರ ಶೋಧಿಸಿ, ಲೋಹವನ್ನು ಪ್ರತ್ಯೇಕಿಸುವರು. ಪ್ರಸಕ್ತ ಪದ್ಯದಲ್ಲಿ ಕಬ್ಬಿಣದಂತಹ ಲೋಹವನ್ನು ದೃಷ್ಟಾಂತವನ್ನಾಗಿ ತೆಗೆದುಕೊಂಡಿದ್ದಾರೆ. ಕಬ್ಬಿಣವು ತೇವಾಂಶದ ಸಂಬಂಧದಿಂದ ತುಕ್ಕು ಹಿಡಿಯುವುದು. ಕಶ್ಮಲರೂಪದಲ್ಲಿರುವ ಈ ಲೇಪನಕ್ಕೆ ಕಿಟ್ಟ ಎನ್ನುವರು. ಕಬ್ಬಿಣವನ್ನು ಅಗ್ನಿಯಲ್ಲಿ ಸುಟ್ಟಾಗ, ಕಿಟ್ಟಗಟ್ಟಿದಲೋಹವನ್ನು ಪಾವಕನು ಸುಟ್ಟು ವಿಂಗಡಿಸುವನು. ಕಬ್ಬಿಣದಿಂದ ಕಿಟ್ಟವನ್ನು ವಿಂಗಢಿಸಿ ಬೇರ್ಪಡಿಸಲು ಅಗ್ನಿಸಂಸ್ಕಾರವಾಗಬೇಕು.

೨. ಭತ್ತದ ಕಾಳಿನಲ್ಲಿ ಅಕ್ಕಿ ಇರುವುದು. ಅಕ್ಕಿಕಾಳಿನ ಸುತ್ತಲೂ ಭತ್ತದ ಹೊಟ್ಟು ಆ ಹೊಟ್ಟನ್ನು ಆವರಿಸಿಕೊಂಡು, ಭತ್ತದ ಸಿಪ್ಪೆ ಕವಚರೂಪದಲ್ಲಿರುವುದು. ಮರದಿಂದ ಮಾಡಿದ ಬೀಸುವಕಲ್ಲಿಗೆ ಘರಟ್ಟ ಎಂದು ಹೆಸರು. ಇಂತಹ ಘರಟ್ಟದಲ್ಲಿ ಭತ್ತವನ್ನು (ವ್ರೀಹಿ) ಹಾಕಿ, ಬೀಸಿರಾಗ, ಘರ್ಷಣಕಾರ್‍ಯದ ದೆಸೆಯಿಂದಾಗಿ, ಭತ್ತದ ಸಿಪ್ಪೆ ಮತ್ತ ಹೊಟ್ಟಿನಿಂದ ಅದರೊಳಗಿರುವ ಅಕ್ಕಿಯು (ತಂಡುಲ) ಬೇರ್ಪಡುವುದು. ಹೀಗೆ ಘರಟ್ಟವು ವ್ರೀಹಿಯಗಳೊಳಗಿಪ್ಪ ತಂಡುಲವನ್ನು ಪ್ರತ್ಯೇಕಿಸಿ ತೆಗೆಯುವುದು.

೩. ಹರಿದಾಸನಾದವನು, ನಿತ್ಯ ಹರಿಸ್ಮರಣೆಯಲ್ಲಿ ಮೈಮರೆತಿರುವನು. ಶ್ರೀಹರಿಯ ನಾಮೋಚ್ಚರಣೆಯೇ ಭಗವದ್ಭಕ್ತನಬಾಳಿನ ತಾರಕಮಂತ್ರ. ಭಕ್ತಿಪರವಶರಾಗಿ, ಮೈಸ್ಮರಣೆ ಹಾರಿ, ಗದ್ಗದಕಂಠದಿಂದ, ವಿಠ್ಠಲಾ ಎಂದೊಮ್ಮೆ, ಮಹಾತ್ಮಜ್ಞಾನ ಪೂರ್ವಕನಾಗಿ ಕೂಗಿದಾಗ, ಭಕ್ತವತ್ಸಲನಾದ ಭಗವಂತನು ಭಕ್ತನಿದ್ದೆಡೆಗೆ ಧಾವಿಸಿ ಬಂದು, ಅವನನ್ನು ಸಂರಕ್ಷಿಸುವನು. ವಿತ್ (ಠ್) ಎಂದರೆ ಜ್ಞಾನವನ್ನು, ಲ – ಎಂದರೆ ಅನುಗ್ರಹಿಸಿವುದರಿಂದ, ಜ್ಞಾನಪ್ರದವಾದ ಶ್ರೀಹರಿಯು **ವಿಠ್ಠಲಶಬ್ದವಾಚ್ಯನು.**

೪. ಅಗ್ನಿಯು ಲೋಹವನ್ನು ಸುಟ್ಟು ಕಿಟ್ಟವನ್ನು ತೆಗೆದು ಶುದ್ಧಗೊಳಿಸುವುದು. ಸಮಸ್ತವಸ್ತುಗಳನ್ನೂ ದಹಿಸುವುದರಿಂದ ಅಗ್ನಿಗೆ **ಸರ್ವಭಕ್ಷಕ** ನೆಂದು ಹೆಸರು. ಲೋಹವು ಅಗ್ನಿಯ ಸಂಪರ್ಕದಲ್ಲಿದ್ದರೂ, ಆ ಅಗ್ನಿಗೆ ಲೋಹಗತ ಕಿಟ್ಟದ ಲೇಪವಿಲ್ಲ. ಅಗ್ನಿನಿರ್ಲಿಪ್ತವಾಗಿರುವುದು. ಅಂತೆಯೇ, ಸರ್ವದೋಷರಹಿತನಾದ ಶ್ರೀಹರಿಯು, ಜೀವಾಂತರ್ಯಾಮಿಯಾಗಿ ಕಾರ್ಯಗಳನ್ನು ಮಾಡಿದರೂ, ಆ ಕರ್ಮಗಳ ಫಲರೂಪವಾದ ಪಾಪಪುಣ್ಯಗಳ ಲೇಪ ಅವನಿಗಿಲ್ಲ. ಲೋಕವಿಲಕ್ಷಣನಾದ ಶ್ರೀಹರಿಯು ನಿತ್ಯಾನಂದನು. ನಿರ್ವಿಕಾರನು. ಶಶ್ವದೇಕಪ್ರಕಾರನಾಗಿದ್ದು ಶಾಶ್ವತನು. ಶ್ರೀಹರಿಯ ನಾಮೋಚ್ಚರಣೇಯೇ ಅಗ್ನಿಸದೃಶ. ಶುದ್ಧವಾದ ಸಾತ್ವಿಕಜೀವರು ಲೋಹಸದೃಶರು. ಅವರ ಅನಾದಿಕರ್ಮಗಳ ಫಲರೂಪನಾದ ಪುಣ್ಯ, ಮಿಶ್ರ, ಪಾಪವೆಂಬ ಕಶ್ಮಲಗಳು (ದೋಷಗಳು) **ಕಿಟ್ಟ ಸದೃಶ** . ಅಗ್ನಿಯು ಲೋಹದಿಂದ ಕಿಟ್ಟವನ್ನು ವಿಂಗಡಿಸುವಂತೆ, ವಿಠ್ಠಲನಾಮಕ ಆ ವಿಮಲಸ್ವರೂಪನು, ಜೀವರ ಪಾಪಗಳನ್ನು ಪರಿಹರಿಸಿ, ಆತ್ಮಶುದ್ಧಿಯನ್ನುಂಟುಮಾಡುವನು.

೫. ಜೀವರ ಸ್ವರೂಪದೇಹಕ್ಕೆ ಅನಾದಿಕಾಲದಿಂದಲೂ ಲಿಂಗದೇಹವು ಆವರ್ಕವಾಗಿದೆ. ಅನಾದಿಲಿಂಗದೇಹಗತ ತ್ರಿಗುಣಜನ್ಯವಾದ ಅನಾದಿಕರ್ಮಗಳ ದೆಸೆಯಿಂದಾಗಿ, ಪಾಪಕಾರ್ಯಗಳ ಆಚರಣೆಯಿಂದ ಜೀವರು ದೋಷಯುಕ್ತರಾಗುವರು. ಇದು ಅವರ ಸತ್ಸಾಧನೆಗೆ ಪ್ರತಿಬಂಧಕವು. ಈ ಪ್ರತಿಬಂಧಕರೂಪವಾದ ಕರ್ಮವೆಂಬ ಕೊಳೆಯನ್ನು ಪರಿಹರಿಸುವ ಐಕ್ಯೆಕಮಾರ್ಗವೆಂದರೆ – ಶ್ರೀಹರಿಯ ಸ್ಮರಣೆ. ಶ್ರೀಪರಮಾತ್ಮನ ನಾಮಸ್ಮರಣೆ ಪಾವನಕ್ಕೆ ಪಾವನವು. ಅದರಿಂದ ಸರ್ವಪಾತಕ ಪರಿಹಾರ. ಹರಿಯ ನಾಮದಿಂದ ಪರಿಹಾರವಾಗದ ಪಾಪಗಳನ್ನು ಪರಮನೀಚತಮನಾದ ಕಲಿಯೂ ಮಾಡಲಾರ. ಹೀಗೆ ಶ್ರೀಹರಿಯ ನಾಮೋ ಚ್ಚಾರಣೆಯಿಂದ ಪ್ರಂಬಂಧಕರೂಪದಲ್ಲಿರುವ ಲಿಂಗದೇಹಭಂಗ. ಅದರ ದ್ವಾರಾ ಕರ್ಮವಿಮೋಚನೆ. ತದ್ವಾರಾ ಸಾತ್ವಿಕ ಜೀವರ ಸ್ವರೂಪಗತ ನಿತ್ಯಾನಂದಾವಿರ್ಭಾವ ರೂಪವಾದ ಮೋಕ್ಷಸುಖದ ಅಭಿವ್ಯಕ್ತಿ.

ಘಾರಟ್ಟವು ಅಕ್ಕಿಯನ್ನು ಭತ್ತದಿಂದ ಪ್ರತ್ಯೇಕಿಸುವಂತೆ, ಶ್ರೀಹರಿಯು, ನಿಜಭಕ್ತರನ್ನು ಪವಿತ್ರೀಕರಿಸಿ, ಲಿಂಗದೇಹಭಂಗ ದ್ವಾರಾ, ಮುಕ್ತಿಸುಖವನ್ನು ಕರುಣಿಸಿ. ತನ್ನಲ್ಲಿ ಆಶ್ರಯನೀಡಿ, ಸಂರಕ್ಷಿಸುವನು. ||೨೦||

## ಪದ್ಯ—೨೧

ಮೂಲ:—

ಜಲಧಿಯೊಳು ಸ್ವೇಚ್ಛಾನುಸಾರದಿ
ಜಲಚರಪ್ರಾಣಿಗಳು ತತ್ತತ್
ಸ್ಥಳಗಳಲಿ ಸಂತೋಷಬಡುತಲಿ ಸಂಚರಿಸುವಂತೆ
ನಳಿನನಾಭನೊಳಬ್ಜಭವ ಮು
ಪ್ಪೊಳಲುರಿಗ ಮೈಗಣ್ಣ ಮೊದಲಾ
ದ್ದಲವು ಜೀವರ ಗಣವು ವರ್ತಿಸುತಿಹದು ನಿತ್ಯದಲಿ ॥೨೧॥

ಅವತರಣಿಕೆ:—

ನೀರಿನಲ್ಲಿ ಸಂಚರಿಸುವ ಮತ್ಸ್ಯಾದಿಜಲಚರಪ್ರಾಣಿಗಳು ಅವುಗಳಿಗೆ ಯೋಗ್ಯವಾದ ಸ್ಥಾನಗಳಲ್ಲಿ ತಮ್ಮ ಇಚ್ಛಾನುಸಾರ ಆನಂದದಿಂದ ಸಂಚರಿಸುವಂತೆ, ಪದ್ಮನಾಭನಾಮಕ ಪರಮಾತ್ಮನಲ್ಲಿ ಬ್ರಹ್ಮದೇವರು, ತ್ರಿನೇತ್ರನಾದ ರುದ್ರದೇವರು, ಸಹಸ್ರಾಕ್ಷನಾದ ಇಂದ್ರ ಇತ್ಯಾದಿ ನಾನಾ ಪ್ರಕಾರವಾದ ಜೀವಗಣಗಳು ಸದಾ ವಿಹರಿಸುತ್ತಿರುವುವು – ಎಂದು ತಿಳಿಸುತ್ತಾರೆ – ಜಲಧಿಯಾಳು– ಎಂಬ ಪ್ರಸಕ್ತ ಸಂಧಿಗತ ೨೧ನೆಯ ಈ ಪದ್ಯದಿಂದ. ॥೨೧॥

ಪ್ರತಿಪದಾರ್ಥ:—

ಜಲಧಿಯೊಳು= ಸಮುದ್ರ, ನದೀ ಇತ್ಯಾದಿ ಜಲಾಶಯಗಳಲ್ಲಿ, ಜಲಚರಪ್ರಾಣಿಗಳು= ನೀರಿನಲ್ಲಿ ಸಂಚಾರಮಾಡುವ ಮತ್ಸ್ಯ, ಮಕರಾದಿ ಪ್ರಾಣಿಗಳು, ಸ್ವೇಚ್ಛಾನುಸಾರದಿ= ತಮ್ಮ ಸ್ವಭಾವಯೋಗ್ಯತಾನುಸಾರ, ತತ್ತತ್ ಸ್ಥಳಗಳಲ್ಲಿ= ಅವಕ್ಕೆ ಯೋಗ್ಯವಾದ ಸ್ಥಾನಗಳಲ್ಲಿ , ಸಂತೋಷಬಡುತಲಿ= ಆನಂದದಿಂದ, ಸಂಚರಿಸುವಂತೆ= ವಿಹರಿಸುವೋಪಾದಿಯಲ್ಲಿ, ನಳಿನನಾಭನೊಳು=

ತನ್ನ ಹೊಕ್ಕಳಿನಲ್ಲಿ ಸುವರ್ಣಾತ್ಮಕವಾದ ಚತುರ್ದಶದಳಾತ್ಮಕವಾದ ಕಮಲವನ್ನು ಸೃಷ್ಟಿಸಿದ ಪದ್ಮನಾಭರೂಪೀ ಶ್ರೀ ಪರಮಾತ್ಮನಲ್ಲಿ, ಅಬ್ಜಭವ= ಕಮಲೋದ್ಭವರಾದ ಚತುರ್ಮುಖಬ್ರಹ್ಮದೇವರು, ಮುಪ್ಪೊಳುರಿಗ= ಅಗ್ನಿಯಂತೆ ಉರಿಯುತ್ತಿರುವ ಮೂರನೆಯ ಕಣ್ಣುಳ್ಳ, ಅಗ್ನಿನೇತ್ರರಾದ ರುದ್ರದೇವರು, ಮೈಗಣ್ಣ= ಶರೀರಾದ್ಯಂತ ಕಣ್ಣುಗಳುಳ್ಳ ಇಂದ್ರ ದೇವರು, **ಮೊದಲಾದ**= ಇತ್ಯಾದಿ, **ಹಲವು**= ನಾನಾಪ್ರಾಕಾರವಾದ, **ಜೀವಗಣವು**= ತ್ರಿವಿಧಜೀವರಸಮೂಹವು, **ನಿತ್ಯದಲಿ**= ಸರ್ವದಾ, **ವರ್ತಿಸುತಿಹದು**= ಸಂಚರಿಸುತ್ತಾ ವಿಹರಿಸುತ್ತಿವೆ. ||೨೧||

## ವ್ಯಾಖ್ಯಾನಗಳು

### (೧) ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ :—

ಪರಮಾತ್ಮನಲ್ಲಿ ಜೀವರು ಇರುವ ಕ್ರಮ ಹೇಳುತ್ತಾರೆ.

ಸಮುದ್ರದೊಳು ವಿದ್ಯಮಾನವಾದ ಜಲಾಧಾರದಿಂದ ಸಂಚಾರಮಾಡತಕ್ಕ ಮತ್ಸ್ಯಾದಿ ಪ್ರಾಣಿಗಳು, ಅದದಕ್ಕೆ ಯೋಗ್ಯವಾದ ಆಯಾಸ್ಥಾನಗಳಲ್ಲಿ ಸ್ವಸ್ವಭಾವ ಯೋಗ್ಯತಾ ಇಚ್ಛಾನುಸಾರ ಸಂತೋಷವನ್ನು ಹೊಂದುತ್ತಾ, ಸಂಚಾರ ಮಾಡುವೋ ಪಾದಿಯಲ್ಲಿ, ಪದ್ಮನಾಭನೊಳು ಎಂದರೆ ಅಣುರೇಣುತೃಣಕಾಷ್ಠದಲ್ಲಿ, ಪರಮಾಣು ಜೀವನಲ್ಲಿ ವ್ಯಾಪ್ತನಾದ ಪರಮಾತ್ಮನ ಅನಂತಾನಂತ ರೂಪಗಳಲ್ಲಿ ಬ್ರಹ್ಮದೇವರು, ಮೂರನೇದಾದ ಅಗ್ನಿಜ್ವಾಲೆಯೋಪಾದಿಯಲ್ಲಿ ಉರಿಯುತ್ತಾ ಇರತಕ್ಕ ನೇತ್ರವುಳ್ಳ ರುದ್ರದೇವರು, ಮೈ ಎಲ್ಲಾ ಕಣ್ಣುಗಳಾಗಿ ಉಳ್ಳ ಇಂದ್ರದೇವರು, ಇವರೇ ಮೊದಲಾದ ನಾನಾವಿಧವಾದ ತ್ರಿವಿಧಜೀವರ ಸಮೂಹವು ಪ್ರತಿನಿತ್ಯದಲ್ಲೂ ಸಂಚಾರಮಾಡುತ್ತಾ ಇರೋದಾಗಿ ಅದೆ ಎಂತ, ಪರಮಾತ್ಮನ ಅನಂತರೂಪಗಳ ಈ ರೀತ್ಯಾ ತಿಳಿಯೋವನಾಗಬೇಕು ಎಂತ ತಾತ್ಪರ್ಯ. ||೨೧||

(೨) ಭಾವಪ್ರಕಾಶಿಕೆ :–

ಸಮುದ್ರದಲ್ಲಿ ಮೀನು, ಮೊಸಳೆ ಮೊದಲಾದ ಜಲಚರ ಪ್ರಾಣಿಗಳು ಸ್ವೇಚ್ಛೆಯಾಗಿ ಸಂಚರಿಸುತ್ತಾ, ಹೇಗೆ ಸಂತೋಷದಿಂದ ಇರುತ್ತಿರುವುವೋ, ಹಾಗೆಯೇ ಪರಮಾತ್ಮನ ಉದರದಲ್ಲಿ ಬ್ರಹ್ಮ ರುದ್ರಾದಿದೇವತೆಗಳು ತಮ್ಮತಮ್ಮ ಸ್ಥಾನಗಳಲ್ಲಿ ತಾವು ತಾವು ಸ್ವೇಚ್ಛೆಯಾಗಿ ವಿಹರಿಸುತ್ತ ಸಂತೋಷದಿಂದ ಭಗವಂತನನ್ನು ಧ್ಯಾನಿಸುತ್ತಿರುವರು. ||೨೧||

(೩) ಭಾವದರ್ಪಣ ಟೀಕಾ:–

ಜಲಧೀತಿ|| ನಳಿನನಾಭ– ಪದ್ಮನಾಭ, ಅಬ್ಜಭವ–ಬ್ರಹ್ಮ, ಮುಪ್ಪೊಳಲುರಿಗ ತ್ರಿಪುರದಾಹಕ ರುದ್ರ. ಮೈಗಣ್ಣ – ಇಂದ್ರ. ||೨೧||

(೪) ಶ್ರೀವ್ಯಾಸದಾಸಸಿದ್ಧಾಂತ ಕೌಮುದೀ (ಸಂಸ್ಕೃತಮೂಲ):–

'ಮದ್ವಾರ್ತಾಯಾತಯಾಮಾನಾ''. "ಅನಷ್ಟ ಭಗವತ್ ಸ್ಮರಣಃ ಬುಭುಜೇ ನಾತಿಲಂಪಟಃ''. "ವಿರಕ್ತಃ ರಕ್ತವತ್ ಗೃಹೇಷು ಅತಿಥಿವತ್''. ನೋತ್ಸೇಕಂ ಪ್ರಾಪ್ನೋತಿ ನಶುಷ್ಯತಿ'' – ಇತ್ಯಾದ್ಯುಕ್ತ ಲಕ್ಷಣಾನ್ ಅಪರೋಕ್ಷಿಣಃ ಜೀವನ್ಮುಕ್ತಾನ್ ಪ್ರತಿಮುಪಾದಯಿಷುಃ ತಾವತ್. "ಭಾನಮಸ್ತಿತ್ವಮಪಿ ಚೈವ ಅಸಮಂತಾತ್ ಯತಃ'' – ಇತ್ಯುಕ್ತಾತ್ಥಾಭಾಸಸೂತ್ರೋಕ್ತ ಪ್ರತಿಬಿಂಬತ್ವಂ ರಮಾದೀನಾಂ ದೃಷ್ಟಾಂತೇನಾಹ – ''ಜಲಧಿ''– ಇತಿ|| "ಪ್ರಯೋಗಯುಕ್ತ ಸಾದೃಶ್ಯಂ ಸಂಬಂಧೋವಾ'' – ಇತಿ ಬುದ್ಧ್ಯಾ ಭಾವಾನ್ವಿತಮಪಿ "ಅಬ್ಜ'' ಪದಂ ಆಕೃಷ್ಯತೇ|| "ಅಬ್ಜಃ'' – ಸಮುದ್ರಜಾ ರಮಾ| ತದ್ಭವಃ ಅಜಃ|| ಯದ್ವಾ ನಳಿನೇತ್ಯಸ್ಯ ಆವೃತ್ತಿಃ''|| ಅಕ್ಷರಶಬ್ದವತ್ ಅಯಂ ಘಟತೇ "ಪದ್ಮ ಪಾದಃ ಪದ್ಮನಾಭೇತಿ '' (ಭಃ ಇತಿ) ಶಿಷ್ಟಪ್ರಯೋಗಾತ್|| "ಮುಪ್ಪೊಳುರಿಗ'' – ರುದ್ರಃ|| "ಮೈಗಣ್ಣ'' – ಸಹಸ್ರಾಕ್ಷಃ "ಅಲವ'' – ಸರ್ವ. ||೨೧||

**ಕನ್ನಡಾರ್ಥ :—**

ಹರಿಯವಾರ್ತೆಗಳಿಂದಲೇ ರಾತ್ರಿಯಾಮಗಳನ್ನು ಕಳೆಯುವರು. ಭಕ್ತಿಸ್ಮರಣದಲ್ಲಿ ಜಾಗರೂಕನಾದವನು. ವಿಷಯಗಳಲ್ಲಿ ಅಶಾಹಿತನು. ದಾರಾಗಾರಗಳಲ್ಲಿ ಆಸಕ್ತನಾಗಿದ್ದರೂ, ಅತಿವಿರಕ್ತನು ವಿಷಯಸಂಪರ್ಕದಿಂದ ಹರ್ಷ—ವಿಷಾದರಹಿತನು. ಈ ಲಕ್ಷಣಯುಕ್ತರಾದ ಜೀವನ್ಮುಕ್ತರಾದ ಅಪರೋಕ್ಷಜ್ಞಾನಿಗಳ ವಿಷಯವನ್ನು ತಿಳಿಸಲುದ್ಯುಕ್ತರಾಗಿ ದಾಸರಾಯರು – "ಸರ್ವದೇಶಕಾಲಗಳಲ್ಲಿರುವ ಜ್ಞಾನ ಹಾಗೂ ಅಸ್ತಿತ್ವಗಳು ಪರಮಾತ್ಮನ ಅಧೀನವಾಗಿ ಯಾರಿಗೆ ಇರುತ್ತದೆಯೋ ಅವನು "**ಆಭಾಸ**" ನೆನಿಸುವನು. ಈ ವಿಷಯವನ್ನು "**ಆಭಾಸಏವಚ**" – ಎಂಬ ಸೂತ್ರದಲ್ಲಿ ರಮಾದಿಗಳಿಗೆ ಪ್ರತಿಬಿಂಬತ್ವವನ್ನು ದೃಷ್ಟಾಂತಸಹಿತ ಹೇಳುತಾರೆ. ಮುಪ್ಪೊಳ ಉರಿಗ – ತ್ರಿಪುರಾಸುರದಾಹಕನಾದ ರುದ್ರ. ಮೈಗಣ್ಣ – ಸಾವಿರಕಣ್ಣುಳ್ಳ ಇಂದ್ರ. "ಅಲವ" – ಸಕಲ–ಸರ್ವ (ಪೂರ್ಣ). ||೨೧||

## (ಶ) ಶ್ರೀ ಗುರುಹೃದಯಪ್ರಕಾಶಿಕೆ ವ್ಯಾಖ್ಯಾನ :—

ಜಲಚರಪ್ರಾಣಿಗಳು ಜಲಾಶ್ರಯದಿಂದ ಜೀವಿಸುವಂತೆ ದೇವರನ್ನು ಆಶ್ರಯಿಸಿ ಜೀವಿಸುವ ಬ್ರಹ್ಮಾದಿ ಸರ್ವರೂ ತದ್ದಾಸರೆಂಬುದು ನ್ಯಾಯವೆಂದು ತಿಳಿಸುತ್ತಾರೆ, ಜಲಧಿಯೊಳು ಎಂದು. ಸಮುದ್ರದಲ್ಲಿ ತಮ್ಮತಮ್ಮ ಮನೋನುಕೂಲವಾಗಿ ಮೀನು ಮೊದಲಾದ ಜಲಚರ ಪ್ರಾಣಿಗಳು ಆಯಾಯ ಸ್ಥಳಗಳಲ್ಲಿದ್ದು, ಸಂತೋಷದಿಂದ ಸಂಚರಿಸುವ ಹಾಗೆ, ಪದ್ಮನಾಭನಾದ ದೇವರಲ್ಲಿ ಅಬ್ಜಭವ ಎಂಬ ಬ್ರಹ್ಮನು, ಮುಪ್ಪೊಳಲುರಿಗನೆಂಬ ತ್ರಿಪುರರ ದಹಿಸಿದ ಈಶ್ವರನು, ಮೈಯೆಲ್ಲಾ ಕಣ್ಣಿರುವ ಇಂದ್ರನು ಮೊದಲಾದ ಅನೇಕ ಜೀವಸಮೂಹವು ಸದಾ ಆಶ್ರೈಸಿರುವುವು. ||೨೧||

## ಸರ್ವವ್ಯಾಖ್ಯಾನಸಾರಸಂಗ್ರಹ

ಸರ್ವಾಶ್ರಯಪ್ರದನಾದ ಪದ್ಮನಾಭರೂಪೀ ಶ್ರೀಮನ್ನಾರಾಯಣನ ಉದರದಲ್ಲಿ ಬ್ರಹ್ಮಾದಿಸಮಸ್ತ ದೇವತಾವರ್ಗ, ತೃಣಾಂತ ತ್ರಿವಿಧಜೀವವರ್ಗ, ಸದಾ ಸರ್ವಕಾಲಗಳಲ್ಲಿ

ನೀರಿನಲ್ಲಿ ಜಲಚರ ಜಂತುಗಳು ಸ್ವೇಚ್ಛೆಯಾಗಿ ಸಂಚರಿಸುವಂತೆ, ವಿಹರಿಸುತ್ತಿರುವುವು— ಎಂದು ತಿಳಿಸುತ್ತಾರೆ. – ಜಲಧಿಯೊಳು – ಎಂಬ ಪ್ರಸಕ್ತ ೨೧ನೆಯ ಪದ್ಯದಿಂದ.

೧. ಜಲರಾಶಿಯರೂಪದಲ್ಲಿರುವ ಸಮುದ್ರ, ಹರಿಯುತ್ತಿರುವ ನದಿ, ನೀರು ನಿಂತಿರುವ ಪುಷ್ಕರಣಿಗಳು ಇತ್ಯಾದಿಗಳೆಲ್ಲ ಜಲಾಶಯಗಳು. ಇಂತಹ ಜಲಾಶಯದಲ್ಲಿರುವ ನೀರಿನಲ್ಲಿ ಮೀನು, ಮೊಸಳೆ, ತಿಮಿಂಗಿಲ ಇತ್ಯಾದಿ ಜಲಚರ ಪ್ರಾಣಿಗಳು ತಮ್ಮ ಮನಸ್ಸಿಗೆ ಬಂದಂತೆ, ಸ್ವೇಚ್ಛಾನುಸಾರ ಸಂಚರಿಸುತ್ತಿರುವುವು. ಜಲಧಿಯಲ್ಲಿ ಅವುಗಳ ಸ್ವೇಚ್ಛಾಸಂಚಾರಕ್ಕೆ ಯಾವ ಪ್ರತಿಬಂಧಕವೂ ಇಲ್ಲ. ಆ ಜಲಚರಜಂತುಗಳು, ತಾವು ಸಂಚರಿಸುವುದಕ್ಕೆ ಯೋಗ್ಯವಾದ ಸ್ಥಾನಗಳಲ್ಲಿ ಆಡ್ಡಾಡುತ್ತಾ, ಆನಂದದಿಂದ ವಿಹರಿಸುತ್ತಿರುವುವು.

೨. ಬ್ರಹ್ಮಾಂಡಸೃಷ್ಟಿಯ ಸಮಯದಲ್ಲಿ ಮೂಲರೂಪೀ ಶ್ರೀಮನ್ನಾರಾಯಣನು, ಕ್ಷೀರಸಮುದ್ರದಲ್ಲಿ ಪದ್ಮನಾಭನಾಗಿ ಪವಳಿಸಿದನು. ಆಗ ಅವನ ಸಂಕಲ್ಪ ಮಾತ್ರದಿಂದ, ಪರಮಾತ್ಮನ ನಾಭಿಯಿಂದ ಕಮಲವು ಉತ್ಪತ್ತಿಯಾಯಿತು. ಈ ನಾಭೀಪದ್ಮವು ಸುವರ್ಣಮಯವಾಗಿದ್ದು, ಚತುರ್ದಶದಳಗಳಿಂದ ಯುಕ್ತವಾದದ್ದು. ಶ್ರೀ ರಮಾಭಿಮನ್ಯಮಾನವಾದ ಅಂತಹ ಸುವರ್ಣಾತ್ಮಕಕಮಲದಲ್ಲಿ ಚತುರ್ಮುಖ ಬ್ರಹ್ಮದೇವರು ಸೃಷ್ಟರಾದರು. ಕಮಲೋದ್ಭವರಾದ ಆ ಬ್ರಹ್ಮದೇವರು ಶ್ರೀ ಪದ್ಮನಾಭನ ಜ್ಯೇಷ್ಠಪುತ್ರರು. ಹಿರಣ್ಯಗರ್ಭನಾಮಕರು. ನಳಿನನಾಭನ ಜೇಷ್ಠ ಪುತ್ರರಾಗಿ ಅಬ್ಜಭವರ ಸೃಷ್ಟಿ

೩. ತ್ರಿಪುರಾಸುರನು ಪ್ರಬಲವಾದ ದೈತ್ಯನು. ಅವನ ಅಸೀಮ ಪ್ರಾಬಲ್ಯಕ್ಕೆ ತ್ರಿಭುವನವೇ ತಲ್ಲಣಿಸಿತು. ದೇವತಾವರ್ಗ ಭಯಭೀತರಾದರು. ಆಗ ಶ್ರೀ ಹರಿಯ ಅನುಗ್ರಹದಿಂದ ಮಹರುದ್ರ ದೇವರು, ಭೂಮಿಯನ್ನೇ ರಥವನ್ನಾಗಿ ಮಾಡಿಕೊಂಡು, ಮೇರುಪರ್ವತವನ್ನೇ ಧನುಸ್ಸಾಗಿ ಮಾಡಿ, ಬಾಣದಲ್ಲಿ ಶ್ರೀ ಹರಿಯನ್ನು ಆವಾಹನಗೈದು,

ತ್ರಿಪುರಾಸುರನನ್ನು ಸಂಹರಿಸಿದರು, ಆಗ ತನ್ನ ಫಾಲನೇತ್ರವನ್ನು ತೆರೆದು, ಪ್ರಳಯಾಗ್ನಿಯಿಂದ ದೈತ್ಯನನ್ನು ಸುಟ್ಟರು. ತ್ರಿಪುರಸಂಹಾರಿಯಾದ ಶ್ರೀಮಹಾರುದ್ರ ದೇರಿಗೆ **ಮುಪ್ಪೊಳಗಿಗ** ಎಂದು ಹೆಸರು. ಅಂದರೆ ಮೂರನೆಯ ನೇತ್ರದ ಅಗ್ನಿಯಿಂದ ತ್ರಿಪುರನನ್ನು ಸುಟ್ಟವರು ಎಂದರ್ಥ.

೪. ಅಹಲ್ಯಾಗಮನದಿಂದ, ಸುರಪತಿಯಾದ ಇಂದ್ರನಿಗೆ, ಶರೀರಾದ್ಯಂತ ಕಣ್ಣು (ಯೋನಿ) ಆಗುವಂತೆ ಅಹಲ್ಯಾಪತಿ ಗೌತಮಋಷಿಗಳ ಶಾಪ. ಇದರಿಂದ ಇಂದ್ರನು ಮೇಷವೃಷಣನಾದನಲ್ಲದೇ, ಸಹಸ್ರಾಕ್ಷನಾದನು. ಆ ಕಾರಣದಿಂದ ಇಂದ್ರನು **ಮೈಗಣ್ಣನು.**

೫. ಇಂತು ನಳಿನನಾಭನ ಉದರದಲ್ಲಿ, ಅಬ್ಜಭವಾದಿಸಮಸ್ತದೇವತಾವರ್ಗ, ತ್ರಿವಿಧಜೀವಗಣ ( ಮುಕ್ತರು–ಅಮುಕ್ತರು, ಅಸ್ಪೃಶ್ಯರು ಇತ್ಯಾದಿ) ಜಲಧಿಯಲ್ಲಿ ಜಲಚರಜಂತುಗಳಂತೆ ಸದಾ ಸ್ವೇಚ್ಛೇಯಿಂದ ವಿಹರಿಸುತ್ತಾ ಆನಂದ ಪಡುತ್ತಿರುವರೆಂದು ಹೇಳುತ್ತಾರೆ. ||೨೧||

## ಪದ್ಯ ೨೨

**ಮೂಲ :–**

ವಾಸುದೇವನು ಒಳಹೊರಗೆ ಅವ
ಕಾಶದನು (ಆಭಾಸಕನು) ತಾನಾಗಿ ಬಿಂಬ ಪ್ರ
ಕಾಶಿಸುವ ತದ್ರೂಪ ತನ್ನಾಮದಲಿ ಸರ್ವತ್ರ
ಈ ಸಮನ್ವಯುವೆಂದೆನಿಪ ಸದು
ಪಾಸನವ ಗೈವವನು ಮೋಕ್ಷಾ
ನ್ವೇಷಿಗೋಳೊಳುತ್ತಮನು ಜೀವನ್ಮುಕ್ತನವನಿಯೊಳು ||೨೨||

**ಅವತರಣಿಕೆ :–**

ಮೋಕ್ಷಾಪೇಕ್ಷಿಗಳ ಸಮೂಹದಲ್ಲಿ ಜೀವನ್ಮುಕ್ತನೆಂದೆನಿಸುವ ಜೀವರ ಲಕ್ಷಣ ಮತ್ತು ಉಪಾಸನಾಕ್ರಮವನ್ನು ತಿಳಿಸುತ್ತಾರೆ – **ವಾಸುದೇವನು** – ಎಂಬ ಪ್ರಸಕ್ತಸಂಧಿಗತ ೨೨ನೆಯ ಈ ಪದ್ಯದಿಂದ. ||೨೨||

**ಪ್ರತಿಪದಾರ್ಥ :–**

ವಾಸುದೇವನು = ಪುರುಷರೂಪಿಯೂ, ಮೋಕ್ಷಪ್ರದನೂ ಆದ ವಾಸುದೇವ ನಾಮಕ ಶ್ರೀಪರಮಾತ್ಮನು, ಒಳಹೊರಗೆ = ಜೀವನ ಸ್ವರೂಪದಲ್ಲಿ ಹಾಗೂ ಸ್ಥೂಲದೇಹಗತ ಅಂತಃರ್ಬಹಿಶ್ಚ, ಅವಕಾಶನು = ಸಾಧನೆ ಮಾಡುವುದಕ್ಕೆ ಅವಕಾಶ ಕೊಡತಕ್ಕವನಾಗಿ, (ಆಭಾಸಕನು = ಒಳಗೂ ಮತ್ತು ಹೊರಗೂ ಏಕರೂಪದಿಂದ ವಿದ್ಯಮಾನನಾಗಿದ್ದು), ತಾನಾಗಿ = ಸರ್ವತಂತ್ರಸ್ವತಂತ್ರನಾಗಿ, ಸ್ವೇಚ್ಛೆಯಿಂದ, ಬಿಂಬ = ಪ್ರತಿಬಿಂಬಸದೃಶರಾದ ಜೀವರ ಬಿಂಬನಾಗಿ ಶ್ರೀಹರಿಯು, ತದ್ರೂಪ = ಜೀವರೂಪನಾಗಿ, ಸ್ಥೂಲದೇಹಗತ ತತ್ತ್ವದೇವತಾ ರೂಪನಾಗಿ, ತನ್ನಾಮದಲಿ = ಆಯಾಯಾ ಜೀವನಾಮಕನಾಗಿ, ತತ್ತ್ವ ಮತ್ತು ತತ್ವೇಶರ

ಹೆಸರಿನಿಂದಲೇ, ಪ್ರಕಾಶಿಸುವ = ವಿರಾಜಮಾನನಾಗಿದ್ದಾನೆ. ಸರ್ವತ್ರ = ಸರ್ವಜೀವರದಲ್ಲಿ , ಸರ್ವತತ್ತ್ವಗಳಲ್ಲಿ, ಸರ್ವ ತತ್ತ್ವದೇವತೆಗಳಲ್ಲಿ, ಸರ್ವಸ್ಥೂಲ ದೇಹಗಳಲ್ಲಿ ವಿದ್ಯಮಾನನಾಗಿದ್ದಾನೆಂದು, ಈ ಸಮನ್ವಯುವೆಂದನಿಪ = ನಾನಾಭಗವದ್ರೂಪಗಳನ್ನೂ ಏಕರೂಪನಾದ ಬಿಂಬನಲ್ಲಿ ಐಕ್ಯಚಿಂತನೆ ಮಾಡುವ, ಸದುಪಾಸನೆಯ = ಸಮೀಚೀನವಾದ ಉತ್ತಮೋತ್ತಮ ಜ್ಞಾನಾನುಸಂಧಾನ ಪೂರ್ವಕ ಉಪಾಸನೆಯನ್ನು, ಗೈವವನು = ಮಾಡುವ ಉತ್ತಮಾಧಿಕಾರಿಯು, ಮೋಕ್ಷಾಪೇಕ್ಷಿಗಳೊಳು = ನಿತ್ಯಾನಂದರೂಪವಾದ ಮುಕ್ತಿಸುಖವನ್ನು ಬಯುಸುವ ಮುಕ್ತಿಯೋಗ್ಯಜೀವರಲ್ಲಿ, ಉತ್ತಮನು = ಶ್ರೇಷ್ಠಸಾಧಕನು, ಅವನಿಯೊಳು = ಭೂಮಂಡಲದಲ್ಲಿ, ಜೀವನ್ಮುಕ್ತನು = ಜನನ ಮರಣಾದಿಗಳಿಂದ ರಹಿತನಾಗಿ, ಲಿಂಗದೇಹಭಂಗ ಪೂರ್ವಾವಸ್ಥೆಯಲ್ಲಿ ಮಹರಾದಿಲೋಕಗಳಲ್ಲಿ ಇರುವ ಜೀವನ್ಮುಕ್ತನೆಂದೆನಿಸುವನು. ||೨೨||

## ವ್ಯಾಖ್ಯಾನಗಳು

### (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ :–

ಪೂರ್ವೋಕ್ತಪ್ರಕಾರ ಉಪಾಸನಾ ಮಾಡತಕ್ಕವ ಎಂಥಾವನೆಂದರೆ ಹೇಳುತಾರೆ.

ಮೋಕ್ಷಪ್ರದನಾದ ವಾಸುದೇವನು ಜೀವನ ಒಳ–ಹೊರಗಿರುವ ಸ್ಥೂಲದೇಹದ ಒಳಗಿದ್ದು, ಜೀವನ್ಮುಕ್ತರಾಗೋದಕ್ಕೆ ಮಾಡತಕ್ಕ ಸಾಧನಿಗೆ ಅವಕಾಶ ಕೊಡತಕ್ಕವನು. ಇಂಥಾ ಸಾಧನಿಗೆ ಅಭಿಮಾನಿ ತಾನೆ ಆಗಿ ಬಿಂಬ ಇರೋವನಾಗಿದ್ದಾನೆ ಮತ್ತು ಬಿಂಬಿನಾದ ಹರಿ ಜೀವಗತತತ್ತ್ವಗಳಲ್ಲಿ ದೇವತಾರೂಪದೇವತಾನಾಮದಲ್ಲಿ ಪ್ರಕಾಶಮಾನನಾಗಿರುವ. ಈ ಪ್ರಕಾರ ಸರ್ವತ್ರವಿದ್ಯಮಾನರಾದ ಜೀವರಲ್ಲಿ ಇರೋವನಾಗಿದ್ದಾನೆ. ಈ ಪೂರ್ವೋಕ್ತಪ್ರಕಾರ ಭಗವದ್ರೂಪಗಳ ಸಮನ್ವಯ ಮಾಡಿ ಉಪಾಸನಾ ಮಾಡತಕ್ಕ ಅಧಿಕಾರಿಗಳಿಗೆ ಕಾಣಿಸಿಕೊಳ್ಳುತಕ್ಕವನು – ಎಂದು

ಎನಿಸತಕ್ಕ ಬಿಂಬನ್ನು ಸಮೀಚೀನವಾಗಿ ಉಪಾಸನ ಮಾಡತಕ್ಕವನು, ಮೋಕ್ಷಾಪೇಕ್ಷಿಗಳೊಳಗೆ ಉತ್ತಮಸಾಧನ ಉಳ್ಳವನು. ಈ ಭೂಮಿಯೊಳಗೆ ಜನನ–ಮರಣಾದಿಗಳು ಇಲ್ಲದೆ, ಲಿಂಗಭಂಗವೂ ಇಲ್ಲದೆ ಮಹರಾದಿಲೋಕಗಳಲ್ಲಿ, ಜೀವನ್ಮುಕ್ತನಾಗೋದಕ್ಕೆ ಯೋಗ್ಯವಾದ ಸಾಧನಿ ಉಳ್ಳವನು ಇವನೇ ಎಂತ ತಾತ್ಪರ್ಯ (ಆಭಾಸಕನು – ಒಳಗೂ ಹೊರಗೂ ಒಂದೇ ರೂಪ ಧರಿಸಿದವನು ಎಂತ ಅರ್ಥ).

**ವಿಶೇಷಾರ್ಥ :–** ಜೀವನ್ಮುಕ್ತಿ ಎಂದರೆ ಜನನ ಮರಣದಿಂದ ಮುಕ್ತ ಎಂತ ತಾತ್ಪರ್ಯ. ಇಂಥಾ ಜೀವನ್ಮುಕ್ತನಾಗಿ ತದನಂತರ ಲಿಂಗಭಂಗಾಖ್ಯ ಮುಕ್ತಿ ಐದುವಂಥಾನಾಗತಾನೆ. ಲಿಂಗಭಂಗಾನಂತರದಲ್ಲಿ ಸ್ಪಷ್ಟವಾಗಿ ಜೀವಾಂತರ್ಗತ ಜೀವರೂಪನಾದ ಬಿಂಬನ ಸಂದರ್ಶನವು. ಆದ್ದರಿಂದ ಮುಕ್ತಿ ಎನತಕ್ಕದ್ದು ಜೀವನ್ಮುಕ್ತಿ, ಜೀವರೂಪನಾದ ಬಿಂಬನ ಸಂದರ್ಶನವು. ಆದ್ದರಿಂದ ಮುಕ್ತಿ ಎನತಕ್ಕದ್ದು ಜೀವನ್ಮುಕ್ತಿ, ಮುಕ್ತಿ ಎಂತ ಎರಡು ಪ್ರಕಾರ. ಪೂರ್ವಬ್ರಹ್ಮಕಲ್ಪದ ನಿರಂಶಜೀವರು, ಆ ಬ್ರಹ್ಮಕಲ್ಪದ ನಿರಂಶದೇವರು ಆ ಬ್ರಹ್ಮಕಲ್ಪದ ಅಂತ್ಯಕ್ಕೆ ಜೀವನ್ಮುಕ್ತರಾಗಿ ಪ್ರಳಯಐದಿ ಅವರೇ ಈ ಕಲ್ಪದಲ್ಲಿ ಸುಖಪ್ರಾರಬ್ಧ ಭೋಗಮಾಡತಾ ಜನನರಹಿತರಾಗಿ ಮಹರಾದಿ ಲೋಕಗಳಲ್ಲಿ ಇರೋವರಾಗಿದ್ದಾರೆ. ಅವರಿಗೆ ಈ ಬ್ರಹ್ಮನ ಕೂಡಾ ಲಿಂಗಭಂಗವು ದಾವಾಗ ಎಂದರೆ **'ಅಂಡನಾಶಾತ್ಪುರಾವೇತೇ ಲಿಂಗಭಂಗಃ ಪ್ರಶಸ್ಯತೇ'** ಎಂತ **ಪ್ರಕಾಶಸಂಹಿತಾ ಉಕ್ತಿ.** ಇದರಂತೆ ಈ ಕಲ್ಪದ ನಿರಂಶರಿಗೆ ಮುಂದೆ ವಾ ಯುದೇವರು ಬ್ರಹ್ಮತ್ವ ಐದಿ, ನಂತರ ಅವರ ಸಹ ಮುಕ್ತಿ ಎಂತ ತಿಳಿಯತಕ್ಕದ್ದು. ಜೀವನ್ಮುಕ್ತರಿಗೆ ಲಿಂಗಭಂಗಕ್ರಮ ಈ ರೀತ್ಯಾ ತಿಳಿಯಬೇಕು। ಜೀವನ್ಮುಕ್ತದಶಾಕ್ಕೆ ಪೂರ್ವದ ಸಾಧನಿ ಮಾಡತಕ್ಕ ಕಾಲದಲ್ಲಿ ಸರ್ವೇಂದ್ರಿಯಗಳು ಪರಮಾತ್ಮನ ಪೂಜಾರತವಾಗಿರಬೇಕು. ವಿಷಯಗಳಲ್ಲಿ ರತವಾಗಿರಕೂಡದು. ಇಂಥಾ ಇಂದ್ರಿಯಗಳು ಉಳ್ಳವ ಜೀವನ್ಮುಕ್ತನಾಗುತ್ತಾನೆ, ಎಂತ ತಾತ್ಪರ್ಯ. ಆದರೆ ಗುದ ಉಪಸ್ಥೇಂದ್ರಿಯಗಳು ಪರಮಾತ್ಮನ ಪೂಜಾದಲ್ಲಿ ರತಗಳು ಹ್ಯಾಂಗಾಗತವೆ

ಎಂದರೆ ಸಮಾಧಾನ–ಮಲಮೂತ್ರವೆಂಬ ಕಶ್ಮಲವನ್ನು ದೇಹದಲ್ಲಿಟ್ಟುಕೊಂಡು ಭಗವಧ್ಧ್ಯಾನರತರಾದರೆ ತದ್ಭಾವದಿಂದ ಧ್ಯಾನ ಸಿದ್ಧಿಸೋದಿಲ್ಲ. ಆದ್ದರಿಂದ ಅದರನ್ನು ವಿಸರ್ಜನಮಾಡಿ ಧ್ಯಾನಕ್ಕೆ ಕೂತರೆ, ವಿಕಲ್ಪ ಇಲ್ಲದೇ ಧ್ಯಾನ ಕೂಡೋದಾಗತದೆ. ಆದ್ದರಿಂದ ಮಲಮೂತ್ರವಿಸರ್ಜನಿ ಎಂಬುದು ಧ್ಯಾನಕ್ಕೆ ಸಹಕಾರಿಯಾಗೋಣದರಿಂದ, ಗುದ–ಉಪಸ್ಥಗಳೆರಡೂ ಪರಮಾತ್ಮ ಪೂಜಾದಲ್ಲೇ ರತವಾದದ್ದು ಆದವು ಎಂತ ತಿಳಿಯತಕ್ಕದ್ದು. ಮೋಕ್ಷದಲ್ಲಾದರೂ ಅಚಿತ್ತುರೂಪವಾದ ಶುದ್ಧಸತ್ತ್ವಾತ್ಮಕ ಸ್ಥೂಲದೇಹಗಳ ತೆಗೆದುಕೊಂಡಾಗೇ ಕ್ಷುತ್ತು ಇಲ್ಲದೇ ಭೋಜನ ಪಿಪಾಸವಿಲ್ಲದೇ ಉದಕಪಾನ ಮಾಡತಾರೆ. ಇದು ಮುಕ್ತರ ಲೀಲ. ಈ ಭೋಜನ–ಪಾನಪದಾರ್ಥಗಳು ದಾವವೆಂದರೆ ಶುದ್ಧಸತ್ತ್ವಾತ್ಮಕವು. ಅವನ್ನು ಭೋಜನ–ಪಾನಗಳ ಮಾಡಿ, ಗುದ–ಉಪಸ್ಥಗಳಿಂದ ವಿಕಾರರಹಿತವಾಗಿ ಬಿಡೋವರಾಗತಾರೆ. ಅದದು ತಮ್ಮ ತಮ್ಮ ಶುದ್ಧಸತ್ತ್ವಗಳಲ್ಲಿ ಸೇರೋದಾಗತವೆ. ಅಚಿತ್ತಿನಿಂದ ಭೋಗಕಾಲದಲ್ಲಿ ಗುದ–ಉಪಸ್ಥಗಳ ಕಾರ್ಯಗಳೇನೆಂದರೆ, ತತ್ಕಾರ್ಯವೇನೂ ಇಲ್ಲ. ಯಾಕೆಂದರೆ, ಅಚಿತ್ತಿನಿಂದ ಭೋಜನಪಾನಾದಿಗಳು ಇಲ್ಲವಾದ್ದರಿಂದ ಗುದ ಉಪಸ್ಥಕಾರ್ಯಗಳು ಏನೂ ಇಲ್ಲ. ಅನಶನ ಪುರುಷಗೆ ಗುದ ಉಪಸ್ಥ ವ್ಯಾಪಾರ ಇಲ್ಲದೋಪಾದಿಯಲ್ಲಿ ಎಂತ ತಿಳಿಯಬೇಕು. ಮೋಕ್ಷದಲ್ಲಿ ಸರ್ವೇಂದ್ರಿಯಗಳು ಪರಮಾತ್ಮನ ಧ್ಯಾನಕ್ಕೆ ಪ್ರತಿಬಂಧಕರೂಪವಾದ ಮಲಮೂತ್ರ ವಿಸರ್ಜಿನಿ ವ್ಯಾಪಾರವಿಲ್ಲದೇ, ಗುದ ಉಪಸ್ಥೇಂದ್ರಿಯಗಳ ವ್ಯಾಪಾರವಿಲ್ಲದೇ ಇರೋಣವೇ, ಗುದ ಉಪಸ್ಥ ಎರಡು ಇಂದ್ರಿಯಗಳು ಪೂಜಾದಲ್ಲಿ ರತಗಳು ಎಂತ ತಾತ್ಪರ್ಯ. ಸ್ವರೂಪದೇಹದಲ್ಲಿ ವಾಸುದೇವ ಸತ್ಸಾಧನಿಗೆ ತಾನೊಬ್ಬನೇ ನಿಯಾಮಕನಾಗಿ, ಸ್ಥೂಲದೇಹದಲ್ಲಿ ಅದೇ ವಾಸುದೇವನೇ ವಾಯ್ವಾದಿ ತತ್ತ್ವೇಶರ ದ್ವಾರಾ ನಿಯಾಮಕ ಎಂತ ತಿಳಿಯಬೇಕು. ಜೀವೇಂದ್ರಿಯಗಳಿಗೆ ವಾಯುದೇವರ ನಿಯಾಮಕತ್ವ ಉಂಟು ಎಂತ ಕೆಲವು ಪ್ರಮಾಣಗಳಿಂದ ತೋರತದಲ್ಲಾ ಅಂದರೆ, ಆ ಪ್ರಮಾಣ ಸತ್ಯವೇ, ಅದರ

ತಾತ್ಪರ್ಯ ಬೇರೆ. ಜೀವನಿಯಾಮಕತ್ವ ವಾಯುದೇವರಿಗೆ ಉಂಟು ಎಂತ ಕೆಲವು ಪ್ರಮಾಣಗಳಿಂದ ತೋರತದಲ್ಲಾ ಅಂದರೆ, ಆ ಪ್ರಮಾಣ ಸತ್ಯವೇ, ಅದರ ತಾತ್ಪರ್ಯ ಬೇರೆ. ಜೀವನಿಯಾಮಕತ್ವ ವಾಯುದೇವರಿಗೆ ಉಂಟು. ಭಗವದಾಜ್ಞಾನದಿಂದ ಅಂಥ ನಿಯಾಮಕತ್ವ ಎಂಬುದು ರುದ್ರಾದಿಗಳಿಗೆ ಇಲ್ಲ. ವಾಯುದೇವರು ಒಬ್ಬರಿಗೇವೇ, ಆದರೂ ಜೀವಾಂತರ್ಗತಪ್ರವೇಶದಿಂದ ನಿಯಾಮಕತ್ವ ಇಲ್ಲ. ಹ್ಯಾಗೆಂದರೆ, ಅಣುಲಿಂಗಗತ ಅಮುಖ್ಯಾಭಿಮಾನದಿಂದ ಇರತಕ್ಕ ವಾಯುದೇವರಿಗೆ ಜೀವನೇನು, ಜೀವಾಂತರ್ಗತ ಭಗವತ್ಸಂದರ್ಶನವೇ ಉಂಟು. ಅಣುಲಿಂಗದಲ್ಲಿ ಇದ್ದವರಾಗಿ ಭಗವದಾಜ್ಞಾನದಿಂದ ಭಗವತ್ಸಂಕಲ್ಪ ತಿಳಿದು, ರಾಜ, ಭೃತ್ಯರಿಗೆ ಆಜ್ಞಾ ಮಾಡಿದಂತೆ ಜೀವಗೆ, ಬಹಿಃ ಇದ್ದು ನಿಯಾಮಕ ಮಾಡತಾರೆ. ವಾಯುದೇವರು ಆಜ್ಞಾ ಮಾಡಿದ್ದು ಪರಮಾತ್ಮನ ಆಜ್ಞಾಕ್ಕೆ ಅನುಸರಿಸೇ ಮಾಡತಾರೆ. ಜೀವೇಂದ್ರಿಯಗಳಿಗೆ ಪರಮಾತ್ಮ ತಾನೊಬ್ಬನೇ ಅಂತರ್ನಿಯಾಮಕನಾಗತಾನೆ. ಈ ಪ್ರಕಾರ ಜೀವೇಂದ್ರಿಯಗಳಿಗೆ ವಾಯುದೇವರ ನಿಯಾಮಕತ್ವವು ಅಷ್ಟೇ ಹೊರತು ಅಂತಃಪ್ರವೇಶವಿಲ್ಲ. ಯದ್ಯಪಿ ಜೀವ ಅವರವೇ (ತಾರತಮ್ಯರೀತ್ಯಾ ಅವರರು ಕಡಿಮೆ). ತದ್ವತ್ ಜಗದುಪಾದಾನ ಮೂಲ ಜಡಪ್ರಕೃತಿಯು ಲಕ್ಷ್ಮಿಅಭಿಮನ್ಯಮಾನವಾದದ್ದು, ಜಡವಾದ್ದರಿಂದ ಅವರರವೇನೇ. ಆದರೂ ಲಕ್ಷ್ಮೀಅಭಿಮನ್ಯಮಾನವಾದ್ದರಿಂದ ಪ್ರವೇಶ ಇಲ್ಲ. ತದ್ವತ್, ಜೀವನ ಸ್ವರೂಪ ಎಂತ ತಿಳಿಯಬೇಕು. ಗುದೇಂದ್ರಿಯ ಉಪಸ್ಥೇಂದ್ರಿಯದ ವಿಷಯಕ್ಕೆ ಪ್ರಮಾಣ **ವಿಷ್ಣುರಹಸ್ಯದಲ್ಲಿ** ಅದೆ. ಸರ್ವಜೀವಾಂತರ್ಗತರೂಪ ರುದ್ರಾದಿಗಳಿಗೆ ದರ್ಶನ ಇಲ್ಲ ಎಂಬದುದು ಶ್ರೀವೇದವ್ಯಾಸದೇವರ ಕೃತ **ತತ್ತ್ವಸಾರದಲ್ಲಿ** ಅದೆ. ಈ ರೀತ್ಯಾ ತಿಳಿಯತಕ್ಕದ್ದು.

ಸ್ಥೂಲದೇಹಗತ ರುದ್ರಾದಿದೇವತೆಗಳಿಗೆ ಸ್ಥೂಲದೇಹಸ್ಥನಾದ ಜೀವನ ಸಂದರ್ಶನ ಯಾಕೆ ಇಲ್ಲ ಎಂದರೆ, ಅಹಂಕಾರತತ್ತ್ವಕ್ಕೆ ಮ್ಯಾಲೆ ಮಹತ್ತತ್ತ್ವ, ಅದರ

ಮ್ಯಾಲೆ ರಮಾಭಿಮನ್ಯವಾದ ಅವ್ಯಕ್ತತತ್ತ್ವವೆಂಬ ಲಿಂಗದೇಹ, ತದಂತರ್ಗತ ಜೀವನು, ರುದ್ರಾದಿಗಳಿಗಾದರೂ ಅಹಂಕಾರತತ್ತ್ವದ ಪರಿಯಂತ ವ್ಯಾಪ್ತಿ. ಮಹತ್ತತ್ತ್ವ ತಗ್ಗತಗಳು ದರ್ಶನ. ಅದರ ಮ್ಯಾಲೆ ಇವರಿಗೆ ದರ್ಶನ ರೂಪವಾದ ಪ್ರವೇಶವಿಲ್ಲವಾದ್ದರಿಂದ ಜೀವನ್ನ ರುದ್ರಾದಿಗಳು ನೋಡೋದಿಲ್ಲ. ವಾಯುದೇವರು ಮಹತ್ತತ್ತ್ವದಲ್ಲಿ ವ್ಯಾಪ್ತರಾಗಿದ್ದು, ಅವ್ಯಕ್ತತತ್ತ್ವ, ತದ್ಗತ ಜೀವನ ಜೀವಾಂತರ್ಗತ ಪರಮಾತ್ಮನ್ನ ನೋಡತಾರೆ. ಇದು ನೇಮ. ಈ ಪ್ರಕಾರ ಅನುಸಂಧಾನ ಮಾಡಬೇಕೆಂದು ತಾತ್ಪರ್ಯ. ಆವರಣಭೂತವಾದ ಖರ್ಪರಕ್ಕೆ ಸುತ್ತಲೂ ಇರುವ ಮಹತ್ತತ್ತ್ವ ರುದ್ರದೇವರೂನೂ, ಅವ್ಯಕ್ತ ತತ್ತ್ವ ವಾಯುದೇವರೂನೂ ಸಾಂತವಾಗಿ ಕಾಣಲಾರರು. ದೇಹಗತಗಳ ಸಾಂತವಾಗಿ ಕಾಣತಾರೆಂದು ತಿಳಿಯಬೇಕು. **ಶ್ರೀ ವಿಜಯದಾಸರಾಯಪ್ರಭೃತಿಗಳು** ಜೀವನ ಸ್ವರೂಪ ಇಂಥಾದ್ದು ಎಂತ ಹೇಳಿದ್ದಾರಲ್ಲ – ಅದು ಹ್ಯಾಂಗೆ ಹೇಳಿದರು – ಅಂದರೆ, ಜೀವನ ಸ್ವರೂಪನೋಡಿ ಹೇಳಿದ್ದಲ್ಲ. ಸ್ಥೂಲದೇಹಗತ ಸ್ಥೂಲಾಂಗುಷ್ಠ ಪರಿಮಿತನಾದ ಸ್ಥೂಲಬಿಂಬ ಜೀವಾಕಾರದಂತೆ ಇರತಕ್ಕವನಾದ್ದರಿಂದ ಸ್ಥೂಲದೇಹಗತ ಜೀವಾಕಾರಬಿಂಬ ಜ್ಞಾನಿಗಳಿಗೆ ಸಂದರ್ಶನ ಉಂಟು. ಆ ಗುರ್ತಿನಿಂದ ಜೀವ ಇಂಥಾವನೆಂದು ಜ್ಞಾನಿಗಳು ಹೇಳೋವರಾಗತಾರೆ. ಅಷ್ಟೇ ಹೊರತು, ಲಿಂಗದೇಹಸ್ಥನಾದ ಜೀವನ್ನು ನೋಡಿ ಹೇಳತಾರೆಂತ ತಾತ್ಪರ್ಯವಲ್ಲ. ಈ ಪ್ರಕಾರ ತಿಳಿದು ಅನುಸಂಧಾನ ಮಾಡಬೇಕಂತ ತಾತ್ಪರ್ಯ. ||೨೨||

(೨) ಭಾವಪ್ರಕಾಶಿಕೆ :–

ಶ್ರೀವಾಸುದೇವನು ಈ ಜಗತ್ತಿನ ಒಳಹೊರಗೆ ವ್ಯಾಪ್ತನಾಗಿರುವನು. ಬಿಂಬರೂಪಯುತನಾಗಿ, ಜೀವನ ಸ್ವರೂಪದೇಹದಲ್ಲಿ ಪ್ರತಿಬಿಂಬಿತನಾಗಿ, ಸರ್ವಪ್ರಾಣಿಗಳಲ್ಲಿ ಆಯಾಯಾ ರೂಪಗಳಿಂದ ಆಯಾ ಹೆಸರುಗಳಿಂದ ಪ್ರಕಾಶಿಸುತ್ತಿರುವನು. ಬಿಂಬರೂಪಿಯಾಗಿ ಯಾವ ಪರಮಾತ್ಮನಿರುವನೊ ಅದೇ

ಪರಮಾತ್ಮನೇ ಪ್ರತಿಬಿಂಬನಾದ ಜೀವನೊಳಗಿರುವನು. ಈ ಎರಡು ಭಗವದ್ರೂಪಗಳಿಗೆ ಪರಸ್ಪರ ಭೇದವಿಲ್ಲವೆಂಬ ಉತ್ತಮರೀತಿಯ ಉಪಾಸನೆಯನ್ನು ಮಾಡುವವನು ಮುಕ್ತಿಯೋಗ್ಯರಲ್ಲಿ ಉತ್ತಮನು ಮತ್ತು ಭೂಮಿಯಲ್ಲಿ ಜೀವನ್ಮುಕ್ತನು. ||೨೨||

(೩) ಭಾವದರ್ಪಣಟೀಕಾ :—

ಏವಂ ರೀತ್ಯಾ ತಿಳಿದು, ಉಪಾಸನೆಮಾಡೆಂದು ಹೇಳುತ್ತಾರೆ — **ವಾಸುದೇವೇತಿ** ಅಭಾಸಕ — ಆ ಸಮ್ಯಕ್‌ಭಾಸಕ — ಪ್ರಕಾಶರೂಪಕ ಎಂಬರ್ಥ. ||೨೨||

(೪) ಶ್ರೀವ್ಯಾಸಸಿದ್ಧಾಂತ ಕೌಮುದೀ (ಸಂಸ್ಕೃತಮೂಲ) ಃ —

"ವಾಸುದೇವ'' — ಇತಿ "ಓಂ ವಿವಕ್ಷಥಮವಕ್ಷುರಸ್ಯ ಕೇತವಃ ಉತ ವಜ್ರೋಗಭಸ್ತ್ಯೋಃ|| ಯತ್ಸೂರ್ಯೋ ನ ರೋದಸೀ ಅವರ್ಧಯತ್|| 'ಯದಿ ಪ್ರವೃದ್ಧ ಸತ್ಪತೇ ಓಂ ಸ್ವತಾಂತ್ಯಾ ರೋದಸೀ ದ್ಯಾವಾಪೃಥಿವೀ ಅಚ್ಛಾದಯತಿ ಇತಿವಾಸುಃ|| ದೇವಯತಿ ಭಕ್ತಾಭಿಷ್ಟಂ ಗಮಯತಿ ಇತಿ ದೇವಃ ಸಚಾಸೌ ತಥಾ "ಛಾದಯಾಮಿ ಜಗತ್ ವಿಶ್ವಭೂತ್ವಾ ಸೂರ್ಯ ಇವಾಂಶುಭಿಃ — ಇತಿ **ಭಗವದ್ವಚನಮ್**|| ತದರ್ಥಕಃ ಆಭಾಸಕಃ ಇತಿ|| ತದ್ವಿವರಣಂ "ಬಿಂಬ'' ಇತಿ|| "ಈ ಸಮನ್ವಯ'' — ಕರ್ಮಣಿ ಕರ್ತರಿ ಅಪಭ್ರಷ್ಟೇ ತನ್ನಾಮಿದೇವೇ ತಂದ್ರಿಯೇಷು ತನ್ಮಾನ್ಯುತ್ತಮೇಷು ತದುತ್ತನು ರಮಾಔ ಬಿಂಬಾತ್ಮನಾ ವಕ್ಷ್ಯಮಾಣರೀತ್ಯಾ ಕರ್ತೃರೂಪ್ಯೈಃ ಅಸ್ತಿ। ಕಮಲಲೋಚನಃ ಇತಿ ಉಕ್ತಲಕ್ಷಣಂ ದ್ವಾದಶಾಧ್ಯಾಯ **ವಿಷ್ಣುರಹಸ್ಯೋ** ಚ ಉಕ್ತಮ್|| "ಜ್ಞಾನಯಜ್ಞೋ ಹಮೇವೋಕ್ತಃ ಮತ್ಕೃಥಾ ಶ್ರವಣ ಹಿಯತ್|| ಮದ್ಭಕ್ತಾನಾಂ ತಥಾ ಬ್ರಹ್ಮನ್ ಯೇನ ಸಾತ್ಯ। ಬ್ರಹ್ಮದರ್ಶನಮ್|| ಯಮಾಂಶ್ಚ ನಿಯಮಾಂಶ್ಚಾಪಿ ಋತ್ವಿಜಯಃ ಪ್ರಾಪ್ಯಯತ್ನತಃ ಕಾಮಕ್ರೋಧಾಧಿಕಾನ್ ಹತ್ವಾ ವಿರಕ್ತ್ಯಾ ವಜ್ರಕಲ್ಪಯಾ ಮಯ್ಯಗ್ನೌ ಜುಹುಯಾತ್ ಆದೌ ಮನಃ ಸೋಮಂ ತತಃ ಪರಮ್ ಬುದ್ಧ್ಯೆವಾದ್ವಯುರ್ಜಾ ಯುಕ್ತಃ ಸುನುಯಾತ್ ಮತ್ಪದೇಗ್ನೌ ತಂ ಶೇಷಂ ಪೀತ್ವಾ ಚ ಮಾದ್ಯತಿ|| ಆನಂದಾತ್ ಸಾಮಗಾನಾನಿ ಕೃತ್ವಾಕೃತ್ವಾ ಚ ಮೋದತೇ || ಅನುಭೂಯಂ

ತಮೋನಂದಂ ಹೃದ್ಯಾಲಂಗಿತಮತ್ತನುಃ|| ಬಾಹ್ಯಂ ಕಿಂಚಿನ್ನಜಾನಾತಿ ಸ್ವದೇಹಸ್ಯಾಪಿಚೇಷ್ಟಿತಮ್ ಆಯಾತೋಯಂ ಕಥಂ ಕದಾ ದೇಹಃ ಗತೋಪವಾಪಿ ಕಥಂ ಪುನಃ|| ಇತ್ಯೇನಮಪಿ ನೋ ವೇತ್ತಿ ಕಿಂ ಪುನಃ ಕ್ಷುದ್ರ ಚೇಷ್ಟಿತಮ್ || ಏವಮಂತಃ ಸುಪಕ್ವೋಯಂ ಸರ್ವತ್ರಾಪಿ ಬಹಿಃ ಸದಾಂ ಸರ್ವಸ್ತುಷು ಮಾಮೇವ ಪಶ್ಯತ್ಯೇವ ನ ಚಾನ್ಯಥಾ ಜೀವನ್ಮುಕ್ತಃ ಏವಾತ್ರಯಾತ್ ಪ್ರಾರಬ್ಧಸಂಕ್ಷಯಃ ನಿವೃತ್ತಾಶೇಷ ಪಾಪಾಸೌ ಕ್ರಿಯಮಾಣೈರಲೇಪಭುಕ್ || ಭುಕ್ತಿ ಕರ್ಮಾ ಲಭೇನ್ಮುಕ್ತಿಂ ತತೋ ನಾ ವರ್ತತೇ ಪುನಃ ||'' ಇತಿ. ||೨೨||

ಕನ್ನಡಾರ್ಥ :—

**'ವಾಸುದೇವ''** ಈ ನಾಮವು **ಶ್ರೀ ವಿಷ್ಣುಸಹಸ್ರನಾಮಾಂತರ್ಗತವಾದುದು.** ಅಚಿಂತ್ಯಶಕ್ತಿವಂತನಾದ ಶ್ರೀಹರಿಯು ತನ್ನ ನಿರ್ಮಲಪ್ರಕಾಶದಿಂದ ಸಮಸ್ತ ಲೋಕಗಳನ್ನು (ದ್ಯಾವ್ಯಾ ಪೃಥವೀಗಳನ್ನು ) ಆಚ್ಛಾದಿಸುವನಾದ್ದರಿಂದ, **ವಾಸುದೇವ ನಾಮಕನು. 'ವಾಸು'** ಭಕ್ತರ ಅಭಿಷ್ಟಪ್ರದತ್ವ. **"ದೇವ''** ಉತ್ತಮನಾದವನು. "ಸೂರ್ಯನು ತನ್ನ ಅನಂತಕಿರಣಗಳಿಂದ ವಿಶ್ವವ್ಯಾಪಕನಾಗಿ ಸಮಸ್ತ ವಿಶ್ವಗತ ವಸ್ತುಗಳನ್ನು ಆಚ್ಛಾದಿಸುವನು. ಅದರಂತೆ ನಾನು (ಕೃಷ್ಣನು) ಆಚ್ಛಾಧಿಸುತ್ತೇನೆ' ಎಂದು ***ಗೀತಾಚಾರ್ಯನಾದ ಶ್ರೀಕೃಷ್ಣನ ವಚನ.*** ಸ್ವಪ್ರಕಾಶದಿಂದ ಜಗದ್ವ್ಯಾಪಕನು. ಅದರಿಂದ ಜಗದ್ಭಾಸಕನು, ಭಕ್ತಾಭೀಷ್ಟಪ್ರದನು ಹೀಗೆ **ವಾಸುದೇವಶಬ್ದದಿಂದ** ಒಳಹೊರಗೆ ಅಭಾಸಕನು ಎಂಬ ಅರ್ಥವನ್ನು ತೀಳಿಸುತ್ತಾರೆ ದಾಸವರ್ಯರು. ಇದರ ವಿವರಣರೂಪವೇ **'ಬಿಂಬ ಪ್ರಕಾಶಿಸುವನು''** ಎಂಬುದು. ಈ ಕಾರಣದಿಂದ ಈ ಸಮನ್ವಯ ಎಂಬ ಶಬ್ದಪ್ರಯೋಗ, ಕರ್ಮ—ಕರ್ತೃ—ಕರಣ ಇತ್ಯಾದಿಗಳಲ್ಲಿ, ತದಭಿಮಾನಿದೇವತೆಗಳಲ್ಲಿ, ಅವರಲ್ಲಿ ಉತ್ತಮರಾದ ರಮಾದಿಗಳಲ್ಲಿ ಪರಮಾತ್ಮನು ಬಿಂಬನಾಗಿ ಕರ್ತೃರೂಪಗಳಿಂದ ವ್ಯಾಪಾರಮಾಡುವನು ಇದೇ ಸಮನ್ವಯಾರ್ಥವು . ಈ ಸಮನ್ವಯವನ್ನೇ ***ವಿಷ್ಣು ರಹಸ್ಯದ ೧೨ನೇಯ ಅಧ್ಯಾಯದಲ್ಲಿ*** ವಿವರಿಸುತ್ತಾರೆ.

"ಜ್ಞಾನಯಜ್ಞವೆಂಬ ಕ್ರಿಯೆಯು ಭಗವತ್ಪ್ರೀತಿಗಾಗಿ. ಅದು ಭಗವತ್ಪ್ರೇರಿತವೇ. ಭಗವತ್ಕಥಾಶ್ರವಣವೆಂಬ ಕ್ರಿಯೆಯು ಜ್ಞಾನಯಜ್ಞವೆನಿಸುವುದು. ಇದರಿಂದಲೇ ರಮಾದಿ ಉತ್ತಮಾಧಿಕಾರಿಗಳು ಬ್ರಹ್ಮಾಜ್ಞಾನಯುಕ್ತರಾಗಿ, ತದ್ವಾರಾ ಮುಕ್ತಿಯನ್ನು ಹೊಂದುತ್ತಾರೆ. ಉತ್ತಮಾಧಿಕಾರಿಗಲು ಬ್ರಹ್ಮಾಜ್ಞಾನಯುಕ್ತರಾಗಿ, ತದ್ವಾರಾ ಮುಕ್ತಿಯನ್ನು ಹೊಂದುತ್ತಾರೆ. ಈ ಜ್ಞಾನಯಜ್ಞನ ಪ್ರಕ್ರಿಯೆಯ ವಿವರಣೆ ಇಂತಿದೆ – ಯಮ ನಿಯಮಗಳೆಂಬ ಋತ್ವಿಜರನ್ನು ಹೊಂದಿ ಕಾಮಕ್ರೋಧಾದಿಗಳನ್ನು ನಿವಾರಿಸಬೇಕು. ವಜ್ರದಂತೆ ಅತಿದೃಢವಾದ ವೈರಾಗ್ಯವೆಂಬ ಅಸ್ತ್ರದಿಂದ ಕಾಮಕ್ರೋಧಾದಿಗಳನ್ನು ಸಂಹರಿಸಬೇಕು. ಅಗ್ನಿಶಬ್ದವಾಚ್ಯನಾದ ಶ್ರೀಪರಮಾತ್ಮನೇ ಅಗ್ನಿಯು. ಅಂತಹ ಅಗ್ನಿನಾಮಕನಾದ ಹರಿಯಲ್ಲಿ ಬುದ್ಧಿಯೆಂಬ ಅಧ್ವರ್ಯನಿಂದ ಸಹಿತನಾಗಿ ಮನಸ್ಸೆಂಬ ಹೋಮವನ್ನು ಹಾಕಬೇಕು. ಆಗ ಮನಸ್ಸು ಭಕ್ತಿ ಸಂಸ್ಕಾರದಿಂದ ಪರಿಶುದ್ಧವಾಗುವುದು. ಈ ಸಂಸ್ಕಾರಕ್ಕೆ ಮನಸ್ಸನ್ನು ವಿವೇಕವೆಂಬ ಒರೆಗಲ್ಲಿಗೆ ಹಚ್ಚಬೇಕು. ಇಂಥ ಸೋಮಶೇಷವನ್ನು ಪಾನಮಾಡಿ ಉತ್ಸಾಹಭರಿತನಾಗುತ್ತಾನೆ. ಆಗ ಆನಂದೋದ್ರೇಕದಿಂದ ಶ್ರೀಹರಿಯ ನಾಮಸ್ಮರಣೆಯಲ್ಲಿ ಮೈಮರೆತು ಪರವಶನಾಗುತ್ತಾನೆ. ಆ ಅಭೂತಪೂರ್ವ ಆನಂದದಲ್ಲಿ ಹೃದ್ಗತಭಗವನ್ಮೂರ್ತಿಯಲ್ಲಿ ಸಮಸ್ತಕ್ರಿಯೆಗಳೂ ಅರ್ಪಿತವಾದ ಅವಸ್ಥಾವಿಶೇಷದಲ್ಲಿ ಇತರ ವ್ಯಾಪಾರಗಳ ಅರಿವೇ ಬರುವುದಿಲ್ಲ. ಹೀಗೆ ಸಮಸ್ತವನ್ನು ಭಗವದರ್ಪಿತವೆಂದು ಉಪಾಸಿಸುವನು ಮಹಾ ಅಪರೋಕ್ಷಜ್ಞಾನಿ ಎಂದೆನಿಸುವನು. ಅವನು ಜೀವನ್ಮುಕ್ತನು. ಅವನು ಪ್ರಾರಬ್ಧಕರ್ಮಕ್ಷಯಪರ್ಯಂತ ದೇಹಭೋಗಗಳನ್ನು ಅನುಭವಿಸುತ್ತಾ, ಕರ್ಮಗಳಿಂದ ನಿರ್ಲಿಪ್ತನಾಗಿ ಅಶೇಷಪಾಪರಹಿತನಾಗಿ ಪ್ರಾರಬ್ಧನಾಶಾನಂತರ ಮುಕ್ತಿ ಹೊಂದುತ್ತಾನೆ. ||೨೨||

## (೫) ಶ್ರೀ ಗುರುಹೃದಯಪ್ರಕಾಶಿಕೆ ವ್ಯಾಖ್ಯಾನ :–

ಅಂತರ್ಬಹಿಶ್ಚ ವ್ಯಾಪ್ತನಾದುದರಿಂದ ದೇವರು ಬಿಂಬರೂಪನು ಸ್ವಾಮಿ ಎಂದು

ಭಾವಿಸುವನಿಗೆ ಸದ್ಗತಿ ಎಂದು ತಿಳಿಸುತ್ತಾರೆ – **ವಾಸುದೇವನು** – ಎಂದು. ಜಗತ್ತಿನಲ್ಲಿ ವಾಸವಾಗಿ ಹೊರಗೂ ಪ್ರಕಾಶಿಸುವದರಿಂದ ವಾಸುದೇವನೆಂದು ಹೆಸರುಳ್ಳ ಸ್ವಾಮಿಯು ತತ್ತದ್ದೇಹರೂಪ ನಾಮ ಧರಿಸಿ, ಒಳಗೆ ಬಿಂಬರೂಪನೂ ಆಗಿ, ಪ್ರಕಾಶನಾಗಿ ತಿಳಿದವರಿಗೆ ಗೋಚರಿಸುವನು. ಹೊರಗೂ, ಆಭಾಸಕನು ಎಂದರೆ ಅತ್ಯಂತಪ್ರಕಾಶಪ್ರದನು. ಹೀಗೆ ಸಮನ್ವಯ ಎಂದರೆ, ಒಬ್ಬನೇ ಒಳಗೆ ಹೊರಗೆ ಸಹ ಇರುವೆಂಬ ನಿರ್ದುಷ್ಟವಾದ ಉಪಾಸನೆ ಎಂಬ ಭಜನೆಯನ್ನು ಮಾಡುವ ಸಜ್ಜನನು ಮೋಕ್ಷವಿಚಾರ ಮಾಡುವರಲ್ಲಿ ಉತ್ತಮನಾಗಿ ಜೀವಿಸಸಿದ್ದು ದೇಹಾಭಿಮಾನಿಗಳಿಂದ ಮುಕ್ತನೆನಿಸುವನು.

ಪ್ರೇಯಾನ್ನತೇನ್ಯೋಸ್ತ್ಯಮೃತ ಪ್ರಿಯಪ್ರಭೋ ।

ವಿಶ್ವಾತ್ಮನೀಕ್ಷೇನ್ನ ಪ್ರಥಗ್ಯ ಆತ್ಮಮಃ ॥

ಎಂಬ ಭಾಗವತಾರ್ಥ ವಿವರಿಸಲ್ಪಟ್ಟಿತು ॥೨॥

## ಸರ್ವವ್ಯಾಖ್ಯಾನಸಾರಸಂಗ್ರಹ

ಮೋಕ್ಷಪ್ರದತ್ವರೂಪಕನಾದ **ವಾಸುದೇವ** ನಾಮಕ ಶ್ರೀಪರಮಾತ್ಮನ ವಿಚಾರ ಮತ್ತು ಜೀವನ್ಮುಕ್ತರ ಉಪಾಸನಾಕ್ರಮವನ್ನು ತಿಳಿಸುತ್ತಾರೆ – **ವಾಸುದೇವನು** ಎಂಬ ಪ್ರಸಕ್ತ ಪದ್ಯದಿಂದ.

೧. **ವಾಸುದೇವ** – ಎಂಬ **ಪರಮಾತ್ಮನ ನಾಮವು** ಶ್ರೀವಿಷ್ಣುಸಹಸ್ರ **ನಾಮಾಂತರ್ಗತವಾಗಿದೆ.** ಶ್ರೀಹರಿಯು ಸ್ವಯಂಜ್ಯೋತಿಸ್ವರೂಪನು. ತನ್ನ ಅಪ್ರಾಕೃತಕಾಂತಿಯಿಂದ ದ್ಯಾವ್ಯಾಪೃಥಿವ್ಯಾದಿ ಸಮಸ್ತ ಲೋಕಗಳನ್ನು ಬೆಳಗುತ್ತಿರುವನು. ಭಕ್ತರ ಸಕಲಾಭೀಷ್ಟಗಳನ್ನು ನೆರವೇರಿಸುವುದರಿಂದ **ವಾಸು** –ನಾಮಕನು. ಸಕಲ ಸಜ್ಜನರಿಗೂ ಅಪೇಕ್ಷಿತವಾದ ಅತ್ಯಂತ ಗುರಿ ಎಂದರೆ, ನಿತ್ಯಾನಂದರೂಪವಾದ

ಪರಮಪುರುಷಾರ್ಥರೂಪವಾದ ಮೋಕ್ಷಸುಖವು. ಅಂತಹ ಮೋಕ್ಷಪ್ರದನೇ **ವಾಸುದೇವನು.**

೨. ಮೋಕ್ಷಪ್ರದನಾದ, ಅನಂತಕೋಟಿಸೂರ್ಯಪ್ರಕಾಶನಾದ ಶ್ರೀವಾಸುದೇವನಾಮಕ ಶ್ರೀ ಹರಿಯು ಸರ್ವತ್ರ ಸ್ಥಾನಗಳಲ್ಲಿ ಒಳಗೂ ಮತ್ತೂ ಹೊರಗೂ ವ್ಯಾಪಿಸಿಕೊಂಡಿದ್ದಾನೆ. ಅಂತಃಬರ್ಹಿಶ್ಚವ್ಯಾಪ್ತನಾದ ವಾಸುದೇವನು ಜಗತ್ತಿನ ಸಮಸ್ತವಸ್ತುಗಳಲ್ಲಿ ಹಾಗೂ ಜೀವನವರ್ಗದಲ್ಲಿ ಬಿಂಬನಾಗಿ ಆವಾಸನಾಗಿರುವುದರಿಂದ **ವಾಸುದೇವನಾಮಕನು.**

೩. ಕಲ್ಪಾವಸಾನ ಸಮಯದಲ್ಲಿ, ಆ ಕಲ್ಪದಲ್ಲಿ ಮುಕ್ತಿಯನ್ನು ಹೊಂದುವ ಜೀವರು ಬ್ರಹ್ಮಣಾಸಹ ವಿರಜಾನದಿಯಲ್ಲಿ ಸ್ನಾನಮಾಡುವರು. ವಿರಜಾನದಿಯ ಸ್ನಾನಾನಂತರ ಸ್ವರೂಪದೇಹಕ್ಕೆ ಆವರ್ಕವಾಗಿದ್ದ ಅನಾದಿಲಿಂಗದೇಹನಾಶ. ತನ್ಮೂಲಕ ಕರ್ಮವಿಮೋಚನೆ. ಪರಿಶುದ್ಧವಾದ ಸ್ವರೂಪದೇಹದಿಂದ ವಿರಾಜಮಾನರಾಗಿರುವ ಮುಕ್ತಿಯೋಗ್ಯ ಸಾತ್ತ್ವಿಕಜೀವರು ಶ್ರೀವಾಸುದೇವನ ಅನುಗ್ರಹದಿಂದ, ಪರಮಾಚ್ಛಾದಿಕ ರೂಪವಾದ ತೆರೆಯು ಅಪಸರಣವಾಗಿ, ಸ್ವರೂಪಗತಬಿಂಬದರ್ಶನ ಉಂಟಾಗಿ, ಸ್ವಸ್ವರೂಪಾನಾಂದಾವಿರ್ಭಾವರೂಪವಾದ ಮೋಕ್ಷಾನಂದವನ್ನು ಹೊಂದುವರು. ಹೀಗೆ ವಾಸುದೇವನು ಒಳಹೊರಗೆ ಬಿಂಬನಾಗಿದ್ದು, ಸ್ವಯಂಜ್ಯೋತಿಯಾಗಿ ಪ್ರಕಾಶಿಸುತ್ತಿರುವುದರಿಂದ. **ಆಭಾಸಕನೆನಿಸಿದ್ದಾನೆ.** ಜೀವರ ಸ್ವರೂಪದೇಹದ ಒಳಗೆ, ಹಾಗೂ ಹೊರಗಿನ ಆವರಣರೂಪವಾದ ಲಿಂಗ–ಅನಿರುದ್ಧ–ಸ್ಥೂಲಶರೀರಗಳಲ್ಲಿ, ಅಂತೆಯೇ ಸ್ಥೂಲ ದೇಹಗತ, ಇಂದ್ರಿಯಗಳು, ನಾಡೀವ್ಯೂಹಗಳು, ಪಂಚಕೋಶಾದಿಗಳು ಇತ್ಯಾದಿಗಳ **ಒಳಗೂ ಮತ್ತು ಹೊರಗೂ** ವಾಸುದೇವನು ಕಾಂತಿಯಿಂದ ಪ್ರಕಾಶಿಸುತ್ತಾ, ಆಭಾಸಕನಾಗಿ ವ್ಯಾಪಿಸಿಕೊಂಡು, ಜೀವರ ಸಕಲಸಾಧನೆಗಳಿಗೆ ಅವಕಾಶವನ್ನು ಕಲ್ಪಿಸುವನು. ಇದರಿಂದ **ಅವಕಾಶದನಾಗಿದ್ದಾನೆ.**

೪. ಸ್ವರೂಪದೇಹದಲ್ಲಿ ಅಂತರ್ಯಾಮಿಯಾಗಿದ್ದು, ಜೀವಾಕಾರನಾಗಿ, ಜೀವನಾಮಕ

ನಾಗಿದ್ದಾನೆ. ಅಂತೆಯೇ ಲಿಂಗಶರೀರಗತ ಷೋಡಶಕಲೆಗಳಲ್ಲಿ, ತ್ರಿಗುಣಗಳಲ್ಲಿ ವ್ಯಾಪ್ತನಾಗಿದ್ದು, ಅದೇ ರೂಪದಿಂದ, ತತ್ತನ್ನಾಮಕನಾಗಿದ್ದಾನೆ. ಹಾಗೆಯೇ ಅನಿರುದ್ಧಶರೀರಗತ ದೇವತೆಗಳಲ್ಲಿ ಅಂತರ್ಯಾಮಿಯಾಗಿದ್ದು, ಸ್ಥೂಲದೇಹಗತ ಇಂದ್ರಿಯಗಳು, ಇಂದ್ರಿಯಾಭಿಮಾನಿ ದೇವತಾವರ್ಗ, ನಾಡಿಗಳು, ನಾಡ್ಯಂತರ್ಗತ ದೇವತಾಗಣ ಇವುಗಳ ಒಳಗೂ ಹೊರಗೂ ಸರ್ವತ್ರ ತದ್ರೂಪ ತನ್ನಾಮಗಳಿಂದ ಇದ್ದು, ತತ್ತಶ್ಚಬ್ದ ವಾಚ್ಯನಾಗಿ, ತದಾಕಾರನಾಗಿ ಇದ್ದಾನೆಂದು ತಿಳಿಯುವುದೇ ಸಮನ್ವಯವು. ಒಳಗೂ ಮತ್ತು ಹೊರಗೂ ಇರುವ ಬಿಂಬರೂಪಿ ಒಬ್ಬನೇ ಎಂದು ಆ ಸ್ವಗತಭೇದವಿವರ್ಜಿತನ ರೂಪೋಪಾಸನೆಯೇ **ಸಮನ್ವಯವೆಂದೆನಿಸುವುದು.**

೫. ಸತ್ಕರ್ಮಾನುಷ್ಠಾನಪರರಾಗಿ, ಸಮೀಚೀನವಾದ ಜ್ಞಾನವನ್ನು ಹೊಂದಿ, ತನ್ಮೂಲಕ ಮಹಾತ್ಮ್ಯಜ್ಞಾನಪೂರ್ವಕ ಸುದೃಢವಾದ ಸ್ನೇಹರೂಪವಾದ ಭಕ್ತಿಯಿಂದೊಡಗೂಡಿ, ವೈರಾಗ್ಯಸಂಪನ್ನರಾಗಿ, ನಿತ್ಯದಲ್ಲಿಯೂ ಸರ್ವತ್ರ ಬಿಂಬೋಪಾಸನೆಯನ್ನು ಮಾಡುತ್ತಿರುವ ಸಜ್ಜನರಿಗೆ, ಶ್ರೀಹರಿಯು ಅಪರೋಕ್ಷರೂಪನಾಗಿ ತನ್ನ ದರ್ಶನಭಾಗ್ಯವನ್ನು ಅನುಗ್ರಹಿಸುವನು. ಅಪರೋಕ್ಷೀಕೃತಶ್ರೀಶರಾದ ಅಂತರಂಗಭಕ್ತರು ಸಂಚಿತಾಗಾಮಿ ಕರ್ಮಗಳಿಂದ ದೂರರಾಗಿ, ಪ್ರಾರಬ್ಧ ಕರ್ಮಶೇಷವನ್ನು ಮಾತ್ರ ಅನುಭೋಗಿಸುತ್ತಾ, ಅಂತಿಮ ಸ್ಥಿತಿಯಲ್ಲಿ ಜನನಮರಣಾದಿಗಳಿಂದ ದೂರರಾಗಿ, ಮಹರಾದಿ ಲೋಕಗಳಲ್ಲಿ ವಿಹರಿಸುತ್ತಿರುವರು. ಇಂತಹ ಜೀವರೇ **ಜೀವನ್ಮುಕ್ತರು.** ಅವರಿಗೆ ಪ್ರಾರಬ್ಧಕರ್ಮಾನುಭೋಗ ಔಪಚಾರಿಕ. ಬ್ರಹ್ಮಕಲ್ಪಾವಸಾನಕ್ಕೆ ಅಂತಹ ಜೀವನ್ಮುಕ್ತರು ವಿರಜಾನದಿಯ ಸ್ನಾನಾನಂತರ, ಲಿಂಗದೇಹಭಂಗಹೊಂದಿ, ವಾಸುದೇವನಾಮಕ ಪರಮಾತ್ಮನ ದಿವ್ಯಾನುಗ್ರಹದಿಂದ ಮುಕ್ತಿಸುಖವನ್ನು ಹೊಂದುವರು. ಸಮನ್ವಯವೆಂದೆನಿಪ ಸದುಪಾಸನೆಯಿಂದ, ಮೋಕ್ಷಾಪೇಕ್ಷಿಗಳಾದ ಮುಮುಕ್ಷುಜೀವಗಣದಲ್ಲಿ ಉತ್ತಮರೆನಿಸುವರು. ಅಂತಹ ಮಂಗಳಾತ್ಮರೇ ಈ ಅವನಿಯಲ್ಲಿ ಜೀವನ್ಮುಕ್ತರೆನಿಸುವರೆಂದು ತಿಳಿಸುತ್ತಾರೆ – ಪ್ರಸಕ್ತಪದ್ಯದಿಂದ. ||೨೨||

## ಪದ್ಯ ೨೩

**ಮೂಲ:—**

ಭೋಗ್ಯವಸ್ತುಗಳೊಳಗೆ ಯೋಗ್ಯಾ ।
ಯೋಗ್ಯರಸಗಳನರಿತು ಯೋಗ್ಯಾ ।
ಯೋಗ್ಯರಲಿ ನೆಲೆಸಿಪ್ಪ ಹರಿಗೆ ಸಮರ್ಪಿಸನುದಿನದಿ ॥
ಭಾಗ್ಯ ಬಡತನ ಬರಲು ಹಿಗ್ಗದೆ ।
ಕುಗ್ಗಿ ಸೊರಗದೆ ಸದ್ಭಕುತಿ ವೈ ।
ರಾಗ್ಯಗಳನೇ ಮಾಡು ನೀ ನಿರ್ಭಾಗ್ಯನೆನಿಸದಲೆ ॥೨೩॥

**ಅವತರಣಿಕೆ:—**

ಜೀವರು ಭೋಗಿಸುವ ಶಬ್ದಾದಿಸರ್ವವಿಷಯಗಳಲ್ಲಿ, ಯಾವುದು ಯೋಗ್ಯ, ಯಾವುದು ತ್ಯಾಜ್ಯ ಎಂಬುದನ್ನು ಶಾಸ್ತ್ರದ್ವಾರಾ ತಿಳಿದು, ವಿವೇಕದಿಂದ ವಿವೇಚಿಸಿ, ತದಂರ್ಗತ ರಸಪದ ವಾಚ್ಯವಾದ ಭಗವದ್ರೂಪಗಳನ್ನು ಉಪದೇಶದ್ವಾರಾ ಅರಿತು, ಆಯಾಯಾ ಅಧಿಷ್ಠಾನದ ಯೋಗ್ಯತೆಗನುಗುಣವಾಗಿ, ವಿದ್ಯಮಾನನಾಗಿ ನೆಲೆಸಿಪ್ಪ ಬಿಂಬರೂಪೀ ಶ್ರೀಹರಿಗೆ ಅನುದಿನದಿ ಸಮರ್ಪಿಸುತ್ತಾ, ಭಾಗ್ಯ ಬಂದಾಗ ಹಿಗ್ಗದೆ, ಬಡತನ ಬಂದಾಗ ಕುಗ್ಗಿ ಸೊರಗದೆ, ಎಲ್ಲವೂ ಭಗವದಧೀನವೆಂದು ತಿಳಿದು, ಸಮೀಚೀನವಾದ ಭಕ್ತಿ ಮತ್ತು ವೈರಾಗ್ಯಗಳೆಂಬ ದೈವೀಸಂಪತ್ತನ್ನು ಆ ದೇವದೇವೇಶನಲ್ಲಿ ಬೇಡಬೇಕೆಂದು ತಿಳಿಸುತ್ತಾರೆ **ಭೋಗ್ಯವಸ್ತುಗಳೊಳಗೆ** ಎಂಬ ಪ್ರಸಕ್ತಸಂಧಿಗತ ೨೩ನೆಯ ಈ ಪದ್ಯದಿಂದ. ॥೨೩॥

**ಪ್ರತಿಪದಾರ್ಥ:—**

ಭೋಗ್ಯ ವಸ್ತುಗಳೊಳಗೆ= ತ್ರಿವಿಧವರ್ಗದಜೀವರು ಭೋಗಮಾಡುವುದಕ್ಕೆ ಯೋಗ್ಯವಾದ ಶಬ್ದ ಇತ್ಯಾದಿ ವಿಷಯರೂಪವಾದ ವಸ್ತುಗಳಲ್ಲಿ (ತ್ರಿವಿಧರು

ಅವರವರ ಯೋಗ್ಯತೆಗನುಗುಣವಾಗಿ ಭೋಗ್ಯವಸ್ತುಗಳನ್ನು ಅಪೇಕ್ಷಿಸುತ್ತಾರೆ), ಯೋಗ್ಯ= ಯಾವುದು ಸ್ವೀಕಾರಕ್ಕೆ ಅರ್ಹವಾದುದು, ಅಂದರೆ ಅನಿಷಿದ್ಧವಾದ ವಸ್ತುಗಳು (ಗ್ರಾಹ್ಯ), ಅಯೋಗ್ಯ= ಯಾವುದು ಸ್ವೀಕಾರಕ್ಕೆ ಅನರ್ಹವಾದುದು, ಅಂದರೆ, ನಿಷಿದ್ಧಪದಾರ್ಥಗಳು (ತ್ಯಾಜ್ಯ), ರಸಗಳನುತು= ಇಂತಹ ವಸ್ತುಗಳಲ್ಲಿ ಅಂತರ್ಗತನಾಗಿರುವ ರಸಪದವಾಚ್ಯನಾದ ಶ್ರೀ ಪರಮಾತ್ಮನ ಭಗವದ್ರೂಪಗಳನ್ನು ಶಾಸ್ತ್ರದ್ವಾರಾ ಹಾಗೂ ಗುರೂಪದೇಶದ್ವಾರಾ ತಿಳಿದವನಾಗಿ, ಯೋಗ್ಯಾಯೋಗ್ಯರಲಿ= ಸಾತ್ತ್ವಿಕರಾದ ಮುಕ್ತಿಯೋಗ್ಯ ಜೀವರಲ್ಲಿ, ತಮೋಯೋಗ್ಯರಾದ ಅಯೋಗ್ಯಜೀವರಲ್ಲಿ, ನೆಲೆಸಿಪ್ಪ= ದೇಹಾಂತರ್ಗತನಾಗಿ ವಿದ್ಯಮಾನನಾಗಿರುವ, ಹರಿಗೆ= ಬಿಂಬರೂಪನಾದ ಶ್ರೀಪರಮಾತ್ಮನಿಗೆ, ಅನುದಿನದಿ= ನಿತ್ಯದಲ್ಲಿಯೂ, ಸಮರ್ಪಿಸು= ಭೋಜ್ಯವಸ್ತುಗತ ಭಗವದ್ರೂಪಗಳಿಗೂ , ಭೋಕ್ತೃವಿನಲ್ಲಿರುವ ಬಿಂಬರೂಪನಿಗೂ ಐಕ್ಯಚಿಂತನಾಪೂರ್ವಕ ಅರ್ಪಿಸುವವನಾಗು. ಭಾಗ್ಯ ಬರಲು= ಐಶ್ವರ್ಯಬಂದಾಗ, ಅಂತೆಯೇ ಜಯ, ಯಶಸ್ಸು, ಸಂತೋಷ. ಇತ್ಯಾದಿಗಳು ಲಭ್ಯವಾದ ಕಾಲಕ್ಕೆ ಹಿಗ್ಗದೆ= ಉಬ್ಬದೇ, ಬಡತನ ಬರಲು= ದಾರಿದ್ರ್ಯ, ಅಪಜಯ, ದುಃಖಾದಿಗಳು ಒದಗಿದಾಗ, ಕುಗ್ಗಿ= ಉತ್ಸಾಹ ಶೂನ್ಯನಾಗಿ, ಸೊರಗದೆ= ನಿರ್ವಿಣ್ಣನಾಗಿ ಸಂಕಟಪಡದೆ, ಸದ್ಭಕುತಿ= ಶ್ರೀಪರಮಾತ್ಮನಲ್ಲಿ ಸುದೃಢವಾದ ಅವಿಚ್ಛಿನ್ನವಾದ ಸ್ನೇಹರೂಪವಾದ ಭಕ್ತಿಯನ್ನು ವೈರಾಗ್ಯಗಳನೇ= ಪ್ರಾಪಂಚಿಕವಿಷಯಗಳಲ್ಲಿ ವಿರಕ್ತಿ, ಶ್ರೀಹರಿಯಲ್ಲಿ ರತಿ, ನೀ ನಿರ್ಭಾಗ್ಯನೆನಿಸದಲೆ= ಅಹಂಕಾರ ಮಮಕಾರಯುಕ್ತನಾಗಿ, ಶ್ರೀಹರಿಯ ಅನುಗ್ರಹ ಸಂಪಾದಿಸದೆ, ಭಾಗ್ಯ ಹೀನ ಎಂದೆನಿಸದೆ, ಮಾಡು= ಜ್ಞಾನ, ಭಕ್ತಿ, ವೈರಾಗ್ಯಗಳಿಂದ ದೈವೀಸಂಪತ್ತುಗಳಿಂದ ಯುಕ್ತನಾಗಿ ಸತ್ಸಾಧನೆಗಳನ್ನು ಮಾಡುವವನಾಗು. ||೨೩||

# ವ್ಯಾಖ್ಯಾನಗಳು

## (೧) ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ :—

ಜೀವನ್ಮುಕ್ತ ಮಾಡಬೇಕಾದ ಅನುಸಂಧಾನ ಹೇಳುತ್ತಾರೆ.

ಭೋಗಮಾಡೋದಕ್ಕೆ ಯೋಗ್ಯವಾದ ತ್ರಿವಿಧಜೀವರು ಅನುಭವಮಾಡತಕ್ಕ ಭೋಜನದ್ರವ್ಯಗಳೊಳಗೆ ನಿಷಿದ್ಧಾನಿಷಿದ್ಧ ಪದಾರ್ಥಗಳು, ಇದರಂತರ್ಗತ ರಸಗಳು, ಈ ರಸಗಳೊಳಗೆ ಪರಮಾತ್ಮ ಸ್ವೀಕಾರಮಾಡೋದಕ್ಕೆ ಯೋಗ್ಯವಾದ ರಸ ದಾವದು, ಅಯೋಗ್ಯರಸ ದಾವದು ಈ ರಸಬೇಧಗಳ ತಿಳಿಯೋವನಾಗಬೇಕು. ಪರಮಾತ್ಮ ಸ್ವೀಕಾರಮಾಡತಕ್ಕ ರಸದಾವದದೆ ಅದು ನಿಷಿದ್ಧಾನಿಷಿದ್ಧ ಸರ್ವ ಪದಾರ್ಥಾಂತರ್ಗತ ರಸಾಂತಾರ್ಗತವಾಗಿ ಇರೋದಾಗಿ ಅದೆ. ಈತಗೆ ಅಭಿನ್ನಗಳಾದ ರಸಗಳು ದಾವದವೆ, ಇವೇ ಪರಮಾತ್ಮಗೆ ಭೋಗಯೋಗ್ಯರಸಗಳು. ತದನ್ಯವಾದ ಜಡರಸಗಳು ಯಾವತ್ತೂ ಅಯೋಗ್ಯರಸಗಳು. ಪರಮಾತ್ಮಗೆ ಭೋಗಯೋಗ್ಯವಲ್ಲದ್ದು. ಈ ಪ್ರಕಾರ ಯೋಗ್ಯಾಯೋಗ್ಯ ರಸಗಳ ತಿಳಿದವನಾಗಿ, ಯೋಗ್ಯರಾದ ಮುಕ್ತಿಯೋಗ್ಯರು, ಅಯೋಗ್ಯರಾದ ತಮೋಯೋಗ್ಯರು, ಮಧ್ಯಮರಾದ ನಿತ್ಯಸಂಸಾರಿಗಳು ಏತಾದೃಶರಾದ ತ್ರಿವಿಧಜೀವರಲ್ಲಿ ದೇಹಾಕಾರನಾಗಿ ಖಂಡರೂಪದಿಂದಲೂ ,ಅಖಂಡರೂಪದಿಂದಲೂ, ಬಿಂಬನಾಗಿಯೂ, ಈ ಪ್ರಕಾರ ಅವರವರ ದೇಹಾಂತರ್ಗತನಾಗಿ ಆವಾಸವಾಗಿರತಕ್ಕ ಪರಮಾತ್ಮಗೆ ಪ್ರತಿದಿನದಲ್ಲೂ ಪರಮಾತ್ಮನ ಸ್ವಾಖ್ಯರಸಗಳ ಪರಮಾತ್ಮಗೆ ಅರ್ಪಿಸೋವನಾಗು. ಇದರಂತೆ ನಿನ್ನ ದೇಹಾಂತರ್ಗತಗೂ ಅರ್ಪಿಸಿ ಭೋಜನಾದಿಗಳು ಮಾಡೋವನಾಗಬೇಕು. ಇದರಂತೆ ಶುಭಾಶುಭಕರ್ಮಗಳು, ಶುಭಾಶುಭಭೋಗಗಳು, ಸುಖದುಃಖಾದಿಗಳು ಯಾವತ್ತೂ ಎಂತ ತಾತ್ಪರ್ಯ. ಈ ಪ್ರಕಾರ ಅರ್ಪಿಸಿ ಸರ್ವವಿಷಯದಲ್ಲೂ ವ್ಯಾವರ್ತನಾಗಿ, ಪೂರ್ವಜನ್ಮವನನುಸರಿಸಿ ಪರಮಾತ್ಮನ ದ್ವಾರಾ ಭಾಗ್ಯವೇನು, ಬಡತನವೇನು ಬಂದರೂ, ಭಾಗ್ಯ ಬಂದಕಾಲಕ್ಕೆ ಸಂತೋಷಪಡದೆ.

ಭಾಗ್ಯಹೋಗಿ ಬಡತನ ಬಂದರೆ, ವ್ಯಸನ ದುಃಖಾದಿಗಳಿಂದ ಉತ್ಸಾಹಶೂನ್ಯನಾಗಿ ನಿರ್ವಿಣ್ಣನಾಗಿ ಸಂಕಟಪಡದೆ, ಪೂರ್ವೋಕ್ತಪ್ರಕಾರ ಅರ್ಪಿಸುತ್ತ, ಪರಮಾತ್ಮನಲ್ಲಿ ಅವಿಚ್ಛಿನ್ನ ಸ್ನೇಹರೂಪ ಭಕ್ತಿ ಹಾಂಗೆ ಸಮೀಚೀನವಾದ ಭಾವವೈರಾಗ್ಯಗಳನ್ನು ಮಾಡು. ನೀನು ನಿರ್ಭಾಗ್ಯ ಎಂತ ಅನಿಸಬೇಡ. ಅಹಂಮಮತಾಯುಕ್ತನಾಗಿ ಪರಮಾತ್ಮನ ಅನುಗ್ರಹ ಸಂಪಾದಿಸದೆ, ಪರಮಾತ್ಮನ ಅನುಗ್ರಹಕ್ಕೆ ಭಾಗ್ಯದಿಂದ ಹೀನ ಎಂತ ಅನಿಸಿಕೊಳ್ಳದೆ, ಅನುಗ್ರಹಾಖ್ಯಭಾಗ್ಯ ಸಂಪಾದಿಸು ಎಂತ ತಾತ್ಪರ್ಯ. ||೨೩||

(೨) ಭಾವಪ್ರಕಾಶಿಕೆ :—

ನಾವು ಭೋಗಪಡಲು ಯೋಗ್ಯವಾದ ಪದಾರ್ಥಗಳಲ್ಲಿ ದೇವರ ನೈವೇದ್ಯಕ್ಕೆ ಅರ್ಹವಾದ ಉತ್ತಮಪದಾರ್ಥಗಳಾವುವು? ನಿಷಿದ್ಧಗಳು ಯಾವುವು? — ಎಂಬುದನ್ನು ಗುರುಮುಖದಿಂದಾಗಲೀ, ಶಾಸ್ತ್ರದಿಂದಾಗಲೀ ತಿಳಿದು, ಸಾತ್ವಿಕರು, ರಾಜಸರು, ತಾಮಸರು— ಎಂಬ ಮೂರುವಿಧಜೀವರಲ್ಲಿ ವಾಸವಾಗಿರುವ ಶ್ರೀಪರಮಾತ್ಮನಿಗೆ ಸಾತ್ವಿಕ, ರಾಜಸ, ತಾಮಸಾತ್ಮಕವಾದ ಭೋಗ್ಯಪದಾರ್ಥಗಳನ್ನು ಸಮರ್ಪಿಸಬೇಕು. ಅಂದರೆ, ಸಾತ್ವಿಕರು ಸಾತ್ವಿಕಾಹಾರವನ್ನು ಸೇವಿಸುತ್ತಾ ಸ್ವಸ್ತ್ರೀನಿರತರಾಗಿರುವರು. ರಾಜಸರು, ತಾಮಸರು ತಮ್ಮ ತಮ್ಮ ಯೋಗ್ಯತಾನುಸಾರವಾದ ರಾಜಸ ತಾಮಸ ಪದಾರ್ಥಗಳು ಉಳ್ಳೀಗುಡ್ಡೆ, ಸೋರೆಕಾಯಿ ಇತ್ಯಾದಿ ಪದಾರ್ಥಗಳಲ್ಲಿಯೂ, ವೇಶ್ಯಾ ಮೊದಲಾದ ಪರವನಿತೆಯರಲ್ಲಿಯೂ ಆಸಕ್ತರಾಗಿ, ಸಂತೋಷಪಡುತ್ತಿರುವರು. ಶ್ರೀಪರಮಾತ್ಮನು ಅವರವರೊಳಗಿದ್ದು, ಅವರವರ ಯೋಗ್ಯತಾನುಸಾರವಾಗಿ ಫಲಕೊಡುವುದಕ್ಕಾಗಿ ಸಾತ್ವಿಕ, ತಾಮಸ ಇತ್ಯಾದಿ ವಸ್ತುಗಳ ರಸಗಳನ್ನು ತಾನು ಸ್ವೀಕರಿಸಿ, ಅವರವರ ಯೋಗ್ಯತಾನುಗುಣವಾದ ಫಲವನ್ನು ಕೊಡುವನು. ಇವುಗಳನ್ನು ತಿಳಿದು. ಸಾತ್ವಿಕರಾದ ಭಗವದ್ಭಕ್ತರಲ್ಲಿರುವ ಪರಮಾತ್ಮನಿಗೆ ಸಾತ್ವಿಕಪದಾರ್ಥಗಳನ್ನು ಸಮರ್ಪಿಸಬೇಕು. ತಾಮಸಾದಿ ಪದಾರ್ಥಗಳ

ಸ್ವೀಕಾರದಿಂದ ಪರಮಾತ್ಮನಿಗೆ ದೋಷಪ್ರಾಪ್ತಿವುಂಟೆಂದು ಶಂಕಿಸಬಾರದು. ಏಕೆಂದರೆ, ನಿಷಿದ್ಧಾನಿಷಿದ್ಧ ಭೋಗ್ಯವಸ್ತುಗಳಲ್ಲಿ ಯಾವ ಪರಮಾತ್ಮನಿರುವನೋ, ಭೋಗಿಸುವವರಲ್ಲಿಯೂ ಅದೇ ಪರಮಾತ್ಮನೇ ಇರುವುದರಿಂದ, ಭೋಗ್ಯವಸ್ತಗಳಿಗೂ ಭೋಗಿಜೀವರಿಗೂ ಪರಸ್ಪರ ಭೇದವುಂಟೇ ಹೊರತು, ಅವುಗಳಲ್ಲಿರುವ ಭಗವದ್ರೂಪಗಳಿಗೆ ಸ್ವಲ್ಪವಾದರೂ ಭೇದವಿರುವುದಿಲ್ಲ. ಆದ್ದರಿಂದ, ಯಾವ ಯಾವ ಪ್ರಾಣಿಗಳು ಯಾವ ಯಾವದನ್ನು ಪ್ರೀತಿಸುವರೋ, ಅವರವರಲ್ಲಿರುವ ಪರಮಾತ್ಮನಿಗೆ ಆಯಾಪದಾರ್ಥಗಳನ್ನೇ ಸಮರ್ಪಿಸಬೇಕು. ಹೀಗೆ ಸಮರ್ಪಿಸಿ , ಪೂಜಿಸುವುದಕ್ಕೆ ಅನ್ವಯ ಪೂಜೆ– ಎಂದು ಹೆಸರು. ಹೀಗೆ ಸರ್ವತ್ರವ್ಯಾಪ್ತನಾದ ಭಗವದ್ರೂಪಗಳಲ್ಲಿ ಪರಸ್ಪರ ಭೇದವನ್ನು ಚಿಂತಿಸದೆ, ಪೂಜಿಸುವುದರಿಂದ, ಬೆಂಕಿಯಲ್ಲಿ ಬೆಂಕಿಹಾಕದಂತೆ ಒಂದಾಗುವುದು. ಈ ರೀತಿ ತಿಳಿದು, ಪೂಜಿಸಿದರೆ, ಪರಮಾತ್ಮನು ಸುಪ್ರೀತನಾಗುವನು. ಇಲ್ಲದೆ ಭಾಗ್ಯ ಬಂದಾಗ ಹಿಗ್ಗಬಾರದು. ಬಡತನ ಬಂದಾಗ ಕುಗ್ಗಿ ಸೊರಗಬಾರದು. ಯಾವಯಾವಕಾಲಕ್ಕೆ ಯಾವಯಾವದು ಬಂದರೂ, ಈಶ್ವರಚಿತ್ತಾನುಸಾರ ಬಂತೆಂದು ಭಾವಿಸಿ, ಜನ್ಮವನ್ನು ಸಾರ್ಥಕಮಾಡಿಕೊಂಡು, ಜ್ಞಾನ ಭಕ್ತಿ ವೈರಾಗ್ಯಗಳಿಂದ ಭಗವಂತನನ್ನು ಆರಾಧಿಸುತ್ತಿರಬೇಕೆಂಬುದೇ ಪ್ರಸಕ್ತಪದ್ಯದ ತಾತ್ಪರ್ಯಾರ್ಥವು. ||೨೩||

**(೩) ಈ ಪದ್ಯಕ್ಕೆ ಭಾವದರ್ಪಣ ಟೀಕಾಕಾರರು ವ್ಯಾಖ್ಯಾನ ಬರೆದಿಲ್ಲ.**

**(೪) ಶ್ರೀ ವ್ಯಾಸದಾಸಸಿದ್ಧಾಂತ ಕೌಮುದೀ:–**

"ಭೋಗ್ಯ'' – ಇತಿ|| ಕುಗ್ಗಿ – ನೊಂದಿ|| ವಿಷ್ಣುರಹಸ್ಯೇಚ– "ಶುಭೇ ಚೇತ್ ಅಶುಭಂ ಧ್ಯಾಯೇತ್ ವಿಪತ್ತಾವನು ಧೀರಧೀಃ|| ಅಧೀರಸ್ಯ ಶುಭಂ ನ ಸ್ಯಾತ್ ಇಹಲೋಕೇ ಪರತ್ರ ಚ''|| ಇತಿ. ||೨೩||

ಭೋಗ್ಯವಸ್ತುಗತ ಯೋಗ್ಯಾಯೋಗ್ಯ ರಸಗಳನ್ನರಿತು, ತತ್ತದ್ಗತ ಭಗವದ್ರೂಪಗಳಿಗೆ

ಅದನ್ನು ಸಮರ್ಪಿಸುತ್ತಿರಬೇಕು. ಸಂಸಾರದಲ್ಲಿ ಒದಗಿ ಬರುತ್ತಿರುವ ಬಡತನ ಭಾಗ್ಯಗಳನ್ನು ಲಕ್ಷ್ಯಕ್ಕೆತಾರದೇ, ಹರಿಭಕ್ತಿ, ಜ್ಞಾನ, ವೈರಾಗ್ಯಭಾಗ್ಯಗಳಿಂದ ಭಜನೆ ಮಾಡುವುದೇ ಪರಮ ಸಾಧನೆಯು. ವಿಷ್ಣುರಹಸ್ಯದಲ್ಲಿ– "ಸುಖದುಃಖ ಪ್ರಸಂಗಗಳಲ್ಲಿ ಧೈರ್ಯಗುಂದಬಾರದು. ಶುಭಾಶುಭಗಳಲ್ಲಿ ಸಮಚಿತ್ತನಾಗಿರಬೇಕು. ಸಂಪತ್ತು–ವಿಪತ್ತುಗಳಲ್ಲಿ ಸಮಭಾವವಿಲ್ಲದ ಅಧೀರ ಪುರುಷರಿಗೆ ಇಹಪರಗಳೆರಡರಲ್ಲಿಯೂ ಸುಖವಿಲ್ಲ" ಎಂದು ನಿರೂಪಿತವಾಗಿದೆ. ||೨೩||

## (ಜ) ಶ್ರೀ ಗುರುಹೃದಯಪ್ರಕಾಶಿಕೆ ವ್ಯಾಖ್ಯಾನ :–

ನಾಲ್ಕನೇ ಸಂಧಿಯಲ್ಲಿ ಹೇಳಿದ **'ವನಜಜಾಂಡದೊಳುಳ್ಳಖಿಳಚೇತನರು ಭುಂಜಿಪ'** ಎಂಬ ಪದ್ಯ ವಿವರಿಸುತ್ತಾರೆ– ಭೋಗ್ಯವಸ್ತುವೆಂದು. ಸಕಲ ಪ್ರಾಣಿಗಳು ಭೋಜನ ಮಾಡುವ ವಸ್ತುಗಳೊಳಗೆ ಜ್ಞಾನವೃದ್ಧರು ಶ್ಲಾಘಿಸುವ ಸಾತ್ವಿಕಧಾನ್ಯಾದಿರೂಪ ಯೋಗ್ಯರಸವನ್ನು, ಶಾಸ್ತ್ರನಿಂದ್ಯ ತಾಮಸ ರಾಜಸ ಪ್ರಾಣಿಹಿಂಸಾಜನ್ಯ ಮಾಂಸಾದ್ಯಯೋಗ್ಯರಸವನ್ನು, ಶಾಸ್ತ್ರರೀತ್ಯಾ ತಿಳಿದು, ಯೋಗ್ಯಾಯೋಗ್ಯರಲ್ಲಿ ನೆಲೆಸಿಪ್ಪ ಹರಿಗೆ ಅನುದಿನ ಸಮರ್ಪಿಸು – ಅಂದರೆ, ಯೋಗ್ಯರಲ್ಲೂ. ಅಯೋಗ್ಯ ರಜಸ್ತಮಸ್ಸ್ವಭಾವರಲ್ಲೂ, ಅಂತರ್ಯಾಮಿ ಶ್ರೀಹರಿ ತತ್ತದ್ಯೋಗ್ಯವಾದ ರಸಗಳನ್ನು ಅವರವರ ಭೋಜನಶಕ್ತಿ ವ್ಯಕ್ತಮಾಡಿಕೊಟ್ಟು ಉಣಿಸುವನೆಂದು ಸದಾ ಸ್ಮರಿಸುವುದೇ ಸಮರ್ಪಣೆ ಎಂತ ಅರ್ಥ. ದೇವರ ಭಕ್ತಿ ಭಾಗ್ಯರಹಿತನಿರ್ಭಾಗ್ಯನೆಂದು ನೀನು ಅನ್ನಿಸಿಕೊಳ್ಳದೆ, ಐಶ್ವರ್ಯ ಮೊದಲಾದನುಕೂಲವಾದಾಗ ಗರ್ವದಿಂದ ಹಿಗ್ಗದೆ, ದಾರಿದ್ರ್ಯ ಮೊದಲಾದ ಅನನುಕೂಲದಲ್ಲಿ ಕೇವಲ ಕುಗ್ಗಿ ದೀನನಾಗದೆ, ಸುಖಗಳಲ್ಲಿ ಹರಿಸ್ಮರಣೆ ಸಮನಾಗಿ ಬಿಡದೆ, ಸದ್ಭಕ್ತಿಯನ್ನು, ವಿಷಯಾದ್ಯಾಸಕ್ತಿತ್ಯಾಗವನ್ನು ಸಹ ಆಶ್ರಯಿಸುವುದು. ||೨೩||

## ಸರ್ವವ್ಯಾಖ್ಯಾನಸಾರಸಂಗ್ರಹ

ಭೋಗ್ಯವಸ್ತುಗಳಲ್ಲಿಯೂ ಹಾಗೂ ಆ ವಸ್ತುಗಳನ್ನು ಸ್ವೀಕರಿಸುವ ಭೋಕ್ತೃಗಳಲ್ಲಿಯೂ ಬಿಂಬರೂಪನಾದ ಶ್ರೀ ಹರಿಯೇ ಅಂತರ್ಯಾಮಿಯಾಗಿದ್ದು, ಸ್ವಾಖ್ಯರಸ ಪರಿಗ್ರಹದ್ವಾರಾ, ರಸವಿಭಾಗಗೈಸಿ, ಆ ಜೀವರಿಗೆ ತರ್ಪಕನಾಗಿದ್ದಾನೆ. ಅಂತಹ ಸ್ವರಮಣನನ್ನು ನಿತ್ಯದಲ್ಲಿಯೂ ಭಜಿಸುತ್ತಾ, ಜೀವನದ ಏರಿಳಿತಗಳಿಂದ ಹಿಗ್ಗದೆ ಕುಗ್ಗದೇ, ಜ್ಞಾನಭಕ್ತಿವೈರಾಗ್ಯಾದಿಗಳನ್ನು ಬೇಡು ಎಂದು ಬಾಳಿನ ಹಾದಿಯನ್ನು ನಿರ್ದೇಶಿಸಿದ್ದಾರೆ– ಭೋಗ್ಯವಸ್ತುಗಳೊಳಗೆ– ಎಂಬ ಪ್ರಸಕ್ತ ೨೩ನೆಯ ಪದ್ಯದಿಂದ.

೧. ಕಿವಿಯಿಂದ ಆಲಿಸುವ ಶಬ್ದ, ನೇತ್ರಗಳಿಂದ ನೋಡುವ ರೂಪ, ತ್ವಗಿಂದ್ರಿಯದ ದ್ವಾರಾ ಅನುಭೋಗಿಸುವ ಸ್ಪರ್ಶ, ರಸನೇಂದ್ರಿಯದಿಂದ ಸೇವಿಸುವ ರುಚಿ, ನಾಸಿಕೇಂದ್ರಿಯದಿಂದ ಆಸ್ವಾದಿಸುವ ಗಂಧ ಇತ್ಯಾದಿವಿಷಯಗಳೆಲ್ಲವೂ ಭೋಗ್ಯವಸ್ತುಗಳೇ.

೨. ಶಬ್ದಾದಿವಿಷಯರೂಪವಾದ ಭೋಗ್ಯವಸ್ತುಗಳು ಮೂರುಪ್ರಕಾರ ಇವೆ. ಸಾತ್ವಿಕ (ಶುಭ) – ರಾಜಸ (ಮಿಶ್ರ)–ತಾಮಸ (ಅಶುಭ). ತ್ರಿವಿಧಜೀವರ ಅಭಿರುಚಿಗೆ ತಕ್ಕಂತೆ ಭೋಗ್ಯವಸ್ತುಗಳು ತ್ರಿವಿಧವಾಗಿವೆ. ಮುಕ್ತಿಯೋಗ್ಯರಾದ ಸಾತ್ವಿಕ ಜೀವರಲ್ಲಿಯೂ, ಅವರು ಸೇವಿಸುವ ಶುಭ ವಸ್ತುಗಳಲ್ಲಿಯೂ ಸರ್ವತ್ರವ್ಯಾಪ್ತನಾದ ಶ್ರೀಹರಿಯು ವಿದ್ಯಮಾನನಾಗಿದ್ದಾನೆ. ಅಂತೆಯೇ, ಮಧ್ಯಮಜೀವರಾದ ರಾಜಸರು, ಅವರು ಅಪೇಕ್ಷಿಸುವ ಶುಭಾಶುಭಪದಾರ್ಥಗಳು, ತಮೋಯೋಗ್ಯರಾದ ತಾಮಸಜೀವರು ಮತ್ತು ಅವರಿಂದ ಅಪೇಕ್ಷಿತವಾದ ತಾಮಸ ಆಹಾರಗಳಲ್ಲಿಯೂ ಅದೇ ಪರಮಾತ್ಮನು ತದಾಕಾರನಾಗಿ, ತತ್ತನ್ನಾಮಕನಾಗಿ ಇರುವನು. ತ್ರಿವಿಧಜೀವ ವರ್ಗದಲ್ಲಿ ಪರಸ್ಪರ ಬೇಧ. ಅಂತೆಯೇ, ಅವರು ತಮ್ಮ ಸ್ವಭಾವಕ್ಕನುಗುಣವಾಗಿ ಅಪೇಕ್ಷಿಸುವ

ಜಡರೂಪವಾದ ವಿಷಯಾದಿ ಭೋಗ್ಯವಸ್ತುಗಳಲ್ಲಿ ಪರಸ್ಪರ ಬೇಧವಿದ್ದರೂ, ಆ ತ್ರಿವಿಧಜೀವರ, ಅಂತರ್ಯಾಮಿಯಾಗಿರುವ ಬಿಂಬರೂಪಿ ಶ್ರೀಹರಿಯೂ, ಮತ್ತು ಭೋಜ್ಯವಸ್ತುಗತ ರಸಾಂತರ್ಗತನಾದ ವ್ಯಾಪ್ತರೂಪಗಳು ಒಂದೇ ಎಂದು ಭಾವಿಸಬೇಕು. ಈ ಉಪಾಸನಾಕ್ರಮವೇ ಅನ್ವಯಪೂಜೆ ಎಂದೆನಿಸುವುದು.

೩. ಸರ್ವಜೀವರೂ ಸ್ವತಂತ್ರರಲ್ಲ. ಅವರ ಕರ್ತೃತ್ವಶಕ್ತಿ ಭಗವದಧೀನವಾಗಿದೆ. ಭಗವಂತನು ಸರ್ವಜೀವರ ಬಿಂಬನು. ಸರ್ವಜೀವರೂ ಅವನಿಗೆ ಪ್ರತಿಬಿಂಬಭೂತರು. ಬಿಂಬಕ್ರಿಯಾದ್ವಾರಾ ಪ್ರತಿಬಿಂಬದ ಕ್ರಿಯಾಭಿವ್ಯಕ್ತಿ. ಬಿಂಬನಾದ ಶ್ರೀ ಹರಿಯಾದರೋ ದೋಷದೂರನು. ಅವನಿಗೆ ಜೀವರ ವಿವಕ್ಷಾ ವೈಷಮ್ಯ, ನೈರ್ಘೃಣ್ಯ ಇತ್ಯಾದಿ ದೋಷಗಳಿಲ್ಲ. ಅವರವರ ಅನಾದಿನಿತ್ಯವಾದ ಯೋಗ್ಯತಾನುಸಾರ, ಅನಾದಿಕರ್ಮವನ್ನು ನಿಮಿತ್ತಮಾಡಿಕೊಂಡು, ಜೀವರ ದ್ವಾರಾ ಸಕಲಕ್ರಿಯಾಕಲಾಪಗಳನ್ನು ನಡೆಯಿಸುತ್ತಿರುವನು. ಈ ರಹಸ್ಯಾರ್ಥವನ್ನು ಅರಿತು, ಯೋಗ್ಯ ಮತ್ತು ಅಯೋಗ್ಯ ರಸಗಳು, ಅವುಗಳಲ್ಲಿರುವ ರಸಾಂತರ್ಗತ, ರಸಪದವಾಚ್ಯನಾದ ಸಕಲಲೋಕ ವಿಲಕ್ಷಣನಾದ ಬಿಂಬನ ವ್ಯಾಪಾರ ವಿಚಾರಗಳನ್ನು ಶಾಸ್ತ್ರಯೋನಿತ್ವಾತ್ ಅರಿತು, ಗುರೂಪದೇಶದಿಂದ ದೃಢಪಡಿಸಿಕೊಂಡು, ಆತ್ಮಸಾಧನೆಯಿಂದ ಅನುಭವಕ್ಕೆ ತಂದುಕೊಳ್ಳಬೇಕು. ಅಂತೆಯೇ, ಯೋಗ್ಯಾಯೋಗ್ಯಜೀವರಲ್ಲಿ ನೆಲೆಸಿಪ್ಪ ಬಿಂಬರೂಪೀ ಶ್ರೀಹರಿಗೆ ಶುಭಾಶುಭರೂಪವಾದ ದ್ವಂದ್ವಕರ್ಮಗಳನ್ನು ಅರ್ಪಿಸುತ್ತಿರಬೇಕು.

೪. ಜೀವನದಲ್ಲಿ ಪುಣ್ಯಕರ್ಮಫಲರೂಪವಾದ ಭಾಗ್ಯಬಂದಾಗ ಹಿಗ್ಗಿ, ಮದದಿಂದ ಬೀಗಬಾರದು. ಪಾಪಕರ್ಮಫಲವಾಗಿ ಬಡತನ ಬಂದರೆ, ಕುಗ್ಗಿ, ಸೊರಗಿ, ನಿರ್ವಿಣ್ಣನಾಗಬಾರದು. ಭಾಗ್ಯ ಬಡತನ, ಸುಖ ದುಃಖ, ಇತ್ಯಾದಿ ದ್ವಂದ್ವಗಳು ಶ್ರೀಹರಿಯಿಂದಲೇ ದತ್ತವಾದುದೆಂದು ತಿಳಿದು, ಸಮಚಿತ್ತನಾಗಿ, ದ್ವಂದ್ವಾತೀತನಾಗಬೇಕೆಂದು ಉಪದೇಶಿಸುತ್ತಾರೆ ದಾಸವರ್ಯರು. ಸತ್ಯಸಂಕಲ್ಪನು ಏನಿತ್ತುದೇ ಪರಮ ಪುರುಷಾರ್ಥವೆಂದರಿತು, ಭುಂಜಿಸುತಿರು ವಿಷಯ.

೫. ಸಾಧನಸಂಪತ್ತುಗಳಿಂದ ಕೂಡಿದ ಈ ಮಾನವ ಜನ್ಮ ಲಭ್ಯವಾದಾಗ, ನಿರ್ಭಾಗ್ಯನಾಗಿ, ಕ್ಷಣಿಕಸುಖಗಳನ್ನು ಬೇಡಕೂಡದೆಂದು ಎಚ್ಚರಿಸುತ್ತಾರೆ. ಸುಜ್ಞಾನ, ಸದ್ಭಕ್ತಿ, ವೈರಾಗ್ಯಗಳೇ ನಿಜವಾದ ಸಾಧನ ಸಂಪತ್ತುಗಳು. ಈ ದೈವೀಸಂಪತ್ತುಗಳನ್ನು ಬೇಡಿ, ಶ್ರೀ ಹರಿಯ ಕರುಣದಿಂದ ಅವುಗಳನ್ನು ಸಂಪಾದಿಸಿ, ಸುಜ್ಞಾನಿಯಾಗು ಭಗವದ್ಭಕ್ತನಾಗು, ವೈರಾಗ್ಯಭಾಗ್ಯಬೇಡು ಎಂದು–ಜೀವನದ ಸಾರ್ಥಕ್ಯದ ಮಾರ್ಗವನ್ನು ತೋರಿ, ನಮ್ಮ ಬಾಳಿನ ಮಾರ್ಗದೀಪದಂತಿದ್ದಾರೆ. ಸಿದ್ಧಸಾಧಕವಾದ ಶ್ರೀ ದಾಸವರ್ಯರು. ||೨೫||

## ಪದ್ಯ ೨೪

**ಮೂಲ :—**

ಸ್ಥಲಜಲಾದ್ರಿಗಳಲ್ಲಿ ಜನಿಸುವ ।
ಫಲಸುಪುಷ್ಪಜಗಂಧರಸ ಶ್ರೀ ।
ತುಲಸಿ ಮೊದಲಾದಖಿಳ ಪೂಜಾಸಾಧನ ಪದಾರ್ಥ ॥
ಹಲವು ಬಗೆಯಿಂದರ್ಪಿಸುತ ಬಾಂ ।
ಬೊಳೆಯಜನಕಗೆ ನಿತ್ಯನಿತ್ಯದಿ ।
ತಿಳಿವುದಿದು ವ್ಯತಿರೇಕಪೂಜೆಗಳೆಂದು ಕೋವಿದರು ॥೨೪॥

**ಅವತರಣಿಕೆ :—**

ಭೂಮಿ, ನೀರು, ಪರ್ವತ ಈ ಸ್ಥಳಗಳಲ್ಲಿ ಉತ್ಪನ್ನವಾಗುವ ಫಲಗಳು, ಸುಗಂಧಯುಕ್ತಹೂವುಗಳು, ಪುಷ್ಪಗತಪರಿಮಳ, ಮಕರಂದ, ಮಧು, ಶ್ರೀತುಳಸಿ, ಇತ್ಯಾದಿ ಸಮಸ್ತಪೂಜಾಯೋಗ್ಯವಾದ ಪರಿಕರಗಳನ್ನು ನಾನಾ ಪ್ರಕಾರವಾಗಿ ಗಂಗಾಜನಕನಾದ ರಂಗನಿಗೆ ಪ್ರತಿನಿತ್ಯವೂ ಅರ್ಪಿಸುವ ಪೂಜಾವಿಧಾನವೇ **ವ್ಯತಿರೇಕಪೂಜಾ** ಎಂದೆನಿಸುವುದೆಂದು ತಿಳಿಸುತ್ತಾರೆ – **ಸ್ಥಲಜಲಾದ್ರಿಗಳಲ್ಲಿ** – ಎಂಬ ಪ್ರಸಕ್ತ ಸಂಧಿಗತ ೨೪ನೆಯ ಈ ಪದ್ಯದಿಂದ. ॥೨೪॥

**ಪ್ರತಿಪದಾರ್ಥ :—**

**ಸ್ಥಲ** ಭೂಮಿ, **ಜಲ** = ನೀರು, **ಅದ್ರಿಗಳಲ್ಲಿ** = ಪರ್ವತಗಳು ಇತ್ಯಾದಿ ಸ್ಥಳವಿಶೇಷಗಳಲ್ಲಿ, **ಜನಿಸುವ** = ಉತ್ಪನ್ನವಾಗುವ, **ಫಲ** = ಭೂರುಹವೆನಿಸಿದ ವೃಕ್ಷಗಳಲ್ಲಿ ಬರುವ ಸುರಸೋಪೇತ ಹಣ್ಣುಗಳು, **ಸುಪುಷ್ಪ** = ನೀರಿನಲ್ಲಿ ಹುಟ್ಟುವ ಸುಗಂಧಯುಕ್ತವಾದ ಕಮಲಾದಿಪುಷ್ಪಗಳು (ಅಂತೆಯೇ ಮರ, ಗಿಡ, ಲತೆಗಳಲ್ಲಿ ಅರಳುವ ಹೂವುಗಳು), **ಗಂಧ** = ಪುಷ್ಪಗತ ಸುವಾಸನೆ, ಹಾಗೂ

ಮಕರಂದದಿಂದ ಷಟ್ಪದಗಳಿಂದ ನಿರ್ಮಾಣವಾಗುವ ಸುಮಧುರ ಜೇನುತುಪ್ಪ, ರಸ = ಫಲಗತ, ಪುಷ್ಪಗತ ರಸವಿಶೇಷಗಳು, ಶ್ರೀತುಲಸಿ = ದೇವರ ಪೂಜೆಗೆ ಅತ್ಯಗತ್ಯವಾದ ಶ್ರೀ ತುಲಸೀಪುಷ್ಪ, ಮೊದಲಾದ = ಇತ್ಯಾದಿಯಾದ, ಅಖಿಳ = ಸಮಸ್ತ, ಪೂಜಾಸಾಧನ = ಪೂಜಾದ್ರವ್ಯಗಳೆಂದನಿಸುವ, ಪದಾರ್ಥ =ಅನಿಷಿದ್ಧ ವಸ್ತುಗಳನ್ನು, ಹಲವುಬಗೆಯಿಂದ = ನಾನಾಪ್ರಕಾರವಾಗಿ, ಬಾಂಬೋಳೆಯಜನಕಗೆ = ಆಕಾಶಗಂಗೆಯನ್ನು ಸೃಷ್ಟಿಸಿದ ಗಂಗಾಜನಕನಾದ ತ್ರಿವಿಕ್ರಮರೂಪೀ ಶ್ರೀಹರಿಗೆ, ಅರ್ಪಿಸುತ = ಪೂಜಾದ್ರವ್ಯಾಂತರ್ಗತ, ಪ್ರತಿಮಾಂತರ್ಗತ, ಸ್ವಹೃದಯಕಮಲಸ್ಥಬಿಂಬ ಈ ಭಗವದ್ರೂಪಗಳಿಗೆ ಐಕ್ಯಚಿಂತನಾದ್ವಾರಾ, ಸಮರ್ಪಿಸುತ್ತಾ, ನಿತ್ಯನಿತ್ಯದಿ = ಸದಾಸರ್ವಕಾಲಗಳಲ್ಲಿಯೂ, ಇದು ವ್ಯತಿರೇಕಪೂಜೆಗಳೆಂದು = ಅನ್ಯಗಳಾದ, ವಿಲಕ್ಷಣವಾದ ಪೂಜಾವಿಧಾನವೆಂದು, ಕೋವಿದರು = ಜ್ಞಾನಿಗಳು, ತಿಳಿವುದು = ಅರಿಯುವವರಾಗಬೇಕು. ||೨೪||

## ವ್ಯಾಖ್ಯಾನಗಳು

### (೧) ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ : –

*ವ್ಯತಿರೇಕಪೂಜಾಕ್ರಮ ಹೇಳುತಾರೆ –*

ಭೂಮಿ, ಉದಕ, ಪರ್ವತ ಇವುಗಳಲ್ಲಿ ಉತ್ಪನ್ನಗಳಾಗುವ, ಭೂಮಿಯಲ್ಲಿ ಉತ್ಪನ್ನವಾಗುವ ಸುರಸೋಪೇತ ಅನಿಷಿದ್ಧಗಳಾದ ಫಲಗಳೇನು, ಸುಗಂಧೋಪೇತ ಪುಷ್ಪವೇನು, ಜಲದಲ್ಲಿ ಉತ್ಪನ್ನಗಳಾದ ಕಮಲಾದಿಪುಷ್ಪಗಳು ಅದ್ರಿಜಗಳಾದ ಜೇನುತುಪ್ಪ ಮೊದಲಾದದ್ದು, ಇವುಗಳಿಂದ ಜನಿತಗಳಾದ ಪುಷ್ಪಗತಸುಗಂಧ, ಫಲಗತಸುರಸ, ಪರ್ವತಗತ ಶ್ರೀತುಲಸಿ ಇವೇ ಮೊದಲಾದ ಸಮಸ್ತವಾದ, ಭಗವಂತಗೆ ಪೂಜಾ ಮಾಡೋದಕ್ಕೆ ಸಾಧನೀಭೂತಗಳಾದ ನಾನಾವಿಧ ಪದಾರ್ಥವು ನಾನಾಪ್ರಕಾರದಿಂದ ನಿರ್ಮಾಣ ಮಾಡೋವನಾಗಿದ್ದಾನೆ. ಪೂರ್ವೋಕ್ತಪ್ರಕಾರ

ಅನುಸಂಧಾನದಿಂದ ಪೂರ್ವೋಕ್ತದ್ರವ್ಯಗಳು ಎಲ್ಲೆಲ್ಲಿ ದಾವ ದಾವ ಸ್ಥಳಗಳಲ್ಲಿ ಕಣ್ಣಿಂದ ನೋಡತಾನೋ, ಅಲ್ಲಲ್ಲೇ ಆಯಾ ಪದಾರ್ಥಗಳಲ್ಲಿ ತದಾಕಾರ ತನ್ನಾಮಕನಾಗಿ ಇರತಕ್ಕ ಭಗವಂತನ ಚಿಂತಿಸಿ, ಆ ರೂಪವನ್ನು ನಿನ್ನ ದೇಹಾಂತರ್ಗತಬಿಂಬರೂಪಿ ಪರಮಾತ್ಮನಲ್ಲಿ ಐಕ್ಯಚಿಂತನಾರೂಪದಿಂದ, ಭಗವದ್ರೂಪಗಳಿಂದ ಭಗದ್ರೂಪಗಳಿಗೆ ಪೂಜಾತ್ವೇನ ಅರ್ಪಿಸುತ್ತಾ ಮತ್ತು ಪ್ರತಿಪದಾರ್ಥದಲ್ಲೂ ಖಂಡಾಖಂಡರೂಪಗಳು ಇರೋದಾಗಿ ಅವೆ. ಅಖಂಡರೂಪವನ್ನು ಖಂಡರೂಪದಲ್ಲಿ ಐಕ್ಯಚಿಂತಿಸುತ್ತಾ ಅಲ್ಲಿದಲ್ಲಿಗೆ ಈ ಪ್ರಕಾರ ಅರ್ಪಿಸುತ್ತಾ, ಭಾಗೀರಥಿದೇವಿಗೆ ತಂದೆಯಾದ ತ್ರಿವಿಕ್ರಮಸಾಂಕೇತನಾದ ದೇಹಾಕಾರನಾದ ವಾಮನಾಖ್ಯ ಶ್ರೀಬಿಂಬಮೂರ್ತಿಗೆ ಪ್ರತಿದಿನದಲ್ಲೂ ಈ ಪ್ರಕಾರ ಮಾಡತಕ್ಕಪೂಜಾ ದಾವದದೆ ಈ ಪೂಜಾ ಎಂಬುವುದು, ಅನ್ಯಗಳಾದ ವಿಲಕ್ಷಣಗಳಾದ ಪೂಜಾದಿಗಳೆಂದು ಜ್ಞಾನಿಗಳಾದವರು ತಿಳಿಯೋವರಾಗಬೇಕು.

**ವಿಶೇಷಾರ್ಥ** – ತುಲಸಿ ತಾರತಮ್ಯದಲ್ಲಿ ದಾರೆದಂರೆ –

ತುಲಸೀ ಜಾಂಬವತೀತ್ಯುಕ್ತಾ ಲಕ್ಷ್ಮ್ಯಾವೇಶೇನ ಸಂಯುತಾ ।
ತಯಾ ಸಂಪೂಜಯೇದ್ವಿಷ್ಣುಂ ವಿಷ್ಣುಲೋಕಮವಾಪ್ನುಯಾತ್ ॥

ಇತೀ **ಪಾದ್ಮೇ ಉತ್ತರಖಂಡೇ.** ॥೨೪॥

(೨) ಭಾವಪ್ರಕಾಶಿಕೆ :—

ಭೂಮಿ, ನೀರು, ಬೆಟ್ಟ ಇವುಗಳಲ್ಲಿ ಹುಟ್ಟುವ ಫಲಪುಷ್ಪಗಳ ರಸಗಂಧಗಳನ್ನು ಶ್ರೀ ತುಳಸಿ ಮೊದಲಾದ ಸಮಸ್ತಪೂಜಾಯೋಗ್ಯ ಪದಾರ್ಥಗಳನ್ನು ನಾನಾಬಗೆಯಿಂದ ಶ್ರೀ ಪರಮಾತ್ಮನಿಗೆ ಅರ್ಪಿಸಬೇಕು. ಈ ಪೂಜೆಯನ್ನು ಜ್ಞಾನಿಗಳು **ವ್ಯತಿರೇಕ ಪೂಜೆ** ಎನ್ನುವರು. ॥೨೪॥

(೩) ಭಾವದರ್ಪಣಟೀಕಾ :–

ವ್ಯತಿರೇಕ ಪೂಜೆಯ ಲಕ್ಷಣ ಹೇಳುತ್ತಾರೆ – ಸ್ಥಲೇತಿ. ||೨೪||

(೪) ಶ್ರೀವ್ಯಾಸದಾಸಸಿದ್ಧಾಂತ ಕೌಮುದೀ :–

"ಸ್ಥಳ – ಇತೀ" || "ಹಲವು ಬಗೆ" – ಸರ್ವಪ್ರಕಾರೇಣ ||
ತದ್ವಸ್ತಸ್ಯ ತದ್ದಾನೇ ವ್ಯತಿರೇಕಃ || ||೨೪||

ಈ ಪದ್ಯದಿಂದ ವ್ಯತಿರೇಕಪೂಜಾವಿಧಾನವನ್ನು ನಿರೂಪಿಸುತ್ತಾರೆ. ಹಲವು ಬಗೆಯಿಂದಲಿ – ಎಂದರೆ, ಸರ್ವಪ್ರಕಾರದಿಂದ ಪರಮಾತ್ಮನಿತ್ತುದನ್ನು ಪರಮಾತ್ಮನಿಗೇ ಸಮರ್ಪಿಸುವುದು **ವ್ಯತಿರೇಕಪೂಜೆ** ಎನ್ನಿಸುವುದು. ||೨೪||

(೫) ಶ್ರೀ ಗುರುಹೃದಯಪ್ರಕಾಶಿಕೆ ವ್ಯಾಖ್ಯಾನ : –

ತುಳಸೀ ಅರ್ಘ್ಯೋದಕಾದಿಗಳಿಂದ ಮಾಡುವ ಬಾಹ್ಯಪೂಜೆಯನ್ನು ವ್ಯತಿರೇಕವೆಂಬ ಪೃಥಕ್‌ಪೂಜೆ ಎಂದು ತಿಳಿಸುತ್ತಾರೆ. ಸ್ಥಳವೆಂಬ ಭೂಮಿಯಲ್ಲುದಿಸುವ ಮಲ್ಲಿಕಾದಿ ಪುಷ್ಪಗಳನ್ನೂ, ಜಲದಲ್ಲಿ ಹುಟ್ಟುವ ಕಮಲಾದಿಗಳನ್ನೂ, ಅದ್ರಿಗಳೆಂಬ ಬೆಟ್ಟದಲ್ಲಿ ಹುಟ್ಟುವ ತುಳಸೀಪುಷ್ಪಾದಿಗಳನ್ನೂ, ಫಲಗಂಧೋದಕಾದಿಗಳನ್ನೂ, ಬಾಂಬೊಳೆ ಎಂಬ ಗಂಗೆಗೆ ಜನಕನಾದ ಶ್ರೀಹರಿಗೆ, ಹಲವು ಬಗೆಯಿಂದರ್ಪಿಸುತ, ಅಂದರೆ **ವೈದಕೋ ತಾಂತ್ರಿಕೋ ಮಿಶ್ರ ಇತಿ ಮೇ ತ್ರಿವಿಧೋ ಮುಖಃ** ಎಂಬ **ಭಾಗವತೋಕ್ತರೀತ್ಯಾ** ಪುರುಷಸೂಕ್ತದಿಂದ ಮಾಡುವ ಪೂಜೆ ವೈದಿಕ ಎಂತಲೂ, ಆಗಮೋಕ್ತ ತಾಂತ್ರಿಕಪೂಜೆ ಎಂತಲೂ ವೇದಪುರಣೋಭಯೋಕ್ತ ಮಿಶ್ರಪೂಜೆ ಎಂತಲೂ ಬಹುವಿಧ ತಿಳಿದು, ಆವಾಹನಾಸನಾದಿ ಷೋಡಶೋಪಚಾರ ಪೂಜೆಗಳನ್ನು ನಿತ್ಯ ನಿತ್ಯದಿ ಅಂದರೆ, ಸದಾ ಮಾಡುತ್ತಾ ಇದು **ವ್ಯತಿರೇಕಪೂಜೆ** ಎಂದು, ಕೋವಿದರು ತಿಳಿವುದು –ಎಂದರೆ ದೇವರಿಂದ ಸೃಷ್ಟವಾದ ಪೃಥಕ್ಪದಾರ್ಥಗಳಿಂದ ಪೂಜಿಸಿ, ಇದೆಲ್ಲಾ ದೇವರಧೀನವೆಂದು ಭಾವಿಸುವುದು **ಪೃಥಕ್ಪೂಜೆ** ಎಂದು ಜ್ಞಾನಿಗಳು ತಿಳಿವರು ಎಂದರ್ಥ. ||೨೪||

## ಸರ್ವವ್ಯಾಖ್ಯಾನಸಂಗ್ರಹ

ಜ್ಞಾನಿಗಳು ಮಾಡತಕ್ಕ **ವ್ಯತಿರೇಕಪೂಜಾವಿಧಾನವನ್ನು** ತಿಳಿಸುತ್ತಾರೆ – **ಸ್ಥಲಜಲಾದ್ರಿಗಳಲ್ಲಿ** – ಎಂಬ ಪ್ರಸಕ್ತ ೨೪ನೆಯ ಪದ್ಯದಿಂದ.

೧. ಸಾಮಾನ್ಯವಾಗಿ ಸ್ವಯಂವ್ಯಕ್ತರೂಪಗಳಾದ ಸಾಲಿಗ್ರಾಮಾದಿಗಳ ಪೂಜೆ, ಪ್ರತಿಮಾದಿಗಳಲ್ಲಿ ವಿಧ್ಯುಕ್ತವಾಗಿ, ತತ್ತ್ವನ್ಯಾಸ – ಮಾತೃಕಾನ್ಯಾಸಪದ್ಧತಿ ಕ್ರಮಗಳಿಂದ ಬಿಂಬವಾಹನೆಗೈದು, ತಂತ್ರಸಾರೋಕ್ತಪೂಜಾಮಾಡುವುದು – ಇತ್ಯಾದಿ ನಿತ್ಯಕರ್ಮಾನುಷ್ಠಾನದಲ್ಲಿ ಆಚರಿಸುವ ವಿಧಾನ ಒಂದು.

ಆದರೆ ನಮ್ಮ ಸುತ್ತಲೂ ಹಬ್ಬಿ ಹರಡಿರುವ ವಿಶಾಲವಾದ ಪ್ರಕೃತಿಯು ಚಿತ್ರವಿಚಿತ್ರವಾದ ವೈಭವಗಳಿಂದ ವಿದ್ಯಮಾನವಾಗಿದೆ. ಪ್ರಕೃತಿಗತಸಮಸ್ತ ವಸ್ತುಗಳಲ್ಲಿ ಸರ್ವತ್ರವ್ಯಾಪ್ತಿಯಾದ ವಾಸುದೇವನಾಮಕ ಶ್ರೀಪರಮಾತ್ಮನು, ತತ್ತದಾಕಾರ, ತದ್ರೂಪ, ತತ್ತನ್ನಾಮಕ, ತತ್ತಶ್ಛಬ್ಧವಾಚ್ಯನಾಗಿ, ಸರ್ವತ್ರವ್ಯಾಪಿಸಿದ್ದಾನೆ. ಈ ಜಗತ್ತೇ ಈಶನಿಗೆ ನಿವಾಸಸ್ಥಾನವು.

ಇಂತಹ ಚಿತ್ರವಿಚಿತ್ರವಾಗಿ, ವಿಶಾಲವಾಗಿ ಹಬ್ಬಿ ಹರಡಿರುವ ಪ್ರಕೃತಿಮಂದಿರದಲ್ಲಿ ಭೂಮಿಯಲ್ಲಿ ಹುಟ್ಟುವ ಗಿಡ, ಮರ, ಬಳ್ಳಿ, ಪೊದೆಗಳು ಇತ್ಯಾದಿ ಭೂರುಹವಸ್ತುಗಳಲ್ಲಿ ನಾನಾವರ್ಣಯುಕ್ತವಾದ, ಚಿತ್ರವಿಚಿತ್ರ ಆಕೃತಿವಿಶೇಷಗಳಿಂದ ಮನೋಹರವಾಗಿ ಅರಳಿ ಕಂಗೊಳಿಸುತ್ತಿರುವ ಪುಷ್ಪ ಹಾಗೂ ಫಲಗಳಿವೆ. ಸುಗಂಧಯುಕ್ತವಾದ ಪುಷ್ಪಗಳು, ಸುರಸೋಪೇತವಾದ ಫಲವಿಶೇಷಗಳು – ಇತ್ಯಾದಿಗಳಲ್ಲಿ ಅನಿಷಿದ್ಧವಾದ, ಅಂದರೆ, ದೇವಪೂಜಾಯೋಗ್ಯವಾದ ಫಲಪುಷ್ಪಗಳಲ್ಲಿರುವ ಭಗವದ್ರೂಪಗಳನ್ನು ಚಿಂತಿಸುತ್ತಾ, ಆ ಭಗವದ್ರೂಪಗಳನ್ನು ಸ್ವಬಿಂಬನಲ್ಲಿ ಐಕ್ಯಚಿಂತನೆ ಮಾಡುವ ಪೂಜಾವಿಧಾನವು ಪರಮಶ್ರೇಷ್ಠವು. ಇದನ್ನೇ ಸ್ಥಲದಲ್ಲಿ ಜನಿಸುವ, ಅಂದರೆ, ಭೂಮಿಯಲ್ಲಿ ಹುಟ್ಟುವ ಗಿಡ, ಮರ, ಲತಾದಿಗಳಲ್ಲಿ ಬಿಡುವ ಪರಿಮಳಯುಕ್ತವಾದ,

ಅನಿಷಿದ್ಧವಾದ ಪುಷ್ಪಗಳೆಂದೂ, ಸುಮಧುರವಾದ ರಸದಿಂದ ಪಕ್ವವಾದ ಫಲಗಳೆಂದೂ ತಿಳಿಸುತ್ತಾರೆ.

೨. ಅಂತೆಯೇ, ನೀರಿನಲ್ಲಿ ಹುಟ್ಟುವ ಮಕರಂದಯುಕ್ತವಾದ, ಕಣ್ಮನಗಳನ್ನು ಸೆಳೆಯುವ ಕಮಲ, ತಾವರೆ, ಕನ್ನೈದಿಲೆ ಇತ್ಯಾದಿ ಜಲಜಪುಷ್ಪಗಳು – ಇವುಗಳನ್ನು ಮಾನಸಿಕವಾಗಿ ಸ್ವಬಿಂಬನಿಗೆ ಐಕ್ಯಚಿಂತನಾಕ್ರಮದಿಂದ ಸಮರ್ಪಿಸುವುದು.

೩. ಬೆಟ್ಟ ಗುಡ್ಡಗಳಲ್ಲಿ ಹುಟ್ಟುವ ಗಿಡ, ವೃಕ್ಷ, ಲತ, ಗುಲ್ಮಾದಿಗಳಲ್ಲಿ ಅರಳಿನಿಂತಿರುವ ಪರಿಮಳಯುತ ಕುಸುಮಾವಳಿಗಳು, ಮರದ ಕೊಂಬೆಗಳಲ್ಲಿ ಕಟ್ಟಿರುವ ಜೇನುಗೂಡಿನಲ್ಲಿ ಶೇಖರವಾಗಿರುವ ಜೇನುತುಪ್ಪ, ಸುಗಂಧರಸೋಪೇತವಾದ ಹಲಸು, ಮಾವು, ನೇರಳೆ ಇತ್ಯಾದಿ ಫಲವಿಶೇಷಗಳು, ಇತ್ಯಾದಿ **ಅದ್ರಿಗಳಲ್ಲಿ ಜನಿಸುವ** ಪೂಜಾಯೋಗ್ಯಪದಾರ್ಥಗಳನ್ನು ಅಲ್ಲಲ್ಲೇ ವ್ಯಾಪ್ತನಾಗಿರುವ ವಾಸುದೇವನಿಗೆ ಭಕ್ತಿಯಿಂದ ಸಮರ್ಪಿಸುವ ಕ್ರಮ – ಇತ್ಯಾದಿ ಪ್ರಕೃತಿಗತ ಅನಿಷಿದ್ಧ, ಪೂಜಾಯೋಗ್ಯ ಸುಗಂಧ ಸುರಸೋಪೇತ ಪುಷ್ಪ ಫಲಾದಿಗಳನ್ನು ಮಾನಸಿಕವಾಗಿ, ಅವು ಇರುವ ಸ್ಥಳಗಳಲ್ಲಿಯೇ, ತತ್ತದ್ಗತ ಭಗವದ್ರೂಪಗಳನ್ನು ಸ್ವಬಿಂಬನಲ್ಲಿ ಐಕ್ಯಚಿಂತನೆಗೈಯುತ್ತಾ, ಅರ್ಪಿಸುವ ಪೂಜಾವಿಧಾನಕ್ಕೆ **ವ್ಯತಿರೇಕಪೂಜೆ** ಎಂದು ಹೆಸರು.

ಹಿಂದೆ ಭಾಗವತೋತ್ತಮರಾದ ಶ್ರೀ ಕನಕದಾಸವರ್ಯರು ತಮ್ಮ ಗುರುಗಳಾದ ಶ್ರೀಚಂದ್ರಿಕಾಚಾರ್ಯರ ದರ್ಶನಾರ್ಥವಾಗಿ ಬರುತ್ತಿರುವಾಗ, ಮಾರ್ಗಮಧ್ಯದಲ್ಲಿ, ತಾವು ಕಂಡ, ಸರೋವರಗಳಲ್ಲಿ ಬೆಳೆದ ಕಮಲಪುಷ್ಪಗಳು, ಸುತ್ತಲೂ ಭೂಮಿಯಲ್ಲಿ ಬೆಳೆದಿದ್ದ ಗಿಡ ಮರಗಳಲ್ಲಿ ಕಂಗೊಳಿಸುತ್ತಿದ್ದ ಸುರಸೋಪೇತ ಫಲಾದಿಗಳನ್ನು ತಮ್ಮ ಮನಸ್ಸಿನಲ್ಲಿಯೇ ಸ್ವಬಿಂಬಮೂರ್ತಿಗೆ ಅರ್ಪಿತವೆಂದು ಭಾವಿಸುತ್ತಾ, ಭಕ್ತಿಭಾವದಿಂದ **ವ್ಯತಿರೇಕಪೂಜೆ** ಮಾಡುತ್ತಾ, ಮಾರ್ಗವನ್ನು ಅತಿಕ್ರಮಿಸುತ್ತಿದ್ದರು. ಶ್ರೀಚಂದ್ರಿಕಾಚಾರ್ಯರು ಸಂಸ್ಥಾನದ ಪೂಜೆಗೆ ಕುಳಿತಾಗ, ಶ್ರೀ ಕನಕದಾಸರು

ಮಾನಸಿಕವಾಗಿ ಅರ್ಪಿಸಿದ್ದ ಪುಷ್ಪಗಳೆಲ್ಲಾ ನಿರ್ಮಾಲ್ಯವಾಗಿದ್ದುವೆಂದು, ಅವರ ಇತಿಹಾಸದಿಂದ ತಿಳಿಯುತ್ತದೆ.

ಹಾಗೆಯೇ ಯದುಕುಲಲಲಾಮನಾದ ಶ್ರೀ ಕೃಷ್ಣನನ್ನು ಯಾವಾಗ ಕಂಡೇನೋ ಎಂಬ, ಭಾವೋದ್ವೇಗದಲ್ಲಿ ದ್ವಾರಕೆಯತ್ತ ಹೊರಟ್ಟಿದ್ದ ಭಕ್ತಾಗ್ರಣಿ ಶ್ರೀಕುಚೇಲರು, ವ್ಯತಿರೇಕಪೂಜಾಕ್ರಮದಲ್ಲಿ, ತಾವು ದಾರಿಯಲ್ಲಿ ಕಂಡ ಕಂಡ, ಪೂಜಾಯೋಗ್ಯ ಫಲಪುಷ್ಪಗಳನ್ನು – "ಇದು ಶ್ರೀಕೃಷ್ಣನಿಗೆ ಅರ್ಪಿತವಾಗಲಿ" – ಎಂಬ ಅನುಸಂಧಾನದಿಂದ, ಮಾನಸಿಕವಾಗಿ ಅರ್ಪಿಸುತ್ತಿದ್ದರು.

೪ ದೇವರಿಗೆ ಅರ್ಪಿಸುವ ಪೂಜಾದ್ರವ್ಯಗಳಲ್ಲಿ ಶ್ರೀತುಲಸೀ ಅತ್ಯಂತ ಶ್ರೇಷ್ಠವು. ತುಳಸೀವಿರಹಿತವಾದ ಪೂಜೆಯನ್ನು ಶ್ರೀಶನು ಎಂದೆಂದಿಗೂ ಸ್ವೀಕರಿಸನು. ಇತರ ಎಲ್ಲಾ ಪೂಜಾಸಾಧನಗಳಿದ್ದು ತುಲಸೀ ಇಲ್ಲದ ಪೂಜೆಯನ್ನು ಶ್ರೀನಲ್ಲ ಒಲ್ಲನೆಂದು ಶ್ರೀಪುರಂದರದಾಸರ ವಚನ. "ತುಳಸೀ ತುಳಸೀ ಎಂದು ಸ್ಮರಣೆಯಾದರೂ ಮಾಡಿ, ಜಲಜಾಕ್ಷನಿಗೆ ಅರ್ಪಿಸಿರಯ್ಯ" – ಎಂದು ಶ್ರೀವಿಜಯರಾಯರು ಎಚ್ಚರಿಸಿದ್ದಾರೆ. ಶ್ರೀ ಕೃಷ್ಣನ ಷಣ್ಮಹಿಷಿಯರಲ್ಲಿ ಒಬ್ಬರಾದ ಶ್ರೀ ಜಾಂಬುವತೀ ದೇವಿಯಲ್ಲಿ ನಿತ್ಯಲಕ್ಷ್ಮ್ಯಾವೇಶವಿರುವುದು. ಜಾಂಬುವತಿಯೇ ತುಳಸಿಯು. ಜಾಂಬುವತಿಗೆ ಮಹರುದ್ರದೇವರ ಅವತಾರಭೂತರಾದ ಜೈಗೀಷವ್ಯರಿಂದ ಉಪದೇಶ. ತಾರತಮ್ಯ ಕ್ರಮದಲ್ಲಿ, ತುಳಸಿಯನ್ನೂ ಉಮಾ ಆದ ಮೇಲೆ ರುದ್ರದೇವರ ಕೆಳಗೆ ಚಿಂತಿಸಬೇಕು. ||೨೪||

## ಪದ್ಯ ೨೫

ಮೂಲ :–

ಶ್ರೀಕರನ ಸರ್ವತ್ರದಲಿ ಅವ ।
ಲೋಕಿಸುತ ಗುಣರೂಪಕ್ರಿಯ ವ್ಯತಿ ।
ರೇಕ ತಿಳಿಯದಲನ್ವಯಿಸು ಬಿಂಬನಲಿ ಮರೆಯದಲೆ ॥
ಸ್ವೀಕರಿಸುವನು ಕರುಣದಿಂದ ನೀ ।
ರಾಕರಿಸದೆ ಕೃಪಾಳು ಭಕ್ತರ ।
ಶೋಕಗಳ ಪರಿಹರಿಸಿ ಸುಖವಿತ್ತವನವರತ ಪೊರೆವ ॥೨೫॥

ಅವತರಣಿಕೆ : –

ವ್ಯತಿರೇಕಪೂಜಾವಿಧಾನವನ್ನು ಇನ್ನೂ ವಿವರವಾಗಿ ತಿಳಿಸುತ್ತಾರೆ. ಶ್ರೀಕರನ – ಎಂಬ ಪ್ರಸಕ್ತಸಂಧಿಗತ ೨೫ನೆಯ ಪದ್ಯದಿಂದ.

ಪರಮಮಂಗಳಪ್ರದನಾದ ಪರಮಾತ್ಮನ ವ್ಯಾಪ್ತಿಮಹಿಮೆಯನ್ನು ಸರ್ವಸ್ಥಳ, ಕಾಲ, ಅವಸ್ಥಾವಿಶೇಷಗಳಲ್ಲಿ ಚಿಂತಿಸುತ್ತಾ, ಆ ಅಪಾರಗುಣಸಂಪನ್ನನ ಅನಂತಾನಂತ ಗುಣ, ರೂಪ, ಕ್ರಿಯಾದಿವಿಶೇಷಗಳನ್ನು ಮನಸಾ ಧ್ಯಾನಿಸುತ್ತಾ, ಸರ್ವತ್ರ ವ್ಯಾಪ್ತನಾದ ಸರ್ವೇಶ್ವರನ ಭಗವದ್ರೂಪಗಳನ್ನು ಸ್ವಬಿಂಬನಲ್ಲಿ ಐಕ್ಯಚಿಂತನಾಪೂರ್ವಕ ಸ್ಮರಿಸುತ್ತಾ, ವ್ಯತಿರೇಕಪೂಜೆಯನ್ನು ಮಾಡುತ್ತಿರುವ ಅಂತರಂಗಭಕ್ತರ ಸೇವಾದಿಗಳನ್ನು ಕೃಪಾಳುವಾದ ಶ್ರೀಶನು ಸ್ವೀಕರಿಸಿ, ಪರಮಾನುಗ್ರಹಗೈದು, ಅವರ ಕ್ಲೇಶಾದಿಗಳನ್ನು ಪರಿಹರಿಸಿ, ಕೊನೆಯಲ್ಲಿ ನಿತ್ಯಾನಂದರೂಪವಾದ ಸುಖವನ್ನು ಅನುಗ್ರಹಿಸಿ, ಸಂರಕ್ಷಿಸುವನು ಎಂದು ತಿಳಿಸುತ್ತಾರೆ – ಪ್ರಸಕ್ತ ಪದ್ಯದಿಂದ. ॥೨೫॥

ಪ್ರತಿಪದಾರ್ಥ :–

ಶ್ರೀಕರನ = ಪರಮಮಂಗಳಪ್ರದನಾದ ಶ್ರೀ ಪರಮಾತ್ಮನನ್ನು, ಸರ್ವತ್ರದಲಿ = ಚರಾಚರಾತ್ಮಕವಾದ ಸಮಸ್ತಅಧಿಷ್ಠಾನಗಳಲ್ಲಿ, **ಅವಲೋಕಿಸುತ** =

ಸ್ಮರಣಪೂರ್ವಕ ಮನೋನೇತ್ರಗಳಿಂದ ನೋಡುತ್ತಾ (ಸರ್ವತ್ರವ್ಯಾಪ್ತದರ್ಶಿಯಾಗಿ), **ಗುಣ** = ಪರಮಾತ್ಮನ ಅನಂತಕಲ್ಯಾಣಗುಣಸಂದೋಹಗಳಿಗೂ, **ರೂಪ** = ಅನಂತಾನಂತಭಗವದ್ರೂಪಗಳಿಗೂ, **ಕ್ರಿಯಾ** = ಭಗವದ್ವ್ಯಾಪಾರರೂಪವಾದ ಕ್ರಿಯಾವಿಶೇಷಗಳಿಗೂ, **ವ್ಯತಿರೇಕ ತಿಳಿದು** = ಪರಸ್ಪರ ಭೇದವಿಲ್ಲವೆಂದು, ಆ ಸ್ವಗತಬೇಧವರ್ಜಿತನ ಸರ್ವಾಧಿಷ್ಠಾನಗತ ಭಗವದ್ರೂಪಗಳಿಗೆ ಪರಸ್ಪರ ಅತ್ಯಂತ ಅಭೇದಗಳನ್ನು ಚಿಂತಿಸುತ್ತಾ, **ಬಿಂಬನಲಿ** = ದೇಹಾಂತರ್ಗತ, ದೇಹಾಕಾರನಾದ, ಜೀವಾಂತರ್ಯಾಮಿ ಸ್ವಬಿಂಬಮೂರ್ತಿಯಲ್ಲಿ, **ಮರೆಯದಲೆ** = ಮರೆಯದಂತೆ, **ಅನ್ವಯಿಸು** = ಐಕ್ಯಚಿಂತಾನಪೂರ್ವಕವಾಗಿ ಆವಾಹಿಸುವವನಾಗು, **ಕೃಪಾಳು** = ದಯಾಳುವಾದ ಶ್ರೀಪರಮಾತ್ಮನು, **ನಿರಾಕರಿಸದೆ** = ನಿರಾಕರಣಮಾಡದೆ, **ಕರುಣದಿಂದ** = ಅಂತಃಕರಣದಿಂದ, **ಸ್ವೀಕರಿಸುವನು** = ಸ್ವೀಕಾರಮಾಡುತ್ತಾನೆ. **ಭಕ್ತರ** = ತನ್ನ ಅಂತರಂಗಭಕ್ತರ, **ಶೋಕಗಳ** = ನಾನಾವಿಧವಾದ ಸಂಸಾರಜನ್ಯದುಃಖಗಳನ್ನು **ಪರಿಹರಿಸಿ** = ನಿವಾರಣೆಮಾಡಿ, **ಸುಖವಿತ್ತು** = ಲಿಂಗಭಂಗಾನಂತರ, ಸ್ವರೂಪಾನಂದಾವಿರ್ಭಾವರೂಪವಾದ ನಿತ್ಯಾನಂದವನ್ನು ಅನುಗ್ರಹಿಸಿ, **ಅನವರತ** = ನಿರಂತರದಲ್ಲಿಯೂ, **ಪೊರೆವ** = ಸಂರಕ್ಷಿಸುವನು. ||೨೫||

## ವ್ಯಾಖ್ಯಾನಗಳು

### (೧) ಶ್ರೀ ಸಂಕರ್ಷಣಒಡೆಯರ ವ್ಯಾಖ್ಯಾನ : –

ಸರ್ವವ್ಯಾಪಾರಗಳೂ ದೇಹಗತಬಿಂಬನಲ್ಲಿ ಅನ್ವಯಮಾಡಬೇಕೆಂದು ಹೇಳುತಾರೆ.

ಸರ್ವಚರಾಚರಅಧಿಷ್ಠಾನಗಳಲ್ಲಿ ವಿದ್ಯಮಾನನಾದ ಪರಮಾತ್ಮನ ಅಧಿಷ್ಠಾನಗಳ ಬಿಟ್ಟು ಅಂತರ್ಗತಭಗವಂತನನ್ನೇ ಮನೋನೇತ್ರಗಳ ದ್ವಾರಾ ನೋಡುತ್ತಾ– ಎಂದರೆ, ಅಪರೋಕ್ಷ ಹೊರತು ಕಾಣದ ಪರಮಾತ್ಮನ ಅನಪರೋಕ್ಷಕಾಲದಲ್ಲಿ ನೋಡುವ ಕ್ರಮ ಹ್ಯಾಗೆಂದರೆ – ತನಗೆ ಇಷ್ಟವಾದ ಸುಲಕ್ಷಣವಾದ ಗುರುಗಳಿಂದ

ಲಭ್ಯವಾದ ಪ್ರತಿಮಾಪೂಜಾ ಬಾಹ್ಯದಲ್ಲಿ ಮಾಡುತ್ತಾ, ಅದರಲ್ಲಿ ದೇಹಾಂತರ್ಗತಬಿಂಬನ್ನ ಆವಾಹನ ಮಾಡಬೇಕು. ಬಿಂಬ ಜೀವಾಕಾರನಾದ್ದರಿಂದ ಬಿಂಬ ಇಂಥಾವನೆಂದು ಅಪರೋಕ್ಷಾತ್ಪೂರ್ವದಲ್ಲಿ ತಿಳಿದು, ಈ ಬಿಂಬಗೆ ಅಗ್ರೇಶಸಾಂಕೇತವೂ ಆದ್ದರಿಂದ, ಬಿಂಬಾವಾಹನ ಮಾಡಬೇಕೆಂಬೋ ವಾಕ್ಯ ವಿರುದ್ಧವಾಗಿ ಅದೆ. ಆವಾಹನ ಕ್ರಮ ಹ್ಯಾಗೆಂದರೆ, ಬಿಂಬ ಮಾನುಷನೋ ಮೃಗನೋ ದಾವದೇ ಆಗಲಿ ಹ್ಯಾಂಗೆ ಇರಲಿ, ಆ ರೂಪದಲ್ಲಿ ನವನಾರೀಕುಂಜರವತ್ ವಿಲಕ್ಷಣಗಳಾದ ಅನಂತರೂಪಗಳು ಇರೋದಾಗಿ ಅವೆ. ಆ ಅನಂತಾನಂತರೂಪಗಳಲ್ಲಿ ಇವಗೆ ಗುರುಮುಖದಿಂದ ಲಭ್ಯವಾದ ಪ್ರತಿಮಾಸದೃಶರೂಪವೂ ಬಿಂಬರೂಪದಲ್ಲಿ ಇರೋದಾಗಿ ಅದೆ. ಪ್ರತಿಮಾದಲ್ಲಿ ಪ್ರತಿಮಾಸದೃಶವಾದ ಇಂಥಾ ರೂಪವನ್ನ ಅನುಸಂಧಾನದಿಂದ ಆವಾಹನಮಾಡಿ ಪೂಜಾದಿಗಳ ಮಾಡಬೇಕು. ಇದೇ ಪ್ರತಿಮಾರೂಪವನ್ನು ಹೃದಯಕಾಶ ಅಷ್ಟದಳಕಮಲಗಳಲ್ಲಿ ಮಾಡಿಕೊಂಡು ಮಾನಸಪೂಜಾ ಮಾಡಬೇಕು. ಮಾಡತಾ, ಮನೋನೇತ್ರಗಳಿಂದ ನೋಡತಾ ಇರಬೇಕು. ಹೃದಯಲ್ಲಿ ದಾವ ಪ್ರಕಾರ ಅವಲೋಕನ ಮಾಡತಾನೋ, ಅದರಂತೆ ಇದೇ ಪ್ರಕಾರ ಇದೇ ಪ್ರತಿಮಾವನ್ನು ಸರ್ವತ್ರ ಅವಲೋಕಿಸುತ್ತಾ, ಪರಮಾತ್ಮನ ರೂಪಗಳಿಗೂ, ಪರಮಾತ್ಮನ ಗುಣಗಳಿಗೂ, ಪರಮಾತ್ಮನ ಕ್ರಿಯೆಗಳಿಗೂ ಪರಸ್ಪರ ಬೇಧ ತಿಳಿಯದೆ, ಇದೇ ಪ್ರಕಾರ ಸರ್ವಾಧಿಷ್ಠಾನಗತ ಭಗವದ್ರೂಪಗಳಿಗೆ ಪರಸ್ಪರ ಅತ್ಯಂತ ಅಭೇದಗಳ ಚಿಂತಿಸುತ್ತ, ಇದನ್ನು ಮರಿಯದೇನೆ, ತನ್ನ ಅಪರೋಕ್ಷದಿಂದ ಮೋಕ್ಷಾಖ್ಯಐಶ್ವರ್ಯವನ್ನು ಅನಿಷ್ಟನಿವೃತ್ತಿದ್ವಾರಾ ಕೊಡತಕ್ಕ ಪೂರ್ವೋಕ್ತಪ್ರತಿಮಾಸದೃಶನಾದ ಬಿಂಬನಲ್ಲಿ ಅನ್ವಯಿಸುವನಾಗು ಮತ್ತು ಪ್ರಕಾರಾಂತರ ಮಾನುಷದೇಹ ಧರಿಸಿದಾಗ, ಜೀವಾಂತರ್ಗತ ಜೀವಾಕಾರ ಅಗ್ರೇಶನಾಮಕ ಬಿಂಬನೇನು, ಅನ್ಯವಾದ ಸ್ಥೂಲದೇಹಗತ ಜೀವಾಕಾರ ಬಿಂಬ ಕಮಲಕರ್ಣಿಕಾದಲ್ಲಿ ಜೀವಾಕಾರದಂತೆ ಅಗ್ರೇಶನಾಮದಿಂದ ಇದ್ದು, ದೇಹಾಕಾರನಾಗಿ ವ್ಯಾಪಿಸಿ ಇದ್ದಾನೆ. ಇಂಥಾ ದೇಹಾಕಾರನಾದ ಬಿಂಬನ್ನು

ಆವಾಹನ ಮಾಡೋಣ ಇದು ಕ್ರಮ. ಈ ಪ್ರಕಾರವಾದರೂ ಆವಾಹನ ಮಾಡಬಹುದು. ಈ ಪ್ರಕಾರ ಆವಾಹನಮಾಡಿ ಇದೇ ಬಿಂಬನನ್ನ ಸರ್ವತ್ರ ಐಕ್ಯಚಿಂತನ ಸರ್ವಗತಭಗವದ್ರೂಪಗತಬಿಂಬನಲ್ಲಿ ಐಕ್ಯಚಿಂತನೆಮಾಡಿ ಭಗವದ್ರೂಪಗಳಿಂದ ಭಗವದ್ರೂಪಗಳಿಗೆ ಪೂಜಾತ್ವೇನ ಅರ್ಪಿಸಿದರೆ ಇದೇನೇ ಪೂಜಾ. ಈ ಪ್ರಕಾರ ಪೂಜಾವನ್ನು ಅನ್ವಯಮಾಡಬೇಕು. ನಿರಾಕರಣಮಾಡದೆ ಅಂತಃಕರಣದಿಂದ ಸ್ವೀಕಾರ ಮಾಡೋವನಾಗತಾನೆ. ಇದರಿಂದ ದಯಾಳುವಾದ ಪರಮಾತ್ಮ, ಭಕ್ತರಿಗೆ ಪ್ರಾಪ್ತವಾಗತಕ್ಕ ಅಹಂಮಮತಾದಿಗಳಿಂದ ಜನಿತವಾದ ದುಃಖಗಳ ಪರಿಹಾರ ಮಾಡುತ್ತಾ, ತನ್ನ ಜ್ಞಾನಾನಂದಾದಿಗಳಿಂದ ಆಗತಕ್ಕ ಸುಖವನ್ನು ಕೊಟ್ಟು ಅನವರತ ಭೋಗಿಸಬೇಕಾದ ಸ್ವರೂಪಸುಖ ಲಿಂಗಭಂಗಾನಂತರ ವ್ಯಕ್ತ ಮಾಡಿಕೊಟ್ಟು ರಕ್ಷಿಸುತ್ತಾನೆ.

ಜೀವಾಕಾರಬಿಂಬನಲ್ಲಿ ಪೂರ್ವೋಕ್ತಪ್ರಕಾರ ಸ್ವರೂಪಗಳು ಇರೋದಾಗಿ ಅವೆ. ಇದರಲ್ಲಿ ವರ್ತಮಾನದಲ್ಲಿ ದಾವರೂಪವನ್ನು ಉಪಾಸ್ಯಮೂರ್ತಿಯನ್ನಾಗಿ ಮಾಡಿಕೊತಾನೋ, ಆ ಆಕಾರದಿಂದ ಸಹಿತವಾದ ಮೂರ್ತಿ ಕೂಡಾ ಬಿಂಬನಲ್ಲಿ ಇರೋಣದರಿಂದ ವರ್ತಮಾನಮೂರ್ತಿ ಕೂಡಾ ಬಿಂಬಮೂರ್ತಿ ಎಂತಲೇ ಕರಿಸೋದಾಗದತದೆ. ಇಂಥಾ ಮೂರ್ತಿಯನ್ನೇ ಬಿಂಬಮೂರ್ತಿಯನ್ನಾಗಿ ಭಾವನ ಮಾಡಿ, ಹೃದಯಾಕಾಶದಲ್ಲಿ ತಿಳಿದು, ಪೂಜಿಸುತ್ತ ಬಾಹ್ಯ ಉಪಾಸ್ಯ ಪ್ರತೀಕದಲ್ಲಿ ಆವಾಹನ ಮಾಡೋವನಾಗಬೇಕು. ||೨೫||

(೨) ಭಾವಪ್ರಕಾಶಿಕೆ :–

ಮೇಲಿನ ಪದ್ಯದಲ್ಲಿ ಹೇಳಿದಂತೆ, ಸ್ಥಳ, ಜಲ ಪರ್ವತಗಳಲ್ಲಿ ಹುಟ್ಟಿದ ಫಲಪುಷ್ಪಾದಿಗಳಲ್ಲಿಯೂ ಸಹ ಭಗವಂತನೇ ತದ್ರೂಪ ತದಾಕಾರನಾಗಿರುವನೆಂದು ಭಾವಿಸಿ, ನಮ್ಮ ಬಿಂಬಮೂರ್ತಿಯಾದ ಶ್ರೀ ಪರಮಾತ್ಮನಿಗೂ, ತುಳಸ್ಯಾದಿಗಳಲ್ಲಿಯೂ, ಶ್ವಾನ ಚಂಡಾಲಾದಿಗಳಲ್ಲಿಯೂ ಇರುವ ಭಗವಂತನ ಆನಂದಾದಿ ರೂಪಗಳಲ್ಲಾಗಲೀ

ಕಾರ್ಯಗಳ ಮಾಡುವ ಶಕ್ತಿಯಾಲ್ಲಾಗಲೀ ಸ್ವಲ್ಪವಾದರೂ ವ್ಯತ್ಯಾಸವನ್ನು ಎಣಿಸದೆ, ಬಿಂಬರೂಪಿಯೇ ಪ್ರತಿಮಾದಿಗಳಲ್ಲೂ, ಸರ್ವತ್ರದಲ್ಲಿಯೂ ಇರುವನು. ತುಳಸ್ಯಾದಿಗಳಲ್ಲಿರುವ ಭಗವಂತನನ್ನು ಬಿಂಬರೂಪಿಯಾದ ಶ್ರೀ ಪರಮಾತ್ಮನಲ್ಲಿ ಸಮರ್ಪಿಸುವೆನು ಎಂದು ಅರ್ಪಿಸಬೇಕು. ಪೂಜಾದ್ರವ್ಯರೂಪವಾದ ಭಗವಂತನನ್ನು ಬಿಂಬನಲ್ಲಿ ಅನ್ವಯಿಸುವದೇ **ಅನ್ವಯಪೂಜೆ** ಎಂದೂ, ಇದಕ್ಕೆ ವಿರುದ್ಧವಾಗಿ, ತುಳಸ್ಯಾದಿಗಳಲ್ಲಿಯೂ ಭೋಗ್ಯಪದಾರ್ಥಗಳಲ್ಲಿಯೂ ಭಗವಂತನನ್ನು ತಿಳಿದಿದ್ದರೂ, ಆ ವಸ್ತುಗಳನ್ನು ಬೇರೆಬೇರೆಯಾಗಿ ಚಿಂತಿಸಿ, ಸಾಲಿಗ್ರಾಮ ಪ್ರತಿಮಾದಿಗಳಲ್ಲಿ ಭಗವತ್ಪ್ರೀತಿಗೋಸ್ಕರ ಸಮರ್ಪಿಸುವುದು – **ವ್ಯತಿರೇಕ ಪೂಜೆ** ಎಂತಲೂ ತಿಳಿಯಬೇಕು. ಅನ್ವಯಪೂಜೆಯಲ್ಲಿ ಸರ್ವತ್ರವ್ಯಾಪ್ತನಾಗಿರುವ ಭಗವದ್ರೂಪಗಳ ಗುಣ ರೂಪ ಕ್ರಿಯಾದಿಗಳಲ್ಲಿ ವ್ಯತ್ಯಾಸವನ್ನು ಚಿಂತಿಸಬಾರದೆಂದರೇನು – ಪದಾರ್ಥಗಳೆಲ್ಲವೂ ಒಂದೇ ಎಂದು ಅರ್ಥವಲ್ಲ. ಇವುಗಳಲ್ಲಿರುವ ಭಗವಂತನ ಗುಣ ಕ್ರಿಯೆಗಳಿಗೆ ಭೇದವಿಲ್ಲ. ಹೇಗೆಂದರೆ, **ಭಾಗವತ ಶ್ರುತಿಗೀತೆಯಲ್ಲಿ** – "ನ ಹಿ ವಿಕೃತಂತ್ಯಜಂತಿತನಕಸ್ಯ ತದಾತ್ಮಯಾ " – ಅಂದರೆ, ಉತ್ತಮನಾದ ಚಿನ್ನದಿಂದ ಒಡವೆಗಳು ಮಾಡಿಸಿದರೆ, ಆ ಒಡವೆಗಳ ಆಕಾರಭೇದದಿಂದ ಹೆಸರುಗಳಲ್ಲಿ ಮಾತ್ರ ಭೇದವಾಗುವುದೇ ಹೊರತು, ಚಿನ್ನದಲ್ಲಿ ವ್ಯತ್ಯಾಸವಿರುವುದಿಲ್ಲ. ಬಣ್ಣ, ಗುಣ, ಕ್ರಿಯಾ – ಇವುಗಳಲ್ಲಿ ಹೇಗೆ ಭೇದವಾಗದೋ ಹಾಗೆಯೇ, ರಾಮಕೃಷ್ಣಾದಿರೂಪಗಳಿಗೂ, ಪಶು ಪಕ್ಷಿ ವೃಕ್ಷಾದಿಗಳಿಗೂ ಪರಸ್ಪರ ಭೇದ ಕಾಣುವುದರಿಂದಲೂ, ಆಯಾ ಹೆಸರು ಆಯಾ ರೂಪಗಳಿಂದ ಪರಮಾತ್ಮನಿದ್ದರೂ, ಭಗವತ್ಸರೂಪ ಗುಣಕ್ರಿಯಾದಿಗಳಲ್ಲಿ ಕಿಂಚಿತ್ತಾದರೂ ಬೇಧ ಚಿಂತಿಸಬಾರದು. ಈ ಪ್ರಕಾರ ಭಗವಂತನನ್ನು ಏಕಭಾವದಿಂದ ಪೂಜಿಸಿದರೆ, ಆ ಪೂಜೆಯನ್ನು ನಿರಾಕರಿಸದೆ, ಕೃಪಾಳುವಾದ ಸ್ವಾಮಿಯು ಕರುಣದಿಂದ ಅದನ್ನು ಸ್ವೀಕರಿಸಿ, ಭಕ್ತರ ಶೋಕಗಳನ್ನು ಪರಿಹರಿಸಿ, ಮುಕ್ತಿಸುಖವನ್ನಿತ್ತು ರಕ್ಷಿಸುನು. ||೨೫||

(೩) ಭಾವದರ್ಪಣಟೀಕಾ :—

ಮೇಲೆ ಹೇಳಿದಂತೆ ಶ್ರೀ ತುಲಸ್ಯಾದಿಗಳಲ್ಲಿ ಇದ್ದ ಭಗವದ್ರೂಪಕ್ಕೂ ಸ್ವಬಿಂಬದ ಗುಣರೂಪಕ್ರಿಯಾದಿಗಳಿಗೂ ಏಕೀಭಾವ ತಿಳಿಯೋಣವೇ **ಅನ್ವಯಪೂಜೆ** ಎಂದು ಹೇಳುತ್ತಾರೆ — **ಶ್ರೀಕರೇತಿ.** ||೨೫||

(೪) ಶ್ರೀ ವ್ಯಾಸಸಿದ್ಧಾಂತ ಕೌಮುದೀ (ಸಂಸ್ಕೃತಮೂಲ) :—

ಸಮನ್ವಯ ಪೂಜಾಂ ವಕ್ತಿ — "ಶ್ರೀಕರ" ಇತಿ " ಓಂ ಪೌರಾನೋನಕ್ಷನ್ ಧೀತಿಭಿಃ|| ವಕ್ಷಂತ ಇಂದ್ರಮವಸೇ ಸುಕೃತ್ಯಯಾ ಯೇಷಾಂ ಸುತೇಷು ಮಂದಸೇ ಯಥಾ ಸಂವರ್ತೇ ಆಮದಃ ಓಂ " ಶ್ರಯತೇ ಇತಿ ಶ್ರೀಯಾ ಸುಕೃತ್ಯಾ ಜ್ಞಾನಂ ಕರೋತಿ ಇತಿ ತಥೋಕ್ತಃ || "ಶುನಿಜ್ಜೈವ" ಇತ್ಯುಕ್ತೇಃ || "ಬ್ರಹ್ಮಾದಿ ಸ್ಥಾವರಾಂತೇಷು ನ ವಿಶೇಷಃ ಹರೇಃ ಇತಿ" ಚ || ||೨೫||

ಕನ್ನಡಾರ್ಥ :—

ಸಮನ್ವಯಪೂಜಾವಿಧಾನವನ್ನು ತಿಳಿಸುತ್ತಾರೆ — **ಶ್ರೀಕರನ** — ಎಂಬ ಪದ್ಯದಿಂದ. "**ಶ್ರೀಕರ** " ಇದು **ವಿಷ್ಣುಸಹಸ್ರನಾಮಾಂತರ್ಗತವಾದುದು.** "ಸತ್ಕರ್ಮಗಳ ದ್ವಾರಾ ಜ್ಞಾನವನ್ನು ಕೊಡುವವನು " — ಎಂದು **ಬೃಹತೀ ಮಂತಾರ್ಥವು.** 'ಶ್ವಾನ ಶ್ವಪಚ ಪಂಡಿತ" ಇತ್ಯಾದಿಗಳಲ್ಲಿ ಭೇದರಹಿತನಾದ ಪರಮಾತ್ಮನ "ಸಮ"ವೆಂಬ ರೂಪವನ್ನು ಸಂದರ್ಶಿಸುವವನೇ ಪಂಡಿತನು". "ಬ್ರಹ್ಮಾದಿ ಸ್ಥಾವರಪ್ರಾಣಿ ಪರ್ಯಂತ ಸಮಸ್ತ ವಸ್ತುಗತ ಪರಮಾತ್ಮನ ರೂಪಗಳಿಗೆ ಪರಸ್ಪರ ಭೇದವಿರುವುದಿಲ್ಲ" — ಇತ್ಯಾದಿ ವಚನಗಳಿರುವುದರಿಂದ — "ಗುಣರೂಪಕ್ರಿಯ **ವ್ಯತಿರೇಕ** ತಿಳಿಯದಲೆ" ಎಂದು ದಾಸವರ್ಯರು ನಿರೂಪಿಸುತ್ತಾರೆ. ||೨೫||

## ೫ ಶ್ರೀ ಗುರು ಹೃದಯಪ್ರಕಾಶಿಕೆ ವ್ಯಾಖ್ಯಾನ : –

ಅನ್ವಯಪೂಜೆಯನ್ನು ನಿರೂಪಿಸುತ್ತಾರೆ, ಎರಡು ಪದ್ಯದಿಂದ. ಸಂಪತ್ಕರನಾದ ದೇವರನ್ನು ಸರ್ವತ್ರ ಇದ್ದಾನೆಂದು ತಿಳಿದು, ದೇವರ ಜ್ಞಾನಾನಂದಾದಿಗುಣಗಳಿಗೂ, ಮತ್ಸ್ಯಾದಿನಾನಾರೂಪಕ್ರಿಯೆಗಳಿಗೂ ಸಹ **ವ್ಯತಿರೇಕವೆಂಬ** ಭೇದ ತಿಳಿಯದೆ, ತನ್ನಂತರ್ಯಾಮಿ ಬಿಂಬನಲ್ಲಿ ಅವುಗಳಿಗೆಲ್ಲಾ ಅನ್ವಯಿಸು ಎಂದರೆ, ತನ್ನಂತ ರ್ಯಾಮಿಯೇ ಸರ್ವಾಂತರ್ಯಾಮಿ, ಸರ್ವಾವತಾರ ಕ್ರಿಯಾ ರೂಪಗಳಿಂದ ಅಭಿನ್ನ, ಸರ್ವಾಂತರ್ಯಾಮಿ, ಅವತಾರಾದಿ ರೂಪನೇ ನನ್ನಂತರ್ಯಾಮಿ ಎಂದು ಮರೆಯದೆ ಐಕತ್ವೇನ ಭಾವಿಸು. ಕೃಪಾಳುವಾದ ದೇವರು ನಿರಾಕರಿಸದೆ, ಅಂದರೆ ದೂರಮಾಡಿ ಬಿಡದೆ, ಕರುಣದಿಂದ ಈ ಅನ್ವಯಪೂಜೆಯನ್ನು ಸ್ವೀಕರಿಸಿ, ಭಕ್ತರ ಜನ್ಮಾದಿಕ್ಲೇಶ ಪರಿಹರಿಸಿ ನಿತ್ಯಸುಖವನ್ನು ಕೊಟ್ಟು ಸದಾ ರಕ್ಷಿಸುವನು – ಎಂದರ್ಥ ||೨೫||

## ಸರ್ವವ್ಯಾಖ್ಯಾನಸಾರಸಂಗ್ರಹ

ಸರ್ವಾಧಿಷ್ಠಾನಗತ ಭಗವದ್ರೂಪಗಳನ್ನು ಸ್ವಬಿಂಬನಲ್ಲಿ ಐಕ್ಯಚಿಂತನಾರೂಪವಾದ ಅನ್ವಯಪೂಜಾಕ್ರಮವನ್ನು ತಿಳಿಸುತ್ತಾರೆ – **ಶ್ರೀಕರನ** – ಎಂಬ ಪ್ರಸಕ್ತ ೨೫ನೆಯ ಪದ್ಯದಿಂದ.

೧ ಜೀವನದಲ್ಲಿ ಅಡಿಗಡಿಗೆ ಬಂದೊದಗುವ ಸಮಸ್ತದುರಿತಗಳನ್ನು ಪರಿಹರಿಸಿ, ವಿಘ್ನಪರಂಪರೆಗಳನ್ನು ದೂರಗೈಸಿ, ಶುಭವನ್ನು ಕೊಡುವುದರಿಂದ, ಕೃಪಾಳುವಾದ ಆ ಪರಮಾತ್ಮನಿಗೆ ಶ್ರೀಕರನೆಂದು ನಾಮ. ಶ್ರೀ – ಎಂದರೆ ಶುಭ ಅಥವಾ ಮಂಗಳವೆಂದರ್ಥ. ಅದನ್ನು ತನ್ನ ಭಜಕರಿಗೆ ಹೊಂದಿಸುವವನಾದ್ದರಿಂದ, ಶ್ರೀಕರನು. ಅಲ್ಲದೇ, ಭಗವತ್ಪ್ರಸಾದಪ್ರಾಪ್ತಿಗೆ ಸಾಧನ ಪರಿಕರಗಳಾದ ಜ್ಞಾನ, ಭಕ್ತಿ, ವೈರಾಗ್ಯಗಳೆಂಬ ದೈವೀಸಂಪತ್ತನ್ನು ಭಕ್ತವೃಂದಕ್ಕೆ ಕರುಣಿಸುವವನಾದ್ದರಿಂದ, ಶ್ರೀಕರನು.

೨. ಸಂಪತ್ಕರನಾದ ಆ ಶ್ರೀಕರನು ಚರಾಚರಾತ್ಮಕವಾದ ಈ ಜಗತ್ತಿನಲ್ಲಿ ಸರ್ವತ್ರವ್ಯಾಪ್ತನಾಗಿ ಹಬ್ಬಿ ಹರಡಿದ್ದಾನೆ. ಅವನಿಲ್ಲದ ಸ್ಥಳವಿಲ್ಲ. ಈ ಸಮಸ್ತ ಜಗತ್ತು ಈಶಾವಾಸ್ಯವು. ಸಮಸ್ತ ಜಡವಸ್ತುಗಳಲ್ಲಿ, ಅಣುರೇಣು ತೃಣಕಾಧಿಷ್ಠಾದಿಗಳಲ್ಲಿ ಪರಿಪೂರ್ಣವಾಗಿ ವ್ಯಾಪ್ತರೂಪಗಳಿಂದ ವಿದ್ಯಮಾನನಾಗಿದ್ದಾನೆ. ಸರ್ವಚೇತನರಲ್ಲಿ ಅಂತರ್ಯಾಮಿಯಾಗಿ ಬಿಂಬರೂಪಿಯಾಗಿದ್ದಾನೆ. ಸರ್ವ ವಸ್ತುಗಳಲ್ಲಿ, ಸರ್ವಕಾಲದಲ್ಲಿ, ಸರ್ವದೇಶಗಳಲ್ಲಿ, ಸರ್ವಾವಸ್ಥೆಗಳಲ್ಲಿ, ತತ್ತದಾಕಾರ, ತದ್ರೂಪ, ತನ್ನಾಮಕ, ತತ್ತಚ್ಛಬ್ದ ವಾಚ್ಯನಾಗಿ ಇದ್ದಾನೆ. ಸರ್ವಾಧಿಷ್ಠಾನಗತನಾದ ಆ ಸರ್ವೇಶನು ಲೋಕವಿಲಕ್ಷಣನು. ಸಮಸ್ತ ಜಡ–ಜೀವಗಳಿಂದ ಅತ್ಯಂತ ಭಿನ್ನವಾಗಿದ್ದಾನೆ.

೩. ಚರಾಚರಾತ್ಮಕವಾದ ಸಕಲಾಧಿಷ್ಠಾನಗಳಲ್ಲಿ ಆ ಶ್ರೀಕರನ ವ್ಯಾಪ್ತರೂಪಗಳನ್ನು ಮನಸಾ ಚಿಂತಿಸುತ್ತಾ, ಆ ಭಗವನ್ಮೂರ್ತಿಗಳನ್ನು ಮನೋನೇತ್ರಗಳಿಂದ ಈಕ್ಷಿಸುತ್ತಾ, ನಿರಂತರದಲ್ಲಿ ಅವನ ಸ್ಮರಣೆಯಲ್ಲಿ ಆಸಕ್ತನಾಗಿರಬೇಕು (ಶ್ರೀಕರನ ಸರ್ವತ್ರದಲಿ ಅವಲೋಕಿಸುತ)

೪. ಅನಂತಕಲ್ಯಾಣಗುಣಗಣಪರಿಪೂರ್ಣನೂ, ಸಮಸ್ತದೋಷರಹಿತನೂ, ಆದ ಸರ್ವೋತ್ತಮನ ಅನಂತಾನಂತ ಗುಣಗಳಿಗೂ, ರೂಪಗಳಿಗೂ, ಕ್ರಿಯಾವಿಶೇಷಗಳಿಗೂ ಪರಸ್ಪರ ಭೇದವಿಲ್ಲ. ಒಂದು ರೂಪದಲ್ಲಿ ಅನಂತಾನಂತ ರೂಪಗಳು. ಒಂದು ಗುಣದಲ್ಲಿ ಅನಂತಾನಂತಗುಣರಾಶಿಗಳು. ಅಪ್ರಾಕೃತ ಜ್ಞಾನಾನಂದಾತ್ಮಕವಾಗಿ ತನ್ನ ಸ್ವರೂಪದಿಂದ ಒಂದೇ ಒಂದು ಅಂಗದಿಂದ ಇತರ ಎಲ್ಲಾ ಅಂಗಗಳ ಕ್ರಿಯೆಗಳನ್ನು ಮಾಡುವ ಅಮಿತಸಾಮರ್ಥ್ಯವುಳ್ಳವನು. ಇದರಿಂದ ಶ್ರೀಹರಿಯು ಸ್ವಗತಭೇದವಿವರ್ಜಿತನು. ಚರಾಚರಾತ್ಮಕವಾದ ಈ ಜಗತ್ತಿನಲ್ಲಿ ವಿದ್ಯಮಾನವಾಗಿರುವ ಸಕಲಅಧಿಷ್ಠಾನಗತಭಗವದ್ರೂಪಗಳಿಗೂ ಮತ್ತು ಸ್ವಬಿಂಬಮೂರ್ತಿರೂಪವೂ ಒಂದೇ

ಎಂದು ಸ್ವಬಿಂಬದಲ್ಲಿ ಐಕ್ಯಚಿಂತನೆ ಮಾಡುವ ಕ್ರಮವೇ **ಅನ್ವಯಪೂಜೆ ಎಂದೆನಿಸುವುದು.**

೫. ಇಂತಹ ಉತ್ತಮಾನುಸಂಧಾನರೂಪವಾದ ಅನ್ವಯಪೂಜಾವಿಧಾನವನ್ನು ಕರುಣಾಸಾಗರನಾದ ಕಮಲದಳಾಯತಾಕ್ಷನು ದಯೆಯಿಂದ ಸ್ವೀಕರಿಸುವನು. ಕೃಪಾಳುವಾದ ಶ್ರೀ ಹರಿಯು ಭಕ್ತರು ಮಾಡುವ ಪೂಜೆಯನ್ನು ಎಂದೆಂದಿಗೂ ನಿರಾಕರಿಸುವುದಿಲ್ಲ. ಭವಜನ್ಯವಾದ ಸಕಲಕ್ಲೇಶಗಳನ್ನು ನಿವಾರಣೆಮಾಡಿ, ಇಹದಲ್ಲಿ ಸಕಲಭೋಗ್ಯಭಾಗ್ಯರೂಪವಾದ ಸುಖವಿತ್ತು, ಪರದಲ್ಲಿ ಭವಬಂಧನಕ್ಕೆ ಕಾರಣವಾದ ಅನಾದಿಕರ್ಮಗಳನ್ನು ವಿಮೋಚನೆ ಮಾಡಿ, ಸ್ವರೂಪಾನಂದಾವಿರ್ಭಾವ ರೂಪವಾದ ನಿತ್ಯಮುಕ್ತಿಸುಖವನ್ನು ದಯಪಾಲಿಸಿ, ನಿರಂತರದಲ್ಲಿ (ಇಹಪರಗಳಲ್ಲಿ) ಅವರನ್ನು ಸಂರಕ್ಷಿಸುವನು – ಎಂದು ಪ್ರಸಕ್ತಪದ್ಯದ ತಾತ್ಪರ್ಯಾರ್ಥವು. ||೨೫||

## ಪದ್ಯ ೨೬

**ಮೂಲ :–**

ಇನಿತು ವ್ಯತಿರೇಕಾನ್ವಯಗಳೆಂ ।
ದೆನಿಪ ಪೂಜಾವಿಧಾನಗಳನೆ ತಿಳಿ ।
ದನಿಮಿಷೇಶನ ತೃಪ್ತಿ ಬಡಿಸುತಲಿರು ನಿರಂತರದಿ ॥
ಘನಮಹಿಮ ಕೈಕೊಂಡು ಸ್ಥಿತಿಮೃತಿ ।
ಜನುಮಗಳ ಪರಿಹರಿಸಿ ಸೇವಕ ।
ಜನರೊಳಿಟ್ಟಾನಂದಬಡಿಸುವ ಭಕ್ತವತ್ಸಲನು ॥ ॥೨೬॥

**ಅವತರಣಿಕೆ :–**

ಪೂರ್ವೋಕ್ತ **ವ್ಯತಿರೇಕ ಮತ್ತು ಅನ್ವಯಗಳೆಂಬ** ಪೂಜಾವಿಧಾನಗಳನ್ನು ಗುರುಮುಖೇನ ತಿಳಿದು, ರಮಾಬ್ರಹ್ಮಾದಿಸಮಸ್ತ ದೇವತಾವರ್ಗಕ್ಕೆ ಪ್ರಭುವಾದ ಆ ಪರಾತ್ಪರನನ್ನು ಭಕ್ತಿಭಾವದಿಂದ ಭಜಿಸುತ್ತಿರಬೇಕೆಂದು ತಿಳಿಸುತ್ತಾರೆ – **ಇನಿತು ವ್ಯತಿರೇಕಾನ್ವಯಗಳೆಂದಿಪ** –ಎಂಬ ಪ್ರಸಕ್ತ ಸಂಧಿಗತ ೨೬ನೆಯ ಈ ಪದ್ಯದಿಂದ. ॥೨೬॥

**ಪ್ರತಿಪದಾರ್ಥ :–**

ಇನಿತು = ಪೂರ್ವೋಕ್ತ ಪ್ರಕಾರದಲ್ಲಿ, **ವ್ಯತಿರೇಕ** = ವ್ಯತಿರೇಕ ಎಂಬ, **ಅನ್ವಯ** = ಅನ್ವಯ ಎಂಬ, ಗಳೆಂದೆನಿಪ = ಎರಡು ಪ್ರಕಾರವಾದ, **ಪೂಜಾವಿಧಾನಗಳನೆ** = ಪೂಜಾಕ್ರಮಗಳನ್ನು, ತಿಳಿದು = ಗುರುಮುಖೇನ ಹಾಗೂ ಶಾಸ್ತ್ರದ್ವಾರಾ ಅರಿತು, ಅನಿಮಿಷೇಶನ = ರಮಾಬ್ರಹ್ಮಾದಿದೇವತಾವೃಂದಕ್ಕೆ ನಿಯಾಮಕನಾದ ಶ್ರೀಪರಮಾತ್ಮನನ್ನು, ತೃಪ್ತಿಬಡಿಸುತಲಿರು = ನಾನಾ ಅಧಿಷ್ಠಾನಗತ ಭಗವದ್ರೂಪಗಳಿಗೂ ಸ್ವಬಿಂಬಮೂರ್ತಿಗೂ ಐಕ್ಯಚಿಂತನಾಕ್ರಮದಿಂದ, ಪ್ರೀತಿಪಡಿಸುತ್ತಿರು.

ನಿರಂತರದಿ = ಸರ್ವಕಾಲಗಳಲ್ಲಿ, ಘನಮಹಿಮ = ಅಸದೃಶಮಹಿಮಾಸಂಪನ್ನನಾದ ಶ್ರೀಪರಮಾತ್ಮನು, ಕೈಕೊಂಡು = ಅಂಥಾ ಪೂಜೆಗಳನ್ನು ಪ್ರೀತಿಯಿಂದ ಸ್ವೀಕರಿಸಿ, ಸ್ಥಿತಿ = ಸಂಸಾರದಲ್ಲಿ ಇರೋಣ, ಅಂದರೆ ಲಿಂಗದೇಹಸಹಿತನಾಗಿ ಸೃಷ್ಟಿ ದಶೆಯಲ್ಲಿ ಇರುವಿಕೆ, ಮೃತಿ = ಮರಣರೂಪನಾದ ಸ್ಥೂಲಶರೀರತ್ಯಾಗ, ಜನುಮಗಳ = ಸ್ಥೂಲದೇಹಗಳಿಂದ ಮತ್ತೆ ಮತ್ತೆ ನಾನಾ ಯೋನಿಗಳಲ್ಲಿ ಜನಿಸೋಣ, ಪರಿಹರಿಸಿ = ಇತ್ಯಾದಿ ಸಕಲಕ್ಲೇಶಗಳನ್ನು ನಿವಾರಿಸಿ, ಸೇವಕಜನರೊಳಿಟ್ಟು = ಲಿಂಗಭಂಗ ಹೊಂದಿ, ಮುಕ್ತರಾದ ತನ್ನ ಭಕ್ತವೃಂದದಲ್ಲಿ, ಲಿಂಗಭಂಗವನ್ನೈದಿಸಿ, ನಿತ್ಯಾನಂದರೂಪವಾದ ಮುಕ್ತಿಸುಖವನ್ನು ಕರುಣಿಸಿ, *ಭಕ್ತವತ್ಸಲನು = ಭಕ್ತಜನರಲ್ಲಿ ವಿಶೇಷವಾದ ಕಾರುಣ್ಯವುಳ್ಳ ಶ್ರೀಹರಿಯು. ಆನಂದಬಡಿಸುವನು = ಸುಖಪ್ರದನಾಗುತ್ತಾನೆ ||೨೬||

## ವ್ಯಾಖ್ಯಾನಗಳು

(೧) ಶ್ರೀ ಸಂಕರ್ಷಣಒಡೆಯರ ವ್ಯಾಖ್ಯಾನ : –

**ವ್ಯತಿರೇಕಪೂಜಾದ** ಮಹಾತ್ಮೆ ಹೇಳುತಾರೆ

ಈ ಪೂರ್ವೋಕ್ತಪ್ರಕಾರದಲ್ಲಿ ಬಾಹ್ಯಪೂಜಾಕ್ಕೆ ವ್ಯತಿರೇಕವಾಗಿ ಅನ್ವಯಿಸತಕ್ಕ ಪೂಜಾಕ್ರಮಗಳೆನಿಸತಕ್ಕ ನ್ಯಾಯವಾದ ಪೂಜಾವಿಧಿಗಳನ್ನು, ಗುರುಮುಖದಿಂದ ಸಂಪ್ರದಾಯಗಳ ತಿಳಿದು, ದೇವತೆಗಳಾದ ರಮಾಬ್ರಹ್ಮಾದಿಗಳಿಗೆ ಈಶನಾದ ಸರ್ವತ್ರವ್ಯಾಪ್ತನಾದ ದೇಹಗತಬಿಂಬನಾದ ಪರಮಾತ್ಮನ, ಪರಸ್ಪರ ಅವನ ರೂಪಗಳಿಂದ ಅವನ ರೂಪಗಳಿಗೆ ಪೂಜಾತ್ವೇನ ಅರ್ಪಿಸಿ, ಅವನ ರೂಪಗಳಿಂದ ಅವನಿಗೆ ತೃಪ್ತಿ ಬಡಿಸುತ ಇರೋವನಾಗು. ಇಂಥಾ ಪೂಜಾವನ್ನು ಸರ್ವಕಾಲದಲ್ಲೂ ಅಸದೃಶಮಹಿಮನಾದ ಬಿಂಬರೂಪಿ ಪರಮಾತ್ಮ ಸ್ವೀಕಾರ ಮಾಡಿ, ತೆಗೆದುಕೊಂಡು, ಲಿಂಗದೇಹದಿಂದ ಇರೋಣ, ಸ್ಥೂಲದೇಹತ್ಯಾಗ ಮತ್ತು ಸ್ಥೂಲದೇಹದಿಂದ ಜನನ

ಇವುಗಳ ಪರಿಹಾರ ಮಾಡಿ, ಭಕ್ತರಲ್ಲಿ ಕೇವಲ ಪ್ರೀತಿವಿಷಯನಾದ ಪರಮಾತ್ಮನು, ಲಿಂಗಭಂಗರಾದ ಮುಕ್ತರಾದ ತನ್ನ ಸೇವಾ ಮಾಡತಕ್ಕ ಜನರೊಳಗೆ ಲಿಂಗಭಂಗ ಐದಿಸಿ, ಇಟ್ಟಂಥಾವನಾಗಿ ಸ್ವರೂಪಾನಂದದಿಂದ ಸುಖಬಡಿಸೋವನಾಗನಾತನೆ – ಎಂತ ತಾತ್ಪರ್ಯ.

ತಾತ್ಪರ್ಯ – ಜಡಪದಾರ್ಥಗಳಿಂದ ಜಡಪ್ರತಿಮಾವನ್ನು ಪೂಜಾಮಾಡೋಕಾಲಕ್ಕೆ, ಆ ಪ್ರತಿಮಾನೇ ದೇವರು ಎಂತಲೂ, ಜಡಪದಾರ್ಥಗಳು ಪೂಜಾನಿವೇದನ ಸಾಧನಗಳೆಂತಲೂ ತಿಳಿಯದೇ, ಅಂತರ್ಗತ ವಿವಕ್ಷಯಾ **ವ್ಯತಿರೇಕ** ಅನುಸಂಧಾನದಿಂದ ಪೂಜಾ ಮಾಡೋ ಭಕ್ತರಿಗೆ, ತನ್ನ ಪಾದಾರವಿಂದಗತಿ ಕೊಡತಾನೆ. ಅನ್ಯರಿಗೆ ಇಲ್ಲ ಎಂತ ತಾತ್ಪರ್ಯ. ಬರೀ ಅನುಸಂಧಾನ ಮಾಡಿದ್ದರಿಂದಲೇ ದೋಷದೂರನಾಗಲಾರ. ಈಷಣತ್ರಯಗಳ ಅರಿಷಡ್ವರ್ಗಗಳ ಅಹಂಮಮತಾದಿಗಳ ವಿಸರ್ಜನೆ ಮಾಡಿ ವೈರಾಗ್ಯಬುದ್ಧಿಯುಕ್ತರಾಗಿ **'ತ್ವಮೇವ ಶರಣಂ ಮಮ '** ಎಂಬ ಅನುಭವಜ್ಞಾನದಿಂದ ಯುಕ್ತನಾಗಿ ಇಂಥಾ ಅನುಸಂಧಾನ ಮಾಡಿ, ದ್ವಂದ್ವಕರ್ಮಗಳ ಅರ್ಪಿಸಿದರೆ ಪೂರ್ವೋಕ್ತ ಅನುಗ್ರಹವಾಗತದೆ – ಎಂತ ತಾತ್ಪರ್ಯ. ||೨೬||

೨. ಭಾವಪ್ರಕಾಶಿಕೆ : –

ಮೇಲಿನ ನಾಲ್ಕುಪದ್ಯಗಳಲ್ಲಿ ವಿವರಿಸಿದಂತೆ, **ಅನ್ವಯವ್ಯತಿರೇಕಪೂಜೆಗಳನ್ನು** ತಿಳಿದು, ದೇವೋತ್ತಮನಾದ ಶ್ರೀ ಪರಮಾತ್ಮನನ್ನು ಚಿಂತಿಸಿ, ಆತನು ಮೆಚ್ಚುವಂತೆ ಮಾಡಿದರೆ, ಪರಮಾತ್ಮನು ಭಕ್ತವತ್ಸಲನಾದುದರಿಂದ, ಜನನಮರಣರೂಪನಾದ ಸಂಸಾರಬಂಧನವನ್ನು ಬಿಡಿಸಿ, ಮುಕ್ತಿಯನ್ನು ಕೊಟ್ಟು ಆ ಮುಕ್ತಿಸ್ಥಾನದಲ್ಲಿ ಮುಕ್ತರಾದ ಬ್ರಹ್ಮಾದಿಗಳ ಮಧ್ಯೆ ನಮ್ಮನ್ನು ಇಟ್ಟು ಸುಖಪಡಿಸುವನು. ||೨೬||

೩. ಭಾವದರ್ಪಣಟೀಕಾ : –

ಈ ರೀತಿ ವ್ಯತಿರೇಕಾನ್ವಯಪೂಜಾಪದ್ಧತಿಗಳ ತಿಳಿದವನೇ ಮುಕ್ತನಾಗುವನೆಂತ ತಿಳಿಸಿಕೊಡುತ್ತಾರೆ. – ಇನಿತು – ಇತಿ || ||೨೬||

೩ ಶ್ರೀವ್ಯಾಸದಾಸಸಿದ್ಧಾಂತ ಕೌಮುದೀ :—

"ಇನಿತು " – ಇತಿ || ವ್ಯತಿರೇಕಅನ್ವಯಪೂಜೆಗಳಿಗೆ ಫಲವನ್ನು ಹೇಳಿ ಉಪಸಂಹರಿಸುತ್ತಾರೆ. "ಇನಿತು" – ಎಂಬ ಪದ್ಯದಿಂದ. ||೨೬||

೪. ಶ್ರೀಗುರುಹೃದಯಪ್ರಕಾಶಿಕೆ ವ್ಯಾಖ್ಯಾನ : –

ಹೀಗೆ ಮೇಲೆ ಹೇಳಿದ **ವ್ಯತಿರೇಕವೆಂತಲೂ, ಅನ್ವಯವೆಂತಲೂ** ಎರಡು ಬಗೆಯಾದ ಪೂಜೆಗಳ ರೀತಿಯನ್ನು ತಿಳಿದು, ಅನಿಮಿಶೇಷನೆಂಬ ಸರ್ವದಾ ಸ್ವಾಮಿಯನ್ನು ಸಂಪ್ರೀತಿಬಡಿಸುತ್ತಿರುವವರ ಪೂಜೆಗಳನ್ನು ಘನಮಹಿಮನಾದ ದೇವರು ಅಂಗೀಕರಿಸಿ ಸ್ಥಿತಿ, ಮೃತಿ, ಜನ್ಮ ಮೊದಲಾದ ಬಂಧಗಳ ಪರಿಹರಿಸಿ, ತನ್ನ ನಿತ್ಯ ಸೇವಕರೊಳಗೆ ಸೇರಿಸಿ, ಆನಂದಕೊಡುವನು ಭಕ್ತವತ್ಸಲನು. ||೨೬||

## ಸರ್ವವ್ಯಾಖ್ಯಾನಸಾರಸಂಗ್ರಹ

೧ ಹಿಂದಿನ ಪದ್ಯಗಳಲ್ಲಿ ವ್ಯತಿರೇಕ ಪೂಜೆ ಮತ್ತು ಅನ್ವಯಪೂಜೆಗಳ ಕ್ರಮ ಮತ್ತು ಅನುಸಂಧಾನವಿಧಾವನ್ನು ವಿವರಿಸಲಾಗಿದೆ (ಇನಿತು)

೨. ಪೂಜಾವಿಧಾನಗಲ್ಲಿ ಎರಡು ಕ್ರಮಗಳಿವೆ. (1) **ವ್ಯತಿರೇಕ ಪೂಜೆ** ಮತ್ತು (2) **ಅನ್ವಯಪೂಜೆ.**

ಪ್ರಕೃತಿಯಲ್ಲಿ ವಿದ್ಯಮಾನವಾಗಿರುವ ಭೂಮಿ, ಜಲ, ಪರ್ವತ ಇತ್ಯಾದಿ ಅಧಿಷ್ಠಾನಗಲ್ಲಿ ಬೆಳೆಯುವ ಗಿಡ, ವೃಕ್ಷ, ಲತಾದಿಗಳಲ್ಲಿ ಹುಟ್ಟಿ ಅರಳುವ ಪರಿಮಳಯುಕ್ತ ಪುಷ್ಪಗಳು, ರಸಭರಿತಫಲಗಳು, ಕಮಲ, ನೈದಿಲೆ ಇತ್ಯಾದಿಪುಷ್ಪಗಳು, ಪರ್ವತಗಳಲ್ಲಿ ಬೆಳೆಯುವ ವೃಕ್ಷಗಳಲ್ಲಿ ಜೇನುಹುಳುಗಳನ್ನು ಕಟ್ಟುವ ಜೇನುಗೂಡಿನಲ್ಲಿ ಶೇಖರಮಾಡುವ ಸುಗಂಧಯುಕ್ತ ಸುಮಧುರವಾದ ಜೇನುತುಪ್ಪ ಇತ್ಯಾದಿ ಪೂಜಾದ್ರವ್ಯಗಳು, ನಿತ್ಯರಮಾಧಿಷ್ಠಾನಯುತವಾದ ಶ್ರೀತುಲಸೀ ಇತ್ಯಾದಿಗಳಲ್ಲಿ ಚಿಂತಿಸುವ ಭಗವದ್ರೂಪಗಳು –ಆಯಾಯಾ ದ್ರವ್ಯಾಂತರ್ಗತಭಗವದ್ರೂಗಳಿಗೆ.

ಪೂಜಾಯೋಗ್ಯವಾದ ಆ ಪದಾರ್ಥಗಳನ್ನು ಸಮರ್ಪಿಸುವ ವಿಧಾನವು ವ್ಯತಿರೇಕಪೂಜಾವಿಧಾನವೆನಿಸುವುದು.

ಆಯಾಯಾ ಪೂಜಾಯೋಗ್ಯವಾದ ದ್ರವ್ಯಾಂತರ್ಗತ ಭಗವದ್ರೂಪಗಳಿಗೂ ಸ್ವಬಿಂಬಕ್ಕೂ ಐಕ್ಯಚಿಂತನೆ ಮಾಡುವ ಕ್ರಮವೇ ಅನ್ವಯಪೂಜೆಯು.

೩. ಹೀಗೆ ವ್ಯತಿರೇಕ ಹಾಗೂ ಅನ್ವಯಪೂಜಾವಿಧಾನಗಳನ್ನು ಶಾಸ್ತ್ರದ್ವಾರಾ, ಮತ್ತು ಸದ್ಗುರು ಉಪದೇಶದ್ವಾರಾ ತಿಳಿದು, ರಮಾಬ್ರಹ್ಮಾದಿಸಮಸ್ತದೇವತಾವರ್ಗಕ್ಕೆ ಮುಖ್ಯನಿಯಾಮಕನಾದ (ಅನಿಮಿಷೇಶನ) ಬಿಂಬಮೂರ್ತಿ ಶ್ರೀಹರಿಯನ್ನು ಸದಾ ಸರ್ವಕಾಲಗಳಲ್ಲಿ (ನಿರಂತರದಿ) ತೃಪ್ತಿಪಡಿಸುತ್ತಾ, ಅವನ ಪರಮಾನುಗ್ರಹವನ್ನು ಸಂಪಾದಿಸಬೇಕೆಂದು ತಿಳಿಸುತ್ತಾರೆ.

೪. ನಿಬಿಡೀಕೃತವಾದ ಅನಂತಕಲ್ಯಾಣಗುಣಗಣಧಾಮನಾದ ಶ್ರೀಪರಮಾತ್ಮನು ಘನಮಹಿಮನು. ಅಂತಹ ಘನಮಹಿಮನಾದ ಪರಿಪೂರ್ಣನು ನಮ್ಮ ಸೇವಾ ರೂಪವಾದ ಪೂಜೆಯನ್ನು ಸ್ವೀಕರಿಸುವನು. (ಕೈಕೊಂಡು)

೫. ಅಸ್ಪೃಜ್ಯರಾಶಿಯಿಂದ ಸೃಷ್ಟಿಗೆ ತರೋಣವೇ ಸ್ಥಿತಿಯು. ಇಂತಹ ಸ್ಥಿತಿಕಾಲದಲ್ಲಿ ಮಾತೃಗರ್ಭದ್ವಾರಾ ಭೂಮಿಯಲ್ಲಿ ಜೀವನು ಜನ್ಮತಾಳುವನು. ಅಂತ್ಯದಲ್ಲಿ ಶ್ರೀ ಹರಿಯ ಉದರಪ್ರವೇಶ ದ್ವಾರಾ ಲಯಹೊಂದುವನು. ಇದೇ ಮೃತಿಯು. ಜಾತಸ್ಯ ಮೃತ್ಯುರ್ಧ್ರುವಮ್ – ಎಂದಂತೆ, ಜನಿಸಿದವನಿಗೆ ಮರಣವು ಸಿದ್ಧವು. ಮರಣರೂಪವಾದ ಈ ಅಂತ್ಯವೇ ಮೃತಿಯು. 84 ಲಕ್ಷಯೋನಿಗಳಲ್ಲಿ ಜನಿಸುವುದೇ ಜೀವನಿಗೆ ಬರುವ ನಾನಾ ಜನುಮಗಳು. ಕೃಪಾಳುವಾದ ಆ ಘನಮಹಿಮನು ಜೀವರ ಸ್ಥಿತಿ, ಮೃತಿ, ಜನುಮಾದಿ ಕ್ಲೇಶಾದ್ಯನರ್ಥಗಳನ್ನು ನಿವಾರಿಸುವನು.

೬. ಕಲ್ಪಾಂತದಲ್ಲಿ, ಬ್ರಹ್ಮಣಾಸಹ ವಿರಜಾನದಿಯ ಸ್ನಾನಾನಂತರ, ಸಜ್ಜನರ ಲಿಂಗಭಂಗವನ್ನುಂಟುಮಾಡಿ, ಸ್ವರೂಪದೇಹಕ್ಕೆ ಅನಾದಿಕಾಲದಿಂದ ಆವರಣರೂಪದಲ್ಲಿದ್ದ ಕರ್ಮವಿಮೋಚನೆ ಮಾಡಿ, ಸ್ವರೂಪಗತಆನಂದ ಆವಿರ್ಭಾವ–ರೂಪವಾದ ನಿತ್ಯವಾದ ಮುಕ್ತಿಸುಖವನ್ನೇ ಅನುಗ್ರಹಿಸಿ, ತನ್ನ ದಾಸವರ್ಗದವರ ಸಹವಾಸದಲ್ಲಿ ಮುಕ್ತಿಧಾಮಗಳಲ್ಲಿ ಇಡುವನು.

೭. ಶರಣಾಗತರಕ್ಷಾಮಣಿಯಾದ ಆ ಭಕ್ತವತ್ಸಲನು ತನ್ನ ಸೇವಕ– ಜನದೊಳಿದ್ದು, ನಿತ್ಯಾನಂದರೂಪವಾದ ಆನಂದವನ್ನು ಕೊಟ್ಟು, ಮೋಕ್ಷಸಾಮ್ರಾಜ್ಯವನ್ನು ಅನುಗ್ರಹಿಸುವನು – ಎಂದು ಪ್ರಸಕ್ತಪದ್ಯದ ತಾತ್ಪರ್ಯಾರ್ಥವು. ||೨೬||

## ಪದ್ಯ ೨೭

**ಮೂಲ :–**

ಜಲಜನಾಭನಿಗೆರಡು ಪ್ರತಿಮೆಗ ।
ಳಿಳೆಯೊಳಗೆ ಜಡಚೇತನಾತ್ಮಕ ।
ಚಲದೊಳಿರ್ಬಗೆ ಸ್ತ್ರೀ ಪುರುಷ ಭೇದದಲಿ ಜಡದೊಳಗೆ ॥
ತಿಳಿವುದಾಹಿತಪ್ರತಿಮೆ ಸಹಜಾ ।
ಚಲಗಳೆಂದಿರ್ಬಗೆ, ಪ್ರತೀಕದಿ ।
ಲಲಿತ ಪಂಚತ್ರಯ ಸುಗೋಳಕವರಿತು ಭಜಿಸುತಿರು॥ ॥೨೭॥

**ಅವತರಣಿಕೆ :–**

ಪದ್ಮನಾಭನಾಮಕ ಪರಮಾತ್ಮನಿಗೆ ಜಡಪ್ರತೀಕಗಳು ಮತ್ತು ಚಲಪ್ರತೀಕಗಳು ಎಂದು ಎರಡು ಪ್ರಕಾರ. ಚಲಪ್ರತೀಕಗಳಲ್ಲಿ ಸ್ತ್ರೀ, ಪುರುಷ ಎಂಬ ಎರಡು ಭೇದಗಳು. ಜಡಪ್ರತೀಕಗಳಲ್ಲಿ ಅಹಿತಪ್ರತಿಮೆ ಮತ್ತು ಸಹಜಾಚಲಗಳೆಂದು ಎರಡು ವಿಧ. ಈ ನಾಲ್ಕು ವಿಧವಾದ ಪ್ರತೀಕಗಳಲ್ಲಿ, ಚಲಪ್ರತೀಕಗಳಲ್ಲಿ ಪಂಚಗೋಳಕಗಳನ್ನು ಮತ್ತು ಜಡಪ್ರತೀಕಗಳಲ್ಲಿ ಗೋಳಕತ್ರಯಗಳನ್ನು ಚಿಂತಿಸಬೇಕಾದ ಕ್ರಮವನ್ನು ತಿಳಿಸುತ್ತಾರೆ – **ಜಲಜನಾಭನಿಗೆರಡು** – ಎಂಬ ಪ್ರಸಕ್ತಸಂಧಿಗತ ೨೭ನೆಯ ಪದ್ಯದಿಂದ. ॥೨೭॥

**ಪ್ರತಿಪದಾರ್ಥ : –**

ಜಲಜನಾಭನಿಗೆ = ಪದ್ಮನಾಭನಾಮಕ ಶ್ರೀಪರಮಾತ್ಮನಿಗೆ, ಇಳೆಯೊಳಗೆ = ಈ ಭೂಮಿಯ ಮೇಲೆ, ಪ್ರತಿಮೆಗಳು = ಸದೃಶರೂಪದಿಂದ, ತದಾಕಾರವಾಗಿ ಇರುವ ಪ್ರತೀಕರೂಪವಾದ ಅಧಿಷ್ಠಾನಗಳು, ಎರಡು = ಎರಡು ಪ್ರಕಾರವಾಗಿ ಇವೆ. ಜಡ = ಶುದ್ಧ ಜಡಗಳು ಒಂದು, ಚೇತನ = ಸ್ಥಾವರ

ಜಂಗಮರೂಪವಾದ ಜೀವವರ್ಗ ಇನ್ನೊಂದು, **ಆತ್ಮಕ** = ಹೀಗೆ ಜಡಸ್ವರೂಪ ಮತ್ತು ಚೇತನಸ್ವರೂಪಗಳೆಂಬ ಎಂದು ಅಧಿಷ್ಠಾನಗಳು ಇರುವುವು. **ಚಲದೊಳು** = ಚಲಪ್ರತಿಮೆಗಳಾದ ಜೀವವರ್ಗದವರಲ್ಲಿ, **ಸ್ತ್ರೀ** = ಹೆಂಗಸರು (ಸ್ತ್ರೀರೂಪ), **ಪುರುಷ** = ಗಂಡಸರು (ಪುರುಷರೂಪ), **ಇರ್ಬಗೆ** = ಈ ಭೇದದಿಂದ ಎರಡು ಪ್ರಕಾರ ಇವೆ. **ಜಡದೊಳಗೆ** = ಶುದ್ಧವಾದ ಜಡವರ್ಗದಲ್ಲಿ, **ಅಹಿತಪ್ರತಿಮೆ** = ಶಿಲಾ, ಲೋಹ, ಮರ, ಮಣ್ಣು, ಇತ್ಯಾದಿ ದ್ರವ್ಯಗಳಿಂದ ನಿರ್ಮಿಸಿದ ಕರ ಚರಣಾದ್ಯವಯವವಿಶಿಷ್ಟವಾದ ದಶವಿಧ ಪ್ರತಿಮೆಗಳು, **ಸಹಜಾಚಲಗಳು** = ಪ್ರಕೃತಿಯಲ್ಲಿ ಸಹಜಸ್ಥಿತಿಯಲ್ಲಿ ಉತ್ಪತ್ತಿಯಾಗಿರುವ, ಪರ್ವತ ಇತ್ಯಾದಿ ಎರಡು ಪ್ರಕಾರ ಇವೆ. **ತಿಳಿವುದು** = ಹೀಗೆ ಚಲಪ್ರತೀಕಗಳಲ್ಲಿ ಸ್ತ್ರೀ ಪ್ರತೀಕ, ಪುರುಷ ಪ್ರತೀಕ, ಜಡಪ್ರತೀಕಗಳು, ಅಹಿತಪ್ರತಿಮೆ, ಸಹಜಾಚಲ ಪ್ರತೀಕ ಎಂದು ಪ್ರತಿವರ್ಗದಲ್ಲಿಯೂ ಎರಡು ಪ್ರಕಾರ ತಿಳಿಯಬೇಕು. **ಪ್ರತೀಕದಿ** = ಇಂತು ನಾಲ್ಕುಪ್ರಕಾರವಾದ ಪ್ರತಿಮಾಧಿಷ್ಠಾನಗಳಲ್ಲಿ, **ಲಲಿತ** = ಸುಮನೋಹರವಾದ, **ಪಂಚ** = ಚೇತನ ಪ್ರತೀಕಗಳಲ್ಲಿ (೧) ದೇಹಗೋಳಕ, (೨) ಜೀವಗೋಳಕ, (೩) ಗುರುಗೋಳಕ, (೪) ಪುಷ್ಕರಗೋಳಕ ಮತ್ತು (೫) ಭಾರತೀರಮಣಮುಖ್ಯಪ್ರಾಣ ಗೋಳಕ – ಹೀಗೆ ಪಂಚಗೋಳಕಗಳನ್ನೂ, (ಅಥವಾ ದೇಹಗತ ಇಂದ್ರಿಯಗೋಳಕ – ತದಂತರ್ಗತ ತತ್ತ್ವಾಭಿಮಾನಿ ದೇವತಾಗೋಳಕ – ತದಂತರ್ಗತ ಮುಖ್ಯಪ್ರಾಣಗೋಳಕ – ತದಂತರ್ಗತ ಲಕ್ಷ್ಮೀಗೋಳಕ – ತದಂತರ್ಗತ ಬಿಂಬರೂಪೀ ಶ್ರೀ ಪರಮಾತ್ಮ – ಹೀಗೆ ಪಂಚಗೋಳಕಗಳೆಂತಲೂ ಅರ್ಥಮಾಡಬಹುದು) **ತ್ರಯ** = ಜಡಪ್ರತೀಕಗಳಲ್ಲಿ, (೧) ಕಣ್ಣಿಗೆ ಕಾಣುವ ನಿರ್ಮಿತಪ್ರತಿಮೆ (೨) ತದಂತರ್ಗತ ಭಾರತೀರಮಣಮುಖ್ಯಪ್ರಾಣಾಂತರ್ಗತ ಪ್ರತಿಮೆ ಮತ್ತು (೩) ತದಂತರ್ಗತ ಲಕ್ಷ್ಮ್ಯಾವರಣಾತ್ಮಕವಾದ ಪ್ರತಿಮೆ ಹೀಗೆ ಮೂರು ಗೋಳಕಗಳನ್ನು, **ಅರಿತು** = ಶಾಸ್ತ್ರ ಹಾಗೂ ಉಪದೇಶ ದ್ವಾರಾ ತಿಳಿದುಕೊಂಡು, **ಭಜಿಸುತಿರು** = ಚಲ ಮತ್ತು

ಜಡಪ್ರತೀಕಾಂತರ್ಗತ ಭಗವದ್ರೂಪಗಳನ್ನು ಸ್ವಬಿಂಬನಲ್ಲಿ ಐಕ್ಯಚಿಂತನಾಕ್ರಮದಿಂದ ಕೊಂಡಾಡುತ್ತಿರು. ||೨೭||

## ವ್ಯಾಖ್ಯಾನಗಳು

### (೧) ಶ್ರೀ ಸಂರಕ್ಷಣ ಒಡೆಯರ ವ್ಯಾಖ್ಯಾನ : –

ಚರಾಚರಗಳು ಪರಮಾತ್ಮನ ಪ್ರತಿಮಾ ಎಂತ ಹೇಳತಾರೆ. ಪದ್ಮನಾಮಕ ಪರಮಾತ್ಮಗೆ ಈ ಭೂಮಿಒಳಗೆ, ತದಾಕಾರದಿಂದ ಆವಾಸನಾಗಿ ಇರೋದಕ್ಕೆ ಅಧಿಷ್ಠಾನಗಳು ಎರಡು ವಿಧಗಳಾದದ್ದು, ಶುದ್ಧಜಡಗಳು ಒಂದು. ಜಡಜೀವರು ತಥಾ ಗಮನಾಗಮನ ಮಾಡುವ ಜೀವರು ಒಂದು – ಈ ಪ್ರಕಾರ ಹೆಂಗಸರು ತಥಾ ಸ್ತ್ರೀ, ಗಂಡಸರು, ಪುರುಷ ಎಂತ – ಈ ಭೇಧದಿಂದ ಎರಡು ಪ್ರಕಾರ ಇರೋದಾಗಿ ಅದೆ. ಸ್ವರೂಪಾಪೇಕ್ಷಯಾ ಬಾಹ್ಯಸ್ಥೂಲದೇಹ ವಿವಕ್ಷಯಾ ಎರಡೂ ಅನ್ವಯವೇ. ಬಿಂಬನು ಸ್ತ್ರೀಯರಲ್ಲಿ ಸ್ತ್ರೀರೂಪದಿಂದಲೂ, ಪುರುಷರಲ್ಲಿ ಪುರುಷರೂಪದಿಂದಲೂ ಇರೋವನಾಗಿದ್ದಾನೆ. ಶುದ್ಧವಾದ ಜಡಗಳಲ್ಲಿ ಶಿಲಾ,ಲೋಹ, ದಾರು ಇವುಗಳಿಂದ ಕರಚರಣಾದ್ಯವಯುವವಿಶಿಷ್ಟವಾದ ದಶವಿಧಪ್ರತಿಮೆಗಳು (ಅಹಿತಪ್ರತಿಮೆಗಳು) ಇವು ಹ್ಯಾಂಗೆ ಉತ್ಪತ್ತಿ ಆಗಿ ಅವೋ, ಅದೇ ಪ್ರಕಾರವಾಗಿ ಇರತಕ್ಕ ಕರಚರಣಾದಿಗಳಿಂದ ರಹಿತವಾದ ತದನ್ಯಶುದ್ಧ ಜಡಗಳು, ಈ ಪ್ರಕಾರ ಇರೋದಾಗಿ ಅವೆ ಎಂದು, ಅಚಲದಲ್ಲಿ ಎರಡು ಪ್ರಕಾರ ತಿಳಿಯೋವನಾಗಬೇಕು. ಪೂರ್ವೋಕ್ತ ಚಲದಲ್ಲಿ ಎರಡು, ಅಚಲದಲ್ಲಿ ಎರಡು ಅಂತು ನಾಲ್ಕು ವಿಧ ಪ್ರತೀಕದಿ, ದೇಹಗೋಳಕ (ಒಂದು), ಜೀವಗೋಳಕ (ಎರಡು), ಗುರುಗೋಳಕ (ಮೂರು), ಪುಷ್ಕರ ಗೋಳಕ (ನಾಲ್ಕು), ಭಾರತೀರಮಣ ಮುಖ್ಯಪ್ರಾಣಗೋಳಕ (ಐದು), ಅಂತು ಪಂಚಗೋಳಕಗಳು, ತದಂತರ್ಗತ ಪರಮಾತ್ಮನ ತಿಳಿಯಬೇಕು. ಇದು ಚೇತನದಲ್ಲಿ ತಿಳಿಯೋ ಕ್ರಮ. ಅಧಿಭೂತ ಪ್ರತಿಮೆ (ಒಂದು), ಗುರುಗೋಳಕ (ಎರಡು), ಮುಖ್ಯಪ್ರಾಣಗೋಳಕ (ಮೂರು), ಜಡಗಳಲ್ಲಿ ತಿಳಿಯಬೇಕಾದ

ಕ್ರಮ. ಸರ್ವತ್ರದಲ್ಲಿ ಚತುರ್ವಿಂಶತಿತತ್ತ್ವಾಭಿಮಾನಿಗಳ ಚತುರ್ವಿಂಶತಿಗೋಳಕತ್ವೇನ ಚಿಂತಿಸಿ, ಅಂತರ್ಗತ ಪರಮಾತ್ಮನ್ನ ಚಿಂತಿಸೋ ಕ್ರಮ ಒಂದು. ಈ ಪ್ರಕಾರ ಯೋಗ್ಯವಾದ ಚಲಾಚಲಅಧಿಷ್ಠಾನಗಳಲ್ಲಿ ಪೂರ್ವೋಕ್ತಪ್ರಕಾರ ಅರಿತು, ತದನ್ಯಗಳಾದ ನೀಚಾಧಿಷ್ಠಾನಗಳಲ್ಲಿ ತಿಳಿಯೋ ಮಾತ್ರವೇ ಹೊರತು, ಭಜನಾದಿಗಳು ಇಲ್ಲ. ಇಂಥಾ ಪೂಜಾಮಾಡತಕ್ಕ ಅಧಿಕಾರಿಗಳಿಗೆ ಅತ್ಯಂತವಾಗಿ ವಶನಾಗಿ ಪ್ರತ್ಯಕ್ಷನಾಗುತಾನೆ ಎಂತ ತಾತ್ಪರ್ಯ. ||೨೮||

**ಭಾವಪ್ರಕಾಶಿಕೆ :—**

ಶ್ರೀ ಪದ್ಮನಾಭನಿಗೆ ಜಡಪ್ರತಿಮೆಯಂತಲೂ, ಚೇತನಪ್ರತಿಮೆಯೆಂತಲೂ ಎರಡು ಪ್ರಕಾರಗಳುಂಟು. ಚಲಪ್ರತಿಮೆಗಳು ಸ್ತ್ರೀ ಪುರುಷಭೇದದಿಂದ ಎರಡು ಪ್ರಕಾರ. ಜಡಪ್ರತಿಮೆಗಳಲ್ಲಿ ಅಹಿತಪ್ರತಿಮೆಯೆಂತಲೂ, ಸಹಜಾಚಲಪ್ರತಿಮೆಯೆಂತಲೂ ಎರಡು ಪ್ರಕಾರ ಇರುವುವು. **ಆಹಿತಪ್ರತಿಮೆ** ಎಂದರೆ, ಪಂಚಲೋಹಗಳಿಂದ ಮಾಡಲ್ಪಟ್ಟವು. **ಸಹಜಾಚಲವೆಂದರೆ** ಸಾಲಗ್ರಾಮಾದಿಗಳು. ಈ ಪ್ರತಿಮೆಗಳಲ್ಲಿ ಪ್ರತಿಮೆಗಳೇ ದೇವರೆಂದು ಭಾವಿಸದೆ, ಗೋಳಕಪಂಚಕ, ಗೋಳಕತ್ರಯ ಈ ವಿಧವಾಗಿ ಚಿಂತಿಸಬೇಕು. ಸಾಲಿಗ್ರಾಮದಲ್ಲಿ ಮಾತ್ರ ಗೋಳಕಚಿಂತನೆಯಿಲ್ಲ. ಸ್ವಯಂವ್ಯಕ್ತವೆಂದು ಪ್ರಸಿದ್ಧವಾದ ಪ್ರತಿಮೆಗಳಲ್ಲಿ ಗೋಳಕತ್ರಯ ಚಿಂತನೆ ಮಾಡಬೇಕು. ಹೇಗೆಂದರೆ, ಕಣ್ಣಿಗೆ ಕಾಣುವ ಪ್ರತಿಮೆ ೧. ಅದರಲ್ಲಿ ಭಾರತೀರಮಣಮುಖ್ಯಪ್ರಾಣಾಂರ್ಗತ ವಾಯುದೇವರಿಂದ ಚಿಂತ್ಯವಾದ ಪ್ರತಿಮೆ ೧. ಲಕ್ಷ್ಮೀಆವರಣಾತ್ಮಕವಾದ ಪ್ರತಿಮೆ ೧. ಹೀಗೆ ಮೂರುಗೋಳಕಗಳು. ಅದರಲ್ಲಿ ಲಕ್ಷ್ಮೀಸಮೇತನಾದ ಪರಮಾತ್ಮನನ್ನು ಚಿಂತಿಸುವುದು. ಇದಕ್ಕೆ **ಗೋಳಕತ್ರಯವೆಂದು** ಹೆಸರು. ಸಾಧಾರಣ ಬಡಗಿಯವರಿಂದ ಮಾಡಲ್ಪಟ್ಟ ಪ್ರತಿಮೆಗಳಲ್ಲಿ ೫ ಗೋಳಕಗಳನ್ನು ಚಿಂತಿಸಬೇಕು. ಗೋಚರಿಸುವ ಪ್ರತಿಮೆ ೧, ಅದರಲ್ಲಿ ವಿಶ್ವಕರ್ಮ ರಚಿಸಿದ ಪ್ರತಿಮೆ ೧, ಅದರಲ್ಲಿ ಭಾರತೀರಮಣಮುಖ್ಯಪ್ರಾಣಾಂತರ್ಗತಪ್ರತಿಮೆ ೧, ಅದರಲ್ಲಿ ವಾಯುದೇವರ

ಆವರಣರೂಪ ಪ್ರತಿಮೆ ೧. ಅದರಲ್ಲಿ ಲಕ್ಷ್ಮೀಆವರಣಾತ್ಮಕವಾದ ಪ್ರತಿಮೆ ೧. ಹೀಗೆ. ೫ ಗೋಳಕಗಳನ್ನು ತಿಳಿಯಬೇಕು. ಶಿವವಿಗ್ರಹ, ಲಿಂಗ ಮೊದಲಾದವುಗಳಲ್ಲಿ ಲಿಂಗ ೧. ವಿಶ್ವಕರ್ಮ ನಿರ್ಮಿತ ೧ . ಯಾವದೇವತಾರೂಪವೆಂದು ನೋಡುತ್ತೇವೋ ಅದು ೧. ಅದರಲ್ಲಿ ವಾಯುದೇವರು ೧. ಅಂತರ್ಯಾಮಿ ವಿಷ್ಣು ೧. ಹೀಗೆ ೫ ಗೋಳಕಗಳನ್ನು ತಿಳಿದು, ಪ್ರತಿಮಾದಿಗಳನ್ನು ಪೂಜಿಸಬೇಕು. ||೨೭||

(೩) ಭಾವದರ್ಪಣಟೀಕಾ :—

ಜಲಜನಾಭೇತಿ ಪರಮಾತ್ಮಗೆ ಜಡ ಎಂತಲೂ, ಚೇತನ ಎಂತಲೂ, ಎರಡು ಪ್ರತಿಮೆಗಳು. ಈ ಜಡದಲ್ಲಿ ಅಹಿತಪ್ರತಿಮಾ, ಸಹಜಾಚಲಪ್ರತಿಮಾ ಎಂತ ಎರಡು ಭೇದವು. ಮತ್ತು ಚೇತನದಲ್ಲಿ ಸ್ತ್ರೀಯರು, ಪುರುಷರು ಯೆಂತ ಎರಡು ಭೇದವು. ಅಹಿತ ಎಂದರೆ, ಪಂಚಲೋಹಾದಿ ಪ್ರತೀಕಗಳು. ಸಹಜಾಚಲ ಎಂದರೆ ಶಾಲಿಗ್ರಾಮಗಳು. ಈ ಶಾಲಿಗ್ರಾಮದೊಳಗೆ ಗೋಳಕಚಿಂತನೆ ಇಲ್ಲ. ಶ್ರೀ ಹರಿಯೂ ಲಕ್ಷ್ಮೀಯೂ ಒಂದು ಗೋಳಕ. ವಾಯು ಒಂದು ಗೋಳಕ. ಹೀಗೆ ಗೋಳಕದ್ವಯ ಎಂತಲೂ, ಶ್ರೀಹರಿಯು ಲಕ್ಷ್ಮೀವಾಯು ಹೀಗೆ ಗೋಳಕತ್ರಯ ಎಂತಲೂ, ಎರಡು ಪದ್ಧತಿ ಉಂಟು.

ಇದಕ್ಕೆ ಪ್ರಮಾಣ :—

"**ಗೋ**ಲಕದ್ವಿತೀಯಂ ವಿಷ್ಣೋಸ್ತೃತೀಯಂ ವಾಪಿಕೀರ್ತಿತಮತಿ " (ತಂತ್ರ ಸಾರೇ)

ಮತ್ತು ರುದ್ರಾದಿಪ್ರತಿಮೆಗಳಲ್ಲಿ ಗೋಲಕಪಂಚ ಚಿಂತಿಸತಕ್ಕದ್ದು.

ಸುಳಾದಿ ಪ್ರಮಾಣ : —

ವಿಶ್ವಕರ್ಮಕೃತ ಪ್ರತೀಕ ಒಂದು ರುದ್ರ
ವಿಶ್ವವ್ಯಾಪಕವಾಯು ಶ್ರೀ ವಿಷ್ಣು ಪಂಚ ತಿಳಿದು

ವಿಶ್ವಾಸ ಮಾಡಲಾಗಿ ರುದ್ರಾದಿ ಪ್ರತಿಮೆಗಳಲ್ಲಿ
ಅಶ್ವವದನ ನಮ್ಮ ಪುರಂದರವಿಠಲನು
ಹ್ರಸ್ವದೇಹಿನ ಬಿಡದೆ ಪರಮಾನುಗ್ರಹ ಮಾಳ್ಪ ||

ಎಂತ ದೊಡ್ಡವರು ಹೇಳಿರೋದರಿಂದ ಏವಂರೀತ್ಯಾ ಉಪಾಸನೆ ಮಾಡತಕದ್ದು. ||೨೭||

(೪) ಶ್ರೀವ್ಯಾಸಸಿದ್ಧಾಂತ ಕೌಮುದೀ (ಸಂಸ್ಕೃತಮೂಲ) : –

ಜಲಜ ಇತಿ || ದ್ವೇನಾಬ್ರಹ್ಮಣಃ ರೂಪೇ ಆತ್ಮಾ ಚೈವ ಅನಾತ್ಮಾಚ – ಇತಿ ಶ್ರುತೇಃ || ಈರ್ಬಗೆ – ಎರಡು ಪ್ರಕಾರ "ಅಚಲಂ" ಪ್ರತೀಕಮ್ | ಸುಖತೀರ್ಥ ಶ್ರೀಮಚ್ಚರಣಾಸ್ತು – "ವಾಸುದೇವಸ್ಯ ದ್ವೇರೂಪೇ ಚಲಂ ಚಾಚಲಮೇವ ಚ '|| ಜಲಂ ಸನ್ಯಾಸಿನಾಂ ರೂಪಂ ಅಚಲಂ ಪ್ರತಿಮಾದಿಕಮ್ || ಇತಿ || "ಪಂಚತ್ರಯ ಇತಿ | ಸಹಜಾತ್ರಯಂ ಅಹಿತಮೇಕಂ ಚಲಂ ಚೇತಿ ಸಹಜಾಹಿತೇ | ಚಲಂ ಚೇತಿ ತ್ರಯಂ ಚೈತಿ ವಿವಕ್ಷಾಭಿದೇನ | **ದಶಮಾಧ್ಯಾಯೀ ವಿಷ್ಣುರಹಸ್ಯೇ** "ಚಲಾಚಲ ವಿಭೇದೇನ ಪ್ರತಿಮಾದ್ವಿತಯಂ ಮಮ ಚಲಾತು ವೈಷ್ಣವಃ ವಿಪ್ರಃ ದ್ವಿವಿಧಾ ತ್ವಚಲಾ ಮಮ || ಸಹಜಾಹಿಚ ಭೇದೇನ ಸಹಜಾಃ ತ್ರಿವಿಧಾಃ ಸ್ಮೃತಾಃ || ತೀರ್ಥಕ್ಷೇತ್ರ ಶಿಲಾಭೇದಾತ್ ಜಲಂ ತೀರ್ಥಮಿತಿ ಸ್ಮೃತಮ್ ಭೂಭಾಗಃ ಕ್ಷೇತ್ರಮಿತ್ಯುಕ್ತಂ ಸಾಲಗ್ರಾಮಾದಿಕಾಃ ಶಿಲಾಃ || ಪ್ರಯಾಗ ಕಾಶೀ ಬದರೀ ಕುರುಕ್ಷೇತ್ರಾದಿಕಾನಿ ಚ || ಭೂಖಂಡಾನಿ ಮಮತಾಃ ತೀರ್ಥಮೂರ್ತಯಃ ಇತಿ || ||೨೭||

ಕನ್ನಡಾರ್ಥ : –

ಶ್ರೀ ಪರಮಾತ್ಮನಿಗೆ ಎರಡು ಪ್ರಕಾರವಾದ ರೂಪಗಳಿವೆ. (೧) ಸ್ವರೂಪರೂಪ ಮತ್ತು (೨) ಪ್ರತಿಮಾರೂಪ. **ಶ್ರೀಮದಾನಂದತೀರ್ಥರ ವಚನದಂತೆ** – ವಾಸುದೇವನಾಮಕ ಪರಮಾತ್ಮನಿಗೆ ಪ್ರತಿಮಾರೂಪಗಳು ಎರಡು

ಪ್ರಕಾರ **ಇವೆ**. (೧) ಚಲಪ್ರತಿಮಾ. (೨) ಅಚಲಪ್ರತಿಮಾ. ಸನ್ಯಾಸಿಗತ ಭಗವದ್ರೂಪ ಚಲರೂಪ. ಜಡಪ್ರತಿಮಾಗತ ರೂಪ ಅಚಲರೂಪ. **"ಪಂಚತ್ರಯ"** ಎಂಬಲ್ಲಿ – ಸಹಜಾಪ್ರತಿಮೆಗಳು ಮೂರು. ಆಹಿತ ಒಂದು. ಚಲ ಒಂದು. ಹೀಗೆ ಪಂಚವಿಧ. ಸಹಜಾಹಿತಗಳು ಎರಡು – ಒಂದು ಚಲ. ಹೀಗೆ ಮೂರುವಿಧ. ಈ ರೀತಿ ವಿವಕ್ಷಾಭೇದದಿಂದ ತಿಳಿಯಬೇಕು. **ವಿಷ್ಣುರಹಸ್ಯ, ಹತ್ತನೆಯ ಅಧ್ಯಾಯದಲ್ಲಿ** – "ಪರಮಾತ್ಮನಿಗೆ ಚಲ–ಅಚಲಗಳೆಂದು ಎರಡುವಿಧ ಪ್ರತಿಮೆಗಳು. ವೈಷ್ಣವ ವಿಪ್ರನು ಚಲಪ್ರತಿಮೆಯು. ಅಚಲಪ್ರತಿಮೆಯಲ್ಲಿ ಎರಡು ಪ್ರಕಾರ (೧) ಸಹಜ, (೨) ಅಹಿತ ಎಂದು. ಸಹಜಪ್ರತಿಮೆಗಳಲ್ಲಿ ಮೂರು ಪ್ರಕಾರ – "ತೀರ್ಥಕ್ಷೇತ್ರಶಿವಾ" ಎಂದು ಜಲವು ತೀರ್ಥವೆನಿಸುವುದು. ಭೂಭಾಗವು ಕ್ಷೇತ್ರವೆನಿಸುವುದು. ಸಾಲಿಗ್ರಾಮ ಇತ್ಯಾದಿ ಶಿಲಾಗಳೆನಿಸುವುವು. ಪ್ರಯಾಗ, ಕಾಶೀ, **ಬದರೀ**, ಕುರುಕ್ಷೇತ್ರ ಇತ್ಯಾದಿ ಭೂಪ್ರದೇಶವಿಶೇಷಗಳು ಕ್ಷೇತ್ರಗಳೆಂದು ಪ್ರಸಿದ್ಧ. ಗಂಗಾ, ಪುಷ್ಕರ, ಕೃಷ್ಣಾ ಇತ್ಯಾದಿ ತೀರ್ಥಮೂರ್ತಿಗಳೆಂದು ಖ್ಯಾತವಾಗಿವೆ. ಈ ರೀತಿ ನಿರೂಪಿತವಾಗಿದೆ. ||೨೭||

### (೩) ಶ್ರೀ **ಗುರು**ಹೃದಯಪ್ರಕಾಶಿಕೆ ವ್ಯಾಖ್ಯಾನ : –

**ಪೂಜಾ**ಪ್ರಕಾರ ತಿಳಿಸಿ, ಪ್ರತಿಮೆಗಳ ಪ್ರಕಾರ ತಿಳಿಸುತ್ತಾರೆ,, **ಜಲನಾಭವೆಂದು**, ಜಲಜವೆಂಬ ಜಗದ್ರೂಪಕಮಲವನ್ನು ನಾಭಿಯಲ್ಲಿ ಧರಿಸಿರುವುದರಿಂದ ಜಲಜನಾಭನೆಂದು ಹೆಸರುಳ್ಳ ದೇವರಿಗೆ ಜಡ ಎಂತಲೂ, ಚೇತನ ಎಂತಲೂ, ಎರಡು **ಬಗೆ** ಪ್ರತಿಮೆಗಳು ಇರುವುವು. ಆ ಚೇತನವೆಂಬ ಪ್ರತಿಮೆಗಳಲ್ಲಿ ಸ್ತ್ರೀಯರು ಎಂತಲೂ, ಪುರುಷರು ಎಂತಲೂ ಎರಡು ಬಗೆ. ಜಡವೆಂಬ ಪ್ರತಿಮೆಗಳೊಳಗೂ ಆವಾಹನೆಮಾಡಿ ಪೂಜಿಸುವ ಪಂಚಲೋಹಾದಿಪ್ರತಿಮೆಗಳೆಲ್ಲಾ **ಆಹಿತವೆಂದು** ಒಂದು ವಿಧ, ಆವಾಹನೆ ಇಲ್ಲದೆ ಭಾವಿಸುವ **ಸಹಜಾಚಲವೆಂಬ** ಪರ್ವತಾದಿಗಳು ಒಂದು ಬಗೆ. ಅಂತೂ ಜಡದಲ್ಲೂ ಎರಡು ಬಗೆ.

ಜೀವರಲ್ಲೂ ಎರಡು ಬಗೆ – ಸಹ ನಾಲ್ಕು ಬಗೆ ಪ್ರತಿಮೆಗಳಲ್ಲೂ, ಲಲಿತ ಪಂಚತ್ರಯಿ ಸುಗೋಳಕವರಿತು ಭಜಿಸುತಿರು ಅಂದರೆ, ಚೇತನದಲ್ಲಿ ದೇಹ ಒಂದು, ಅಭಿಮಾನಿ ಜೀವ ಒಂದು, ತದಭಿಮಾನಿದೇವತೆ ಒಂದು, ಮನೋಮಯಪ್ರತಿಮಾ ಒಂದು, ತದಂತರ್ಗತ ಪ್ರಾಣರೂಪ ಒಂದು – ಸಹ ಐದುಗೋಳಕಗಳೆಂಬ ಅಧಿಷ್ಠಾನಗಳೆನ್ನೂ, ಜಡಪ್ರತಿಮಾದಲ್ಲಿ, ಪರ್ವತಾದ್ಯಭಿಮಾನಿ ದೇವತೆಗಳಧಿಷ್ಠಾನ ಒಂದು, ಮನೋಮಯ ವಾಸನಾರೂಪ ಒಂದು, ಪ್ರಾಣರೂಪ ಒಂದು, ಸಹ ಗೋಳಕತ್ರಯ ತಿಳಿದು ಮನೋಹರವಾಗಿ ಭಜಿಸೆಂದರ್ಥ.

**ಪ್ರತಿಮಾಂ ಪ್ರತಿಮಾಂತಸ್ಥಾಂ ತನ್ಮಧ್ಯೇ ಪರಮಂ ವಸುಃ ಎಂಬ ತಂತ್ರಸಾರಾರ್ಥ** ವಿವರಿಸಲ್ಪಟ್ಟಿತು.

**ವಿಶೇಷ ಪ್ರಮೇಯ** – ಇಲ್ಲಿ ಗೋಳಕಚಿಂತನಾಪ್ರಕಾರವನ್ನು ಸೂಕ್ಷ್ಮವಾಗಿ ಹೇಳಿರುತ್ತಾರೆ. ಇದು ಬಹು ಮುಖ್ಯ ಪ್ರಮೇಯ. **ಶ್ರೀಮದ್ಭಾಗವತದಲ್ಲಿ**

**ಶೈಲೀ ದಾರುಮಯೀ ಲೌಹೀ ಲೇಪ್ಯಾ ಲೇಖ್ಯಾ ಚ ಸೈಕತೀ ।**
**ಮನೋಮಯೀ ಮಣಿಮಯೀ ಪ್ರತಿಮಾಷ್ಟಽವಿಧಾ ಸ್ಮೃತಾ ॥**

ಅಂದರೆ, ಕಲ್ಲಿನ, ಮರದ, ಲೋಹದ, ಗಾರೆಯ, ಔಷಧಿವಿಶೇಷದಿಂದ ಬರೆದ, ರಚಿಸಿದ, ರತ್ನಮಯವಾದ, ಮನೋಮಯವಾದ ಎಂಬುದಾಗಿ **ಎಂಟುವಿಧ** ಪ್ರತಿಮೆಗಳೆಂತ ಹೇಳಿರುತ್ತಾರೆ.

**"ಓಂ ನ ಪ್ರತೀಕೆ ನಹಿ ಸಃ ಓಂ"** ಎಂಬ **ಸೂತ್ರದಲ್ಲಿ** ಹೇಳಿರುವ ಮೇರೆಗೆ, ಈ ಪ್ರತಿಮೆಗಳೇ ದೇವರಂತ ಪೂಜಿಸಕೂಡದು. ಇವುಗಳಲ್ಲಿ ಆವಾಹನಾದಿಗಳಿಂದ ಸನ್ನಿಹಿತವಾದ ಮೂರ್ತಿಯನ್ನೇ ಪೂಜಿಸಬೇಕು.

**ಸರ್ವತ್ರ ಚರಮಾಂ ಪ್ರಾಣಂ ಪ್ರತಿಮಾತ್ವೇನ ಭಾವಯೇತ್ ।**
**ವಿನಾ ವಾಯುಪ್ರತೀಕಂತು ಸ್ಥಿರಂ ನಿರಯಭಾಗ್ಭವೇತ್ ॥**

ಅಂದರೆ, ಪ್ರತಿಮಾಗಳಲ್ಲಿ ಪ್ರತಿಮಾರೂಪ ತೇಜೋಮಯ ವಾಯುರೂಪ, ಅದರೊಳಗೆ ರಮಾದೇವಿರೂಪ ಚಿಂತನೆ, ಅದರೊಳಗೆ ಧ್ಯೇಯಮೂರ್ತಿ ಚಿಂತನೆ ಮಾಡಬೇಕು. ವಾಯುಪ್ರತೀಕಗೋಳಕ ಚಿಂತನೆ ಮಾಡದಿದ್ದರೆ ಮಹದನರ್ಥವನ್ನು ಮೇಲಿನ ಶ್ಲೋಕದಲ್ಲಿ ಹೇಳಿರುತ್ತಾರೆ.

ತಿರುಪತಿ ಮುಂತಾದ ಸ್ವಯಂವ್ಯಕ್ತಮೂರ್ತಿಗಳಲ್ಲಿ ಗೋಳಕಚಿಂತನೆ ಇಲ್ಲ. ಉಪಾಸಕನು ತನ್ನ ಬಿಂಬವನ್ನು ಆಯಾಕ್ಷೇತ್ರಗತ ಮೂರ್ತಿಯಲ್ಲಿ ಐಕ್ಯಚಿಂತನೆ ಮಾತ್ರ ಮಾಡಬೇಕು. ಸಾಲಿಗ್ರಾಮಗಳಲ್ಲಿಯೂ ಇದೇ ರೀತಿ.

ಈ ಗೋಳಕಚಿಂತನಾಕ್ರಮ ಬಹುಮುಖ್ಯವಾದ್ದರಿಂದ ಸೂಕ್ಷ್ಮವಾಗಿ ಸೂಚಿಸಲ್ಪಟ್ಟಿರುತ್ತದೆ. ||೨೭||

## ಸರ್ವವ್ಯಾಖ್ಯಾನಸಾರಸಂಗ್ರಹ

ಪೂರ್ವೋಕ್ತಪದ್ಯದಲ್ಲಿ ಶ್ರೀಪರಮಾತ್ಮನ ಪೂಜಾವಿಧಾವನ್ನು ತಿಳಿಸಿ, **ಜಲಜನಾಭನಿಗೆ** ಎಂಬ ಪ್ರಸಕ್ತ ೨೭ನೆಯ ಪದ್ಯದಲ್ಲಿ ಪ್ರತಿಮಾಗಳ ವೈವಿಧ್ಯಗಳನ್ನು ವಿವರಿಸುತ್ತಾರೆ.

೧. ಮೂಲರೂಪೀ ಶ್ರೀಮನ್ನಾರಾಯಣನು ಜಗತ್ತಿನ ಸೃಷ್ಟಿಕಾರ್ಯಕ್ಕಾಗಿ ಸಂಕಲ್ಪಿಸಿ, ಪದ್ಮನಾಭನಾಮಕನಾಗಿ ಕ್ಷೀರಸಾಗರದಲ್ಲಿ ಪವಡಿಸಿದನು. ಪದ್ಮನಾಭರೂಪೀ ಪರಮಾತ್ಮನ ದಿವ್ಯನಾಭಿಪ್ರದೇಶದಿಂದ ಜಗದ್ರೂಪವಾದ ಕಮಲವು ಉತ್ಪನ್ನವಾಯಿತು. ಆ ಪದ್ಮವು ಸುವರ್ಣಾತ್ಮಕವಾಗಿದ್ದು, ರಮಾಭಿಮನ್ಯುಮಾನವಾಗಿತ್ತು. ಹದಿನಾಲ್ಕು ದಳಗಳಿಂದ ಯುಕ್ತವಾದ ಆ ಕಮಲದ ಮಧ್ಯದಲ್ಲಿ ಹಿರಣ್ಯಗರ್ಭನಾಮಕರಾದ **ಚತುರ್ಮುಖ ಬ್ರಹ್ಮದೇವರು** ಪ್ರಕಟರಾದರು. ಈ ಕಾರಣದಿಂದ ಶ್ರೀ ಪರಮಾತ್ಮನು **ಜಲಜನಾಭನು.** ಅಂದರೆ ಜಲ—ನೀರು (ಶ್ರೀ ಪರಮಾತ್ಮನ ಅಪ್ರಾಕೃತರಾದ ನಾಭೀ ಎಂಬ ಜಗದುತ್ಪತ್ತಿಗೆ ಕಾರಣರಾದ ದಿವ್ಯಮಡುವು) ಜ – ನೀರಿನಲ್ಲಿ ಉತ್ಪನ್ನವಾದುದ್ದು

ಕಮಲ. ಅಂತಹ ಪದ್ಮವನ್ನು ತನ್ನ ನಾಭಿಪ್ರದೇಶದಿಂದ ಉತ್ಪನ್ನಮಾಡಿದ ಮೂಲರೂಪೀ ಶ್ರೀಮನ್ನಾರಾಯಣನಿಗೆ **ಪದ್ಮನಾಭನೆಂದು** ಹೆಸರು.

೨. ಅಂತಹ ಜಲಜನಾಭರೂಪೀ ಶ್ರೀ ಪರಮಾತ್ಮನಿಗೆ ಪ್ರತೀಕಗಳು ಎರಡು ಪ್ರಕಾರ : –

(1) ಚಲಪ್ರತೀಕಗಳು (ಚೇತನಾತ್ಮಕಪ್ರತಿಮೆಗಳು)

(2) ಜಡಪ್ರತೀಕಗಳು (ಅಚಲಪ್ರತಿಮೆಗಳು)

೩. **ಚಲಪ್ರತೀಕಗಳಲ್ಲಿ** ಎರಡು ಪ್ರಕಾರ :–

(೧) ಪುರುಷ ಪ್ರತೀಕಗಳು ಮತ್ತು (೨) ಸ್ತ್ರೀ ಪ್ರತೀಕಗಳು

ಪುರುಷಜೀವವರ್ಗದಲ್ಲಿ ಜೀವಾಂತರ್ಗತನಾಗಿ ಜೀವನಾಕಾರನಾಗಿ, ಜೀವನಾಮಕವಾಗಿ **ಪುರುಷರೂಪದಿಂದ** ಬಿಂಬನಾಗಿದ್ದಾನೆ.

ಸ್ತ್ರೀಜೀವರಲ್ಲಿ ಸ್ತ್ರೀರೂಪದಿಂದ ಬಿಂಬನು ವಿದ್ಯಮಾನನಾಗಿದ್ದಾನೆ.

೪. **ಜಡಪ್ರತಿಮೆಗಳಲ್ಲಿ** ಎರಡು ಪ್ರಕಾರ :–

(1) ಆಹಿತ ಪ್ರತಿಮೆಗಳು ಮತ್ತು (2) ಸಹಜಾಚಲ ಪ್ರತಿಮೆಗಳು

ಕಲ್ಲಿನಿಂದ, ಮರದಿಂದ, ಲೋಹಗಳಿಂದ, ಮರಳಿನಿಂದ, ಔಷಧಿ ರಸವಿಶೇಷಗಳಿಂದ ಲಿಖಿತಚಿತ್ರರೂಪದಲ್ಲಿರುವ, ರತ್ನ ಇತ್ಯಾದಿ ಮಣಿಗಳಿಂದ ನಿರ್ಮಿತವಾದ, ಮತ್ತು ಮನೋಮಯವಾದ (ಮಾನಸಿಕ) ಪ್ರತಿಮೆಗಳೆಂದು **ಆಹಿತ ಪ್ರತಿಮೆಗಳಲ್ಲಿ** ಎರಡು ವಿಧವಾದ ಪ್ರತೀಕಗಳಿವೆ :–

ಪ್ರಮಾಣ :–

**ಶೈಲೀ ದಾರುಮಯೀ ಲೌಹೀ ಲೇಪ್ಯಾ ಲೇಖ್ಯಾ ಚ ಸೈಕತೀ ।**

**ಮನೋಮಯೀ ಮಣಿಮಯೀ ಪ್ರತಿಮಾಽಷ್ಟವಿಧಾ ಸ್ಮೃತಾ ॥**

– ಇತಿ ಶ್ರೀ ಮದ್ಭಾಗವತೇ

ಅಂದರೆ 1. ಶೈಲಿ – ಶಿಲಾಪ್ರತಿಮೆಗಳು.

2. ದಾರುಮಯೀ – ಮರದ ಪ್ರತಿಮೆಗಳು (ಜಗನ್ನಾಥ ಕ್ಷೇತ್ರಮೂರ್ತಿ)

3. ಲೌಹೀ – ಪಂಚಲೋಹ ಪ್ರತಿಮೆಗಳು (ಅಥವಾ ಕೇವಲ ಬಂಗಾರ, ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚಿನ ಪ್ರತಿಮೆಗಳು)

4. ಲೇಪ್ಯಾ – ವನಸ್ಪತಿಗಳ ರಸವಿಶೇಷಗಳಿಂದ ನಿರ್ಮಿತಪ್ರತಿಮೆಗಳು

5. ಲೇಖ್ಯಾ – ವನಸ್ಪತಿಗಳ ರಸವಿಶೇಷಗಳಿಂದ ನಿರ್ಮಿತಪ್ರತಿಮೆಗಳು

6. ಸೈಕತೀ – ಮರಳಿನ ಪ್ರತಿಮೆಗಳು (ಮೃತ್‌ಪ್ರತಿಮಾಗಳು ಗ್ರಾಹ್ಯ).

7. ಮನೋಮಯೀ – ಮಾನಸಿಕಪ್ರತಿಮೆಗಳು.

8. ಮಣಿಮಯೀ – ರತ್ನ, ಮುತ್ತು ಇತ್ಯಾದಿ ಅನರ್ಘ್ಯಮಣಿನಿರ್ಮಿತ ಪ್ರತಿಮೆಗಳು. ಈ ರೀತಿ **ಎಂಟು ವಿಧವಾದ** ಪ್ರತಿಮೆಗಳು ಅಹಿತಪ್ರತೀಕಗಳೆಂದು ಜಡಪ್ರತಿಮಾಗಳು ಎಂದು **ಶ್ರೀಮದ್ಭಾಗವತ**ತ ವಚನ.

ಇಂತಹ ಅಹಿತಪ್ರತಿಮೆಗಳು ಕೇವಲ ಜಡಪ್ರತೀಕಗಳು. ತತ್ತ್ವನ್ಯಾಸ ಮತ್ತು ಮಾತೃಕಾನ್ಯಾಸ ಪದ್ಧತಿಯ ದ್ವಾರಾ ವಿಧ್ಯುಕ್ತವಾಗಿ ಈ ಪ್ರತಿಮೆಗಳನ್ನು **'ಸ್ವಬಿಂಬವಾಹಾನ'** ಪೂರ್ವಕ, ಆವಾಹನಗೈದು, ನಂತರ ಪೂಜಿಸಬೇಕು.

ಪ್ರಮಾಣ : –

ಓಂ ನ ಪ್ರತೀಕ ನಹಿಸಃ ಓಂ ||

– ಎಂದು **ಬ್ರಹ್ಮಸೂತ್ರವಾಕ್ಯ** ಪ್ರಮಾಣಾನುಸಾರ, ಪೂರ್ವೋಕ್ತ ಆಹಿತಪ್ರತೀಕಗಳೇ ಪರಮಾತ್ಮನಲ್ಲ. ಅವುಗಳಲ್ಲಿ ಆವಾಹನಾದಿಗಳಿಂದ ಸನ್ನಿಹಿತವಾದ ಮೂರ್ತಿಯನ್ನು ಪೂಜಿಸಬೇಕೆಂದು ಸೂತ್ರವಾಕ್ಯಗತ ಅಭಿಪ್ರಾಯವು.

ಪ್ರಕೃತಿಯಲ್ಲಿ ಸಹಜರೂಪದಲ್ಲಿರುವ ಪರ್ವತಾದಿಗಳು, ಗಂಡಕೀ ನದಿಯಲ್ಲಿ ದೊರೆಯುವ ಸಾಲಗ್ರಾಮಾದಿಶಿಲೆಗಳು. ಇತ್ಯಾದಿಪ್ರತೀಕಗಳು **ಸಹಜಾಚಲ ಪ್ರತಿಮೆಗಳೆಂದೆನಿಸುವುವು.** ಸಹಜ – ಪ್ರಕೃತಿಯಲ್ಲಿ ಸಹಜರೂಪದಲ್ಲಿ ದೊರೆಯುವ, ಅಚಲಪ್ರತಿಮೆಗಳು – ಜಡಪ್ರತಿಮೆಗಳು.

ಸಾಲಿಗ್ರಾಮಾದಿಶಿಲೆಗಳಲ್ಲಿ ಶ್ರೀಪರಮಾತ್ಮನು ಸ್ವಯಂವ್ಯಕ್ತ–ರೂಪದಿಂದಿರುವನು. ಇವುಗಳಲ್ಲಿ ಆವಾಹನಾದಿವಿಧಿಗಳು ಬೇಕಿಲ್ಲ. ನೇರವಾಗಿ ಪೂಜಿಸಬಹುದು. ಅಂತೆಯೇ ತಿರುಪತಿ, ಶ್ರೀಮುಷ್ಣ ಇತ್ಯಾದಿ ಭರತಖಂಡದಲ್ಲಿ ಸುಪ್ರಸಿದ್ಧವಾಗಿರುವ **ಎಂಟು ಸ್ವಯಂವ್ಯಕ್ತಕ್ಷೇತ್ರಗತ ಮೂರ್ತಿಗಳು.** ಸಹಜಾಚಲಪ್ರತೀಕಗಳೆಂದು ಪ್ರಮುಖವಾಗಿವೆ.

ಪ್ರಮಾಣ :–

೫. ಪೂರ್ವೋಕ್ತ ನಾಲ್ಕು ಬಗೆಯ ಪ್ರತೀಕಗಳಲ್ಲಿ (೧) (ಚಲಪ್ರತೀಕಗಳು (೨) ಮತ್ತು ಜಡಪ್ರತೀಕಗಳು (೪) **ಗೋಳಕ ಚಿಂತನಾಕ್ರಮವನ್ನು** ವಿವರಿಸುತ್ತಾರೆ : –

(1) **ಚಲಪ್ರತೀಕಗಳಲ್ಲಿ ಗೋಳಕಪಂಚಗಳನ್ನು ಸ್ಮರಿಸಬೇಕು.** : –

(1) ದೇಹಗೋಳಕ (ಜೀವಾಧಿಷ್ಠಾನ ರೂಪವಾದಸ್ಥೂಲದೇಹ)

(2) ತದಭಿಮಾನಿದೇವತಾಗೋಳಕ.

(3) ಮನೋಮಯ ಪ್ರತಿಮಾಗೋಳಕ.

(4) ತದಂರ್ಗತ ಭಾರತೀರಮಣಮುಖ್ಯಪ್ರಾಣರೂಪ ವಾಯುಗೋಳಕ.

(5) ತದಂರ್ಗತ ಲಕ್ಷ್ಮ್ಯಂತರ್ಗತ ಭಗವದ್ರೂಪ (ಸ್ವಬಿಂಬ)

**2. ಜಡಪ್ರತೀಕಗಳಲ್ಲಿ ಗೋಳಕತ್ರಯಗಳ ಸ್ಮರಣೆ : –**

1. ಪರ್ವತಾಭಿಮಾನಿ ದೇವತಾಗೋಳಕ (ಕ್ಷೇತ್ರಾಭಿಮಾನಿದೇವತಾ)

2. ಮನೋಮಯವಾಸನಾರೂಪ ಗೋಳಕ.

3. ತದಂರ್ಗತ ಪ್ರಾಣಗೋಳಕ.

**ವಿಶೇಷ ವಿಚಾರ : –**

**"ಸರ್ವತ್ರ ಚರಮಾಂ ಪ್ರಾಣಂ ಪ್ರತಿಮಾತ್ವೇನ ಭಾವಯೇತ್ ।**
**ವಿನಾ ವಾಯುಪ್ರತೀಕಂ ಸ್ಥಿರಂ ನಿರಯಭಾಗ್ಯವೇತ್" ॥**

ಎಂಬ ಪ್ರಮಾಣವಚನಾನುಸಾರ, ಈ ಪ್ರತಿಮೆಗಳಲ್ಲಿ ಪ್ರತೀಕಾಂತರ್ಗತ ತೇಜೋಮಯ ವಾಯುರೂಪ, ತದಂತರ್ಗತ ರಮಾದೇವಿರೂಪ, ತದಂತರ್ಗತ ಧ್ಯೇಯಮೂರ್ತಿ ಚಿಂತಿಸಿ, ಹೀಗೆ ಅನುಸಂಧಾನಪೂರ್ವಕ ಮಾಡಬೇಕು. ವಾಯುಗೋಳಕ ಚಿಂತನೆ ಇಲ್ಲದಿದ್ದರೆ, ನರಕಾದ್ಯನರ್ಥ ಫಲಗಳು ಉಂಟಾಗುತ್ತವೆ. **(ಸ್ಥಿರಂ ನಿಯರ ಭಾಗ್ಯವೇತ್)** ಎಂದು ಪ್ರಮಾಣಶ್ಲೋಕಾಭಿಪ್ರಾಯವು. ॥೨೭॥

## ಪದ್ಯ ೨೮

ಮೂಲ :—

ವಾರಿಜಾಸನ ವಾಯು ವಿಂದ್ರ ಉ ।
ಮಾರಮಣ ನಾಕೇಶ ಸ್ಮರಹಂ ।
ಕಾರಿಕಪ್ರಾಣಾದಿಗಳು ಪುರುಷರ ಕಳೇವರದಿ ॥
ತೋರಿಕೊಳದನಿರುದ್ಧ ದೋಷ ವಿ ।
ದೂರ ನಾರಾಯಣನ ರೂಪ ಶ ।
ರೀರಮಾನಿಗಳಾಗಿ ಭಜಿಸುತ ಸುಖವ ಕೊಡುತಿಹರು॥ ॥೨೮॥

ಅವತರಣಿಕೆ :—

ಪುರುಷರ ಸ್ಥೂಲದೇಹದ ಅಭಿಮಾನಿದೇವತೆಗಳ ವಿಚಾರ ಮತ್ತು ಆ ದೇವತಾವರ್ಗದಿಂದ ಸಂಸೇವ್ಯಮಾನರಾದ ಶ್ರೀ ಅನಿರುದ್ಧ ಹಾಗೂ ಶ್ರೀಮನ್ನಾರಾಯಣನ ರೂಪವಿಶೇಷಗಳನ್ನು ತಿಳಿಸುತ್ತಾರೆ – **ವಾರಿಜಾಸನ** – ಎಂಬ ಪ್ರಸಕ್ತಸಂಧಿಗತ ೨೮ನೆಯ ಈ ಪದ್ಯದಿಂದ. ॥೨೮॥

ಪ್ರತಿಪದಾರ್ಥ :

ವಾರಿಜಾಸನ = ಪದ್ಮನಾಭರೂಪೀ ಶ್ರೀ ಪರಮಾತ್ಮನ ನಾಭೀಕಮಲದಲ್ಲಿ ಉತ್ಪನ್ನರಾದ ಚತುರ್ಮುಖಬ್ರಹ್ಮದೇವರು. ವಾಯು = ಭಾರತೀರಮಣರಾದ ಮುಖ್ಯಪ್ರಾಣದೇವರು, ವೀಂದ್ರ = ಪಕ್ಷಿಶ್ರೇಷ್ಠರಾದ ಶ್ರೀಗರುಡದೇವರು, ಉಮಾರಮಣ = ಪಾರ್ವತಿಪತಿಯಾದ ಶ್ರೀ ಮಹರುದ್ರದೇವರು, ನಾಕೇಶ = ಸ್ವರ್ಗಾಧಿಪತಿಯಾದ ಇಂದ್ರದೇವರು, ಸ್ಮರ = ಮನ್ಮಥ, ಅಹಂಕಾರಿಕ ಪ್ರಾಣ = ತ್ವಗಿಂದ್ರಿಯಾಭಿಮಾನಿಯಾದ ಅಹಂಕಾರಿಕಪ್ರಾಣ, ಆದಿಗಳು = ಇವರೇ

ಮುಂತಾದ ದೇವತಾವೃಂದ, ಪುರುಷರ – ಗಂಡಸರ, ಕಳೇವರದಿ–ಸ್ಥೂಲಶರೀರಗಳಲ್ಲಿ, ತೋರಿಗೊಳದ – ಸ್ಥೂಲದೇಹದಲ್ಲಿ ಪ್ರಕಾಶತೋವ್ಯಾಪತನಾಗಿರುವ ಜೀವನಿಗೆ ಗೋಚರಿಸದೆ, ಅನಿರುದ್ಧ – ಅನಿರುದ್ಧ ನಾಮಕ ಶ್ರೀ ಪರಮಾತ್ಮ, ದೋಷವಿದೂರ – ಲವಲೇಶವೂ ದೋಷವಿಲ್ಲದ, ನಾರಾಯಣನ – ಮೂಲರೂಪೀ ಶ್ರೀಮನ್ನಾರಾಯಣನ, ರೂಪ – ಭಗವದ್ರೂಪದ್ರೂಪಗಳನ್ನು, ಶರೀರಮಾನಿಗಳಾಗಿ= ಸ್ಥೂಲದೇಹಾಭಿಮಾನಿಗಳಾಗಿ ವಿದ್ಯಮಾನರಾಗಿದ್ದು, ಭಜಿಸುವ= ಅನಿರದ್ಧ ಮತ್ತು ನಾರಾಯಣ ರೂಪಗಳನ್ನು ಮನಸಾ ಕೊಂಡಾಡುತ್ತಾ, ಸುಖವ= ಜೀವನಿಗೆ ಶರೀರದ್ವಾರಾ ದೇಹಸುಖವನ್ನು ಕೊಡುತಿರು= ನೀಡುತ್ತಿದ್ದಾರೆ. ಅಂತೆಯೇ, ಜ್ಞಾನ, ಭಕ್ತಿ, ವೈರಾಗ್ಯ ಎಂಬ ದೈವೀ ಸಂಪತ್ತಿಸ್ವರೂಪವಾದ ಆನಂದ ಭಾಗ್ಯವನ್ನು ಕರುಣಿಸುವುರು. ೨೮

## ವ್ಯಾಖ್ಯಾನಗಳು

### (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ.

ಪುರಷರ ದೇಹಾಭಿಮಾನಿ ದೇವತೆಗಳ ಹೇಳತಾರೆ. ಕಮಲವೇ ಆಸವವಾದ ಬ್ರಹ್ಮದೇವರು, ವಾಯುದೇವರು, ಪಕ್ಷಿಶ್ರೇಷ್ಠರಾದ ಗರುಡದೇವರು, ಪಾರ್ವತಿಪತಿಯಾದ ರುದ್ರದೇವರು, ಸ್ವರ್ಗಾಧಿಪತಿಯಾದ ಇಂದ್ರದೇವರು, ಮನ್ಮಥ, ತ್ವಗಭಿಮಾನಿಯಾದ ಅಹಂಕಾರಿಕ ಪ್ರಾಣದೇವರು ಇವರೇ ಮೊದಲಾದ ಪುರುಷದೇವತೆಗಳು, ಪಾಪಗಳಿಂದ ಕೇವಲ ದೂರನಾದ ಅನಿರುದ್ಧನಾಮಕ ಪರಮಾತ್ಮನ ರೂಪ ಒಂದು, ನಾರಾಯಣರೂಪ ಒಂದು, ಅಂತು ಎರಡು ರೂಪಗಳು, ಪುರುಷ ಸ್ಥೂಲದೇಹದಲ್ಲಿ, ದೇಹಾಂತರ್ಗತ ಜೀವಗೆ ಪೂರ್ವೋಕ್ತ ದೇವತೆಗಳು, ಪರಮಾತ್ಮ ಇವರು ತೋರಿಕೊಳ್ಳದೆ, ಸ್ಥೂಲದೇಹಾಭಿಮಾನಿಗಳಾಗಿ. ಅನಿರುದ್ಧ ನಾರಾಯಣ ರೂಪಗಳ ಈ ಪೂರ್ವೋಕ್ತ ಬ್ರಹ್ಮಾದಿಗಳು ಭಜಿಸುತ್ತಾ ಇದ್ದಾರೆ. ಈ ಪ್ರಕಾರ ಅನುಸಂಧಾನದಿಂದ ತಿಳಿದ ಅಧಿಕಾರಿಗೆ ವಿಷಯಾಸಕ್ತ ಜೀವನ ಸ್ವರೂಪದಲ್ಲಿ ತನ್ನಾಮದಿಂದ ಪರಮಾತ್ಮನೇ

ಇರೋವನಾಗಿದ್ದಾನೆ. ಈ ದೇವತೆಗಳು ಪುರುಷಾಕಾರದಿಂದ ಇದ್ದಾರೆ. ೨೮

೨. ಭಾವಪ್ರಕಾಶಿಕೆ:—

ಪುರುಷರ ದೇಹಗಳಲ್ಲಿ ಬ್ರಹ್ಮ, ವಾಯು, ಗರುಡ, ರುದ್ರ, ಇಂದ್ರ, ಮನ್ಮಥ, ಅಹಂಕಾರಿಕಪ್ರಾಣ ಇತ್ಯಾದಿ ದೇವತೆಗಳು ಶರೀರಾಭಿಮಾನಿಗಳಾಗಿ, ಆ ಶರೀರಗಳಲ್ಲಿರುವ ಅನಿರುದ್ಧ, ನಾರಾಯಣ ರೂಪಗಳನ್ನು ಭಜಿಸುತ್ತ, ಪ್ರಾಣಿಗಳಿಗೆ ಸುಖವನ್ನು ಕೊಡುವರೆಂದು ಎಲ್ಲಾ ಪುರುಷರ ದೇಹದಲ್ಲಿ ಚಿಂತಿಸಿಸ, ಪುರುಷರೆಲ್ಲರೂ ಪುರುಷರೂಪನಾದ ಪರಮಾತ್ಮನ ಚಲಪ್ರತಿಮೆಯೆಂದು ಪೂಜಿಸಬೇಕು. ೨೮

೩. ಭಾವದರ್ಪಣಟೀಕಾ:—

ಈಗ ಬ್ರಹ್ಮ, ವಾಯು, ಗರುಡ, ರುದ್ರೇಂದ್ರ, ಸ್ಮರ, ಅಹಂಕಾರಿಕಪ್ರಾಣ ಮುಖತತ್ತ್ವೇಶರು ಅನಿರುದ್ಧ ನಾರಾಯಣ ದೇವರನ್ನ ಉಪಾಸನೆ ಮಾಡುತ್ತಾ, ಪುರುಷರ ದೇಹದಲ್ಲಿದ್ದಾರೆಂದು ಹೇಳುತ್ತಾರೆ— ವಾರಿಜಾಸನೇತಿ ೨೮

೪. ಶ್ರೀವ್ಯಾಸದಾಸಸಿದ್ಧಾಂತ ಕೌಮುದೀ (ಸಂಸ್ಕೃತ ಮೂಲ):—

"ವಾರೀಜ" ಇತಿ ವಾರಿಜಾಸನ— ಬ್ರಹ್ಮ ವೀಂದ್ರ:— ಗರುಡ: ನಾರೇಶ: ಇಂದ್ರ: ದೋಷೇತಿ ನಾರಾಯಣ ಪದಾರ್ಥ: ವಿಶೇಷ ವಿವಕ್ಷಯಾ ಏವವತ್ ೨೮

ಕನ್ನಡಾರ್ಥ:—

ಪುರುಷರಲ್ಲಿ ಚಿಂತಿಸಬೇಕಾದ ವಿಷಯ ತಿಳಿಸುತ್ತಾರೆ – "ವಾರಿಜಾಸನ"— ಎಂಬ ಪದ್ಯದಿಂದ ವಾರಿಜಾಸನ— ಚತುರ್ಮುಖಬ್ರಹ್ಮದೇವರು ವೀಂದ್ರ:— ಪಕ್ಷಿರಾಜನಾದ ಗರುಡ. ನಾರೇಶ:— ಸ್ವರ್ಗಾಧಿಪನಾದ ದೇವೇಂದ್ರನು. "ದೋಷವಿದೂರ" ಎಂಬ ಪದವು ನಾರಾಯಣಶಬ್ದದ ಅರ್ಥವೇ ಆಗಿದೆ. ಅರ= ದೋಷ ಇವುಗಳಿಗೆ ಆಶ್ರಯನಾಗದವನು— ನಾರಾಯಣನು. ಅವನೇ ದೋಷವಿದೂರನು ಅಂತಹ

ನಾರಾಯಣನ ರೂಪವಿಶೇಷವನ್ನು ಉಪಾಸನೆ ಮಾಡುತ್ತಲಿರುತ್ತಾರೆ. ೨೮

## (೫) ಶ್ರೀ ಗುರುಹೃದಯಪ್ರಕಾಶಿಕೆ ವ್ಯಾಖ್ಯಾನ

ಪುರುಷಶರೀರಾಭಿಮಾನಿದೇವತೆಗಳನ್ನು ತಿಳಿಸುತ್ತಾರೆ, ವಾರಿಜಾಸನ ಎಂದು. ವಾರಿಜಾಸನ ಎಂಬ ಬ್ರಹ್ಮದೇವರು, ವಾಯುದೇವರು, ವೀಂದ್ರನೆಂಬ ಗರುಡದೇವರು, ಉಮಾರಮಣನೆಂಬ ರುದ್ರನು, ನಾಕೇಶನೆಂಬ ಇಂದ್ರ, ಸ್ಮರನೆಂಬ ಮನ್ಮಥ, ಅಹಂಕಾರಿಕಪ್ರಾಣನೆಂಬ ತ್ವಗಭಿಮಾನಿವಾಯು ಮೊದಲಾದ ದೇವತೆಗಳು ಪುರುಷ ಶರೀರದಲ್ಲಿ ಅಭಿಮಾನಿಗಳಾಗಿದ್ದು, ಅಜ್ಞರಿಗೆ ತಿಳಿಸಿಕೊಳ್ಳದೆ, ದೋಷವಿದೂರನಾದ ಅನಿರುದ್ಧ–ನಾರಾಯಣರೂಪಗಳನ್ನು ಭಜಿಸುತ್ತಾ, ಹೀಗೆ ತಿಳಿದು ಪೂಜಿಸುವವರಿಗೆ ಸುಖವನ್ನು ಕೊಡುತ್ತಿರುವರು. ॥೨೮॥

## ಸರ್ವವ್ಯಾಖ್ಯಾನ ಸಾರ ಸಂಗ್ರಹ

ಹಿಂದಿನ ಪದ್ಯಗಳಲ್ಲಿ ವ್ಯತಿರೇಕ ಮತ್ತು ಅನ್ವಯಗಳೆಂಬ ಎರಡು ಪ್ರಕಾರವಾದ ಪೂಜಾವಿಧಾನಗಳನ್ನು ತಿಳಿಸಿ, ಜಲಜನಾಭನಿಗೆ ಪ್ರತೀಕರೂಪವಾದ ಚಲ ಮತ್ತು ಜಡಪ್ರತಿಮಾದಿಗಳ ವಿಷಯಗಳನ್ನು ತಿಳಿಸಿ, ಪ್ರಸಕ್ತಪದ್ಯದಿಂದ ಪುರುಷರ ಸ್ಥೂಲಶರೀರದ ಅಭಿಮಾನಿದೇವತೆಗಳು ಮತ್ತು ಅವರಿಂದ ಉಪಾಸ್ಯರಾದ ಅನಿರುದ್ಧ ಮತ್ತು ನಾರಾಯಣ ಎಂಬ ಭಗವದ್ರೂಪಗಳ ವಿವರಣೆ ತಿಳಿಸುತ್ತಾರೆ.

೧. ಪದ್ಮನಾಭನಾಮಕ ಶ್ರೀಹರಿಯ ನಾಭೀಕಮಲದಲ್ಲಿ ಉದ್ಭವರಾದ ಚತುರ್ಮುಖ ಬ್ರಹ್ಮದೇವರಿಗೆ ಕಮಲೋದ್ಭವರೆಂದು ಹೆಸರು. ಅವರೇ ವಾರಿಜಾಸನರು. ವಾರಿ, ಎಂದರೆ ನೀರು. ಅದರಲ್ಲಿ ಉತ್ಪನ್ನವಾದದ್ದು ಕಮಲ (ವಾರಿಜ). ಆ ಕಮಲವನ್ನೇ ಪೀಠ (ಆಸನ)ವನ್ನಾಗಿ ಉಳ್ಳವರು ವಾರಿಜಾಸನನಾಮಕರಾದ ಚತುರ್ಮುಖ ಬ್ರಹ್ಮದೇವರು. ಋಜುಪುಂಗವರಾದ ಬ್ರಹ್ಮದೇವರು ಪುರುಷರ ಶರೀರಾಭಿಮಾನಿಗಳು. ಪಿಂಡಾಂಡರೂಪವಾದ ಸ್ಥೂಲದೇಹಗತ ಮಹತ್ತತ್ತ್ವಾಭಿಮಾನಿಗಳು.

೨. ಭಾರತೀರಮಣರಾದ ಸಮೀರನಾಮಕ ಮುಖ್ಯಪ್ರಾಣದೇವರೇ ವಾಯು. ಶ್ರೀ ಹರಿಯ ಪ್ರಥಮಾಂಗಭೂತರು. ಶುದ್ಧಸತ್ವಪ್ರಾಚುರ್ಯ.ದೇಹವುಳ್ಳವರು. ನಮ್ಮ ದೇಹದಲ್ಲಿ ಪ್ರತಿದಿನವೂ ೨೧,೬೦೦ ಸಂಖ್ಯಾಕವಾದ ಶ್ವಾಸಮಂತ್ರವನ್ನು ರಚಿಸಿ, ಜಪಿಸುತ್ತಾ, ಹಂಸನಾಮಕ ಬಿಂಬನಿಗೆ ಅರ್ಪಿಸುತ್ತಲಿರುವರು. ಶ್ವಾಸಪತಿಗಳಾದ ವಾಯುದೇವರು ಸ್ಥೂಲದೇಹಗತ ೭೨,೦೦೦ ಪುರುಷನಾಮಕನಾಡಿಗಳಲ್ಲಿ ಸಂಚರಿಸುತ್ತಿರುವರು.

೩. ಪಕ್ಷಿಶ್ರೇಷ್ಠರಾದ ಶ್ರೀ ಗರುಡದೇವರು ವೀಂದ್ರರು. ವೀ – ಪಕ್ಷಿಗಳ ಸಮೂಹ. ಇಂದ್ರ – ಶ್ರೇಷ್ಠ. ಪಕ್ಷಿಶ್ರೇಷ್ಠವಾದ ವೀಂದ್ರನಾಮಕ ಗರುಡದೇವರು ಚಿತ್ತಾಭಿಮಾನಿಗಳಾಗಿದ್ದಾರೆ. ಸ್ಥೂಲದೇಹಗತ ಅಹಂಕಾರ ತತ್ತ್ವಕ್ಕೆ ಅಭಿಮಾನಿಗಳು.

೪. ಪಾರ್ವತೀಪತಿಯಾದ ಮಹರುದ್ರದೇವರೇ ಉಮಾರಮಣರು. ಉಮಾಪತಿಯಾದ ರುದ್ರದೇವರು ಮನೋಭಿಮಾನಿಗಳಾಗಿ. ಅಹಂಕಾರ ತತ್ತ್ವಾಭಿಮಾನಿಗಳಾಗಿ ನಮ್ಮ ಸ್ಥೂಲದೇಹದಲ್ಲಿ ವಿದ್ಯಮಾನರಾಗಿದ್ದಾರೆ. ಗುರುಡ ಮತ್ತು ರುದ್ರದಿಂದ ಶೇಷದೇವರೂ ಗ್ರಾಹ್ಯರೂ.

೫. ಸ್ವರ್ಗಾಧಿಪತಿಯಾದ ಮಹೇಂದ್ರನೇ ನಾ ಕೇಶನು. ನಾಕ – ಸ್ವರ್ಗ, ಈಶ – ಅಧಿಪತಿ (ಸುರರಿಗೆ ನಿಯಾಮಕನು). ನಾಕೇಶವಾದ ಇಂದ್ರನು ಮನೋಭಿಮಾನಿ ದೇವತೆ. ಮನಸ್ಸಿನ ದ್ವಾರಾ ಭೋಗಾಪೇಕ್ಷೆಯನ್ನು ಉಂಟುಮಾಡುತ್ತಾನೆ.

೬. ಮನ್ಮಥನು ಸ್ಮರ ನಾಮಕನು. ಸ್ಮರನೂ ಸಹ ಇಂದ್ರನಂತೆಯೇ ಉಪಮನಸ್ಸಿನ ಅಭಿಮಾನಿ. ಕಾಮಾಪೇಕ್ಷೆಯನ್ನುಂಟುಮಾಡುವವನು.

೭. ಪಂಚಜ್ಞಾನೇಂದ್ರಿಯಗಳಲ್ಲಿ ಒಂದಾದ ತ್ವಗಿಂದ್ರಿಯಾಭಿಮಾನಿ ಅಹಂಕಾರಿಕ ಪ್ರಾಣನು. ಇವನು ೪೯ ಮರುದ್ಗಣದಲ್ಲಿ ಸೇರಿದ ದೇವತೆ. ಸ್ಪರ್ಶಗುಣಗ್ರಾಹಕನು. ಇಂತು,, ಬ್ರಹ್ಮ, ವಾಯು, ಗರುಡ, ರುದ್ರ, ಶೇಷ, ಇಂದ್ರ,

ಮನ್ಮಥ, ಅಹಂಕಾರಿಕಪ್ರಾಣ ಇತ್ಯಾದಿ ತತ್ವಾಭಿಮಾನಿದೇವತಾವರ್ಗ, ಪುರುಷರ ಸ್ಥೂಲದೇಹಾಭಿಮಾನಿಗಳಾಗಿದ್ದಾರೆ.

೮. ಶಾಂತಿಪತೀ **ಅನಿರುದ್ಧ ನಾಮಕ** ಶ್ರೀಪರಮಾತ್ಮ ಮತ್ತು ಸಮಸ್ತ ದೋಷವಿದೂರನೂ ಅನಂತಕಲ್ಯಾಣಗುಣಗಣ ಪರಿಪೂರ್ಣನೂ ಆದ ಮೂಲರೂಪಿ ಶ್ರೀಮನ್ನಾರಾಯಣನು ಪೂರ್ವೋಕ್ತ ಪುರುಷ ಶರೀರಾಭಿಮಾನಿದೇವತಾ ವರ್ಗದಿಂದ ಸಂಸೇವ್ಯಮಾನರಾಗಿದ್ದಾರೆ.

ಇಂತಹ ಅನಿರುದ್ಧ ಮತ್ತು ನಾರಾಯಣರು, ಸ್ಥೂಲದೇಹದಲ್ಲಿ ಆವಾಸನಾಗಿರುವ ಹಾಗೂ ಪ್ರಕಾಶತೋವ್ಯಾಪ್ತನಾದ ಜೀವನಿಗೆ ಗೋಚರಿಸದೆ, ಶರೀರಾಭಿಮಾನಿ ದೇವತೆಗಳ ದ್ವಾರಾ, ಜೀವನಿಗೆ ಸುಖಸಾಧನ ಸಂಪತ್ತುಗಳನ್ನು ನೀಡಿ, ಶರೀರ ದ್ವಾರಾ ಸುಖಪಡಿಸುವರು. ॥೨೮॥

## ಪದ್ಯ ೨೯

### ಮೂಲ

ಸಿರಿ ಸರಸ್ವತಿ ಭಾರತೀ ಸೌ ।
ಪರಣಿ ವಾರುಣಿ ಪಾರ್ವತೀಮುಖ ।
ರಿರುತಿಹರು ಸ್ತ್ರೀಯರೊಳಗಭಿಮಾನಿಗಳು ತಾವೆನಿಸಿ ॥
ಅರುಣವರ್ಣನಿಭಾಂಗ ಶ್ರೀ ಸಂ ।
ಕರುಷಣ ಪ್ರದ್ಯುಮ್ನ ರೂಪಗ ।
ಳಿರುಳು ಹಗಲು ಉಪಾಸನವಗೈವುತಲೆ ಮೋದಿಪರು. ॥೨೯॥

### ಅವತರಣಿಕೆ :—

ಸ್ತ್ರೀಯರ ದೇಹಾಭಿಮಾನಿಗಳಾದ ದೇವತೆಗಳು ಮತ್ತು ಅವರಿಂದ ಉಪಾಸ್ಯನಾದ ಭಗವದ್ರೂಪಗಳ ವಿಷಯ ತಿಳಿಸುತ್ತಾರೆ. – **ಸಿರಿ ಸರಸ್ವತಿ** – ಎಂಬ ಪ್ರಸಕ್ತ ಸಂಧಿಗತ ೨೯ನೆಯ ಈ ಪದ್ಯದಿಂದ. ॥೨೯॥

### ಪ್ರತಿಪದಾರ್ಥ :—

**ಸಿರಿ** = ಪರಮಾತ್ಮನ ಪತ್ನಿಯಾದ ಶ್ರೀನಾಮಕ ಲಕ್ಷ್ಮೀದೇವಿಯರು, **ಸರಸ್ವತೀ** = ಬ್ರಹ್ಮದೇವರ ಪತ್ನಿ ಸರಸ್ವತೀದೇವಿಯರು, **ಭಾರತೀ** = ವಾಯುಪತ್ನೀ ಭಾರತೀ ದೇವಿಯರು, **ಸೌಪರಣೀ** = ಗರುಡಪತ್ನಿ ಸೌಪರ್ಣೀದೇವಿಯರು, **ವಾರುಣೀ** = ಶೇಷಪತ್ನಿ ವಾರುಣೀದೇವಿಯರು, **ಪಾರ್ವತೀ** = ರುದ್ರಪತ್ನಿ ಪಾರ್ವತೀ ದೇವಿಯರು, **ಮುಖರು** = ಇವರೇ ಮೊದಲಾದ ಸ್ತ್ರೀದೇವತಾವರ್ಗ, **ಸ್ತ್ರೀಯರೊಳು** = ಸ್ತ್ರೀಯರಲ್ಲಿ, **ಅಭಿಮಾನಿಗಳು** = ಶರೀರಾಭಿಮಾನಿಗಳೆಂದು, **ತಾವೆನಿಸಿ** = ತಾವು ಕರೆಯಿಸಿದವರಾಗಿ, **ಇರುತಿಹರು** = ವಿದ್ಯಮಾನರಾಗಿದ್ದಾರೆ, **ಅರುಣ ವರ್ಣ** = ಸೂರ್ಯೋದಯಕ್ಕೆ ಮುಂಚೆ ಗೋಚರಿಸುವ ಅರುಣಬಣ್ಣವಿಶಿಷ್ಟನಾಗಿ, **ನಿಭಾಂಗ** =

ಕಾಂತಿಯುಕ್ತವಾದ ಶರೀರವುಳ್ಳ, **ಸಂಕರ್ಷಣ** = ಪೀತವರ್ಣ ಸಂಕರ್ಷಣರೂಪೀ ಶ್ರೀಪರಮಾತ್ಮ, ಪ್ರದ್ಯುಮ್ನ = ಕೆಂಪು ಛಾಯೆಯ ಸುವರ್ಣವರ್ಣಾತ್ಮಕ ಪ್ರದ್ಯುಮ್ನನಾಮಕ ಶ್ರೀಪರಮಾತ್ಮ (ಪೀತವರ್ಣ ಮತ್ತು ಸುವರ್ಣವರ್ಣದ ಕೆಂಪುಬಣ್ಣ ಇವುಗಳ ಮಿಶ್ರಣ, ಅರುಣವರ್ಣ) **ರೂಪಗಳ** = ಸಂಕರ್ಷಣ ಮತ್ತು ಪ್ರದ್ಯುಮ್ನ ಸ್ತ್ರೀರೂಪಗಳನ್ನು, **ಇರುಳು ಹಗಲು** = ರಾತ್ರಿ ಹಗಲು, ಅಂದರೆ, ನಿರಂತರವೂ, **ಉಪಾಸನೆಗೈವುತಲೆ** = ಧ್ಯಾನಪೂರ್ವಕ ಉಪಾಸನೆ ಮಾಡುತ್ತಾ, **ಮೋದಿಪರು** = ಆನಂದಿಸುತ್ತಿದ್ದಾರೆ. ॥೨೯॥

## ವ್ಯಾಖ್ಯಾನಗಳು

### (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ :–

ಸ್ತ್ರೀಯರ ದೇಹಾಭಿಮಾನಿಗಳು ಹೇಳತಾರೆ –

ಪರಮಾತ್ಮನ ಪತ್ನಿಯಾದ ಶ್ರೀಲಕ್ಷ್ಮೀದೇವೇರು, ಬ್ರಹ್ಮಪತ್ನಿ ಸರಸ್ವತಿದೇವೇರು., ವಾಯುಪತ್ನಿ ಭಾರತೀದೇವೇರು, ಗರುಡಪತ್ನಿ ಸೌಪರಣೀದೇವೇರು, ಶೇಷಪತ್ನಿಯಾದ ವಾರುಣೀದೇವೇರು, ರುದ್ರಪತ್ನಿಯಾದ ಪಾರ್ವತೀದೇವೇರು ಇವರೇ ಮೊದಲಾದ ಸ್ತ್ರೀದೇವತೆಗಳು, ಅರುಣ (ಸೂರ್ಯ) ವರ್ಣ ಪ್ರದ್ಯುಮ್ನ, ಕಾಂತಿಯುಕ್ತನಾದ ಶರೀರವುಳ್ಳ ಪೀತವರ್ಣ ಸಂಕರ್ಷಣರೂಪಿ ಪರಮಾತ್ಮ, ಕೆಂಪುಛಾಯೆ ಸ್ವರ್ಣವರ್ಣ ಪ್ರದ್ಯುಮ್ನನಾಮಕ ಪರಮಾತ್ಮ ಈ ಉಭಯರೂ, ಶ್ರೀರೂಪಗಳ ಧರಿಸಿ, ಸ್ತ್ರೀಯರಲ್ಲಿ ಈ ದೇವತೆಗಳು ಅಭಿಮಾನಿಗಳು ಎಂತ ಅನಿಸಿಕೊಂಡವರಾಗಿ ಇರೋವರಾಗಿದ್ದಾರೆ. ಈ ಪ್ರಕಾರ ಇದ್ದು, **ಸಂಕರ್ಷಣ – ಪ್ರದ್ಯುಮ್ನ** ಸ್ತ್ರೀರೂಪಗಳನ್ನು ರಾತ್ರಿ ಹಗಲು ಉಪಾಸನೆ ಮಾಡುತ್ತಾ, ಸಂತೋಷಪಡುತ್ತಾ ಇರೋವವರಾಗದ್ದಾರೆ. ಈ ಪ್ರಕಾರ ಅನುಸಂಧಾನ ಉಳ್ಳವರಿಗೆ ಸಂತೋಷವೂ ಕೊಡುತಾ ಇರುತ್ತಾರೆ. ಪುರುಷದೇವತೆಗಳುಸ್ತ್ರೀ ಆಕಾರದಿಂದ ಇದ್ದಾರೆ. ಪುರುಷಜೀವರಿಗೆ ಪುರುಷರೂಪ ಬಿಂಬ, ಸ್ತ್ರೀಜೀವರಿಗೆ ಸ್ತ್ರೀರೂಪಬಿಂಬನಾಗಿ ಪರಮಾತ್ಮ ಇದ್ದಾನೆಂತ ತಾತ್ಪರ್ಯ. ॥೨೯॥

**೨. ಭಾವಪ್ರಕಾಶಿಕೆ :—**

ಸ್ತ್ರೀಯರನ್ನೆಲ್ಲ ಶ್ರೀಪರಮಾತ್ಮನ ಚಲಪ್ರತಿಮೆಗಳನ್ನಾಗಿ ಭಾವಿಸಿ, ಆ ದೇಹಗಳಲ್ಲಿ ಲಕ್ಷ್ಮೀ, ಸರಸ್ವತೀ, ಭಾರತೀ, ಸೌಪರ್ಣೀ, ವಾರುಣಿ, ಪಾರ್ವತಿ ಇವರೇ ಮೊದಲಾದ ದೇವತಾಸ್ತ್ರೀಯರು ಇದ್ದು, ಆ ದೇಹದೊಳಗೆ ಕೆಂಪುವರ್ಣಶರೀರ ವುಳ್ಳವನಾಗಿಯೂ, ಸ್ವರ್ಣಚ್ಛಾಯವಾದ ಶರೀರದಿಂದಲೂ ಕೂಡಿದ ಸಂಕರ್ಷಣ ಪ್ರದ್ಯುಮ್ನರೂಪಗಳನ್ನು ರಾತ್ರಿ ಹಗಲು ಸೇವಿಸುತ್ತ ಸುಖದಿಂದರುವರೆಂದು, ಸ್ತ್ರೀ ದೇಹಗಳಲ್ಲಿ ಭಗವಂತನನ್ನು ಪೂಜಿಸಬೇಕು. ಲೋಕದಲ್ಲಿ ಸಾಧಾರಣವಾದ ಲೋಹಾಕಾರದಿಂದ ಮಾಡಲ್ಪಟ್ಟ ಪಂಚಲೋಹ ಪ್ರತಿಮೆಗಳಲ್ಲಿ ಚಿಂತಿಸಬೇಕಾದ ದೇವತೆಗಳನ್ನೂ ಭಗವದ್ರೂಪಗಳನ್ನೂ ಹೇಳುತ್ತಾರೆ. ॥೨೯॥

**೩. ಭಾವದರ್ಪಣಟೀಕಾ :—**

ಸರಸ್ವತೀ, ಭಾರತೀ, ಸೌಪರ್ಣೀ, ವಾರುಣೀ, ಅಪರ್ಣಾಮುಖರಾದ ದೇವತಾಸ್ತ್ರೀಯರು ಸ್ತ್ರೀಯರ ದೇಹದಲ್ಲಿ ಅಭಿಮಾನಿಗಳಾಗಿದ್ದು, ಸಂಕರ್ಷಣ ಪ್ರದ್ಯುಮ್ನನನ್ನು ಭಜಿಸುತ್ತಾರೆಂದು ಹೇಳುತ್ತಾರೆ — ಸಿರೀತಿ ॥೨೯॥

**೪. ಶ್ರೀವ್ಯಾಸದಾಸಸಿದ್ಧಾಂತ ಕೌಮುದೀ (ಸಂಸ್ಕೃತಮೂಲ) :—**

ಸಿರಿ ಇತಿ॥ ವಾರುಣೀ॥ ಶೇಷಜಾಯಾ॥ ಅರುಣ — ಪಿಂಗಳಃ ॥ ಸ್ವರ್ಣ — ಹರಿದ್ವರ್ಣಃ॥ ಸಂಕರ್ಷಣಾಂ ಪಿಂಗಲಂಚ॥ ಪ್ರದ್ಯುಮ್ನಂ ಹರಿತಂ ಸ್ಮೃತಮ್ — ಇತಿ **ಬೃಹದ್‌ಭಾಷ್ಯೇ॥** ಸುವರ್ಣ ವರ್ಣ ನಿಭಾಂಗ ಇತಿ ಸುವರ್ಣವರ್ಣ ಪ್ರತಿಪದಮ್ ಓಂ ಇಂದ್ರ ಶವಿಷ್ಠ ಸಪ್ತತರೇಹಂ ಗೃಣತ್ಸು ಧಾರಯಶ್ರವಃ॥ ಸೂರಿಭ್ಯೋ ಅಮೃತಂ ವಸು ತ್ವನಂ ಹವೇ ತ್ವಾಸೂರ ಉದಿತೇ ಓಂ॥ ಸುವರ್ಣಂ ದ್ರವ್ಯಂ ವೃಣೋಕ್ತಿ ಭಕ್ತೇಭ್ಯಃ ದಾತು ಮಿಚ್ಛತಿ ತದ್ವದ್ರೂಪಃ ಚ ಇನಿ ತಥೋಕ್ತಃ॥ "ಸಂಕರ್ಷಣ" ಓಂ॥ ಚೋದಯ ಯೇ ವದತಿ ಪ್ರಿಯಾವಸು ತವಪ್ರಣೀತೀ ಹರ್ಯಶ್ವ ಸೂರಿಭಿರ್ವಿತ್ವಾ ತರೇಮ ದುರಿತಾ ದತವೇದಿಂದ್ರ ಓಂ॥ ದುರಿತಾನಿ

ಭಕ್ತೇಭ್ಯಃ ಕರ್ಷತಿ ಇತಿ ತಥೋಕ್ತಃ॥ "ಪ್ರದ್ಯುಮ್ನಃ "॥ ಓಂ ಸೋಮಪ್ರೀತಯೇ ಧಿಯಾ ಶವಿಷ್ಠ ಆಗಮತ್। ತಂ ಹಿ ಸ್ವರಾಜಂ ವೃಷಭಂ ತಮೋಜಸೇ ಧಿಷಣೇ ನಿಷ್ಟತಕ್ಷತುಃ ಓಂ॥ ದ್ಯುಮ್ನಂ ಸ್ತುತಿಃ ಬಲಂ ಪ್ರಕರ್ಷೇಣ ಅಸ್ಯ ಅಸ್ತಿ ಇತಿ ತಥೋಕ್ತಃ ॥೨೯॥

## ಕನ್ನಡಾರ್ಥ :—

ಸ್ತ್ರೀಯರಲ್ಲಿ ಚಿಂತಿಸಬೇಕಾದುದನ್ನು ನಿರೂಪಿಸುತ್ತಾರೆ – **"ಸಿರಿ"** ಎಂಬ ಪದ್ಯದಿಂದ. ಶೇಷದೇವರ ಪತ್ನಿಯವರಿಗೆ **ವಾರುಣೀ** ಎಂದು ಹೆಸರು ಅರುಣ – ಪಿಂಗಲವರ್ಣ, ಸ್ವರ್ಣ – ಹರಿದ್ವರ್ಣ, ಸಂಕರ್ಷಣ ರೂಪೀ ಶ್ರೀಹರಿಯ ವರ್ಣವು. ಪಿಂಗಲ, ಪ್ರದ್ಯುಮ್ನನ ರೂಪವು ಹರಿದ್ವರ್ಣವಿಶಿಷ್ಟವಾದುದು ಎಂದು ಪ್ರಸಿದ್ಧವಿದೆ ಎಂದು **ಬೃಹದಾರಣ್ಯ ಭಾಷ್ಯವಚನದಿಂದ** ಹೀಗೆ ಅರ್ಥಹೇಳಬೇಕು. ಅರುಣವರ್ಣ – ವೆಂಬ ಪದವು ಸುವರ್ಣಪರ್ಣ– ಎಂಬ ನಾಮ ಸಮಾನವಾಗಿರುತ್ತದೆ. ಭಕ್ತರಿಗೆ ಸುವರ್ಣ ಮುಂತಾದ ದ್ರವ್ಯಗಳನ್ನು ಕೊಡಲಿಚ್ಛಿಸುವವನು ಮತ್ತು ಸುವರ್ಣದಂತೆ ಶರೀರಕಾಂತಿಯುಳ್ಳವನು ಎಂದರ್ಥ. ಸಂಕರ್ಷಣ ಭಕ್ತರ ದುರಿತಗಳನ್ನು ಕಳೆಯುವವನು – ಎಂದು **ಬೃಹತೀ ಮಂತ್ರಾನುಗುಣವಾದ** ಅರ್ಥ. **ಪ್ರದ್ಯುಮ್ನಃ** – ಅತಿಶಯವಾದ ಸ್ತುತಿ ಹಾಗೂ ಬಲವುಳ್ಳವನು ಎಂದು **ಬೃಹತೀ ಮಂತ್ರಾನುಸಾರಿಯಾದ ಅರ್ಥ.** ॥೨೯॥

## ೫. ಶ್ರೀ ಗುರುಹೃದಯಪ್ರಕಾಶಿಕೆ ವ್ಯಾಖ್ಯಾನ :—

ಸ್ತ್ರೀ ಶರೀರಾಭಿಮಾನಿಗಳನ್ನು ತಿಳಿಸುತ್ತಾರೆ, **"ಸಿರಿ"** ಎಂದು. ಲಕ್ಷ್ಮೀ ಸರಸ್ವತೀ ಭಾರತೀ ಸೌಪರ್ಣೀ ಎಂಬ ಗರುಡ ಪತ್ನಿ, ವಾರುಣೀ ಎಂಬ ಶೇಷಪತ್ನಿ, ಪಾರ್ವತೀ ಮೊದಲಾದವರು ಸ್ತ್ರೀದೇಹದಲ್ಲಿ ಅಭಿಮಾನಿಗಳಾಗಿದ್ದು, ಅರುಣವರ್ಣ **ಸಂಕರ್ಷಣ– ಪ್ರದ್ಯುಮ್ನ** ಎಂಬ ಎರಡು ರೂಪಗಳನ್ನು, ಇರಳೂ ಹಗಲೂ ಎಂದರೆ, ಸದಾ

ಉಪಾಸನೆ ಮಾಡುತ್ತಾ ಸುಖಿಸುವರು. ॥೨೯॥

## ಸರ್ವವ್ಯಾಖ್ಯಾನಸಾರಸಂಗ್ರಹ

ಪ್ರಸಕ್ತಪದ್ಯದಿಂದ, ಸ್ತ್ರೀಯರ ಶರೀರಾಭಿಮಾನಿಗಳಾದ ದೇವತಾವರ್ಗದ ವಿಚಾರ ಮತ್ತು ಅವರಿಂದ ಉಪಾಸ್ಯಮಾನನಾದ ಭಗವದ್ರೂಪಗಳ ವಿಷಯ ನಿರೂಪಿಸುತ್ತಾರೆ.

೧. ಸತ್ತ್ವಗುಣಾಭಿಮಾನಿಗಳಾದ, ಪರಮಮಂಗಳಪ್ರದರಾದ ಶ್ರೀಲಕ್ಷ್ಮೀ ದೇವಿಯರು ಶ್ರೀಮನ್ನಾನಾರಾಯಣನ ಪತ್ನಿ. ಅವರಿಗೆ **ಸಿರಿ** ಎಂದು ಹೆಸರು.

೨. ವೇದಮಾನಿಗಳಾದ ಸರಸ್ವತಿಯು ಚತುರ್ಮುಖಬ್ರಹ್ಮದೇವರ ಪತ್ನಿ. ಈಕೆಯ ಅನುಗ್ರಹದಿಂದಲೇ ಶ್ರೀಹರಿಯ ಪಾದಾರವಿಂದಗಳಲ್ಲಿ ಜೀವರ ಮನಸ್ಸು ಹರಿಯುವುದು ***(ಸರತಿ – ಚಲಿಸುವುದು).***

೩. **"ಭ"** – ಎಂದರೆ ಪ್ರಕಾಶಮಾನವಾದ ಶ್ರೀಹರಿಯಲ್ಲಿ, **"ರತ"**ಎಂದರೆ, ನಿರಂತರ ಮನಸ್ಸುಳ್ಳ ಶ್ರೀವಾಯುದೇವರಿಗೆ **ಭರತ** ಎಂದು ಹೆಸರು. ಭರತನಾಮಾಕರಾದ ಶ್ರೀಮುಖ್ಯಪ್ರಾಣದೇವರ ಪತ್ನಿ **ಭಾರತೀ.** ಬುದ್ಧ್ಯಭಿಮಾನಿ ಮತ್ತು ಭಕುತಿಗೆ ಅಭಿಮಾನಿಗಳು.

೪. **ಸೌಪರ್ಣೀ** ಗರುಡದೇವರ ಪತ್ನಿ. ತಾರತಮ್ಯದಲ್ಲಿ ಗರುಡ ದೇವರಿಗಿಂತ ೧೦ ಗುಣ ಅವರಳು.

೫. ಶೇಷದೇವರ ಪತ್ನಿಯು **ವಾರುಣೀ.** ವಾರುಣೀದೇವಿ ಶೇಷದೇವರಿಗಿಂತ ತಾರತಮ್ಯದಲ್ಲಿ ೧೦ ಗುಣ ಅವರಳು.

೬. ಪರ್ವತರಾಜನ ಮಗಳಾದ ಪಾರ್ವತೀ, ರುದ್ರದೇವರ ಪತ್ನಿ. ಮತಿಪ್ರದಳಾದ ಪಾರ್ವತೀ ರುದ್ರದೇವರಿಗಿಂತ ೧೦ ಗುಣ ಅವರಳು.

೭. ಇಂತು, ಸಿರಿ, ಸರಸ್ವತಿ, ಭಾರತಿ, ಸೌಪರ್ಣೀ, ವಾರುಣಿ, ಪಾರ್ವತೀ

ಇತ್ಯಾದಿ ತತ್ತ್ವಾಭಿಮಾನಿಸ್ತ್ರೀದೇವತೆಯರು, ಸಕಲ ಸ್ತ್ರೀಜೀವರ ಸ್ಥೂಲಶರೀರಾಭಿಮಾನಿಗಳಾಗಿ ವಿದ್ಯಮಾನರಾಗಿದ್ದಾರೆ.

೮. ಪೂರ್ವೋಕ್ತ ಸ್ತ್ರೀಶರೀರಾಭಿಮಾನಿ ದೇವತೆಗಳು ಅರುಣವರ್ಣವಿಶಿಷ್ಟನಾದ **ಪ್ರದ್ಯುಮ್ನರೂಪೀ** ಶ್ರೀಪರಮಾತ್ಮನನ್ನು ಮತ್ತು ಪೀತವರ್ಣವಿ ಶಿಷ್ಟನಾದ **ಸಂಕರ್ಷಣರೂಪೀ** ಶ್ರೀಪರಮಾತ್ಮನನ್ನು ಉಪಾಸನೆ ಮಾಡುತ್ತಾರೆ.

೯. ಸೂರ್ಯೋದಯಕ್ಕೆ ಮುಂಚಿತವಾಗಿ ಪೂರ್ವದಿಗಂತದಲ್ಲಿ ಕಾಣುವ ಸುವರ್ಣವರ್ಣಕ್ಕೆ **ಅರುಣವರ್ಣ** ಎಂದು ಹೆಸರು. ಭಕ್ತರಿಗೆ ಸುವರ್ಣ ಮುಂತಾದ ದ್ರವ್ಯಗಳನ್ನು ಕೊಡುವವನು **ಪ್ರದ್ಯುಮ್ನ** ನಾಮಕ ಶ್ರೀಪರಮಾತ್ಮನು. ಸುವರ್ಣವರ್ಣದಂತೆ ಶರೀರಕಾಂತಿಯುಳ್ಳವನು. ಭಕ್ತರ ದುರಿತಗಳನ್ನು ಪರಿಹರಿಸುವನಾದ್ದರಿಂದ, **ಸಂಕರ್ಷಣ**ನೆಂದು ಹೆಸರು. ಪೀತವರ್ಣ ವಿಶಿಷ್ಟನು. ॥೨೯॥

## ಪದ್ಯ ೩೦

**ಮೂಲ :—**

*ಕೃತಪ್ರತೀಕದಿ ಟಂಕಿ ಭಾರ್ಗವ ।*
*ಹುತವಹಾನಿಲ ಮುಖ್ಯ ದಿವಿಜರು ।*
*ತುತಿಸಿಕೊಳುತಭಿಮಾನಿಗಳು ತಾವಾಗಿ ನೆಲೆಸಿದ್ದು ॥*
*ಪ್ರತಿದಿವಸ ಶ್ರೀತುಲಸಿ ಗಂಧಾ ।*
*ಕ್ಷತೆ ಕುಸುಮ ಫಲ ದೀಪ ಪಂಚಾ ।*
*ಮೃತದಿ ಪೂಜಿಪ ಭಕುತರಿಗೆ ಕೊಡುತಿಹನು ಪುರುಷಾರ್ಥ ॥೩೦॥*

**ಅವತರಣಿಕೆ :—**

*ಶಿಲ್ಪಿಗಳಿಂದ ನಿರ್ಮಿತವಾದ ಕರಚರಣಾದ್ಯವಯವಯುಕ್ತವಾದ ಪ್ರತಿಮಾದಿಗಳಲ್ಲಿ ವಿದ್ಯಮಾನರಾಗಿರುವ ಅಭಿಮಾನಿದೇವತೆಗಳು ಮತ್ತು ಪ್ರತಿಮಾಪೂಜಾ ವಿಧಾನವನ್ನು ತಿಳಿಸುತ್ತಾರೆ – ಪ್ರಸಕ್ತ ಸಂಧಿಗತ ೩೦ ನೆಯ ಈ ಪದ್ಯದಿಂದ. ॥೩೦॥*

**ಪ್ರತಿಪದಾರ್ಥ :—**

**ಕೃತ** = ಶಿಲ್ಪಿಗಳಿಂದ ಕೆತ್ತಲ್ಪಟ್ಟ ಅಥವಾ ಮರ, ಲೋಹ ಇತ್ಯಾದಿ ದ್ರವ್ಯಗಳಿಂದ ನಿರ್ಮಿತವಾದ, **ಪ್ರತೀಕದಿ** = ಕರಚರಣಾದ್ಯವಯವಗಳುಳ್ಳ, ಪ್ರತಿಮೆಗಳಲ್ಲಿ, **ಟಂಕಿ** = ಟ–ವರ್ಣ ವಾಚ್ಯನಾದ **ಟಂಕಿನಾಮಕ** ಶ್ರೀ ಪರಮಾತ್ಮ ಕರಚರಣಗಳಿಂದ ಯುಕ್ತವಾದ ಪ್ರತಿಮೆಗಳಲ್ಲಿಯೂ (**ಟಂಕೀ ಉಳಿ** ಎಂಬ ಆಯುಧವನ್ನು ಧರಿಸಿರುವ ಟಂಕೀನಾಮಕ ಭಗವದ್ರೂಪ. ಉಳಿಯು ಕೆತ್ತುವ ಸಾಧನ) **ಭಾರ್ಗವ** = ಭೃಗುಕುಲೋತ್ಪನ್ನರಾದ ಪರಶುರಾಮದೇವರು ಅಗ್ನ್ಯಂತರ್ಗತರಾಗಿ, **ಹುತವಹ** = ದೇವತೆಗಳಿಗೆ ಯಜ್ಞಯಾಗಾದಿಕಾರ್ಯಗಳಲ್ಲಿ ಹವಿಸ್ಸನ್ನು ತೆಗೆದುಕೊಂಡು ಹೋಗಿ ಕೊಡುವ ಅಗ್ನಿದೇವರು, **ಅನಿಲ** = ವಾಯುದೇವರು, **ಮುಖ್ಯದಿವಿಜರು** = ಇವರೇ

ಆದಿಯಾಗಿ ದೇವತೆಗಳು, **ಅಭಿಮಾನಿಗಳು** = ಪ್ರತಿಮಾಭಿಮಾನಿಗಳಾಗಿ, **ತುತುಸಿಕೊಳ್ಳುತ**= ಪೂರ್ವೋಕ್ತ ಪ್ರತಿಮಾಭಿಮಾನಿ ದೇವತೆಗಳಿಂದ ಸ್ತುತ್ಯಮಾನರಾಗಿ, **ತಾವಾಗಿ ನೆಲೆಸಿದ್ದು** = ಕೆತ್ತಲ್ಪಟ್ಟ ಪ್ರತಿಮಾಗಳಲ್ಲಿ ಅಂತರ್ಗತರಾಗಿದ್ದು, ಟಂಕಿ ಮತ್ತು ಭಾರ್ಗವ ನಾಮಕ ಶ್ರೀಹರಿಯು, **ಪ್ರತಿದಿವಸ** = ನಿತ್ಯದಲ್ಲಿಯೂ, **ಶ್ರೀತುಲಸಿ** = ನಿತ್ಯರಮಾವೇಶಯುಕ್ತವಾದ ತುಲಸೀ ದಳಗಳಿಂದ, **ಗಂಧ** = ಪರಿಮಳಯುಕ್ತವಾದ ಶ್ರೀಗಂಧ, **ಅಕ್ಷತೆ** = ಹರಿದ್ರಾ ಅಥವಾ ಕುಂಕುಮದಿಂದ ಕಲೆಸಿದ ಅಕ್ಷತೆಕಾಳು, **ಕುಸುಮ** = ಪೂಜಾಯೋಗ್ಯವಾದ ಪರಿಮಳಯುಕ್ತ ವಿವಿಧ ಪುಷ್ಪಗಳು, **ಫಲ** = ರಸಭರಿತಫಲಗಳು, **ದೀಪ** = ಘೃತ, ತೈಲಾದಿಗಳಿಂದ ಉರಿಯುತ್ತಿರುವ ದೀಪಗಳು, **ಪಂಚಾಮೃತದಿ** = ಪಂಚಾಮೃತಾಭಿಷೇಕ, **ಪೂಜಿಪ** = ಇತ್ಯಾದಿ ದ್ರವ್ಯಗಳಿಂದ ಪೂಜಿಸುವ, **ಭಕುತರಿಗೆ** = ಭಕ್ತಜನಕ್ಕೆ, **ಪುರುಷಾರ್ಥ** = ಇಹದಲ್ಲಿ ಸುಖ ಪರದಲ್ಲಿ ನಿತ್ಯಾನಂದರೂಪವಾದ ಮೋಕ್ಷವನ್ನು, **ಕೊಡುತಿಹನು** = ನೀಡವನು. ||೩೦||

## ವ್ಯಾಖ್ಯಾನಗಳು

೧ ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ :–

ಪ್ರತಿಮಾಪೂಜಾಕ್ರಮ ಹೇಳತಾರೆ –

ಕೃತ–ನಿರ್ಮಿತಗಳು (ಎರಡು ಪ್ರಕಾರ) ದಾವವೆಂದರೆ, ಕರಚರಣಾದಿಗಳಿಂದ ಶಿಲ್ಪಿಯಿಂದ ನಿರ್ಮಿತವಾದ ವಿಷ್ಣುಪ್ರತೀಕ ಒಂದು, ದಾರುಮಥನದಿಂದ ನಿರ್ಮಿತವಾದ ಯಜ್ಞಸಂಬಂಧವಾದ ಅಗ್ನಿ ಒಂದು, ಅಂತು ಪ್ರತೀಕಗಳು ಎರಡು. ಜಡಾಧಿಷ್ಠಾನಗಳು, ಈ ಅಗ್ನಿಸಾಂಕೇತಜಡಾಗ್ನಿಯಲ್ಲಿ ಅಗ್ನಿಸಾಂಕೇತ ದೇವತೆ ಅಭಿಮಾನಿ. ಕರಚರಣಾದಿ ಗಳಿಂದ ಯುಕ್ತವಾದ ಲೋಹಾದಿ ವಿಷ್ಣುಪ್ರತೀಕದಲ್ಲಿ ವಾಯುದೇವರು. ಈ ಪ್ರಕಾರ ಅಭಿಮಾನಿಗಳು ತಾವೇ ಆಗಿ ಇದ್ದಾರೆ. ಈ ವಿಧ ಉಭಯಪ್ರತೀಕದಲ್ಲಿ

ಮುಖ್ಯರಾದ ತತ್ತ್ವಾಭಿಮಾನಿದೇವತೆಗಳು ಇಪ್ಪತ್ತುನಾಲ್ಕು ಮಂದಿ, ಇಪ್ಪತ್ತು ನಾಲ್ಕು ಗೋಳಕದಿಂದ ತಾರತಮ್ಯಾನುಸಾರ ಇದ್ದಾರೆ. ಅದಿ ಗೋಳಕ ಪ್ರತಿಮಾ. ಅದರಲ್ಲಿ ಪುಷ್ಕರನಾಮಕ ಕರ್ಮಾಭಿಮಾನಿ ಪ್ರಥಮಗೋಳಕಾಂತರ್ಗತನಾಗಿ **ಟಂಕಿನಾಮಕ** ಪರಮಾತ್ಮ ಕರ–ಚರಣಗಳಿಂದ ಯುಕ್ತವಾದ ಪ್ರತಿಮಾದಲ್ಲೂನೂ, **ಪರಶುರಾಮದೇವರು** ಅಗ್ನ್ಯಂತರ್ಗತನಾಗಿ, ಈ ಪ್ರಕಾರ ಭಾರತೀರಮಣ ಮುಖ್ಯಪ್ರಾಣಗೋಳಕದಲ್ಲಿ ನೆಲೆಸಿದ್ದು, ತದ್ಗತ ದೇವತೆಗಳಿಂದ ಸ್ತೋತ್ರ ಮಾಡಸಿಕೊಳ್ಳುತ್ತಾ ಇರೋವನಾಗಿದ್ದಾನೆ. ಅಗ್ನ್ಯಂತರ್ಗತ ಉಪಾಸಕರು ಕೇವಲ ಅಧಿಕಾರಿಗಳು, ಪ್ರತಿಮಾಂತರ್ಗತ ಉಪಾಸಕರು ಕೆಲವರು. ಕರಚರಣಾದಿ ಪ್ರತೀಕೋಪಾಸನೆ ಅಪರೋಕ್ಷಕ್ಕೆ ಪ್ರಥಮ ಸೋಪಾನ. ಈ ಉಪಾಸನಾ ಹೊರತು ಅಪರೋಕ್ಷ ಎಲ್ಲ. ಇಪ್ಪತ್ತೈದನೇ ಶ್ಲೋಕದಲ್ಲಿ ಹೇಳಿದ ಮ್ಯಾರೆಗೆ ಬಿಂಬಾವಾಹನ ಮಾಡಿ, ಬಾಹ್ಯದಲ್ಲಿ ಆ ಜಡಪ್ರತೀಕವನ್ನು ತನ್ನ ಎದುರಿಗೆ ಇಟ್ಟುಕೊಂಡು, ಅತಿ ಆಸಕ್ತಿಯಿಂದ ಉಂಗುಷ್ಠದಾರಭ್ಯ ಶಿರಃಪರಿಯಂತ ಪ್ರತಿ ಅವಯವ ರೇಖೋಪರೇಖೆಗಳ ನೋಡುತ್ತಾ ಪ್ರತಿದಿನದಲ್ಲೂ ಈ ಪ್ರಕಾರ ಮಾಡುತ್ತಾ, ಪೂಜೋಪಯೋಗ್ಯವಾದ ಜಡಸಂಬಂಧ–ತುಲಸಿ, ಸುಗಂಧ, ತಂಡುಲ ನಿರ್ಮಿತ ಅಕ್ಷತೆ, ಹರಿದ್ರಾನಿರ್ಮಿತ ಅಕ್ಷತೆ, ಪೂಜೋಪಯೋಗ್ಯ ಪರಿಮಳಯುಕ್ತವಾದ ಪುಷ್ಪ, ಅನಿಷಿದ್ಧಗಳಾದ ಸುರಸೋಪೇತವಾದ ಫಲಗಳು, ಘೃತ, ತೈಲ, ಕರ್ಪೂರ ಇವುಗಳಿಂದ ನಿರ್ಮಿತ ದೀಪಗಳು, ಗೋ ಸಂಬಂಧವಾದ ಕ್ಷೀರ, ದಧಿ, ಘೃತ, ತದನ್ಯಗಳಾದ ಶರ್ಕರ ಕದಳೀಫಲ, ಅಂತು, ಅಮೃತ ಸಾಂಕೇತಗಳಾದ ಐದರಿಂದಲೂ, ಪೂರ್ವೋಕ್ತ ತುಲಸ್ಯಾದಿಗಳಿಂದಲೂ, ಶುದ್ಧೋಕದಿಂದಲೂ, ಪ್ರತಿಮಾಂತರ್ಗತ ತದಾಕಾರ ಭಗವಂತನ ಚಿಂತಿಸಿ, ಅದೇ ಪ್ರಕಾರ ಪೂಜಾಸಾಧನಗಳು ಅಂತರ್ಗತ ಭಗವಂತನ ಚಿಂತಿಸಿ, ಜಡಪದಾರ್ಥಗಳಿಂದ ಜಡಪ್ರತಿಮಾನ ಪೂಜಾಮಾಡತಾ, ಹಾಂಗೇ ಪ್ರತಿಮಾ ಅಂತರ್ಗತರೂಪಕ್ಕೆ ಪೂಜಾ ಸಾಧನಾತರ್ಗತ ಭಗದ್ರೂಪಗಳಿಂದ ಭಗವದ್ರೂಪಗಳಿಗೆ ಪೂಜಾ ಮಾಡುತಾ, ಇದೇ ಪ್ರತಿಮಾನ ವಾಸನಾದಿಂದ

ಹೃದಯಾಕಾಶದಲ್ಲಿ ಮಾಡಿಕೊಂಡು, ವಾಸನಾದ್ರವ್ಯಗಳ ನಿರ್ಮಿತ ಮಾಡಿ, ಪೂರ್ವೋಕ್ತ ಪೂಜಾಮಾಡತಕ್ಕ ಭಕ್ತರಾದವರಿಗೆ ಪುರಷಶ್ರೇಷ್ಠನಾದ ಪರಮಾತ್ಮ **ಅರ್ಥ** ಪ್ರಯೋಜನವು, ಎಂಥಾ ಪ್ರಯೋಜನವೆಂದರೆ, ಪ್ರಥಮಥಃ ವಾಸನಾಪರೋಕ್ಷ ನಂತರ ಪ್ರತಿಮಾಂತರ್ಗತ ತದಾಕಾರ ಚಿದಾನಂದ ಅಪರೋಕ್ಷಾ (ನಂತರ ಸ್ಥೂಲದೇಹಗತ ಜೀವಾಕಾರ ಅಗ್ರೇಶನಾಮದ ಭಗವಂತನ ಅಪರೋಕ್ಷ) ಕ್ರಮಾತ್ ಜೀವಾಂತರ್ಗತ ಪರಮಾತ್ಮನ ಅಪರೋಕ್ಷ. ಇಂಥಾ ಪ್ರಯೋಜನವನ್ನು ಕೊಡತಾ ಇರತಾನೆಂತ ತಾತ್ಪರ್ಯ ॥೩೦॥

**೨ ಭಾವಪ್ರಕಾಶಿಕೆ :—**

ಬೆಳ್ಳಿ, ಬಂಗಾರ, ಕಬ್ಬಿಣ, ತಾಮ್ರ, ಸೀಸ ಎಂಬ ಐದು ಲೋಹ ಮಿಶ್ರಮಾಡಿ, ಸಿದ್ಧವಾದ ಪ್ರತಿಮೆಗಳಲ್ಲಿ ***ಟಂಕಿನಾಮಕ*** ಪರಮಾತ್ಮನು **ಪರಶುರಾಮದೇವರು** ಸಹ ಅಭಿಮಾನಿಗಳಾಗಿರುವರು. ಈ ಮೂರ್ತಿಗಳನ್ನು ಸೇವಿಸುತ್ತ, ಅಗ್ನಿ, ವಾಯು ಮೊದಲಾದ ದೇವತೆಗಳು ಅಮುಖ್ಯಾಭಿಮಾನಿಗಳಾಗಿರುವರು. ಹೀಗೆ ತಿಳಿದು, ಪ್ರತಿದಿವಸದಲ್ಲಿಯೂ ಪ್ರತಿಮೆಯನ್ನು ಶ್ರೀ ತುಲಸೀ, ಗಂಧ, ಅಕ್ಷತೆ, ಪುಷ್ಪ, ಫಲ, ಪಂಚಾಮೃತಾದಿಗಳಿಂದ ಪೂಜಿಸಿದರೆ, ಅಂತಹ ಭಕ್ತರಿಗೆ ಅದರೊಳಗೆ ಅಭಿಮಾನಿದೇವತೆಗಳ ದ್ವಾರಾ ಶ್ರೀ ಪರಮಾತ್ಮನು ಪ್ರಸನ್ನನಾಗಿ ಚತುರ್ವಿಧ ಪುರುಷಾರ್ಥಗಳನ್ನು ಕೊಡುವನು. ॥೩೦॥

**೩ ಭಾವದರ್ಪಣಟೀಕಾ :—**

ಮಾಡಲ್ಪಟ್ಟ ಪಂಚಲೋಹಾದಿ ಪ್ರತೀಕದಲ್ಲಿ ***ಟಂಕಿನಾಮಕ, ಭಾರ್ಗವ ನಾಮಕ*** ಭಗವದ್ರೂಪಾಸನೆ ಮಾಡುತ್ತಾ, ಅಗ್ನಿ ಮೊದಲಾದ ದೇವತೆಗಳು ಅಲ್ಲಿ ಅಭಿಮಾನಿಗಳಾಗಿ ಪುಷ್ಪಾದಿಗಳಿಂದ ಪೂಜಿಸತಕ್ಕ ಜೀವರಿಗೆ ಪುರುಷಾರ್ಥ ತೋರಿಸುತ್ತಾರೆಂದು ಹೇಳುತ್ತಾರೆ – **"ಕೃತೇತಿ"** ॥೩೦॥

## ೪. ವ್ಯಾಸದಾಸ ಸಿದ್ಧಾಂತ ಕೌಮುದೀ :–

"ಕೃತ"–ಇತಿ ಕೃಕತಪ್ರತೀಕೇ 'ಟಂಕೀ ಚ ರೇಣುಕಾತ್ಮಜಃ ಹರಿಃ"–ಇತ್ಯುಕ್ತೇ ॥೩೦॥

ನಿರ್ಮಿತವಾದ ಲೋಹ ಮುಂತಾದ ಪ್ರತಿಮೆಗಳಲ್ಲಿ **"ಟಂಕಿ", "ಪರಶುರಾಮ"** ಇವರು ಇರುತ್ತಾರೆ – ಎಂಬ ಪ್ರಮಾಣವಚನಗಳಿರುವುವು. ॥೩೦॥

## ೫. ಶ್ರೀ ಗುರುಹೃದಯಪ್ರಕಾಶಿಕೆ ವ್ಯಾಖ್ಯಾನ :–

ನಿರ್ಮಿತ ಲೋಹಪ್ರತಿಮಾಭಿಮಾನಿದೇವತೆಗಳನ್ನು ತಿಳಿಸುತ್ತಾರೆ – **ಕೃತಪ್ರತೀಕದಿ** ಎಂದು. ನಿರ್ಮಿತ ಸಲಕ್ಷಣ ಪ್ರತಿಮೆಗಳಲ್ಲಿ **'ಟಂಕೋನ್ಮೂಲನೇ"** ಎಂಬ ಧಾತುರೀತ್ಯಾ ಪಾಪಬಂಧನಿರ್ಮೂಲಕನಾದ **ಶ್ರೀಟಂಕಿ** ಎಂಬ ದೇವರ ರೂಪವನ್ನೂ, **ಭಾರ್ಗವ** ಎಂಬ ಪರುಶುರಾಮರೂಪವನ್ನು ಸಹ ಸ್ತೋತ್ರಾದ್ಯಾರಾಧನೆಯಿಂದ ಸೇವಿಸುತ್ತ, ಹುತವಹನೆಂಬ ಅಗ್ನಿದೇವ, ಅನಿಲನೆಂಬ ವಾಯುದೇವ ಮುಂತಾದ ದೇವತೆಗಳು ಅಭಿಮಾನಿಗಳಾಗಿದ್ದು, ನಿರಂತರ ಶ್ರೀ ತುಳಸೀ, ಗಂಧಾಕ್ಷತೆ, ಕುಸುಮ, ಫಲ, ದೀಪ, ಪಂಚಾಮೃತಾದಿಗಳಿಂದ ಪ್ರತಿಮಾಂತಸ್ಥ ದೇವರ ರೂಪವನ್ನು ಧ್ಯಾನಾವಾಹನಾದಿಗಳಿಂದ ಪೂಜಿಸುವ ಭಕ್ತರಿಗೆ, ದೇವರ ಚಿತ್ತವೃತ್ತಿಯನ್ನನುಸರಿಸಿ ಧರ್ಮಾದಿ ಪುರುಷಾರ್ಥಗಳನ್ನು ಕೊಡುವರು. ॥೩೦॥

### ಸರ್ವವ್ಯಾಖ್ಯಾನಸಾರಸಂಗ್ರಹ

ಹಿಂದಿನ ಎರಡು ಪದ್ಯಗಳಿಂದ ಶ್ರೀಹರಿಗೆ ಚಲಪ್ರತೀಕಗಳಾದ ಪುರುಷರು ಮತ್ತು ಸ್ತ್ರೀಯರ ಸ್ಥೂಲಶರೀರಾಭಿಮಾನಿ ದೇವತೆಗಳು ಮತ್ತು ಅವರಿಂದ ಉಪಾಸ್ಯನಾದ ಶ್ರೀಪರಮಾತ್ಮನ ಭಗವದ್ರೂಪಗಳ ವಿವರಗಳನ್ನು ತಿಳಿಸಿ, ಪ್ರಸಕ್ತ ೩೦ ನೆಯ ಪದ್ಯದಿಂದ **ಜಡಪ್ರತೀಕವೆಂದು** ಕರೆಯಲ್ಪಡುವ ಪ್ರತಿಮಾದಿಗಳ ಪೂಜಾವಿಧಾನವನ್ನು ತಿಳಿಸುತ್ತಾರೆ.

೧. ಪ್ರತಿಮೆಗಳಲ್ಲಿ ಅಷ್ಟವಿಧವಾದ ಪ್ರತಿಮೆಗಳಿವೆ. ಇವುಗಳಲ್ಲಿ

ಪಂಚಲೋಹಗಳಿಂದ ನಿರ್ಮಿತವಾದ ಪ್ರತಿಮೆಗಳು. ಶಿಲ್ಪಿಗಳಿಂದ ಕಲ್ಲಿನಲ್ಲಿ ಕೆತ್ತಿದ ಶಿಲಾಪ್ರತಿಮೆಗಳು, ಮರದಿಂದ ನಿರ್ಮಿತ ದಾರುಪ್ರತಿಮೆಗಳು ಇತ್ಯಾದಿ ಪ್ರತಿಮೆಗಳೆಲ್ಲವೂ **ಕೃತಪ್ರತೀಕ** ಗಳೆಂದನಿಸುವುವು. ಅಂದರೆ. **ಕೃತ**–ಶಿಲ್ಪಿಗಳಿಂದ ನಿರ್ಮಿತವಾದ, **ಪ್ರತೀಕಗಳು** – ಪ್ರತಿಮೆಗಳು ಎಂದರ್ಥ.

೨. ಇಂತಹ ಕೃತಪ್ರತೀಕಗಳು, ಕರಚರಣಾದಿ ಅವಯವಗಳಿಂದ ಯುಕ್ತವಾಗಿರುವುವು. ಶಿಲ್ಪಶಾಸ್ತ್ರದ ಪ್ರಕಾರ, ಮೂರ್ತಿಲಕ್ಷಣಗಳಿಂದ ಯುಕ್ತವಾಗಿರುವುವು. ಇವು ಕೇವಲ ಜಡಪ್ರತಿಮೆಗಳು. ಇವುಗಳಲ್ಲಿ **ಟಂಕೀ ಮತ್ತು ಭಾರ್ಗವ** ಎಂಬ ಎರಡುವಿಧವಾದ ಭಗವದ್ರೂಪೋಪಾಸನೆ ಮಾಡಬೇಕು.

೩. ಪಾಪಬಂಧನಿರ್ಮೂಲವಾದ ದೇವರ ರೂಪಕ್ಕೆ **ಟಂಕೀ** ಎಂತನಾಮ. "ಟಂ–ಲಂಕನೇ ನಮಃ" – ಎಂಬ ಮಾತೃಕಾನ್ಯಾಸದ ಮಂತ್ರದ ಪ್ರಕಾರ. ಟ–ವರ್ಣ ವಾಚ್ಯನಾದ ಭಗವಂತನ ಅಕ್ಷರವಾಚ್ಯ ಭಗವದ್ರೂಪವೇ ಟಂಕಿ. ಕೈಯಲ್ಲಿ ಉಳಿಯೆಂಬ ಆಯುಧವನ್ನು (ಶಿಲೆಯನ್ನು ಕೆತ್ತುವ ಸಾಧನ) ಟಂಕೀ ನಾಮಕ ಶ್ರೀ ಪರಮಾತ್ಮನು ಧರಿಸಿರುವನು.

೪. ಭೃಗುಕುಲೋತ್ಪನ್ನನಾದ ಜಮದಗ್ನಿ ರೇಣುಕಾತ್ಮಜನಾದ ಪರಶುರಾಮ ರೂಪವೇ ಭಾರ್ಗವನಾಮಕ ಶ್ರೀಪರಮಾತ್ಮನು. ಹರಿಣೀಪತಿ ಶ್ರೀಪರಶುರಾಮನು ಅಗ್ನ್ಯಂತರ್ಗತವಾಗಿರುವನು. ಪಂಚಲೋಹಗಳನ್ನು ಅಗ್ನಿಯಲ್ಲಿ ಕರಗಿಸಿ, ಅಚ್ಚು ಹಾಕಿ, ಪಂಚಲೋಹದ ಪ್ರತಿಮೆಗಳನ್ನು ತಯಾರಿಸುವರು. ಇದರಿಂದ ಅಗ್ನ್ಯಂತರ್ಗತ ಹರಿಣೀಪತಿ ಭಾರ್ಗವರೂಪೀ ಶ್ರೀಪರಮಾತ್ಮನು ಇಂತಹ ಪ್ರತೀಕಗಳಲ್ಲಿ ವಿದ್ಯಮಾನ ನಾಗಿದ್ದಾನೆ.

೫. ಪೂರ್ವೋಕ್ತ ಟಂಕೀ ಮತ್ತು ಭಾರ್ಗವ ಎಂಬ ಭಗವದ್ರೂಪಗಳನ್ನು **ಅಗ್ನಿದೇವರು ಮತ್ತು ಶ್ರೀ ವಾಯುದೇವರು** ನಿತ್ಯ ಉಪಾಸಿಸುತ್ತಿರುವರು.

ಯಜ್ಞಯಾಗಾದಿಗಳಲ್ಲಿ ಕೊಡುವ ಹವಿಸ್ಸನ್ನು ದೇವತೆಗಳಿಗೆ ಕೊಂಡೊಯ್ಯುವ ನ್ನಾದ್ದರಿಂದ, ಅಗ್ನಿದೇವನಿಗೆ **ಹುತವಾಹನೆಂದು** ಹೆಸರು. ಅಂದರೆ **ಹುತ**– ಹವಿಸ್ಸನ್ನು, **ವಾಹ**–ಕೊಂಡುಒಯ್ಯುವವನು ಎಂದರ್ಥ. **ಅನಿಲ** – ಎಂದರೆ, ಶ್ರೀವಾಯುದೇವರು.

೬. ಜಡಪ್ರತೀಕಗತ ಅವಾಂತರಾಭಿಮಾನಿಗಳೆಂದೆನಿಸುವ ಅಗ್ನಿ ಮತ್ತು ವಾಯುದೇವರಿಂದ ಸ್ತುತ್ಯಮಾನನಾಗಿ ಟಂಕೀ ಮತ್ತು ಭಾರ್ಗವನಾಮಕ ಶ್ರೀ ಪರಮಾತ್ಮನು ಕೃತಪ್ರತೀಕದ ಮುಖ್ಯಾಭಿಮಾನಿಯಾಗಿದ್ದಾನೆ.

೭. ಜಡಪ್ರತೀಕಗಳಲ್ಲಿ ಬಿಂಬಾವಾಹನಾಕ್ರಮದಿಂದ ಪೂಜೆ ಮಾಡಬೇಕು. ಪ್ರತಿಮಾಂತರ್ಗತ ಭಗವದ್ರೂಪಕ್ಕೂ ಸ್ವಬಿಂಬರೂಪಕ್ಕೂ ಐಕ್ಯಚಿಂತನಾಪೂರ್ವಕ, ಆ ಪ್ರತಿಮೆಯಲ್ಲಿ ಬಿಂಬನ ಆವಾನಹನೆಗೈದು, ನಂತರ ತಂತ್ರಸಾರೋಕ್ತವಾಗಿ ಪೂಜಿಸಬೇಕು. ಪ್ರತಿಮಾದಿಗಳ ಪೂಜಾವಿಧಾನದಲ್ಲಿ ತತ್ತ್ವನ್ಯಾಸ, ಮಾತೃಕಾನ್ಯಾಸ ಪದ್ಧತಿಯಂತೆ ವಿಧ್ಯುಕ್ತವಾಗಿ ಆ ಪ್ರತಿಮೆಗಳಲ್ಲಿ ಆಪಾದಮಾಳಿಪರ್ಯಂತ ಕರಚರಣಾದ್ಯವಯವಗಳಲ್ಲಿ **ಅಚಾದಿ ಕ್ಷಕಾರ ಪರ್ಯಂತ** ೫೧ ವರ್ಣ ಪ್ರತಿಪಾದ್ಯ ಭಗವದ್ರೂಪಗಳನ್ನು ಚಿಂತಿಸಿ, ಆವಾಹನಾಕ್ರಮದಿಂದ ಪೂಜಿಸಬೇಕು.

೮. ಪ್ರತಿನಿತ್ಯದಲ್ಲಿಯೂ, ಪ್ರತಿಮಾ ಪೂಜಾದಿಗಳನ್ನು ಮಾಡುವಾಗ, ಪೂಜೋಪ ಯೋಗ್ಯವಾದ ದ್ರವ್ಯಗಳಿಂದ ಪೂಜಿಸಬೇಕು.

ನಿತ್ಯ ರಮಾವೇಶಯುಕ್ತಳಾದ **ಶ್ರೀತುಲಸೀಯಿಲ್ಲದ** ಪೂಜೆ, ಶ್ರೀವರನು ಸ್ವೀಕರಿಸುವುದಿಲ್ಲ. ಶ್ರೀಹರಿಗೆ ಅತ್ಯಂತ ಪ್ರಿಯಕರಳಾದ ಶ್ರೀತುಲಸಿಯಲ್ಲಿ ಮೂವತ್ತು ಮೂರುಕೋಟಿ ದೇವತೆಗಳು ಸನ್ನಿಹಿತರಾಗಿದ್ದಾರೆ. ಮೂಲದಲ್ಲಿ ಸರ್ವತೀರ್ಥ ಸಾನ್ನಿಧ್ಯವಿರುವ ಶ್ರೀತುಲಸೀ ದೇವರ ಪೂಜಾಕಾರ್ಯದಲ್ಲಿ ಪರಮಮುಖ್ಯಳು.

ಸಮುದ್ರ ಮಥನಕಾಲದಲ್ಲಿ ಶ್ರೀಹರಿಯ ನೇತ್ರಗಳಿಂದ ಉದುರಿದ ಹನಿಗಳೇ ತುಲಸೀ ಎಂದು ಪ್ರಖ್ಯಾತವಾಯಿತು. ಶ್ರೀ ಕೃಷ್ಣನ ಷಣ್ಮಹಿಷಿಯಲ್ಲಿ ಪ್ರಮುಖಳಾದ **ಜಾಂಬುವತೀ ದೇವಿಯೋ** ತುಳಸಿಯು. ತುಳಸಿಗೆ ಶ್ರೀಮಹರುದ್ರದೇವರ ಅವತಾರ ಭೂತರಾದ ***ಜೈಗೀಷವ್ಯ ಮುನಿಗಳಿಂದ*** ಉಪದೇಶ.

೯. ಶ್ರೀಗಂಧದ ಕೊರಡಿನಿಂದ ಸಾಣೆಕಲ್ಲಿನಲ್ಲಿ ಚೆನ್ನಾಗಿ ತೇದಿ ಅರೆದು ತೆಗೆದ ಪರಿಮಳಯುಕ್ತ ಗಂಧವು ದೇವರಿಗೆ ಅರ್ಪಿತವಾಗುವುದು.

ಅರಿಶಿನ ಅಥವಾ ಕುಂಕುಮದಿಂದ ಹಸುವಿನ ತುಪ್ಪದಲ್ಲಿ ಕಲೆಸಿದ ಅಕ್ಕಿಕಾಳಿಗೆ **ಅಕ್ಷತೆ** ಎನ್ನುವರು. ಪೂಜಾಕಾಲದಲ್ಲಿ ಮತ್ತು ವೇದೋಕ್ತಮಂತ್ರ ಪುಷ್ಪಸಮರ್ಪಣಾ ಕಾಲದಲ್ಲಿ ಅಕ್ಷತೆ ಉಪಯೋಗಿಸುತ್ತೇವೆ.

೧೦. ಪೂಜಾಯೋಗ್ಯವಾದ ಸುಗಂಧಯುಕ್ತವಾದ ಕಮಲ, ಜಾಜಿ, ಮಲ್ಲಿಗೆ, ಇತ್ಯಾದಿ ಪುಷ್ಪಗಳು ಪೂಜಾದ್ರವ್ಯಗಳು. ಸುರಸೋಪೇತವಾದ ಮಾವು, ಹಲಸು, ದ್ರಾಕ್ಷಿ ಇತ್ಯಾದಿ ಹಣ್ಣುಗಳನ್ನು ನೈವೇದ್ಯ ರೂಪವಾಗಿ ಶ್ರೀಹರಿಗೆ ಸಮರ್ಪಿಸುತ್ತೇವೆ.

೧೧ ತುಪ್ಪ, ತೈಲಾದಿಗಳಿಂದ ಧಾಳಾಗಿ ಉರಿಯುತ್ತಿರುವ ನಿಲಾಂಜನ, ಆರತಿ, ನಂದಾದೀಪ ಇತ್ಯಾದಿ ದೀಪಗಳು. ಹಸುವಿನ ಹಾಲು, ಮೊಸರು, ಹಸುವಿನ ತುಪ್ಪ, ಮಧು, ಸಕ್ಕರೆ, ಮತ್ತು ಫಲಗಳಿಂದ ಯುಕ್ತವಾದ ಪಂಚಾಮೃತಾಭಿಷೇಕ–ಇತ್ಯಾದಿ ಸಕಲಪೂಜೋಪಯೋಗ್ಯವಾದ ದ್ರವ್ಯಗಳಿಂದ, ಬಿಂಬಾವಾಹನೆ ಮಾಡಿದ ಪ್ರತೀಕಗಳನ್ನು ಪೂಜಿಸುತ್ತಿರುವ ಭಕ್ತಜನರಿಗೆ ಪ್ರತೀಕಗತ ಟಂಕೀ ಮತ್ತು ಭಾರ್ಗವನಾಮಕ ಶ್ರೀ ಪರಮಾತ್ಮನು, ಧರ್ಮ, ಅರ್ಥ, ಕಾಮ ಎಂಬ ಇಷ್ಟಾರ್ಥಗಳನ್ನು ಇಹದಲ್ಲಿ ಕೊಟ್ಟು, ಪರದಲ್ಲಿ ನಿತ್ಯಾನಂದಸುಖರೂಪವಾದ ಪರಮಪುರುಷಾರ್ಥರೂಪವಾದ **ಮುಕ್ತಿ ಸುಖವನ್ನು** ಅನುಗ್ರಹಿಸುವನು. ॥೩೦॥

## ಪದ್ಯ ೩೧

### ಮೂಲ

ನಗಗಳಿಭಿಮಾನಿಗಳೆನಿಪ ಸುರ
ರುಗಳು ಸಹಜಾಚಲಗಳಿಗೆ ಮಾ
ನಿಗಳೆನಿಸಿ ಶ್ರೀ ವಾಸುದೇವನ ಪೂಜಿಸುತಲಿಹರು
ಸ್ವಗತಭೇದವಿವರ್ಜಿತನ ನಾಲ್
ಬಗೆ ಪ್ರತೀಕದಿ ತಿಳಿದು ಪೂಜಿಸೆ
ವಿಗತ ಸಂಸಾರಾಬ್ಧಿ ದಾಟಿಸಿ ಮಕ್ತರನು ಮಾಳ್ಪ ॥೩೧॥

**ಅವತರಣಿಕೆ :—**

ಹಿಂದಿನ ಪದ್ಯದಲ್ಲಿ ಕೃತಪ್ರತೀಕಗಳಲ್ಲಿ ವಿದ್ಯಮಾನರಾಗಿರುವ ಅವಾಂತರಾಭಿಮಾನಿಗಳು ಮತ್ತು ಅವರಿಂದ ಪೂಜಿತನಾದ ಶ್ರೀಹರಿಯ ಭಗವದ್ರೂಪಗಳನ್ನು ತಿಳಿಸಿ, ಪ್ರಸಕ್ತಸಂಧಿಗತ ೩೧ನೆಯ ಈ ಪದ್ಯದಿಂದ **ಸಹಜಾಚಲ** ಎನಿಸುವ ಇನ್ನೊಂದು ಪ್ರಕಾರವಾದ ಜಡಪ್ರತೀಕಗಳ ಅವಾಂತರಅಭಿಮಾನಿಗಳು ಹಾಗೂ ಅವರಿಂದ ಉಪಾಸ್ಯನಾದ ಶ್ರೀಪರಮಾತ್ಮನ ಭಗವದ್ರೂಪಗಳನ್ನು ತಿಳಿಸುತ್ತಾರೆ. ॥೩೧॥

**ಪ್ರತಿಪದಾರ್ಥ :—**

**ಸಹಜಾಚಲಗಳಿಗೆ** = ಪ್ರಕೃತಿಯಲ್ಲಿ ಸ್ವಾಭಾವಿಕವಾಗಿ ದೊರೆಯುವ ಸಾಲಿಗ್ರಾಮ ಮತ್ತು ಮಾಲೆಮಾಲೆಯಾಗಿ ಹಬ್ಬಿರುವ ಪರ್ವತಶ್ರೇಣಿಗಳು ಎಂಬ ಜಡಪ್ರತಿಮೆಗಳಿಗೆ, **ನಗಗಳ** = ಮೇರು, ಮಂದರ, ಹಿಮಾಚಲಾದಿ ಪರ್ವತಗಳ, **ಅಭಿಮಾನಿಗಳು ಎನಿಪ** = ಅಭಿಮಾನಿಗಳೆಂದು ಎನಿಸುವ ಪರ್ವತಾಭಿಮಾನಿಗಳಾದ, **ಸುರರುಗಳು** = ದೇವತೆಗಳು, **ಮಾನಿಗಳೆನಿಸಿ** = ಪೂರ್ವೋಕ್ತ ಸಹಜಾಚಲಗಳೆಂಬ

ಜಡಪ್ರತಿಮಾದಿಗಳಿಗೆ ಅಭಿಮಾನಿಗಳೆಂದು ಕರೆಯಿಸುವವರಾಗಿ, **ಶ್ರೀವಾಸುದೇವನು** =ಪ್ರತಿಮಾಂತರ್ಗತವಾದ ಕಾಂತಿವಿಶಿಷ್ಟನಾದ ಶ್ರೀವಾಸುದೇವನಾಮಕ ಪರಮಾತ್ಮನನ್ನು, **ಪೂಜಿಸತಲಿಹರು** = ಅರ್ಚಿಸುತ್ತಾ ಇರುವರು. **ಸ್ವಗತಭೇದವಿವರ್ಜಿತನ** = ಶ್ರೀಪರಮಾತ್ಮನ ನಾನಾಗುಣರಾಶಿಗಳಿಗೂ, ವಿವಿಧ ರೂಪಗಳಿಗೂ, ಅನಂತಾನಂತ ಕ್ರಿಯಾಗಳಿಗೂ, ಅವತಾರರೂಪಗಳಿಗೂ, ಪರಸ್ಪರ ಭೇದವಿಲ್ಲದಿರುವ ಶ್ರೀಹರಿಯ, **ನಾಲ್ಬಗೆ** (೧) ಪುರುಷರು, (೨) ಸ್ತ್ರೀಯರು ಎಂಬ ಎರಡುವಿಧವಾದ ಚಲಪ್ರತೀಕಗಳು. (೧) ಕೃತಪ್ರತೀಕಮತ್ತು (೨) ಸಹಜಾಚಲಗಳೆಂಬ ಎರಡು ಪ್ರಕಾರವಾದ ಜಡಪ್ರತೀಕಗಳು. ಹೀಗೆ ನಾಲ್ಕುವಿಧವಾದ **ಪ್ರತೀಕದಿ** = ಶ್ರೀಹರಿಯ ಪ್ರತಿಮೆಗಳಲ್ಲಿ, **ತಿಳಿದು** = ಶಾಸ್ತ್ರದ್ವಾರಾ ಅರಿತು, **ಪೂಜಿಸಿ** = ಆ ಪ್ರತಿಮಾಂತರ್ಗತ ಭಗವದ್ರೂಪಗಳನ್ನು ಪೂಜಿಸಲಾಗಿ, **ವಿಗತ** = ನಿವಾರಿಸಲ್ಪಟ್ಟ **ಸಂಸಾರಾಬ್ಧಿ** = ದುಸ್ತರವಾದ ಜನನಮರಣಾಖ್ಯವಾದ ಸಂಸಾರವೆಂಬ ಸಾಗರವನ್ನು, **ದಾಟಿಸಿ** = ದಾಟಿಸಿ, **ಮುಕ್ತರನು ಮಾಳ್ಪ** =ಮೋಕ್ಷಪ್ರದನಾದ ಶ್ರೀವಾಸುದೇವನು ಲಿಂಗಭಂಗದ್ವಾರಾ ಕರ್ಮವಿಮೋಚನೆಗೈದು, ನಿತ್ಯಾನಂದರೂಪನಾದ ಮುಕ್ತಿಸಾಮ್ರಾಜ್ಯವನ್ನು ಕೊಡುವನು. ॥೩೧॥

## ವ್ಯಾಖ್ಯಾನಗಳು

### ೧. ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ :—

ನಾಲ್ಕುವಿಧ ಪ್ರತಿಮಾಂಗತರ್ಗತನಾದ ಭಗದುಪಾಸನಾ ಮಾಡಬೇಕೆಂದು ಹೇಳತಾರೆ.

ಮೇರು ಮಂದರಾದಿ ಹಿಮಾಚಲಾದಿ ಪರ್ವತಗಳಿಗೆ ಅಭಿಮಾನಿಗಳು ಎನತಕ್ಕ ತನ್ನಾಮಕ ಆಯಾ ಪರ್ವತಾಭಿಮಾನಿಗಳಾದ ದೇವತೆಗಳು, ಕರಚರಣಾದಿ ವಿಶಿಷ್ಟವಾದ ಪ್ರತಿಮಾದಿಗಳ ವ್ಯತಿರಿಕ್ತ ಕರಚರಣಾದಿ ಶೂನ್ಯಗಳಾದ, ಜಗತ್ತಿನಲ್ಲಿ ವಿದ್ಯಮಾನಗಳಾದ

ಪೂರ್ವೋಕ್ತ ಪರ್ವತಾದಿಗಳಿಗೆ ಅನ್ಯವಾದ ಶುದ್ಧಜಡಗಳು ದಾವದವೆ ಇವೆ. **ಸಹಜಾಚಲಗಳು.** ಅಂದರೆ, ಹ್ಯಾಂಗೆ ಹುಟ್ಟಿತೋ ಹಾಂಗೆ ಇರತಕ್ಕದ್ದಂತ ತಾತ್ಪರ್ಯ. ಇಂಥಾ ಸಹಜಾಚಲಗಳಿಗೆ ಅಭಿಮಾನಿಗಳು ಎಂತ ಎನಿಸಿ ತದಂತರ್ಗತನಾದ ಕಾಂತಿಯುಕ್ತನಾದ ವಾಸುದೇವನ ಪೂಜಿಸುತ್ತಾ ಇರೋವರಾಗಿದ್ದಾರೆ. ನಾಲ್ಕುವಿಧವಾದ ಪ್ರತೀಕದಲ್ಲಿ ನಾಲು ್ಕ ದಾವದೆಂದರೆ, ಪೂರ್ವೋಕ್ತ ಜಡಪ್ರತಿಮಾ, ಚೇತನಪ್ರತಿಮಾ, ಎರಡರ ಒಳಗೆ ಕರಚರಣಾದಿಗಳಿಂದಸಹಿತಾ ಪ್ರತಿಮಾ, ತದನ್ಯ ಸಹಜಾಚಲ ಪ್ರತಿಮಾದಿಗಳ ಸಹ ನಿಜವಾಗಿ ಸನ್ನಿಧಾನ ಇರುವ ತೀರ್ಥಕ್ಷೇತ್ರಾದಿಗಳು ಅಂತು ಎರಡು ಜಡಪ್ರತಿಮಾ, ಚೇತನ ಪ್ರತಿಮಾ. ಚೇತನರಲ್ಲಿ ಎರಡು ವಿಧ ಪ್ರತಿಮಾ— ಪುರುಷರು ಸ್ತ್ರೀಯರು ಅಂತು ಎರಡು ಅಂತು ನಾಲ್ಕುವಿಧ ಪ್ರತೀಕಗಳಲ್ಲಿ ಪರಸ್ಪರ ಅಧಿಷ್ಠಾನಗತರೂಪಗಲಿಗೆ ಪರಸ್ಪರ ಭೇದವೇನು, ಅಧಿಷ್ಠಾನಗತ ರೂಪಗಳಿಗೂ, ಮೂಲರೂಪಗಳಿಗೂ, ಪರಸ್ಪರ ಭೇದವೇನು ಇಂಥಾ ಭೇದದಿಂದ ರಹಿತನಾದ ಪರಮಾತ್ಮನ ಅಂತರ್ಗತ ತಿಳಿದು, ಸಾರಿಸೋಣ, ಬಳಿಯೋಣ, ಒಗಿಯೋಣ ಮೊದಲಾದ ಯಾವತ್ತೂ ಕೆಲಸಗಳು ಆಯಾ ಅಂತರ್ಗತ ಪರಮಾತ್ಮನ ಸೇವಾ ಎಂದು ಪೂಜಾಮಾಡಿದರೆ ಇಂಥಾ ಅಧಿಕಾರಿಯು, ಹೋಗಲ್ಪಟ್ಟ ಅಹಂಮಮತಾದಿ ಗಳಿಂದ ಯುಕ್ತನನ್ನಾಗಿ ಮಾಡಿ, ಸಂಸಾರಕ್ಕೆ ಕಾರಣವಾದ ಲಿಂಗದೇಹಾಖ್ಯ ಸಮುದ್ರವನ್ನು ವಿರಜಾಸ್ನಾನ ದ್ವಾರಾ ದಾಟಿಸಿ, ಮೋಕ್ಷಯುಕ್ತರನ್ನಾಗಿ ಮಾಡುತಾನೆ. ಈ ಪ್ರಕಾರ ನಾಲ್ಕು ವಿಧ ಪ್ರತಿಮಾಂತರ್ಗತ ಭಗವತ್ಪೂಜಾ ಎಂತ ತಾತ್ಪರ್ಯ. ॥೩೧॥

ಭಾವಪ್ರಕಾಶಿಕೆ :—

ಮೇರು ಮಂದರಾದಿ ಪರ್ವತಾಭಿಮಾನಿಗಲೇ ಶಾಲಿಗ್ರಾಮ ಮೊದಲಾದವುಗಳಿಗೆ ಅಭಿಮಾನಿಗಳಾಗಿ ಒಳಗಿದ್ದು, ಅಲ್ಲಿ ಅಂತರ್ಯಾಮಿಯಾಗಿರುವ ವಾಸುದೇವ ಮೂರ್ತಿಯನ್ನು ಸೇವಿಸುತ್ತಾ ಇರುವರು. ಸಕಲಸ್ಥಳಗಳಲ್ಲಿ ವ್ಯಾಪ್ತನಾದ ಭಗವದ್ರೂಪಗಳಲ್ಲಿ ಪರಸ್ಪರ ಭೇದವಿಲ್ಲದಿರುವುದರಿಂದ **ಸ್ವಗತಭೇದ ವಿವರ್ಜಿತನೆಂದು**

ಹೆಸರು. ಇಂತಹ ಶ್ರೀಪರಮಾತ್ಮನ **ಚಲಾಚಲಗಳೆಂಬ** ಎರಡು ಪ್ರತಿಮೆಗಳಲ್ಲಿ ಒಂದೊಂದರಲ್ಲಿ ಎರಡು ಪ್ರಕಾರದಂತೆ, ನಾಲ್ಕು ವಿಧಗಳುಂಟೆಂದು ಮೇಲೆ ಹೇಳಿದರು. ಅಂತಹ **ಸ್ತ್ರೀ, ಪುರುಷ, ಅಹಿತ, ಸಹಜಾಚಲ** ಎಂಬ ನಾಲ್ಕು ಬಗೆಯ ಪ್ರತಿಮೆಗಳಲ್ಲಿ ಮೇಲೆ ವಿವರಿಸಿದಂತೆ, ಭಗವದ್ರೂಪಗಳನ್ನು ತಿಳಿದು, ಪೂಜಿಸಲು, ಪಕ್ಷಿವಾಹನನಾದ ಸ್ವಾಮಿಯು ಭಕ್ತರನ್ನು ಸಂಸಾರಸಮುದ್ರದಿಂದ ದಾಟಿಸಿ, ಅವರಿಗೆ ಮುಕ್ತಿಯನ್ನು ಕೊಡುವನು. ॥೩೧॥

## ೩. ಭಾವದರ್ಪಣಟೀಕಾ :—

ಪರ್ವತಾಭಿಮಾನಿದೇವತೆಗಳು ಶಾಲಿಗ್ರಾಮದಲ್ಲಿದ್ದು, ವಾಸುದೇವೋಪಾಸನೆ ಮಾಡುವ ಪೂಜಕರಿಗೆ ಸಂಸಾರಾರ್ಣವ ಪಾರುಮಾಡುವರೆಂದು ಹೇಳುತ್ತಾರೆ— **ನಗೇತಿ.** ॥೩೧॥

## ೪. ಶ್ರೀವ್ಯಾಸದಾಸ ಸಿದ್ಧಾಂತ ಕೌಮುದೀ :—

"ನಗ" —ಇತಿ॥ (ವಿಶ್ವ)॥ "ಇಗಡ" ದುರ್ಘಟ ॥೩೧॥

ಅಹಿತಾಚಲಗಳಲ್ಲಿ ಚಿಂತನಾಕ್ರಮವನ್ನು ನಿರೂಪಿಸುತ್ತಾರೆ — "ನಗಗಳಭಿಮಾನಿ" ಎಂಬ ಪದ್ಯದಿಂದ. "ಇಗಡ" — ದುರ್ಘಲವಾದ, ದಾಟಲು ದುಃಸ್ಸಾಧ್ಯವಾದ ಎಂದರ್ಥ ॥೩೧॥

## ೫. ಶ್ರೀಗುರುಹೃದಯಪ್ರಕಾಶಿಕೆ ವ್ಯಾಖ್ಯಾನ :—

ಸಹಜಾಚಲವೆಂಬ ಪರ್ವತಾಭಿಮಾನಿಗಳನ್ನು ತಿಳಿಸುತ್ತಾರೆ — **ನಗವೆಂದು.** ನಗವೆಂದು ಹೆಸರುಳ್ಳ ವೆಂಕಟಾದ್ರಿ ಮೊದಲಾದ ಪರ್ವತಗಳಿಗೆ ಅಭಿಮಾನಿಗಳಾದ ಮೇರುಪುತ್ರ ಮೊದಲಾದ ಆಯಾಯಾ ಪರ್ವತನಾಮವುಳ್ಳ ದೇವತೆಗಳು ವಾಸುದೇವರೂಪವನ್ನು ಆರಾಧಿಸುತ್ತಾ, ಅಲ್ಲಿದ್ದು, ಯಾತ್ರಾದಿಗಳಿಂದ ಸೇವಿಸುವ ಸದ್ಭಕ್ತರಿಗೆ ತದನುಕೂಲಪ್ರದರಾಗುವರು. ಮೇಲೆ ವಿವರಿಸಿ ಹೇಳಿದ ಚೇತನರೂಪ,

ಸ್ತ್ರೀಪುರುಷ ಪ್ರತಿಮೆಗಳೆರಡು ಸಹಜಾಚಲವೆಂಬ ಪರ್ವತ ಸಾಲಿಗ್ರಾಮಾದಿ ಪ್ರತಿಮೆ, ಲೋಹಾದಿ ನಿರ್ಮಿತ ಆಹಿತ ಪ್ರತಿಮೆ ಸಹಾ ಎರಡು, ಅಂತೂ ನಾಲ್ಕು ಪ್ರತಿಮೆಗಳಲ್ಲೂ ದೇವರನ್ನು ಪೂಜಿಸುವ ಭಕ್ತರನ್ನು, ದೇವರು ಕ್ರೂರಸಂಸಾರವೆಂಬ ಜನನ–ಮರಣಾದಿರೂಪ ಸಮುದ್ರದಿಂದ ದಾಟಿಸಿ ಮುಕ್ತರನ್ನು ಮಾಳ್ಪನು. ॥೩೧॥

## ಸರ್ವವ್ಯಾಖ್ಯಾನಸಾರಸಂಗ್ರಹ

ಹಿಂದಿನ ಪದ್ಯದಲ್ಲಿ ಜಡಪ್ರತೀಕವರ್ಗದಲ್ಲಿ ಪ್ರಥಮವಾಗಿ ಕೃತಪ್ರತೀಕಗಳ ವಿಷಯ ತಿಳಿಸಿ, ಈಗ **ಸಹಜಾಚಲ** ವೆಂದೆನಿಪ ಜಡಪ್ರತೀಕದ ಅಭಿಮಾನಿದೇವತೆಗಳ ವಿಷಯ, ಅವರಿಂದ ಉಪಾಸ್ಯಮಾನನಾದ ಶ್ರೀಪರಮಾತ್ಮನ ಭಗವದ್ರೂಪಗಳ ವಿವರಣೆಗಳನ್ನು ನೀಡುತ್ತಾರೆ – **ನಗಗಳಭಿಮಾನಿಗಳೆನಿಪ** – ಎಂಬ ಪ್ರಸಕ್ತ ೩೧ ನೆಯ ಪದ್ಯದಿಂದ.

೧. ಶ್ರೀಹರಿಯ ಅಧಿಷ್ಠಾನಭೂತವಾದ ಜಡಪ್ರತಿಮೆಗಳಲ್ಲಿ **ಸಹಜಾಚಲವೆಂಬದು** ಎರಡನೆಯ ಪ್ರಕಾರ. ಪ್ರಕೃತಿಯಲ್ಲಿ ಗಂಡಕೀನದಿಯಲ್ಲಿ ದೊರೆಯುವ ಚಕ್ರಾಂಕಿತ ಸಾಲಿಗ್ರಾಮ ಎಂಬ ಶಿಲೆಯು ಈ ವರ್ಗಕ್ಕೆ ಸೇರಿದ್ದು. ಇದರಲ್ಲಿ ಶ್ರೀ ಪರಮಾತ್ಮನು ಸ್ವಯಂವ್ಯಕ್ತನಾಗಿದ್ದಾನೆ. ಶಾಲಿಗ್ರಾಮಪೂಜೆಯಲ್ಲಿ ಬಿಂಬಾವಾಹನಕ್ರಮ ಬೇಕಿಲ್ಲ. ಅಂತೆಯೇ ಪ್ರಕೃತಿಯಲ್ಲಿ ಮಾಲೆ ಮಾಲೆಯಾಗಿ ಹಬ್ಬಿ ಹರಡಿರುವ ಪರ್ವತಸ್ತೋಮಗಳು ವೆಂಕಟಾದ್ರಿ ತೋತಾದ್ರಿ ಮುಂತಾದ ಪುಣ್ಯಕ್ಷೇತ್ರಗಳಲ್ಲಿ ಶ್ರೀಹರಿಯು **ಸ್ವಯಂವ್ಯಕ್ತ**ನಾಗಿ ವಿದ್ಯಮಾನನಾಗಿದ್ದಾನೆ. ಅವು **ಸ್ವಯಂವ್ಯಕ್ತ ಕ್ಷೇತ್ರಗಳು.**

೨. ಮೇರು, ಮಂದರ, ಹಿಮಾಚಲ ಇತ್ಯಾದಿ ಪರ್ವತಗಳ ಅಭಿಮಾನಿಗಳೆಂದೆನಿಸುವ ನಗಾಭಿಮಾನಿದೇವತೆಗಳು ಪೂರ್ವೋಕ್ತ ಸಹಜಾಚಲಗಳೆಂಬ ಜಡಪ್ರತೀಕಗಳಿಗೆ ಅಭಿಮಾನಿಗಳಾಗಿದ್ದಾರೆ.

೩. ಆ ಪರ್ವತಾಭಿಮಾನಿ ಸುರರು, ಆ ಜಡಪ್ರತೀಕಾಂತರ್ಗತ ಶ್ರೀವಾಸುದೇವರೂಪೀ

ಶ್ರೀ ಪರಮಾತ್ಮನನ್ನು ಉಪಾಸನೆಗೈಯ್ಯುತ್ತಾ, ಪೂಜಿಸುತಲಿಹರು. ಮಾಯಾರಮಣನಾದ ಶ್ರೀವಾಸುದೇವನು ಪುರುಷನಾಮಕನು. ಪುರುಷರೂಪತ್ರಯನಾದ ಶ್ರೀವಾಸುದೇವನು ಬ್ರಹ್ಮಾಂಡದ ಹೊರಗೂ, ಬ್ರಹ್ಮಾಂಡಾಂತರ್ಗತನಾಗಿಯೂ, ಪಿಂಡಾಂಡರೂಪವಾದ ಸರ್ವಜೀವರ ಸ್ಥೂಲಶರೀರಗಳಲ್ಲಿ ಅಪಾದಮೌಳಿಪರ್ಯಂತ ವ್ಯಾಪಿಸಿರುವನು.

೪. ಶ್ರೀಪರಮಾತ್ಮನ ಅನಂತಾನಂತರೂಪಗಳಿಗೂ, ಗುಣರಾಶಿಗಳಿಗೂ, ಕ್ರಿಯಾವಿಶೇಷಗಳಿಗೂ, ಅವತಾರಗಳಿಗೂ, ಅಂಗ ಉಪಾಂಗಗಳಿಗೂ ಲವಲೇಶವೂ ಭೇದವಿಲ್ಲ. ಸಮಸ್ತವಿಷಯದಲ್ಲಿ ಶ್ರೀಹರಿಯು ಪರಿಪೂರ್ಣನಾಗಿದ್ದಾನೆ. ಇದರಿಂದ, ಶ್ರೀಪರಮಾತ್ಮನಿಗೆ ಸ್ವಗತಭೇದವಿವರ್ಜಿತನೆಂದು ಹೆಸರು. ಅಂದರೆ ಸ್ವ– ತನ್ನಲ್ಲಿ ವಿದ್ಯಮಾನವಾದ ಸಕಲವಿಷಯಗಳಲ್ಲಿ ಭೇದ – ವ್ಯತ್ಯಾಸಗಳಿಂದ, ವಿವರ್ಜಿತನು – ರಹಿತನು ಎಂದರ್ಥ. ಹೀಗೆ ಅಜ್ಞಾನದಿಂದ ಭೇದವನ್ನು ಎಣಿಸಿದರೆ, ಅವರಿಗೆ ಅಂಧಃತಮಸ್ಸು ಪ್ರಾಪ್ತಿ – ಎಂದು ಶ್ರೀ ಗುರುಮಧ್ವರ ವಚನ.

೫. ಇಂತಹ ಸ್ವಗತಭೇದವಿವರ್ಜಿತವಾದ ಪುರುಷನಾಮಕ ಶ್ರೀವಾಸುದೇವರೂಪೀ ಶ್ರೀಪರಮಾತ್ಮನ ಅಧಿಷ್ಠಾನಭೂತವಾದ ಪ್ರತಿಮೆಗಳು ನಾಲ್ಕು ಪ್ರಕಾರವಿವೆ :–

ಚಲಪ್ರತೀಕಗಳಲ್ಲಿ 1. ಪುರುಷ ಪ್ರತೀಕಗಳು

2. ಸ್ತ್ರೀಪ್ರತೀಕಗಳು

ಜಡಪ್ರತೀಕಗಳಲ್ಲಿ

1 ಕೃತಪ್ರತೀಕಗಳಾದ ಅಹಿತಪ್ರತಿಮೆಗಳು

2 ಸಹಜಾಚಲಪ್ರತೀಕಗಳು

ಈ ರೀತಿ ಶ್ರೀಪರಮಾತ್ಮನ ನಾಲ್ಕುಪ್ರಕಾರವಾದ ಪ್ರತಿಮಾವಿಶೇಷಗಳನ್ನು ಗುರೂಪದೇಶದ್ವಾರಾ, ಸಚ್ಛಾಸ್ತ್ರ ಅಧ್ಯಯನ ಮೂಲಕ ತಿಳಿದು, ಚಲಪ್ರತಿಮಾಂರ್ಗತ

ಹಾಗೂ ಜಡಪ್ರತೀಕಾಂತರ್ಗತ ಭಗವದ್ರೂಪಗಳನ್ನು ಉಪಾಸನೆ ಮಾಡುತ್ತಾ ಪೂಜಿಸಬೇಕೆಂದು ತಿಳಿಸುತ್ತಾರೆ.

೬. ಅಂತಹ ಸಾಧಕರನ್ನು, ಜನನಮರಣಾಖ್ಯರೂಪವಾದ ಬಹು ದುಸ್ತರವಾದ **ಸಂಸಾರ** ಎಂಬ ಮಹಾಸಮುದ್ರವನ್ನು, ಆ ಕರುಣಾಸಾಗರನು ದಾಟಿಸಿ, ಮೋಕ್ಷಾನಂದಾನುಭವಕ್ಕೆ ಪ್ರತಿಬಂಧಕವಾಗಿರುವ **ಕರ್ಮವೆಂಬ** ಸಾಮಗ್ರಿಯನ್ನು ವಿಮೋಚನೆಗೊಳಿಸಿ, ರಮಾದ್ವಾರಾ, ಪರಮಾಚ್ಛಾದಿಕವೆಂಬ ಆವರ್ಕವನ್ನು ಅಪಸರಣ ಮಾಡಿಸಿ, ಆ ಜೀವರಿಗೆ ತಮ್ಮ ಸ್ವರೂಪಗತವಾದ ನಿತ್ಯಾನಂದರೂಪವಾದ ಮುಕ್ತಿಸುಖವನ್ನು ಕೊಟ್ಟು , ಮೋಕ್ಷಪ್ರದನಾದ ಮಾಯರಮಣನಾದ ಶ್ರೀ ವಾಸುದೇವನು ಆನಂದಪಡಿಸುವನೆಂದು ಪ್ರಸಕ್ತಪದ್ಯದ ಅಂತರಾರ್ಥವು. ॥೩೧॥

## ಪದ್ಯ ೩೨

**ಮೂಲ :**

ಆವಕ್ಷೇತ್ರಕೆ ಪೋದರೇನಿ
ನ್ನಾವ ತೀರ್ಥದಿ ಮುಣಗಲೇನಿ
ನ್ನಾವ ಜಪತಪ ಹೋಮ ದಾನವ ಮಾಡಿ ಫಲವೇನು
ಶ್ರೀವರಜಗನ್ನಾಥವಿಠಲನ
ಈ ವಿಧದಿ ಜಂಗಮ ಸ್ಥಾವರ
ಜೀವರೊಳು ಪರಿಪೂರ್ಣನೆಂದರಿಯದಿಹ ಮಾನವರು॥ ॥೩೨॥

**ಅವತರಣಿಕೆ :**

ಜಂಗಮಸ್ಥಾವರ ಜೀವರಲ್ಲಿ ಪರಿಪೂರ್ಣನಾದ ಶ್ರೀಹರಿಯ ವ್ಯಾಪ್ತಿಯನ್ನು ತಿಳಿಯದ ಜ್ಞಾನರಹಿತನಾದ ಮಾನವರಿಗೆ ಯಾವ ವಿಧವಾದ ಸತ್ಕರ್ಮಗಳೂ ಫಲಪ್ರದವಾಗುವುದಿಲ್ಲ ಎಂದು ಪ್ರಸಕ್ತಸಂಧಿಗತ ೩೨ನೆಯ ಈ ಪದ್ಯದಿಂದ ತಿಳಿಸುತ್ತಾ, ಸ್ಥಾವರ ಜಂಗಮಸಂಧಿ ಎಂಬ ಪ್ರಸಕ್ತ ಸಂಧಿಯನ್ನು ಉಪಸಂಹರಿಸುತ್ತಾರೆ, ಜ್ಞಾನಿವರೇಣ್ಯರಾದ ದಾಸರಾಯರು. ॥೩೨॥

**ಪ್ರತಿಪದಾರ್ಥ :—**

**ಆವಕ್ಷೇತ್ರಕೆ** =ಬದರೀ, ಕಾಶೀ, ಸೇತು ಇತ್ಯಾದಿ ಯಾವ ತೀರ್ಥಕ್ಷೇತ್ರಕ್ಕೆ, **ಪೋದರೇನು** = ತೀರ್ಥಾಟನೆಯ ವ್ಯಾಜದಿಂದ ಹೋದರೇನು, **ಇನ್ನಾವ ತೀರ್ಥದಿ** = ಗಂಗಾದಿ ಪವಿತ್ರನದಿಗಳಲ್ಲಿ, ಪುಷ್ಕರ, ಸ್ವಾಮಿ ಪುಷ್ಕರಣೀ ಇತ್ಯಾದಿತೀರ್ಥಗಳಲ್ಲಿ, **ಮುಣುಗಲೇನು** = ಮುಳುಗಿ ಸ್ನಾನ ಮಾಡಿದರೇನು, **ಇನ್ನಾವ** = ಮತ್ತಿನ್ಯಾವ ವಿಧವಾದ, **ಜಪ** = ಗಾಯತ್ರೀ ಇತ್ಯಾದಿ ಜಪಗಳನ್ನೂ, **ತಪ** = ತಪೋರೂಪವಾದ ಭಗವದ್ಧ್ಯಾನ, **ಹೋಮ** = ಯಜ್ಞಯಾಗಾದಿಗಳು, **ದಾನವ** = ವಿಧ್ಯುಕ್ತವಾದ

ನಾನಾ ರೀತಿಯ ದಾನಗಳನ್ನು, ಮಾಡಿ **ಫಲವೇನು** = ಆಚರಿಸಿದರೆ ಫಲವೇನು? ಅಂದರೆ, ಅಷ್ಟು ಮಾತ್ರದಿಂದಲೇ ಆ ಸತ್ಕರ್ಮಗಳು ಫಲದಾಯಕವಾಗುವುದಿಲ್ಲ ಎಂದು ತಾತ್ಪರ್ಯ. **ಶ್ರೀವರ** = ಲಕ್ಷ್ಮಿಗಿಂತ ಅನಂತಾನಂತಗುಣಗಳಿಂದ ಶ್ರೇಷ್ಠನಾದ ಲಕ್ಷ್ಮೀಪತಿಯಾದ, **ಜಗನ್ನಾಥವಿಠಲನ** = ಜಗತ್ಪ್ರಭುವೂ, ದಾಸರಾಯರ ಅಂಕಿತನಾಮಕನೂ ಆದ ಶ್ರೀ ಹರಿಯು, **ಈ ವಿಧದಿ** = ಪೂರ್ವೋಕ್ತ ಪ್ರಕಾರ, **ಜಂಗಮ** = ಸಂಚರಿಸುವ, **ಸ್ಥಾವರ** =ಜೀವವಿದ್ದೂ ಚಲಿಸದೆ ಇದ್ದಲ್ಲೇ ಇರುವ ವೃಕ್ಷ, ಲತೆ, ಗುಲ್ಮಾದಿಗಳು, **ಜೀವರೊಳು** = ಇಂತಹ ಜೀವರಾಶಿಗಳಲ್ಲಿ, **ಪರಿಪೂರ್ಣನೆಂದು** = ಸಕಲವಿಧಗಳಲ್ಲಿಯೂ ಪೂರ್ಣನಾಗಿದ್ದಾನೆಂದು, **ಅರಿಯದಿಹ** = ತಿಳಿಯದಿಹ, **ಮಾನವರು** = ಜ್ಞಾನಶೂನ್ಯರಾದ ನರರು ಮತ್ತು ಪೂರ್ವೋಕ್ತ ಯಾವ ಸತ್ಕರ್ಮಗಳನ್ನು ಆಚರಿಸಿದರೂ ಅವುಗಳಿಂದ ಫಲ ದೊರೆಯುವುದಿಲ್ಲ.॥೩೨॥

## ವ್ಯಾಖ್ಯಾನಗಳು

### ೧. ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ : —

ಜ್ಞಾನಶ್ಯೂನನಾದವಗೆ ದಾವ ಸತ್ಕರ್ಮವೂ ಫಲವಾಗೋದಿಲ್ಲ ಎಂತ ಹೇಳತಾರೆ.

ಬದರ್ಯಾದಿ (ಬದರಿ ಆದಿ) ದಾವಕ್ಷೇತ್ರಕ್ಕೆ ಹೋದರೇನು, ಇನ್ನು ಗಂಗಾದಿ ದಾವ ತೀರ್ಥದಲ್ಲಿ ಮುಣಗಿದರೇನು, ಮತ್ತು ತಂತ್ರಸಾರೋಕ್ತ ದಾವ ಜಪ ಮಾಡಿದರೇನು, ತಪೋರೂಪವಾದ ಭಗವದ್ಧ್ಯಾನ ಮಾಡಿದರೇನು, ಯಜ್ಞ ಯಾಗಾದಿ ಹೋಮ ಮಾಡಿದರೇನು, ನಾನಾ ವಿಧಗಳಾದ ದಾನಗಳನ್ನು ಇಂಥಾದ್ದು ಅನೇಕಗಳ ಮಾಡಿ ಫಲವಿಲ್ಲ. ಯಾತರಿಂದ ಅಂದರೆ, ಲಕ್ಷ್ಮೀಪತಿಯಾದ ಜಗತ್ತಿಗೇನಾಥನಾದ ವಿಠಲಸಾಂಕೇತನಾದ ಪರಮಾತ್ಮನ, ಈ ಪೂರ್ವೋಕ್ತ ಪ್ರಕಾರ, ಜಂಗಮಜೀವರೊಳು, ವೃಕ್ಷಾದಿ ಜಡಜೀವರೊಳು, ಶುದ್ಧ ಜಡಗಳೊಳು, ಸಂಪೂರ್ಣವಾಗಿ ವ್ಯಾಪಕನಾಗಿದ್ದಾನೆ ಎಂತಲೂ, ತಾವು ಅಸ್ವತಂತ್ರ ಎಂತಲೂ ತಿಳಿಯದೇ ಇರತಕ್ಕ ಮನುಷ್ಯರು ಏನು, ಸತ್ಕರ್ಮ ಮಾಡಿದರೂ ಫಲವಿಲ್ಲ ಎಂತ ತಾತ್ಪರ್ಯ.

ಪ್ರಮಾಣ – "ಅಥವಾ ಬಹುನೈತೇನ ಕಿಂ ಜ್ಞಾತೇನ ತವಾರ್ಜುನ॥ ವಿಷ್ಟಭ್ಯಾಹಮಿದಂ ಕೃತ್ಸ್ನಮೇಕಾಂಶೇನ ಸ್ಥಿತೋ ಜಗತ್"॥ ಎಂಬ ಗೀತಾರ್ಥ.

ದಶವಿಧ ಪ್ರತಿಮಾಲಕ್ಷಣ ದಾವರೆಂದರೆ ಭಾಗವತ ಏಕಾದಶಸ್ಕಂಧ ೨೭ ನೇ ಅಧ್ಯಾಯ ೧೨ನೇ ಮತ್ತು ೧೩ ನೇ ಶ್ಲೋಕಗಳು : –

ಶೈಲೀ ದಾರುಮಯೀ ಲೌಹೀ ಲೇಪ್ಯಾ ಲೇಖ್ಯಾ ಚ ಸೈಕತೀ
ಮನೋಮಯೀ ಮಣಿಮಯೀ ಪ್ರತಿಮಾಷ್ಟವಿಧಾ ಸ್ಮೃತಾ॥ ॥೧೨॥
ಚಲಾಚಲೇತಿ ದ್ವಿವಿಧಾ ಪ್ರತಿಷ್ಠಾ ಜೀವಮಂದಿರಂ।
ಉದ್ವಾಸಾವಾಹನೇನ ಸ್ಥಃ ಸ್ಥಿರಾಯಾಮುದ್ಧವಾರ್ಚನೇ॥ ॥೧೩॥

ಇದಕ್ಕೆ ಅರ್ಥ – ಆಯೀರ್ಯಮಿತ್ಯುಕ್ತ ಪ್ರತಿಮಾಭೇದಮಾಹ॥ ಶೈಲೇತಿ

೧ ಶಿಲಾದಿಂದ ಕೃತವಾದ ಪ್ರತಿಮೆಗಳು.

೨. ದಾರುಮಯೀ – ವೃಕ್ಷಸಂಬಂಧವಾದ ಪ್ರತಿಮಾ.

೩. ಲೌಹೀ – ಕಾಂಸ್ಯ. ತಾಮ್ರಾದಿಗಳಿಂದ ನಿರ್ಮಿತವಾದ ಪ್ರತಿಮಾ.

೪. ಲೇಪ್ಯಾ – ಔಷದರಸಸಂಯುಕ್ತವಾದ ಪದಾರ್ಥದಿಂದ ಆಕಾರದಿಂದಿರುವ ಪ್ರತಿಮಾ.

೫. ಲೇಖ್ಯಾ – ಪಟಾದಿ ಲಿಖಿತ ಚಿತ್ರಪ್ರತಿಮಾ.

೬. ಸೈಕತೀ – ತತ್ತತ್ಕಾಲೋಚಿತವಾಗಿ ಉಸುಕಿನಿಂದಾಗಲೀ ಅಥವಾ ಮೃಣ್ಮಯಪ್ರತಿಮಾ.

೭. ಮನೋಮಯೀ – 'ಧ್ಯಾನಕಾಲೋಚಿತಪ್ರತಿಬಿಂಬಾಕೃತಿ'– ಎಂದರೆ ವಾಸನಾಮಯಪ್ರತೀಕಾ ಅಂದರೆ ಪ್ರತಿಮಾ.

೮. **ಮಣೀಮಯೀ** – ಸೂರ್ಯಕಾಂತಾದಿ ವಿರಚಿತ, ಕುಂಭಾದಿಗಳಲ್ಲಿ ಆವಾಹನ ಮಾಡಿರುವ ಪ್ರತಿಮಾ. ಇದುವರೆಗೆ ಶ್ಲೋಕದ ಎರಡು ವಿಧ ಪ್ರತಿಮಾ ಆಯಿತು.

೯. ಜೀವಾಧಿಷ್ಠಾನವಾದದ್ದು ಎಂದರೆ, ಇದರಲ್ಲಿ ಪುರುಷಾಧಿಷ್ಠಾನ, ಸ್ತ್ರೀ ಅಧಿಷ್ಠಾನ ಎಂತ. ಪುರುಷಾಧಿಷ್ಠಾನ ಎಂದರೆ ಅಧಿಕಾರಿಯ ಸ್ವೋತ್ತಮಾಧಿಷ್ಠಾನದಲ್ಲಿರುವ ಸ್ಥೂಲದೇಹಾಂತರ್ಗತಪ್ರತಿಮಾ.

೧೦. ಸ್ತ್ರೀ ಅಧಿಷ್ಠಾನ ಎಂದರೆ, ಅಧಿಕಾರಿಯಾದ ತನಗೆ ಉತ್ತಮಾಧಿಷ್ಠಾನದಲ್ಲಿ ಸ್ತ್ರೀಯಲ್ಲಿರುವ ಸ್ಥೂಲರೂಪಪ್ರತಿಮಾ. ಅಂತೂ ಹತ್ತು ವಿಧ ಪ್ರತಿಮಾ ಚಲಪ್ರತಿಮಾ ಎಂತಲೂ, ಅಚಲಪ್ರತಿಮಾ ಎಂತಲೂ ಎರಡು ಪ್ರಕಾರ. ಅಚಲಪ್ರತಿಮಾ ಎಂತಲೂ ವಿಧ ಎಂತ ತಿಳಿಯಬೇಕು. ||೩೨||

## ೧೧ನೇ ಸಂಧಿಯಲ್ಲಿ ಮುಖ್ಯವಾದ ವಿಚಾರಗಳು : –

೪ನೇ ಶ್ಲೋಕದಲ್ಲಿ, ಎಪ್ಪತ್ತೆರಡುಸಾವಿರ ಭಗವದ್ರೂಪಗಳ ಹೆಸರು. ೧೦ನೇ ಶ್ಲೋಕದಲ್ಲಿ, ಜ್ಞಾನೇಂದ್ರಿಯಗಳಿಗೆ ತನ್ಮಾತ್ರಗಳ ಗೋಚರಾನುಸಂಧಾನ.

೧೧ನೇ ಶೋಕ್ಲದಲ್ಲಿ, ವಿಷಯಗಳು ಇಂದ್ರಿಯಗಳಿಗೆ ಗೋಚರ ವಿಚಾರ.

೧೨ನೇ ಶ್ಲೋಕದಲ್ಲಿ, ಪ್ರೇರ್ಯ–ಪ್ರೇರಣೆ ವಿಚಾರ.

೧೪ನೇ ಶ್ಲೋಕದಲ್ಲಿ ಜೀವಾಂತಾರ್ಯಾಮಿ ವಾಯುದೇವರ ವಿಚಾರ.

೧೫ನೇ ಶ್ಲೋಕದಲ್ಲಿ, ದ್ವಂದ್ವಕರ್ಮ, ಸ್ವಚ್ಛಾವಿಚಾರ ಮಾಡು, ಫಲಾಪೇಕ್ಷೆ ಬೇಡ, ಕರ್ಮಗಳೇ ಪೂಜಾದ್ರವ್ಯ, ಕರ್ಮವೇ ಪ್ರತಿಮಾ.

೨೨ನೇ ಶ್ಲೋಕದಲ್ಲಿ, ನಿರಂಶರಿಗೆ ಎರಡನೇ ಕಲ್ಪದಲ್ಲಿ ಮುಕ್ತಿ–ಜೀವಾಂತರ್ಯಾಮಿ ವಾಯು ನಿಯಾಮಕ. ಮುಕ್ತಿಯಲ್ಲಿ ಗುದ ಉಪಸ್ಥಗಳ ಕಾರ್ಯ.

೨೩ನೇ ಶ್ಲೋಕದಲ್ಲಿ, ದ್ವಂದ್ವರಸ, ದ್ವಂದ್ವಕರ್ಮ ಅರ್ಪಣೆ.

೨೪ನೇ ಶ್ಲೋಕದಲ್ಲಿ, ತುಲಸೀ ವಿಚಾರ, ವ್ಯತಿರೇಕ ಪೂಜಾ.

೩೧ನೇ ಶ್ಲೋಕದಲ್ಲಿ, ನಾಲ್ಕು ವಿಧ ಪ್ರತಿಮಾ ವಿಚಾರ. ಅದರಿಂದ ಹತ್ತು ವಿಧ ಕೂಡ ಹೇಳಲ್ಪಟ್ಟುದು.

**೨. ಭಾವಪ್ರಕಾಶಿಕೆ : –**

ಈ ಸಂಧಿಯಲ್ಲಿ ವಿವರಿಸಿದಂತೆ ಜಡವಾದ ಉದಕ, ವೃಕ್ಷಗಳು, ಪರ್ವತ ಮೊದಲಾದವುಗಳಲ್ಲಿಯೂ, ಪಂಚಲೋಹ, ಶಿಲೆಗಳಿಂದ ಮಾಡಲ್ಪಟ್ಟ ಪ್ರತಿಮಾದಿಗಳು, ಶಾಲಿಗ್ರಾಮ ಮೊದಲಾದವುಗಳಲ್ಲಿಯೂ, ಮನುಷ್ಯರು , ಪಶು ಮೊದಲಾದವುಗಳಲ್ಲಿ ಸ್ತ್ರೀ ಪುರುಷರುಗಳಲ್ಲಿಯೂ ಸಹ ಭಗವದ್ರೂಪಗಳನ್ನು ಅಭೇದದಿಂದ ಚಿಂತಿಸುವವರು ಎಲ್ಲಿ ಹೋದರೂ, ಎಲ್ಲಿ ಸ್ನಾನಮಾಡಿದರೂ ತೀರ್ಥ ಕ್ಷೇತ್ರ ಯಾತ್ರಾದಿಫಲಗಳು ಬರುವುವು. ಇದನ್ನು ತಿಳಿಯದೆ, ಪರಮಾತ್ಮನು ತಿರುಪತಿಯಲ್ಲಿಯೇ ಇರುವನು. ತೀರ್ಥವೆಂದರೆ, ಗಂಗಾದಿಗಳೇ ಎಂದು ಭಾವಿಸಿ, ಕೆಲವು ಸ್ಥಳಗಳಲ್ಲಿ ಭಗವಂತನಿರುವನೆಂತಲೂ, ಕೆಲವು ಕಡೆಗಳಲ್ಲಿ ಇಲ್ಲವಂತಲೂ,, ನಂಬಿರುವ ಮನುಷ್ಯರು ಯಾವ ಕ್ಷೇತ್ರಗಳಿಗೆ ಹೋದರೇನು, ಯಾವ ತೀರ್ಥದಲ್ಲಿ ಸ್ನಾನಮಾಡಿದರೂ, ಜಪ, ತಪಸ್ಸು, ಹೋಮ, ದಾನ ಮುಂತಾದ ಏನೇನು ಪುಣ್ಯಕರ್ಮಗಳನ್ನು ಮಾಡಿದರೂ ನಿಷ್ಫಲವೆಂದು ಭಾವಿಸಬೇಕು. ॥೩೧॥

॥ ಇಂತು ಶ್ರೀಪದ್ಮನಾಭದಾಸರಿಂದ ವಿರಚಿತ ಭಾವಪ್ರಕಾಶಿಕಾ ವ್ಯಾಖ್ಯಾನಗಳಲ್ಲಿ ೧೧ನೆಯ ಸಂಧಿಯ ಟಿಪ್ಪಣಿ ಮುಗಿದುದು ॥

॥ ಶ್ರೀ ಕೃಷ್ಣಾರ್ಪಣಮಸ್ತು॥

೩. ಭಾವದರ್ಪಣ ಟೀಕಾ : –

ಸಮಸ್ತ ತೀರ್ಥಕ್ಷೇತ್ರಗಳ ಆಟನಕ್ಕಿಂತಲೂ ಸ್ಥಾವರ ವೃಕ್ಷಾದಿಗಳಲ್ಲಿಯೂ, ಜಂಗಮ ಮನುಷ್ಯಾದಿಗಳಲ್ಲಿಯೂ, ಶ್ರೀಹರಿಯು ವ್ಯಾಪ್ತನೆಂದು ತಿಳಿದವನೇ ಧನ್ಯನೆಂದು ಭಾವ ತೋರಿಸುತ್ತಾರೆ – **ಆವ ಕ್ಷೇತ್ರದಿ** ॥೩೧॥

॥ಇತಿ ಶ್ರೀಮತ್ಕವಿಕುಲತಿಲಕ ಶ್ರೀಮಜ್ಜಗನ್ನಾಥದಾಸರಾಜ ವಿರಚಿತ
ಶ್ರೀಮದ್ಧರಿಕಥಾಮೃತಸಾರಸ್ಯ ಭಾವದರ್ಪಣಟೀಕಾಯಾಂ
ಕಮಲಾಪತಿ ಹೃದ್ಗತೇನ ಶ್ರೀಹರಿಣಾ
ಕೃತಾಯಾಂ ಧ್ಯಾನಪ್ರಕ್ರಿಯಾಸಂಧಿಃ ಪರ್ಯಾವಸಿತಃ॥
॥ ಶ್ರೀ ಮದ್ವೇಶಾರ್ಪಣಮಸ್ತು॥

೪. ಶ್ರೀವ್ಯಾಸದಾಸ ಸಿದ್ಧಾಂತ ಕೌಮುದೀ (ಸಂಸ್ಕೃತಮೂಲ) :–

"ಆವ" ಇತಿ॥ "ಜ್ಞಾನಂ" ತಜ್ಜನಕ ತೀರ್ಥಾಭಿಧಸ್ಸಂಗತಿಂ ವಾ ವಿನಾ ಯಾವಜ್ಜೀವಮ್ ಅನುಷ್ಠಿತೇನ ತೀರ್ಥಾಟನೇನ ಕಿಂ ಶ್ರೇಯಃ ಸ್ಯಾತ್ ಇತಿ ಭಾವಃ॥ "ತೇ ಪುನಂತಿ ಉರಕಾಲೇನ" – ಇತ್ಯಸ್ಯ ವ್ಯಾವರ್ತ್ಯಚೋದ್ಯಂ ಚೈವಮೇವ ಪ್ರಕಾಶಿಕಾಚಾರ್ಯೈಃ ಪ್ರಾದರ್ಶಿ॥ ನನು "ಸರ್ವರೋಧ ಕತ್ವಾತ್" ಇತ್ಯಾದಿನಾ ಹರೇಃ ಏವ ತೀರ್ಥಾಖ್ಯಾ ಶ್ರೂಯತೇನ ಸತ್ಸಂಗತೇಃ॥ ಇತಿ ಚೇತ್ ಅಸ್ತಿ ಮಾನಮತ್ರ "ತೀರ್ಯತೇ ಯೇನ ತತ್ತೀರ್ಥಂ ತೀರ್ಯತೇ ಸಾಧು ಸಂಗತಃ ಅತಃ ತತ್ಪರಮಂ ತೀರ್ಥಂ ನ ಜಲಂ ತೀರ್ಥಮುಚ್ಯತೇ॥ ವಾಪೀ ಕೂಪತಟಾಕಾದೌ ಯತ್ರ ಕುತ್ರ ಜಲಾಶಯೇ॥ ಬಹಿರ್ಮಲ ವಿಶುದ್ಧಿಃ ಸ್ಯಾತ್ ನಾಂತರ್ಮಲ ವಿಶೋಧನಮ್॥ ಗಂಗಾದಿ ಪುಣ್ಯತೀರ್ಥಾನಿ ಕಾಲೇ ಚೈವ ಪುನಂತಿ ಹಿ॥ ಅದೃಷ್ಟ ದ್ವಾರತಃ ತಸ್ಮಾತ್ಸತೀರ್ಥಂ ಸಾಧು ಸಂಗತಿಃ॥ ಇತಿ **ವಿಷ್ಣುರಹಸ್ಯೇಷ್ಟಾ ದಶಾಧ್ಯಾಯ ವಚನಮುಪಾತ್**॥ ಅಧಿಕ ವಿಚಾರಸ್ತು – ದಶಮಪ್ರಕಾಶಿಕಾಯಾಂ ಬೋಧ್ಯಃ॥ ॥೩೨॥

॥ ಇತಿ ಶ್ರೀ ಮಜ್ಜಗನ್ನಾಥದಾಸಕೃತ ಹರಿಕಥಾಮೃತಸಾರ ಟೀಕಾಯಾಂ
ಸೋದೇಶಾನುಗೃಹೀತ ಜಂಬುಖಂಡಿ ಶ್ರೀನಿವಾಸಾಚಾರ್ಯ
ತನೂಜ ವಾದಿರಾಜಾಚಾರ್ಯ ವಿರಚಿತಾಯಾಂ
ವ್ಯಾಸದಾಸಸಿದ್ಧಾಂತ ಕೌಮುದ್ಯಾಂ ಧ್ಯಾನಪ್ರಕ್ರಿಯಾಸಂಧಿಃ ಸಮಾಪ್ತಿಃ ॥

ಕನ್ನಡಾರ್ಥ : –

ಶ್ರೀವರಜಗನ್ನಾಥವಿಠಲನ ಈ ವಿಧದಿ ಸ್ಥಾವರ ಜಂಗಮಗಳೊಳು ಪರಿಪೂರ್ಣನೆಂದರಿಯದಿಹ ಮಾನವನು ಆವಕ್ಷೇತ್ರಕೆ ಪೋದರೇನು?'

– ಎಂಬ ಶ್ರೀದಾಸವರ್ಯರ ವಚನವು – "ಶ್ರೀಹರಿಯು ಜ್ಞಾನ, ಅದನ್ನು ಹುಟ್ಟಿಸುವ ಜ್ಞಾನಿಗಳ ಸಂಗತಿಯಲ್ಲದೇ, ಮಾಡಿರುವ ಜೀವಾವಧಿ ತೀರ್ಥಯಾತ್ರಾದಿಗಳಿಂದೇನು ಶ್ರೇಯಸ್ಸು ದೊರೆಯುತ್ತದೆ? ಯಾವುದೂ ಇಲ್ಲ – ಎಂಬ ಭಾವವನ್ನು ಹೇಳುತ್ತದೆ.

**ತೇ ಪುನಂತ್ಯುರುಕಾಲೇನ" –ಎಂಬ ಭಾಗವತಶ್ಲೋಕದಲ್ಲಿ** ವಿಮರ್ಶಿಸುವಾಗ, ಪ್ರಕಾಶಕಾರರು ಹೀಗೆಯೇ ಅಭಿಪ್ರಾಯವನ್ನು ತೋರಿಸಿರುತ್ತಾರೆ.

ಸರ್ವಶೋಧಕನು, ಶುದ್ಧೀಕರಿಸುವವನು ಶ್ರೀಹರಿಯೇ ಆಗಿರುವಾಗ, ಹರಿಯೇ **ತೀರ್ಥ** ಎನಿಸಿಕೊಳ್ಳುತ್ತಾನೆ. ಸತ್ಸಂಗತಿಗೆ ತೀರ್ಥವೆಂದು ಕರೆದಿರುವುದಿಲ್ಲ. ಆದುದರಿಂದ ಈ ವ್ಯಾಖ್ಯಾನವು ಹೇಗೆ ಯುಕ್ತ? ಎಂದು ಶಂಕಿಸಿದರೆ, ಅದಕ್ಕೆ ಸಮಾಧಾನ : –

"ಯಾವುದರಿಂದ ಪಾಪವನ್ನು ದಾಟುತ್ತಾನೆಯೋ ಅದು ತೀರ್ಥ. ಸಾಧುಸಂಗದಿಂದ ಪಾಪವನ್ನು ದಾಟುತ್ತಾನೆ. ಆದ್ದರಿಂದ ಸಾಧುಸಹವಾಸವು ತೀರ್ಥವೆನಿಸಿಕೊಳ್ಳುತ್ತದೆ. ಸತ್ಸಂಗತಿಯೇ ಮುಖ್ಯ ತೀರ್ಥ. ಕೇವಲ ನೀರು ತೀರ್ಥವೆನಿಸದು. ಭಾವಿ, ಕರೆ ಮುಂತಾದ ಜಲಾಶಯಗಳಲ್ಲಿ ಮಿಂದರೆ, ಹೊರಗಿನ ಕೊಳೆಯು ಮಾತ್ರ ಹೋಗುತ್ತದೆ. ಒಳಗಿನ ಮಲವು ಹೋಗುವುದಿಲ್ಲ. ಗಂಗಾದಿ ಪುಣ್ಯತೀರ್ಥಗಳು ಕಾಲವಿಶೇಷಗಳಲ್ಲಿ

ಪವಿತ್ರೀಕರಿಸುತ್ತವೆ. ಅಂದರೆ, ಗಂಗಾದಿ ತೀರ್ಥಸ್ನಾನದಿಂದ ಅದೃಷ್ಟ ಉಂಟಾಗಿ, ಅದರಿಂದ ಪಾವಿತ್ರ್ಯವು ಬರುವುದು. ಸಾಧುಸಂಗತಿಯು ಜ್ಞಾನವನ್ನು ನಿಮಿತ್ತಮಾಡಿ ತತ್ಕಾಲದಲ್ಲಿ ಅಜ್ಞಾನ ಮುಂತಾದ ಮಲಗಳನ್ನು ಕಳೆದು, ಪವಿತ್ರಗೊಳಿಸುವುದು. ಆದ್ದರಿಂದ ಸತ್ಸಂಗತಿಯು ತೀರ್ಥವೆನಿಸಿಕೊಳ್ಳುತ್ತದೆ – ಎಂದು **ವಿಷ್ಣುರಹಸ್ಯದ ೧೪ನೆಯ ಅಧ್ಯಾಯದಲ್ಲಿ** ನಿರೂಪಿಸಲಾಗಿದೆ. ಹೆಚ್ಚಿನ ವಿಚಾರವನ್ನು **ದಶಮಸ್ಕಂಧ ಪ್ರಕಾಶಿಕೆಯಿಂದ** ತಿಳಿಯಬಹುದು. ॥೩೨॥

॥ಇತಿ ಶ್ರೀಹರಿಕಥಾಮೃತಸಾರ ಟೀಕಾ ವ್ಯಾಸದಾಸಸಿದ್ಧಾಂತ ಕೌಮುದೀ ಕನ್ನಡಾರ್ಥಾನುವಾದದಲ್ಲಿ ೧೧ನೆಯ ಧ್ಯಾನಪ್ರಕ್ರಿಯಾಸಂಧಿಯು ಮುಗಿಯಿತು ॥

॥ ಶ್ರೀ ನರಸಿಂಹಾರ್ಪಣಮಸ್ತು ॥

## ಶ್ರೀ ಗುರುಹೃದಯ ಪ್ರಕಾಶಿಕೆ ವ್ಯಾಖ್ಯಾನ : –

ಈ ನಾಲ್ಕು ಪ್ರತಿಮೆಗಳಲ್ಲೂ ಪೂರ್ಣನಾದ ಶ್ರೀಹರಿಯನ್ನರಿಯದವರು ಮಾಡುವ ಯಾತ್ರಾದಿಗಳು ಬೀದಿಯಲ್ಲಿ ತಿರುಗಾಡಿದಂತೆ ನಿರರ್ಥಕವೆಂದು ತಿಳಿಸುತ್ತಾರೆ – **ಆವ** ಎಂದು. ಕಾಶಿ ಮೊದಲಾದ ಯಾವ ಕ್ಷೇತ್ರಕ್ಕೆ ಹೋದಾಗ್ಯೂ, ಗಂಗಾದಿ ಯಾವ ತೀರ್ಥಸ್ನಾನ ಮಾಡಿದಾಗ್ಯೂ, ಗಾಯತ್ರ್ಯಾದಿ ಮಂತ್ರ ಜಪ, ಚಾಂದ್ರಾಯಣಾದ್ಯುಪವಾಸರೂಪ ತಪಸ್ಸು, ಅಗ್ನಿಹೋತ್ರಾದಿ ಹೋಮ, ಅನ್ನಾದಿ ದಾನ ಮುಂತಾದ್ದು ಮಾಡಿದಾಗ್ಯೂ, ಶ್ರೀವರ ಜಗನ್ನಾಥ ವಿಟ್ಠಲಸ್ವಾಮಿ, ಪೂರ್ವೋಕ್ತರೀತ್ಯಾ ಜಂಗಮ–ಜಡ ಜೀವರಲ್ಲೆಲ್ಲಾ ಪರಿಪೂರ್ಣನೆಂದು ತಿಳಿಯದ ಮನುಜನಿಗೆ ಏನು ಫಲ, ಅಂದರೆ ನಿರರ್ಥಕವೆಂದು ಅರ್ಥ.

"ಅಥವಾ ಬಹು ನೈತೇನ ಕಿಂ ಜ್ಞಾತೇನ ತವಾರ್ಜುನ ।
ವಿಷ್ಟಭ್ಯಾಹಮಿದಂ ಕೃತ್ಸ್ನಮೇಕಾಂಶೇನ ಸ್ಥಿತೋ ಜಗತ್ ॥

ಎಂಬ **ಗೀತಾರ್ಥ** ಇದರಿಂದ ವಿವರಸಲ್ಪಟ್ಟಿತು. ॥೩೨॥

## ಸರ್ವವ್ಯಾಖ್ಯಾನಸಾರಸಂಗ್ರಹ

ಪ್ರಸಕ್ತಸಂಧಿಗತ ಸಮಸ್ತ ತತ್ತ್ವಾರ್ಥಗಳನ್ನು **ಆವಕ್ಷೇತ್ರಕೆ** – ಎಂಬ ಈ ಅಂತ್ಯ ಪದ್ಯದಿಂದ ಉಪಸಂಹಾರ ಮಾಡುತ್ತಾರೆ – ತತ್ತ್ವೋಪದೇಶಕರಾದ ದಾಸವರ್ಯರು.

೧. ಪೂರ್ವೋಕ್ತಪದ್ಯಗಳಲ್ಲಿ ವಿವರಿಸಿದಂತೆ. ಚಲ ಮತ್ತು ಅಚಲ ಪ್ರತೀಕಗಳೆಂಬ ಶ್ರೀಪರಮಾತ್ಮನ ಅಧಿಷ್ಠಾನಭೂತವಾದ ಪ್ರತಿಮೆಗಳಲ್ಲಿ, ಚೇತನವರ್ಗದಲ್ಲಿ, ಸಂಚರಿಸುವ ಮಾನವರು, ಪಶ್ವಾದಿಜಂತುಗಳು, ಜೀವವಿದ್ದೂ ಚಲಿಸದೆ ಇದ್ದಲ್ಲಿಯೇ ಇರುವ ವೃಕ್ಷ, ಲತೆ, ಗುಲ್ಮಾದಿಗಳಲ್ಲಿ ಶ್ರೀ ಹರಿಯು ಪರಿಪೂರ್ಣನಾಗಿ ವ್ಯಾಪಿಸಿದ್ದಾನೆಂದು ತಿಳಿದು, ಉಪಾಸಿಸಬೇಕು.

೨. ಜಂಗಮ ಸ್ಥಾವರ ಜೀವರಲ್ಲಿ, ಚಲಪ್ರತಿಮೆಗಳಲ್ಲಿ ಸ್ತ್ರೀಯರಲ್ಲಿ, ಸ್ತ್ರೀರೂಪದಿಂದ ಬಿಂಬನಾಗಿಯೂ, ಪುರುಷರಲ್ಲಿ ಪುರುಷರೂಪದಿಂದ ಬಿಂಬನಾಗಿದ್ದಾನೆ. ಸ್ತ್ರೀಪುರುಷರ ಸ್ಥೂಲದೇಹಾಭಿಮಾನಿಗಳಾದ ದೇವತಾವರ್ಗದಲ್ಲಿ ಅಂತರ್ಯಾಮಿಯಾಗಿ ವಿದ್ಯಮಾನನಾಗಿದ್ದು, ದೇಹಗತಸಕಲಕ್ರಿಯೆಗಳನ್ನು ತಾನೇ ಬಿಂಬಕ್ರಿಯಾದ್ವಾರಾ ಮಾಡಿ, ಶರೀರಾಭಿಮಾನಿಸುರರ ಮೂಲಕ ಮಾಡಿಸುತ್ತಾ, ಸ್ಥೂಲದೇಹದಲ್ಲಿ ಪ್ರಕಾಶತೋವ್ಯಾಪ್ತನಾದ ಜೀವನ ಅನುಭವಕ್ಕೆ ಆ ಕರ್ಮಗಳ ಫಲಗಳನ್ನು ತಂದೀಯುತ್ತಿರುವನು.

೩. ಜಡವಸ್ತುಗಳಲ್ಲಿ ಶಿಲಾ, ಲೋಹ, ದಾರು, ಮೃತ್ತಿಕಾ, ಮಣಿ ಇತ್ಯಾದಿ ದ್ರವ್ಯಗಳಿಂದ ನಿರ್ಮಿತವಾದ ಕರಚರಣಾದ್ಯವಯವಗಳಿಂದ ಯುಕ್ತವಾದ ಜಡಪ್ರತೀಕಗಳಲ್ಲಿ ಅಂತರ್ಗತನಾಗಿದ್ದು, ಪ್ರತೀಕಾಭಿಮಾನಿಸುರಗಳ ದ್ವಾರಾ, ಪೂಜೆಗಳನ್ನು ಸ್ವೀಕರಿಸುವನು. ಅಂತೆಯೇ ಸಹಜಾಚಲಪ್ರತೀಕಗಳೆನಿಸುವ ಶಾಲಿಗ್ರಾಮಾದಿಗಳಲ್ಲಿ **ಸ್ವಯಂವ್ಯಕ್ತನಾಗಿದ್ದು**, ಪೂಜ್ಯನಾಗಿದ್ದಾನೆ.

೪. ಈ ಪ್ರಕಾರ ನಾಲ್ಕು ವಿಧವಾದ ಪ್ರತಿಮಾದಿಗಳಲ್ಲಿ, ಸಮಗ್ರವಾಗಿ, ವ್ಯಾಪಿಸಿ, ಪರಿಪೂರ್ಣಗುಣಧಾಮನಾದ. ಆ ಪರಮಮಂಗಳಮೂರ್ತಿ ಸಂಸೇವ್ಯಮಾನ–ನಾಗಿದ್ದಾನೆಂದು, ಗುರೋಪದೇಶದ್ವಾರಾ ತಿಳಿದು, ಶಾಸ್ತ್ರಯೋನಿತ್ವಾತ್, ಅಧ್ಯಯನ ಮಾಡುತ್ತಾ,ತನ್ನ ನಿತ್ಯಜೀವನದಲ್ಲಿ ಉತ್ತಮವಾದ ಜ್ಞಾನಾನುಸಂಧಾನಪೂರ್ವಕ ತಿಳಿಯದಿರುವ ಜ್ಞಾನಶೂನ್ಯನಾದ ಮಾನವನು ಮಾಡುವ ಕ್ಷೇತ್ರ ಯಾತ್ರಾದಿ ಸಕಲ ಸತ್ಕರ್ಮಗಳಿಂದ ಏನೇನೂ ಫಲವಿಲ್ಲವೆಂದು ತಿಳಿಸುತ್ತಾರೆ.

೫. ಭರತಖಂಡದಲ್ಲಿ, ಬದರೀ, ರಾಮೇಶ್ವರ, ತಿರುಪತಿ, ಇತ್ಯಾದಿ ಅನೇಕ ಪುಣ್ಯಕ್ಷೇತ್ರಗಳಿವೆ. ಪೂರ್ವೋಕ್ತ ಜ್ಞಾನಾನುಸಂಧಾನವಿಲ್ಲದ ಮಾನವನು ಅಂತಹ ಕ್ಷೇತ್ರಗಳಿಗೆ ಹೋಗಿ, ಅಲ್ಲಿ ಕ್ಷೇತ್ರವಿಧಿಗಳನ್ನು ಆಚರಿಸಿ, ಕ್ಷೇತ್ರಗತಮೂರ್ತಿಗಳನ್ನು ಸಂದರ್ಶಿಸಿದರೂ, ನಿಷ್ಫಲವಾಗುವುದು. ಕೇವಲ ದೇಹಶ್ರಮ ಮತ್ತು ಅರ್ಥವ್ಯಯವೇ ಹೊರತು, ಪ್ರಯೋಜನಕಾರಿಯಲ್ಲ.

೬. ಗಂಗಾದಿ ಪವಿತ್ರ ನದಿಗಳಲ್ಲಿ, ಪುಷ್ಕರ, ಸ್ವಾಮಿಪುಷ್ಕರಣೀ ಇತ್ಯಾದಿ ಪವಿತ್ರ ತೀರ್ಥಗಳಲ್ಲಿ ಸ್ನಾನಮಾಡಿದರೂ, ಜ್ಞಾನರಹಿತನಾದವನಿಗೆ ಫಲಪ್ರದವಲ್ಲ. ಏಕೆಂದರೆ, ತೀರ್ಥಗಳು ಜಡೋದಕ, ಆ ತೀರ್ಥಾಭಿಮಾನಿದೇವತೆಗಳನ್ನು ಸ್ಮರಿಸುತ್ತಾ, ತದಂರ್ಗತ ಭಗವದ್ರೂಗಳನ್ನು ಸ್ವಬಿಂಬನಲ್ಲಿ ಐಕ್ಯಚಿಂತನಾಪೂರ್ವಕ, ಸ್ನಾನವು ಈ ದೇಹಾಂತರ್ಗತನಾದ ಬಿಂಬರೂಪೀ ಪರಮಾತ್ಮನಿಗೆ ಅಭಿಷೇಕವೆಂದರಿತು, ಸ್ನಾಮಾಡಿದರೆ ಮಾತ್ರ ಫಲಪ್ರದವಾಗುವುದು. ಇಲ್ಲದಿದ್ದರೆ ಜಡೋದಕದಿಂದ ಈ ದೇಹವನ್ನು ತೊಳೆದಂತಾಗುವುದು. ಕೇವಲ ಯಾಂತ್ರಿಕಕ್ರಿಯೆ ಎಂದೆನಿಸುವುದು. ನಮ್ಮ ದೇಹದಲ್ಲಿ ರೋಮಕೂಪಗತ ತೀರ್ಥಗಳಲ್ಲಿ ತೀರ್ಥಾಭಿಮಾನಿಗಳಿದ್ದಾರೆ. ಈ ಸ್ಮರಣೆಯುಳ್ಳ ಸಜ್ಜನರ ಸಹವಾಸವೇ **ತೀರ್ಥಸ್ನಾನವೆಂದು ಭಾಗವತೋಕ್ತಿ.**

***"ಸಜ್ಜನರ ಸಂಗವಿರಲು ತೀರ್ಥಯಾತ್ರೆ ಯಾತಕೇ''*** – ಎಂದಿದ್ದಾರೆ, ಜ್ಞಾನಿವರೇಣ್ಯ ***ಶ್ರೀ ಕನಕದಾಸವರ್ಯರು.***

೭. ಗಾಯಿತ್ರೀ ಇತ್ಯಾದಿ ಜಪಗಳ ಆಚರಣೆ, ತಪೋರೂಪವಾದ ಧ್ಯಾನಕ್ರಿಯೆ, ಯಜ್ಞಯಾಗಾದಿಗಳು, ಗೋದಾನ , ಭೂದಾನ ಇತ್ಯಾದಿ ದಾನಗಳನ್ನು ಮಾಡುವುದು, ಇತ್ಯಾದಿ ಸತ್ಕರ್ಮಗಳನ್ನು ಆಚರಿಸಿದರೂ, ಕರ್ಮಫಲಪ್ರದನಾದ, ಆ ಸತ್ಕರ್ಮಗಳೆಲ್ಲಕ್ಕೂ ಮುಖ್ಯ ವಿಷಯನಾದ, ಸರ್ವತ್ರಕವ್ಯಾಪಕನೂ ಪರಿಪೂರ್ಣನೂ, ಅನಂತಕಲ್ಯಾಣಗುಣ–ಗಣಧಾಮನೂ, ಅಶೇಷದೂಷವಿದೂರನೂ ಆದ ಶ್ರೀ ಹರಿಯ ಸ್ಮರಣೆ ರಹಿತನಾದ ಯಾವ ಸತ್ಕರ್ಮಗಳೂ, ಅಂತಹ ನರರಿಗೆ ಪುಣ್ಯರೂಪವಾದ ಫಲಗಳನ್ನು ಕೊಡುವುದಿಲ್ಲ. ಕರ್ಮಗಳು ಜ್ಞಾನಕ್ಕೆ ಸಾಧನವಾಗಬೇಕು. ಸುಜ್ಞಾನಪೂರ್ವಕ ಕರ್ಮಾಚರಣೆ. ಆಗ ಕರ್ಮಕಲಾಪಗಳಲ್ಲಿ ಲೋಪದೋಷಗಳೇನಾದರೂ, ಹರಿಸ್ಮರಣೆಯುಕ್ತವಾಗಿರುವುದರಿಂದ ಬಾಧಕವಿಲ್ಲ –ಎಂದು ಸತ್ಕರ್ಮಗಳ ಆಚರಣೆಯ ಗೂಢಾರ್ಥವನ್ನು ತಿಳಿಸುತ್ತಾರೆ. ದಾಸರಾಯರು. ॥೩೨॥

ಇಂತು ೧೧ ನೆಯ ಸಂಧಿಗತ ೩೨ನೆಯ ಪ್ರಸಕ್ತಪದ್ಯದ ಸರ್ವವ್ಯಾಖ್ಯಾನ ಸಾರ ಸಂಗ್ರಹ ಪರಿಸಮಾಪ್ತಿಯಾಯಿತು.॥

॥ ಶ್ರೀ ಗರುಡವಾಹನ ಲಕ್ಷ್ಮೀನಾರಸಿಂಹಾವಾನ್ನ
ಶ್ರೀ ಜಗನ್ನಾಥ ವಿಠ್ಠಲಾರ್ಪಣ ಮಸ್ತು ॥